"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

9ನೇ ಡಿಸೆಂಬರ್ 2020
ಬುಧವಾರ

## ವಿಷಯಾನುಕ್ರಮಣಿಕೆ


1. **ಸಭೆಯ ಮುಂದಿಡಲಾದ ಕಾಗದ ಪತ್ರಗಳು.**
2. **ವರದಿಗಳನ್ನೊಪ್ಪಿಸುವುದು.**
3. **ಮಾನ್ಯ ಸಭಾಪತಿಯವರ ಮೇಲೆ ತಂದಿರುವ ಅವಿಶ್ವಾಸ ನಿರ್ಣಯವನ್ನು ಕಾರ್ಯಕಲಾಪಗಳ ಪಟ್ಟಿಯಲ್ಲಿ ನಮೂದಿಸಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಆಡಳಿತ ಪಕ್ಷದ ಸದಸ್ಯರುಗಳಂದ ಒತ್ತಾಯ ಹಾಗೂ ಕಾರ್ಯಕಲಾಪಗಳ ಪಟ್ಟಿಯನ್ವಯ ಸದನ ನಡೆಸಬೇಕೆಂದು ಒತ್ತಾಯಿಸಿ ವಿರೋಧ ಪಕ್ಷದ ಸದಸ್ಯರುಗಳಂದ ಧರಣಿ.**

   ಶ್ರೀ ಆಯನೂರು ಮಂಜುನಾಥ್
   ಶ್ರೀ ಎಸ್.ಆರ್.ಪಾಟೀಲ್(ವಿರೋಧಪಕ್ಷದ ನಾಯಕರು)
   ಶ್ರೀ ಎಂ.ನಾರಾಯಣಸ್ವಾಮಿ
   ಶ್ರೀ ಬಿ.ಕೆ.ಹರಿಪ್ರಸಾದ್
   ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

4. **ಪ್ರಕಟಣೆ**
5. **ಶಾಸನ ರಚನೆ**

   **ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

   **ಅ) ಕರ್ನಾಟಕ ಕೃಷಿ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2020**

   ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)
   ಶ್ರೀ ಮರಿತಿಬ್ಬೇಗೌಡ
   ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು)
   ಶ್ರೀ ಎಂ.ನಾರಾಯಣಸ್ವಾಮಿ(ವಿರೋಧಪಕ್ಷದ ಮುಖ್ಯ ಸಚೇತಕರು)
   ಶ್ರೀ ಸುನೀಲ್ ವಲ್ಯಾಪುರ್
   ಡಾ॥ ತೇಜಸ್ವಿನಿಗೌಡ
   ಶ್ರೀ ಎನ್.ರವಿಕುಮಾರ್
   ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
   ಶ್ರೀ ಅಲ್ಲಂ ವೀರಭದ್ರಪ್ಪ
   ಶ್ರೀ ಎಸ್.ಎಲ್.ಬೋಜೇಗೌಡ
   ಶ್ರೀ ಪಿ.ಆರ್.ರಮೇಶ್
   ಡಾ॥ ತಳವಾರ್ ಸಾಬಣ್ಣ


"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

6. **ಪ್ರಕಟಣೆ**
7. **ಕರ್ನಾಟಕ ಕೃಷಿ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2020ರ ಮೇಲೆ ಮುಂದುವರೆದ ಚರ್ಚೆ**

ಶ್ರೀ ಬಸವರಾಜ ಪಾಟೀಲ್ ಇಟಗಿ

ಶ್ರೀ ಎಸ್.ಆರ್.ಪಾಟೀಲ್(ವಿರೋಧಪಕ್ಷದ ನಾಯಕರು)

8. **ಪ್ರಕಟಣೆ**
9. **ಕರ್ನಾಟಕ ಕೃಷಿ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2020ರ ಮೇಲೆ ಮುಂದುವರೆದ ಚರ್ಚೆ.**

ಶ್ರೀ ಕೆ.ಎ.ತಿಪ್ಪೇಸ್ವಾಮಿ

ಶ್ರೀ ಪ್ರಕಾಶ್ ಕೆ.ರಾಥೋಡ್

ಶ್ರೀ ಪ್ರತಾಪಸಿಂಹ ನಾಯಕ್

ಶ್ರೀ ಆರ್.ಬಿ.ತಿಮ್ಮಾಪೂರ್

ಶ್ರೀ ಬಿ.ಕೆ.ಹರಿಪ್ರಸಾದ್

ಶ್ರೀ ಗೋವಿಂದ ಎಂ.ಕಾರಜೋಳ(ಉಪಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು)

10. **ಪ್ರಕಟಣೆ**
11. **ಕರ್ನಾಟಕ ಕೃಷಿ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2020ರ ಮೇಲೆ ಮುಂದುವರೆದ ಚರ್ಚೆ.**

ಶ್ರೀ ಯು.ಬಿ.ವೆಂಕಟೇಶ್

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

12. **ದಿನಾಂಕ 09-12-2020ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ.**

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

...............

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(1047)9.12.2020/11.30/ಎಂ.ಎಂ–ಬಿ.ಎನ್.ಎಸ್

***ಕರ್ನಾಟಕ ವಿಧಾನ ಪರಿಷತ್ತು***

**ಬುಧವಾರ, 9ನೇ ಡಿಸೆಂಬರ್ 2020**

ಸದನವು ವಿಧಾನ ಪರಿಷತ್ತಿನ ಸಭಾಂಗಣದಲ್ಲಿ
ಪೂರ್ವಾಹ್ನ **11** ಗಂಟೆ **30** ನಿಮಿಷಕ್ಕೆ ಸಮಾವೇಶಗೊಂಡಿತು

ಸಭಾಪತಿ (**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ**) ಅವರು
ಪೀಠದಲ್ಲಿ ಉಪಸ್ಥಿತರಿದ್ದರು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮುಖ್ಯಮಂತ್ರಿಯವರ ಪರವಾಗಿ ಸಭಾನಾಯಕರು ಸಭೆಯ ಮುಂದಿಡಲಾಗುವ ಕಾಗದ ಪತ್ರಗಳನ್ನು ಮಂಡಿಸುವುದು.

## 1. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಮುಖ್ಯಮಂತ್ರಿಯವರ ಹೆಸರಿನಲ್ಲಿರುವ ಕಾಗದ ಪತ್ರಗಳನ್ನು ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷಕ್ಕೆ ಸಾಮಾನ್ಯ ಮತ್ತು ಸಾಮಾಜಿಕ ವಲಯದ (ವರದಿ ಸಂಖ್ಯೆ:-3)ನ್ನು ಮುಖ್ಯಮಂತ್ರಿಯವರ ಪರವಾಗಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

## 2. ವರದಿಗಳನ್ನೊಪ್ಪಿಸುವುದು

01. **ಶ್ರೀ ಕೆ.ಎ. ತಿಪ್ಪೇಸ್ವಾಮಿ(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, 2018-19 ಹಾಗೂ 2019-20ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಅಧೀನ ಶಾಸನ ರಚನಾ ಸಮಿತಿಯ 49ನೇ ವರದಿಯನ್ನು ಸಮಿತಿಯ ಸದಸ್ಯನಾದ ನಾನು ಸಮಿತಿಯ ಪರವಾಗಿ ಸದನದ ಮುಂದೆ ಮಂಡಿಸುತ್ತಿದ್ದೇನೆ.

02. **ಡಾ: ತೇಜಸ್ವಿನಿಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2020ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಧೇಯಕವನ್ನು ಪರಿಶೀಲಿಸಲು ರಚಿಸಲಾಗಿರುವ ಜಂಟಿ ಪರಿಶೀಲನಾ ಸಮಿತಿಯ ವಿಶೇಷ ವರದಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಗಳನ್ನೊಪ್ಪಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ಅರ್ಜಿಗಳನ್ನೊಪ್ಪಿಸುವುದು. ಈಗ ಶಾಸನ ರಚನೆ. ಮಾನ್ಯ ಸಹಕಾರ ಸಚಿವರು ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ)(ತಿದ್ದುಪಡಿ) ವಿಧೇಯಕ, 2020.

**3. ಮಾನ್ಯ ಸಭಾಪತಿಯವರ ಮೇಲೆ ತಂದಿರುವ ಅವಿಶ್ವಾಸ ನಿರ್ಣಯವನ್ನು ಕಾರ್ಯಕಲಾಪಗಳ ಪಟ್ಟಿಯಲ್ಲಿ ನಮೂದಿಸಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಆಡಳಿತ ಪಕ್ಷದ ಸದಸ್ಯರುಗಳಿಂದ ಒತ್ತಾಯ ಹಾಗೂ ಕಾರ್ಯಕಲಾಪಗಳ ಪಟ್ಟಿಯನ್ವಯ ಸದನ ನಡೆಸಬೇಕೆಂದು ಒತ್ತಾಯಿಸಿ ವಿರೋಧ ಪಕ್ಷದ ಸದಸ್ಯರುಗಳಿಂದ ಧರಣಿ.**

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನಾವು 11 ಜನ ಪರಿಷತ್ತಿನ ಸದಸ್ಯರು ಸನ್ಮಾನ್ಯ ಸಭಾಪತಿಯವರ ವಿರುದ್ಧ ಅವಿಶ್ವಾಸ ಮಂಡನೆ ಮಾಡಿದ್ದೇವೆ. 14 ದಿನಗಳಾಗಿದೆ ಹಾಗಾಗಿ ಅದನ್ನು ಕಲಾಪದ ಪಟ್ಟಿಯಲ್ಲಿ ಸೇರ್ಪಡೆ ಮಾಡಬೇಕು. ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿ(ವಿರೋಧಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಇವತ್ತಿಗೆ 14 ದಿನವಾಗಿಲ್ಲ. 14 ದಿವಸಗಳಾಗದೇ ಇದ್ದರೂ ಅದನ್ನು (interruption) ಮಾಡುವಂತಹ ಅವಶ್ಯಕತೆ ಇಲ್ಲ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, they cannot stand up like this. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 165 ಅನ್ನು ನೋಡಿ, ಓದಿ. Fourteen days are not yet completed. By today evening fourteenth day will be completed. They have no …. sanctity ಇಲ್ಲ, ಬೇಕಾದರೆ ಅವರು ಇದರ ಬಗ್ಗೆ ನಾಳೆ ಮಾತನಾಡಬಹುದು. Excluding fourteen clear days …

**ಶ್ರೀ ಬಿ.ಕೆ. ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಿಯಮದಲ್ಲಿ '… both the terminal days are excluded.' ಎಂದು ಇದೆ. 14 ದಿವಸ ಆದಮೇಲೆ ಇದರ ಬಗ್ಗೆ ಚರ್ಚೆಯಾಗಬೇಕು. ಉದ್ದೇಶಪೂರ್ವಕವಾಗಿ ಪೀಠಕ್ಕೆ ಅವಮಾನ ಮಾಡುವ ಕೆಲಸ ಮಾಡುತ್ತಿದ್ದಾರೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಎಲ್ಲರೂ ಕೇಳಿಸಿಕೊಳ್ಳಿ, Practice an Procedure of Parliament by M.N.Kaul and S.L.Shakdher ಇದರಲ್ಲಿ clear ಆಗಿ ಹೇಳಿದೆ, “. . . In computing the period of fourteen days, both the terminal days are excluded.” ಎಂದು ಅದರಲ್ಲಿ ಇದೆ. ಅದಕ್ಕೆ ನಾಳೆಗೆ 14 ದಿವಸವಾಗುತ್ತದೆ. (Interruption)

**ಶ್ರೀ ಆಯನೂರು ಮಂಜುನಾಥ್:–** ಆಯಿತು ನಮ್ಮ ಹತ್ತಿರವೂ . . .

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಿಯಮದಲ್ಲಿ ಏನಿದೆ ಎಂದರೆ, “.... provided that the day so fixed shall be any day after fourteen days from the date of the receipt of notice of the resolution.” It is very clear in Practice an Procedure of Parliament by M.N.Kaul and S.L.Shakdher and Parliamentary Procedure by Subhash C. Kashyap. Terminal days are to be excluded. ಅಂದರೆ ಈ ದಿನ ಸಂಜೆವರೆಗೆ.

**ಸಭಾಪತಿಯವರು:–** ನಿಯಮ 165(2) ಪ್ರಕಾರ ಉಪನಿಯಮದ ಮೇರೆಗೆ ಸೂಚನೆಯು ತಲುಪಿದ ತರುವಾಯ, ಸಭಾಪತಿಯವರು ಗೊತ್ತು ಮಾಡುವ ದಿನದಂದು ಸಂಬಂಧಪಟ್ಟ ಸದಸ್ಯರ ಹೆಸರಿನಲ್ಲಿ ನಿರ್ಣಯವನ್ನು ಮಂಡಿಸಲು ಅನುಮತಿಯನ್ನು ಕೋರುವ ಪ್ರಸ್ತಾವವನ್ನು ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸತಕ್ಕದ್ದು. ಪರಂತು, ಹಾಗೆ ಗೊತ್ತು ಮಾಡಲಾದ ದಿನವು ನಿರ್ಣಯದ ಸಂಬಂಧವಾದ ಸೂಚನಾ ಪತ್ರವು ತಲುಪಿದ ಹದಿನಾಲ್ಕು ದಿನಗಳ ತರುವಾಯ ಯಾವುದಾದರೂ ದಿನವಾಗಿರತಕ್ಕದ್ದು.

(ಗೊಂದಲ)

**ಸಭಾಪತಿಯವರು:–** Next subject. ಈಗ ಬಿಲ್ ಅನ್ನು ತೆಗೆದುಕೊಳ್ಳುತ್ತೀರಾ ಹೇಳಿ. (ಗೊಂದಲ) ವಿಧೇಯಕದ ಬಗ್ಗೆ ಬಿಟ್ಟು ಬೇರೆ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನಾವು 25ನೇ ತಾರೀಖು ಕೊಟ್ಟಿದ್ದೇವೆ, ನಿನ್ನೆಗೆ 14 ದಿನ ಮುಗಿದಿದೆ. (ಗೊಂದಲ)

**ಸಭಾಪತಿಯವರು:–** ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(ಗೊಂದಲ)

**Sri S.R.PATIL**:- "In computing the period of fourteen days, both the terminal days are excluded." ಇದರಿಂದ ಇವತ್ತಿಗೆ 14ದಿನ ಪೂರ್ಣವಾಗುವುದಿಲ್ಲ. Tomorrow ... (interruption) It is clearly mentioned in page Nos.112 and 113 of Practice and Procedure of Parliament by M.N.Kaul and S.L.Shakdher, (interruption) ಸಂವಿಧಾನವನ್ನು ತಿರುಚುವವರು ನೀವು (ಗೊಂದಲ)

(ಗೊಂದಲ)

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, "..... after fourteen days from the date of the receipt of notice ..." (interruption) 14 days complete (ಗೊಂದಲ)

**ಸಭಾಪತಿಯವರು:–** ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ನಿಮ್ಮ ಪ್ರಕಾರ ಇವತ್ತಿಗೆ ಅದನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

**ಶ್ರೀ ಆರ್.ಬಿ.ತಿಮ್ಮಾಪುರ್:-** ತಾವು decision ಕೊಟ್ಟುಬಿಡಿ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, it is very clearly mentioned in page No.113 of Practice and Procedure of Parliament by M.N.Kaul and S.L.Shakdher ಬಹಳ ಕ್ಲಿಯರ್ ಆಗಿ ಇದೆ. Terminal days are excluded, ಎಂದು ಇದೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, "...... no account being taken of the seats which are vacant. At least fourteen days' notice has to be given of the intention to move such a resolution. In computing the period of fourteen days, both the terminal days are excluded."

(ಗೊಂದಲ)

**ಶ್ರೀ ಆಯನೂರು ಮಂಜುನಾಥ್:-** Next paragraph ಓದಿ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, "..... after fourteen days from the date of the receipt of notice ...." ನಾಳೆ ಸದನ ಮುಗಿಯುತ್ತದೆ. ಅನಾವಶ್ಯಕವಾಗಿ ಕಾನೂನು ಬಾಹಿರವಾದ, ಸಂವಿಧಾನ ಪೂರಕವಾದ ನಿಯಮಕ್ಕೆ ವಿರುದ್ಧ ಸದನದ ಮಹತ್ವವಾದ ಸಮಯವನ್ನು ಹಾಳು ಮಾಡುತ್ತಿದ್ದಾರೆ. You do not allow them to speak. (ಗೊಂದಲ)

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, " ..... On receipt of notice, a motion for leave to move the resolution is entered in the List of Business in the name of the members concerned on a day fixed by the Speaker provided that the day so fixed has to be any day after fourteen days from the date of the receipt of notice of the resolution." (Interruption)

**ಶ್ರೀ ಆರ್.ಬಿ. ತಿಮ್ಮಾಪೂರ:-** ಇವರಿಗೆ ಅಧಿಕಾರ ಬೇಕು ರೈತರ ಬಗ್ಗೆ ಚರ್ಚೆ . . .

(ಗೊಂದಲ)

(ಮುಂದು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(1048) 09-12-2020/ 11-40/ ಕೆಹೆಚ್-ಜಿಆರ್

**(ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ರೈತರು ಎಷ್ಟು ಜನ ಸತ್ತು ಹೋಗುತ್ತಿದ್ದಾರೆ. ಇವರಿಗೆ ಆ ಕಡೆ ಗಮನ ಇಲ್ಲ. ಇವರಿಗೆ ಅಧಿಕಾರದ ಮೇಲೆಯೇ ಗಮನ ಇದೆ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಕಾನೂನು ಪ್ರಕಾರವಾಗಿ ಇನ್ನು 14 ದಿವಸಗಳು ಆಗಿಲ್ಲ. **(ಗೊಂದಲ)** ದಯಮಾಡಿ, ಇದು ಆಜೆಂಡಾ ಪ್ರಕಾರ ಆಗಲಿ. ನಾವು ಇಲ್ಲಿಗೆ ಇವರು ಹೇಳುವುದನ್ನು ಕೇಳುವುದಕ್ಕೆ ಬಂದಿಲ್ಲ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸದಸ್ಯರೇ, ಇದು ನಿಯಮಾವಳಿಗಳ ಪ್ರಕಾರ ನಡೆಯುತ್ತದೆ. ಇದರ ಬಗ್ಗೆ ಮಾನ್ಯ ಹರಿಪ್ರಸಾದ್‌ರವರು ಹೇಳುತ್ತಾರೆ. ಅದನ್ನು ಕೇಳಲಿ ಬಿಡಿ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, he cannot dictate terms to the House.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, we have given notice according to rule.

**(ಗೊಂದಲ)**

**ಸಭಾಪತಿಯವರು:-** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು 165(2)ರ ಪ್ರಕಾರ 14 ದಿನಗಳ ನಂತರ ಯಾವುದಾದರೂ ದಿನದಂದು ಕಾರ್ಯಕಲಾಪಗಳ ಪಟ್ಟಿಗೆ ಸೇರಿಸಲು ನನಗೆ ಅಧಿಕಾರ ನೀಡಲಾಗಿದೆ. ಕಾರ್ಯಕಲಾಪಗಳ ಪಟ್ಟಿಯಲ್ಲಿ ಇಲ್ಲದೇ ಇರುವಂತಹ ಯಾವುದೇ ವಿಚಾರಗಳನ್ನು ಈಗ ಚರ್ಚೆ ಮಾಡುವುದಕ್ಕೆ ಅವಕಾಶ ಇರುವುದಿಲ್ಲ. ತಾವುಗಳು ಇದಕ್ಕೆ ಸಂಬಂಧಿಸಿದಂತೆ ಸಭೆಯನ್ನು ಸೇರಬಹುದು. ನನಗೆ ಇದರ ಬಗ್ಗೆ ಅನುಭವದ ಕೊರತೆ ಇದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ ತಾವು ಸದನದಲ್ಲಿ ಹೊಸ ಸಂಪ್ರದಾಯವನ್ನು ಹುಟ್ಟು ಹಾಕುವುದಕ್ಕೆ ಹೋಗಬೇಡಿ.

**ಸಭಾಪತಿಯವರು:-** ಮಾನ್ಯ ಸದಸ್ಯರುಗಳೇ ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ತಾವು ನೋಟಿಸ್ ಅನ್ನು ಏನು ಕೊಟ್ಟಿದ್ದೀರಿ. ನೋಟಿಸ್‌ನ ಟಿಪ್ಪಣಿಯಲ್ಲಿ ನಮ್ಮ ಅಧಿಕಾರಿಗಳು ಏನು ಕೊಟ್ಟಿದ್ದಾರೆ ಅದರ ಮೇಲೆ ಸ್ವಲ್ಪ ಗೊಂದಲ ಇದೆ. ಆದ್ದರಿಂದ ನಾನು ಕಾನೂನು ತಜ್ಞರ ಸಲಹೆಯನ್ನು ಪಡೆಯಬೇಕಾಗುತ್ತದೆ. ಕಾನೂನು ತಜ್ಞರ ಸಲಹೆಯನ್ನು ಪಡೆದ ಮೇಲೆ ನಾನು ದಿನಾಂಕವನ್ನು ನಿಗದಿಪಡಿಸುತ್ತೇನೆ. ಅಲ್ಲಿಯವರೆಗೂ ಸದನ ನಡೆಯುವುದಕ್ಕೆ ತಾವೆಲ್ಲರೂ ಅವಕಾಶ ಮಾಡಿಕೊಡಿ. ಸದನ ನಡೆಯುವುದಕ್ಕೆ ಅವಕಾಶ ಕೊಡದೇ ಇದ್ದರೆ ನಾನು ಸಭೆಯನ್ನು ಮುಂದೂಡುತ್ತೇನೆ. ತಮಗೇ ಈ ಆಯ್ಕೆಯನ್ನು ಕೊಡುತ್ತಿದ್ದೇನೆ. ಏಕೆಂದರೆ, ನಾವು ಕಾರ್ಯಕಲಾಪಗಳ ಪಟ್ಟಿಯಲ್ಲಿ ಇಲ್ಲದೇ ಇರುವಂತಹ ವಿಚಾರವನ್ನು ಪ್ರಸ್ತಾಪ ಮಾಡಿ, ಸದನ ನಡೆಯುವುದಕ್ಕೆ ಬಿಡದೇ ಇದ್ದರೆ ಖಂಡಿತವಾಗಿಯೂ ಸದನವನ್ನು ಮುಂದೂಡಬೇಕಾದಂತಹ ಪರಿಸ್ಥಿತಿ ಬರುತ್ತದೆ. ಈ ವಿಚಾರ ಇವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಇಲ್ಲ. ಈ ವಿಚಾರ ಕಾರ್ಯಕಲಾಪಗಳ ಪಟ್ಟಿಯಲ್ಲಿ ಇಲ್ಲದೇ ಇರುವುದರಿಂದ, . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ ಒಂದು ನಿಮಿಷ.

**(ಗೊಂದಲ)**

**ಸಭಾಪತಿಯವರು:-** ಇದು ನಮ್ಮ ವಿವೇಚನೆಗೆ ಬಿಟ್ಟಿರುವಂತಹದ್ದು. ಇದರ ಬಗ್ಗೆ ತಾವು ಹೇಳುವಂತಹ ಅವಶ್ಯಕತೆ ಇಲ್ಲ. ತಾವು ಏನೇ ಹೇಳಿದರೂ ನನ್ನ ವಿವೇಚನೆಯ ಪ್ರಕಾರ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ. ಇದರ ಬಗ್ಗೆ ನಾನು ಕಾನೂನು ತಜ್ಞರ ಸಲಹೆಯನ್ನು ಪಡೆಯುತ್ತೇನೆ. ನಂತರ ನಾನು ದಿನಾಂಕವನ್ನು ನಿಗದಿಪಡಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕಲಾಪ ಬಹಳ ಮಹತ್ವವುಳ್ಳದ್ದು. ಕಾರ್ಯಕಲಾಪಗಳ ಪಟ್ಟಿಯಂತೆ ತಾವು ಸದನವನ್ನು ಪ್ರಾರಂಭ ಮಾಡಿ. ಕೆಳಮನೆಯು ನಾಳೆ ಕೊನೆಗೊಳ್ಳುತ್ತಿದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸಚಿವರೇ ಈಗ ವಿಧೇಯಕದ ಬಗ್ಗೆ ಚರ್ಚೆ ಪ್ರಾರಂಭ ಮಾಡುತ್ತೀರಿಯೇ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಸರ್ಕಾರದ ಪರವಾಗಿ ಎದ್ದು ನಿಂತಿದ್ದೇನೆ. ತಾವು 165 ನೇ ನಿಯಮವನ್ನು ಉಲ್ಲೇಖ ಮಾಡಿದ್ದೀರಿ. ಅದರಲ್ಲಿ ಎರಡನೇ ವಿಷಯಗಳನ್ನು ಉಲ್ಲೇಖ ಮಾಡಿದ್ದೀರಿ. ಮುಂದುವರೆದು, ನಿಯಮ 166 ರಲ್ಲಿ "ಕಾರ್ಯಕಲಾಪಗಳ ಪಟ್ಟಿಯಲ್ಲಿ, ಪ್ರಸ್ತಾವವು ಯಾರ ಸದಸ್ಯರ ಹೆಸರಿನಲ್ಲಿದೆಯೋ ಆ ಸದಸ್ಯರು ಅದನ್ನು ವಾಪಸ್ಸು ಪಡೆದುಕೊಳ್ಳಲು ಅಪೇಕ್ಷಿಸದ ಹೊರತು, ಪ್ರಸ್ತಾವವನ್ನು ಮಂಡಿಸಬೇಕೆಂದು ಕೋರಿದಾಗ ಅದನ್ನು ಹಾಗೆ ಮಂಡಿಸತಕ್ಕದ್ದು ಮತ್ತು ಈ ಹಂತದಲ್ಲಿ ಯಾವ ಭಾಷಣಕ್ಕೂ ಅವಕಾಶ ಕೊಡತಕ್ಕದ್ದಲ್ಲ." ಎಂದು ಇದೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ನಾಳೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ಈ ಅಜೆಂಡಾವನ್ನು ಇಡುವುದಕ್ಕೆ ನಾನು ತಮ್ಮ ಹತ್ತಿರ ಕೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾನಾಯಕರೇ, ನಾವು ನಿಯಮ 165ರ ಬಗ್ಗೆ ಮಾತನಾಡುತ್ತಿದ್ದೇವೆ.

**(ಗೊಂದಲ)**

**ಸಭಾಪತಿಯವರು:–** ನಾನು ಹೇಳಿರುವ ವಿಚಾರಗಳು ತಮ್ಮ ಗಮನಕ್ಕೆ ಬಂದಿಲ್ಲವೆಂದು ನನಗೆ ಅನಿಸುತ್ತಿದೆ. ಇದರಲ್ಲಿ ನನಗೆ ಕೆಲವು ಅನುಮಾನಗಳು ಇವೆ. ಆದ್ದರಿಂದ, ಇದರ ಬಗ್ಗೆ ಕಾನೂನು ತಜ್ಞರ ಸಲಹೆಯನ್ನು ಪಡೆಯುತ್ತೇನೆ. ಕಾನೂನು ತಜ್ಞರ ಸಲಹೆಯನ್ನು ಪಡೆದ ಮೇಲೆ ದಿನಾಂಕವನ್ನು ನಿಗದಿ ಮಾಡುತ್ತೇನೆ. ಅಲ್ಲಿಯವರೆಗೆ ದಿನಾಂಕವನ್ನು ನಿಗದಿ ಮಾಡುವುದಕ್ಕೆ ಆಗುವುದಿಲ್ಲ. ತಾವು ಯಾವುದೇ ಒತ್ತಡವನ್ನು ತಂದರೂ ಸಹ ನನ್ನ ತೀರ್ಮಾನ ಇಷ್ಟೆ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಕಾಂಗ್ರೆಸ್ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದು ತಮ್ಮ ತೀರ್ಮಾನಕ್ಕೆ ಬಿಟ್ಟಿರುವಂತಹ ವಿಚಾರವಾಗಿದೆ. ಇದನ್ನು ತಾವು ಯಾವಾಗ ಬೇಕಾದರೂ ಇಡಬಹುದು. ನಿಯಮ 165

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಲ್ಲಿರುವ ವಿಚಾರಗಳು ಬಹಳ ಸ್ಪಷ್ಟವಾಗಿ ಇದೆ. 14 ದಿವಸಗಳು ಪೂರ್ಣಗೊಂಡ ಮೇಲೆ ದಿನಾಂಕವನ್ನು ನಿಗದಿ ಮಾಡಬಹುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಮ್ಮ ಪರಮಾಧಿಕಾರದಲ್ಲಿ ಇದರ ಬಗ್ಗೆ ಮನವರಿಕೆ ಮಾಡಿಕೊಡುವ ಜವಾಬ್ದಾರಿ ನಮಗೆ ಇದೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಇದು ನನ್ನ ಪರಮಾಧಿಕಾರ ಅಲ್ಲ. ನನಗೆ ಮನವರಿಕೆ ಎಲ್ಲಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇಂತಹ ಸಂದಿಗ್ಧ ಸಮಯದಲ್ಲಿ ಪೀಠಕ್ಕೆ ಮನವರಿಕೆ ಮಾಡಿಕೊಡಬೇಕು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, this House is not in order. ಸದನವು order ನಲ್ಲಿ ಇಲ್ಲ. ಇದರ ಬಗ್ಗೆ ಚರ್ಚೆ ಮಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾವು ಪೀಠಕ್ಕೆ ಮನವರಿಕೆ ಮಾಡಿಕೊಡುತ್ತಿದ್ದೇವೆ.

**(ಗೊಂದಲ)**

**ಸಭಾಪತಿಯವರು:–** ಸದನವನ್ನು ಮಧ್ಯಾಹ್ನ 1 ಗಂಟೆಯವರೆಗೆ ಮುಂದೂಡಿದ್ದೇನೆ.

**(ಸದನವು 11 ಗಂಟೆ 45 ನಿಮಿಷಕ್ಕೆ ಮುಂದೂಡಲ್ಪಟ್ಟಿತು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1049) 09–12–2020/1–50/ಬಿಕೆಪಿ–ವಿಕೆ

**(ಬೆಳಗ್ಗೆ 11 ಗಂಟೆ 45 ನಿಮಿಷಕ್ಕೆ ಮೂಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 1 ಗಂಟೆ 51 ನಿಮಿಷಕ್ಕೆ ಸಮಾವೇಶಗೊಂಡಿತು)**

**ಸಭಾಪತಿ (ಶ್ರೀ ಕೆ ಪ್ರತಾಪಚಂದ್ರಶೆಟ್ಟಿ) ಯವರು ಪೀಠದಲ್ಲಿ ಉಪಸ್ಥಿತರಿದ್ದರು**

**(ಈ ಹಂತದಲ್ಲಿ ಶ್ರೀ ಬಿ.ಕೆ. ಹರಿಪ್ರಸಾದರವರನ್ನು ಹೊರತುಪಡಿಸಿ ಕಾಂಗ್ರೆಸ್ ಸದಸ್ಯರುಗಳು ಭಾವಿಯಲ್ಲಿ ಧರಣಿನಿರತರಾಗಿದ್ದರು)**

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭಾಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಪ್ರತಿ ದಿವಸ ನಾವು ಊಟದ ಸಮಯವನ್ನು ಬಹಳಷ್ಟು ಉಪಯೋಗ ಮಾಡಿದ್ದೇವೆ. ಈಗಾಗಲೇ ಇದು ಚರ್ಚೆಯಾಗಬೇಕಾಗಿತ್ತು ಆದರೆ ಅದು ಆಗಿಲ್ಲ. ಆದ್ದರಿಂದ ಊಟದ ವಿರಾಮದ ನಂತರ ಇದನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

**ಸಭಾಪತಿಯವರು:** ಸದನವನ್ನು ಮಧ್ಯಾಹ್ನ 3 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಮಧ್ಯಾಹ್ನ 3 ಗಂಟೆ 30 ನಿಮಿಷದವರೆಗೆ ಮುಂದೂಡಲ್ಪಟ್ಟಿತು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1050) 09–12–2020(3–50)ಎಂವಿ–ಬಿಎನ್‌ಎಸ್

**(ಸಭಾಪತಿಯವರ ಉಪಸ್ಥಿತಿ)**

**(ಮಧ್ಯಾಹ್ನ 1 ಗಂಟೆ 51 ನಿಮಿಷಕ್ಕೆ ಭೋಜನಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 55 ನಿಮಿಷಕ್ಕೆ ಪ್ರಾರಂಭವಾಯಿತು)**

**(ಸಭಾಪತಿಯವರು ಸಭಾಪೀಠದಲ್ಲಿ ಉಪಸ್ಥಿತರಾದರು)**

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದು ಧರಣಿ ಪ್ರಾರಂಭಿಸಿದರು)**

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ, ತಮ್ಮ ಪಕ್ಷದ ಎಲ್ಲಾ ಮಾನ್ಯ ಸದಸ್ಯರನ್ನು ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕೆ ತಿಳಿಸಿ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, House order ನಲ್ಲಿ ಇಲ್ಲ. ಮಾನ್ಯ ಸದಸ್ಯರು ಸದನದ ಬಾವಿಯೊಳಗೆ ಇಳಿದಿದ್ದಾರೆ.

**ಸಭಾಪತಿಯವರು:–** ಅದಕ್ಕೆ ಮಾನ್ಯ ಸದಸ್ಯರುಗಳನ್ನು ವಾಪಸ್ಸು ಕರೆಯುವುದಕ್ಕೆ ಹೇಳುತ್ತಿರುವುದು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನೋಡಿ ನಾವು ಈ ಸದನಕ್ಕೆ ಬಂದಿರುವುದು ವಿಧೇಯಕಗಳನ್ನು ಪಾಸ್ ಮಾಡಬೇಕು, transaction ನಲ್ಲಿ ಭಾಗವಹಿಸಬೇಕು, ಜನರ ಸಮಸ್ಯೆಗಳನ್ನು ಬಗೆಹರಿಸಬೇಕು, ಜನರ ಜ್ವಲಂತ ಸಮಸ್ಯೆಗಳಿಗೆ ಸ್ಪಂದನೆ ಮಾಡಬೇಕು, ಸರ್ಕಾರಕ್ಕೆ ಕೆಲವು ಸಲಹೆ ಸೂಚನೆಗಳನ್ನು ಕೊಟ್ಟು, ಸರ್ಕಾರ ಸರಿಯಾದ ದಾರಿಯಲ್ಲಿ ನಡೆಯುವುದಕ್ಕೆ ಅನುಕೂಲವಾಗಲಿ ಎಂದು ಪ್ರತಿಪಕ್ಷದವರು ಬಂದಿದ್ದೇವೆ. ನಾವು ವಿರೋಧ ಪಕ್ಷದವರು ಅಷ್ಟೇ sincere ಆಗಿ ಇದ್ದೇವೆ. ಆದರೆ, ಭಾರತೀಯ ಜನತಾ ಪಕ್ಷದ ಸ್ನೇಹಿತರು ವಿಧೇಯಕವನ್ನು ಪಾಸ್ ಮಾಡಿಕೊಳ್ಳುವ ಗೊಡವೆಗೆ ಹೋಗುವುದಿಲ್ಲ. ಈಗ ಮಾನ್ಯ ಸಹಕಾರ ಸಚಿವರು ಎದ್ದು ನಿಂತಿದ್ದಾರೆ, ನಮಗೆ ಅವರ ಬಗ್ಗೆ ವೈಯಕ್ತಿವಾಗಿ ಅಪಾರವಾದ ಗೌರವವಿದೆ.

ಮಾನ್ಯ ಸಭಾಪತಿಯವರೇ, ಬೆಳಗ್ಗೆಯಿಂದ ಇಲ್ಲಿಯವರೆಗೆ ಸಮಯ ಹಾಳಾಗುವುದಕ್ಕೆ ಯಾರು ಕಾರಣರು? ಇನ್ನು ಯಾವುದೂ ಮಹತ್ವದ ವಿಚಾರಗಳು ಮುಗಿದಿಲ್ಲ ಮತ್ತು ಹದಿನಾಲ್ಕು ದಿವಸ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಗಿದಿಲ್ಲ. ಹದಿನಾಲ್ಕು ದಿವಸ ಮುಗಿದಿದೆಯೋ ಇಲ್ಲವೋ ಎಂದು ತಿಳಿದುಕೊಳ್ಳುವ ವ್ಯವಧಾನವು ಅವರಿಗೆ ಇಲ್ಲ. ಇವತ್ತು ಬೆಳಗ್ಗೆಯಿಂದ ಇಲ್ಲಿಯವರೆಗೆ ಸದನದ ಅತ್ಯಂತ valuable time ಅನ್ನು ಭಾರತೀಯ ಜನತಾ ಪಕ್ಷದ ಸದಸ್ಯರು ಹಾಳು ಮಾಡಿಬಿಟ್ಟರು. ಅವರು ಮಸೂದೆಯನ್ನು ಪಾಸು ಮಾಡಿಕೊಳ್ಳುವುದಕ್ಕೆ ಅದರ ಮೇಲೆ ಚರ್ಚೆ ಮಾಡುವುದಕ್ಕೆ ತಯಾರಿದ್ದಾರೆಂದರೆ, ನಾನು ನಮ್ಮ ಸದಸ್ಯರಿಗೆ ಮನವಿ ಮಾಡಿಕೊಳ್ಳುತ್ತೇನೆ. ಅವರು ತಮ್ಮ ತಮ್ಮ ಸ್ಥಾನಗಳಿಗೆ ಹೋಗುತ್ತಾರೆ. ಅದನ್ನು ಬಿಟ್ಟು ಮುಂಜಾನೆ ಅತಿ ಎತ್ತರಕ್ಕೆ ಜಿಗಿದಾಡುತ್ತಿದ್ದರು.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ವಿಧೇಯಕದ ಮೇಲೆ ಚರ್ಚೆಗೆ ತಯಾರಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, we are very much interested to pass the Bills. Really, ನಮಗೆ ಕೃಷಿಗೆ ಸಂಬಂಧಿಸಿದ ವಿಧೇಯಕದ ಮೇಲೆ ಚರ್ಚೆ ಮಾಡುವುದಕ್ಕೆ ಆಸಕ್ತಿ ಇದೆ. ಇಡೀ ಭಾರತ ದೇಶದ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಕೃಷಿ ಪ್ರಧಾನದ ಈ ದೇಶದಲ್ಲಿ ರೈತರು ದೊಡ್ಡ ಪ್ರಮಾಣದಲ್ಲಿ ಹೋರಾಟ ಮಾಡುವಂತಹ ಸಂದರ್ಭದಲ್ಲಿ ರೈತರಿಗೆ ಸಂಬಂಧಿಸಿದ ವಿಧೇಯಕವನ್ನು ಪಾಸ್ ಮಾಡಿಕೊಡಬೇಕು. ಅದರ ಬಗ್ಗೆ ಚರ್ಚೆ ಮಾಡಬೇಕು. ಅದರ ಬಗ್ಗೆ ಬೆಳಕು ಚೆಲ್ಲಬೇಕೆಂದು ನಮಗೆ ಆಸಕ್ತಿ ಇದೆ. ಆದರೆ, ಆಡಳಿತ ಪಕ್ಷದವರಿಗೆ ರೈತರ ಬಗ್ಗೆ ಆಸಕ್ತಿಯೇ ಇಲ್ಲ. ಅವರಿಗೆ ಯಾವುದರ ಮೇಲೆ ಆಸಕ್ತಿ ಇದೆಯೋ ಎಂದು ನನಗಂತೂ ಅರ್ಥವಾಗುತ್ತಿಲ್ಲ. ಅವರಿಗೆ ದಿವಸಗಳನ್ನು ಎಣಿಸುವುದಕ್ಕೂ ಬರುವುದಿಲ್ಲ. ಅವರು ಅಂಕಿ-ಮಗ್ಗಿಗಳನ್ನು ಹೇಗೆ ಕಲಿತಿದ್ದಾರೋ ಅನಿಸುತ್ತಿದೆ. ವಿಧೇಯಕವನ್ನು ಪಾಸ್ ಮಾಡಿಸಿಕೊಳ್ಳುವುದಕ್ಕೆ ಮಾನ್ಯ ಸಹಕಾರ ಸಚಿವರು ಎದ್ದು ನಿಂತಿದ್ದಾರೆ. ಆದುದರಿಂದ ನಮ್ಮ ಪಕ್ಷದ ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಬಂದು transaction ನಲ್ಲಿ ಭಾಗಿಯಾಗುವುದು. ದಯಾಮಾಡಿ ಮಾನ್ಯ ಸದಸ್ಯರುಗಳು ಸದನದ ಬಾವಿಯಿಂದ ಹೊರಬರಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಸಚಿವರೆ, ವಿಧೇಯಕ ಬಿಟ್ಟು ಬೇರೆ ಏನಾದರೂ ಇದೆಯೇ?

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)**

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಧನ್ಯವಾದಗಳು. ಏಕೆಂದರೆ, ತಾವುಗಳೇ ಬಾವಿಗೆ ಬಂದು ವಾಪಸ್ಸು ಹೋಗಿರುವುದಕ್ಕೆ.

## 4. ಪ್ರಕಟಣೆ

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 113ರ ಮೇರೆಗೆ ವಿಧಾನ ಸಭೆಯು ದಿನಾಂಕ:09.12.2020ರಂದು ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕಾರವಾಗಿ ಮತ್ತು ವಿಧಾನ ಪರಿಷತ್ತಿನಲ್ಲಿಯೂ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2020ನೇ ಸಾಲಿನ **"**ಕರ್ನಾಟಕ ಭೂ ಸುಧಾರಣೆಗಳ (ಎರಡನೇ ತಿದ್ದುಪಡಿ) ವಿಧೇಯಕ**"** ವನ್ನು ಪುನಃ ಪರ್ಯಾಲೋಚಿಸಿ ಅಂಗೀಕರಿಸಿತೆಂದು ಸದನದ ಗಮನಕ್ಕೆ ತರಲಾಗಿದೆ.

## 5. ಶಾಸನ ರಚನೆ

### ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

### ಅ) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2020

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ಎರಡು ಕಲಂ ತಿದ್ದುಪಡಿಗಳ ಪ್ರಸ್ತಾವವನ್ನು ತಮ್ಮ ಮುಂದೆ ಇಡುತ್ತಿದ್ದೇನೆ.

**(ಮುಂದು...)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(1051)-09.12.2020-04.00-LL-GR

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಟಿ. ಸೋಮಶೇಖರ್**(ಮುಂದುವರೆದಿದ್ದು...)

ಎ.ಪಿ.ಎಂ.ಸಿ., ಕಾಯ್ದೆ ವ್ಯಾಪ್ತಿ ಇದುವರೆವಿಗೂ ಕರ್ನಾಟಕ ರಾಜ್ಯಾದ್ಯಂತ ಇತ್ತು. ರೈತ ತಾನು ಬೆಳೆದಂತಹ ಬೆಳೆಯನ್ನು ಎ.ಪಿ.ಎಂ.ಸಿ,. ಯಲ್ಲಿಯೇ ಮಾರಾಟ ಮಾಡಬೇಕೆಂಬ ನಿರ್ಬಂಧ ಈ ಮೊದಲು ಎ.ಪಿ.ಎಂ.ಸಿ., ಕಾಯ್ದೆಯಲ್ಲಿತ್ತು. ರೈತರಿಗೆ ಒಳ್ಳೆಯ ಬೆಲೆ ಸಿಗಬೇಕೆಂಬ ಹಿತದೃಷ್ಟಿಯಿಂದ ಈ ಕಾಯ್ದೆಗೆ ತಿದ್ದುಪಡಿ ತಂದು ರೈತ ತಾನು ಬೆಳೆದಂತಹ ಬೆಳೆಯನ್ನು ಎ.ಪಿ.ಎಂ.ಸಿ., ಯಲ್ಲಿ ಆದರೂ ಮಾರಾಟ ಮಾಡಬಹುದು ಅಥವಾ ಎ.ಪಿ.ಎಂ.ಸಿ., ಹೊರಗಡೆ ಆದರೂ ಮಾರಾಟ ಮಾಡಬಹುದು. ರೈತನಿಗೆ ಎಲ್ಲಿ ಒಳ್ಳೆಯ ಬೆಲೆ ಸಿಗುತ್ತದೆ ಅಲ್ಲಿ ತನ್ನ ಬೆಳೆಯನ್ನು ಮಾರಾಟ ಮಾಡತಕ್ಕಂಥದ್ದಕ್ಕೆ, "ನಮ್ಮ ಬೆಳೆ, ನಮ್ಮ ಹಕ್ಕು" ಎನ್ನುವ ರೀತಿಯಲ್ಲಿ ಅವರಿಗೆ ಸ್ವಾತಂತ್ರ್ಯ ನೀಡುವಂಥದ್ದಕ್ಕೆ ಕಲಂ 8 (2) ಕ್ಕೆ ತಿದ್ದುಪಡಿ ತಂದಿರುತ್ತೇವೆ. ಎರಡನೆಯದಾಗಿ, ಕಲಂ 117, ಈ ಎ.ಪಿ.ಎಂ.ಸಿ., ಹೊರಗಡೆ ಏನಾದರೂ ರೈತ ಕೃಷಿ ಉತ್ಪನ್ನಗಳನ್ನು ಲೈಸೆನ್ಸ್ ಇಲ್ಲದೇ ಇದ್ದ ಪಕ್ಷದಲ್ಲಿ ಮಾರಾಟ ಮಾಡುವುದಕ್ಕೆ 2 ಸಾವಿರದಿಂದ 5 ಸಾವಿರವರೆಗೆ ದಂಡ ಹಾಕುವಂಥದ್ದು ಮತ್ತು ಅವರ ವಿರುದ್ಧ ಪ್ರಕರಣ ದಾಖಲಿಸುವುದು ಪ್ರಸ್ತುತ ಕಾಯಿದೆಯಲ್ಲಿ ಇದೆ. ಅದನ್ನು ತಿದ್ದುಪಡಿ ಮಾಡಿ, ಎ.ಪಿ.ಎಂ.ಸಿ.ಯಿಂದ ಹೊರಗಡೆ ಮಾರಾಟ ಮಾಡುವುದಕ್ಕೆ, ಪಾನ್‌ಕಾರ್ಡ್ ಇದ್ದಂತಹ ರೈತರಿಗೆ ಯಾವುದೇ ವಿಧವಾದ ದಂಡ ವಿಧಿಸಬಾರದೆಂದು ತಿದ್ದುಪಡಿ ತರಲಾಗಿರುತ್ತದೆ. ಈ ಎರಡು ಕಲಂಗಳಿಗೆ ತಿದ್ದುಪಡಿ ತಂದಿರಲಾಗಿರುತ್ತದೆ. ಇದು ವಿಧಾನಸಭೆಯಲ್ಲಿ ಅಂಗೀಕಾರ ಆಗುವುದಕ್ಕೆ ಮೊದಲು ನಾನು ಸುಮಾರು 27 ಜಿಲ್ಲೆಗಳಿಗೆ ಪ್ರವಾಸ ಮಾಡಿದ್ದೇನೆ. ಎಲ್ಲಾ ದೊಡ್ಡ ದೊಡ್ಡ ಎ.ಪಿ.ಎಂ.ಸಿ.ಗಳಲ್ಲಿ ಕೂಡ ಈ ಬಗ್ಗೆ ಸಭೆಯನ್ನು ಮಾಡಿ, ಚರ್ಚಿಸಿರುತ್ತೇನೆ ಮತ್ತು ಈ ಹಿಂದೆ ಕಾಯಿದೆಯಲ್ಲಿ ಎ.ಪಿ.ಎಂ.ಸಿ. ಒಳಗಡೆ ರೈತ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಬೇಕೆಂದು ಏನು ನಿರ್ಬಂಧ ಇದೆ, ಅದನ್ನು ತೆಗೆದುಹಾಕಿದರೆ ರೈತನಿಗೆ ಸ್ವಾತಂತ್ರ್ಯ ಸಿಗುತ್ತದೆ ಮತ್ತು ಒಳ್ಳೆಯ ಬೆಲೆ ಸಿಗುವುದರಿಂದ ಆತ ತನ್ನ ಕೃಷಿ ಉತ್ಪನ್ನಗಳನ್ನು ಎಲ್ಲಿ ಬೇಕಾದರೂ ಮಾರಾಟ ಮಾಡಬಹುದು ಎನ್ನುವಂಥದ್ದಕ್ಕೆ ಎಲ್ಲಾ ಎ.ಪಿ.ಎಂ.ಸಿ.ನ ಹಿರಿಯ ನಾಯಕರುಗಳು ಸಹಮತಿ ಸೂಚಿಸಿದ್ದಾರೆ. ಬಹುತೇಕ 27 ಜಿಲ್ಲೆಯಲ್ಲಿರತಕ್ಕಂತಹ ಎ.ಪಿ.ಎಂ.ಸಿ.ಗಳಿಗೆ ಖುದ್ದಾಗಿ ನಾನೇ ಪ್ರವಾಸ ಮಾಡಿ, ಪ್ರಸ್ತುತ ಕಾಯಿದೆಯಲ್ಲಿ ಏನೇನು ಅಂಶಗಳಿವೆ. ಅದರಲ್ಲಿ ಏನೇನು ಬದಲಾವಣೆ ಮಾಡಿದರೆ ರೈತರಿಗೆ ಏನೆಲ್ಲಾ ಅನುಕೂಲಗಳಾಗುತ್ತವೆ ಎನ್ನುವ ಬಗ್ಗೆ ನಾನು ಎಲ್ಲಾ ಕಡೆ ಪ್ರವಾಸ ಮಾಡಿ ಚರ್ಚಿಸಿರುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಕೂಡ ಎಲ್ಲಾ ರೈತ ಸಂಘಟನೆಗಳು ಮತ್ತು ಎ.ಪಿ.ಎಂ.ಸಿ.,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಘಟನೆಗಳೊಂದಿಗೆ ವಿಧಾನಸೌಧದ ಕೊಠಡಿ ಸಂಖ್ಯೆ:313ರಲ್ಲಿ ಒಂದು ಸಭೆಯನ್ನು ನಡೆಸಿ, ಅಲ್ಲಿ ಸುಮಾರು ಒಂದೂವರೆ ಗಂಟೆ ಕಾಲ ಈ ಬಗ್ಗೆ ಚರ್ಚೆಯನ್ನು ಮಾಡಿ, ಈ ಕಾಯಿದೆಯಲ್ಲಿ ಏನೆಲ್ಲಾ ಕಾನೂನುಗಳಿವೆ. ಅವುಗಳಲ್ಲಿ ಏನೆಲ್ಲಾ ಬದಲಾವಣೆಯನ್ನು ಮಾಡುತ್ತಿದ್ದೇವೆ ಮತ್ತು ಆ ಬದಲಾವಣೆ ಮಾಡಿದರೆ ರೈತರಿಗೆ ಏನೆಲ್ಲಾ ಅನುಕೂಲಗಳಾಗುತ್ತವೆ ಎನ್ನುವ ಬಗ್ಗೆ ವಿಸ್ತೃತವಾಗಿ ಚರ್ಚೆ ಮಾಡಿರುತ್ತಾರೆ. ಅಲ್ಲದೇ, ಈ ಮೊದಲು ಎ.ಪಿ.ಎಂ.ಸಿ. ಒಳಗಡೆ ರೈತ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೆ 1 ರೂಪಾಯಿ 50 ಪೈಸೆ ಸೆಸ್(ತೆರಿಗೆ) ಅನ್ನು ಹಾಕುತ್ತಿದ್ದೆವು. ಅದು ಜಾಸ್ತಿ ಎನ್ನುವಂತಹ ವಿಚಾರವನ್ನು ರೈತ ಬಾಂಧವರು ಹೇಳಿದಂತಹ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಅದನ್ನು 35 ಪೈಸೆ ಮಾಡಿರುತ್ತಾರೆ. ಈ ಎರಡು ಕಲಂಗಳಿಂದ ಒಬ್ಬ ರೈತ ಬೆಳೆದಂತಹ ಕೃಷಿ ಉತ್ಪನ್ನಗಳನ್ನು ಎ.ಪಿ.ಎಂ.ಸಿ. ಒಳಗಡೆ ಅಥವಾ ಹೊರಗಡೆ ಎಲ್ಲಿ ಬೇಕಾದರೂ ಮಾರಾಟ ಮಾಡತಕ್ಕಂಥದ್ದಕ್ಕೆ ಸ್ವಾತಂತ್ರ್ಯ ಕೊಡತಕ್ಕಂತಹ ಒಂದು ಅಪರೂಪವಾದಂತಹ ಐತಿಹಾಸಿಕ ಬದಲಾವಣೆಯನ್ನು ಕೇಂದ್ರ ಸರ್ಕಾರ ಕೂಡ ತಂದಿದೆ ಮತ್ತು ರಾಜ್ಯ ಸರ್ಕಾರ ಕೂಡ ತಂದಿರುತ್ತದೆ. ಅದಕ್ಕಾಗಿ ರೈತರ ವಿರುದ್ಧ ಯಾವುದೇ ದಂಡವಾಗಲಿ ಅಥವಾ ಯಾವುದೇ ಪ್ರಕರಣ ಆಗಲಿ ದಾಖಲಿಸುವುದಿಲ್ಲ. ಕಳೆದ 3 ವರ್ಷಗಳ ಅವಧಿಯಲ್ಲಿ ಸುಮಾರು 25 ಕೋಟಿ ಹಣವನ್ನು ಎ.ಪಿ.ಎಂ.ಸಿ., ವಿಜಿಲೆನ್ಸ್ ಕಮಿಟಿಯವರು ದಂಡದ ರೂಪದಲ್ಲಿ ವಸೂಲಿ ಮಾಡಿರುತ್ತಾರೆ. ಹಾಗಾಗಿ, ರೈತ ತನ್ನ ಕೃಷಿ ಉತ್ಪನ್ನಗಳನ್ನು ಎಲ್ಲಿ ಬೇಕಾದರೂ ಮಾರಾಟ ಮಾಡಬಹುದು. ಅದಕ್ಕಾಗಿ, ಆತನ ವಿರುದ್ಧ ಯಾವುದೇ ವಿಧವಾದ ಪ್ರಕರಣ ದಾಖಲಿಸಬಾರದೆಂದು ಮತ್ತು ಆತನಿಗೆ ಮುಕ್ತವಾದ ಅವಕಾಶ ಕಲ್ಪಿಸಿಕೊಡಬೇಕೆಂದು ಈ ಎರಡು ಕಲಂಗಳಿಗೆ ಬದಲಾವಣೆ ತರಲಾಗಿರುತ್ತದೆ.

**ಶ್ರೀ ಸಂದೇಶ್ ನಾಗರಾಜ್(ಎಸ್. ನಾಗರಾಜ್):-** ಮಾನ್ಯ ಸಭಾಪತಿಯವರೇ, ವಿಧೇಯಕದ ಬಗ್ಗೆ ಮಾತನಾಡಲು ಸಮಯ ನಿಗದಿ ಮಾಡಿದರೆ ಬಹಳ ಒಳ್ಳೆಯದೆಂದು ನಾನು ಹೇಳುತ್ತೇನೆ.

**ಸಭಾಪತಿಯವರು:-** ವಿಧೇಯಕದ ಮೇಲೆ ಚರ್ಚಿಸಲು ಸಮಯ ನಿಗದಿ ಮಾಡುತ್ತಾರೆಯೇ?

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ಎ.ಪಿ.ಎಂ.ಸಿ., ಎಂದು ಹೇಳಿದರೆ ಅದು ರೈತನ ಅತಿ ಪ್ರಮುಖವಾದಂತಹ ಒಂದು ಜೀವನಾಡಿ ಸಂಸ್ಥೆ. ವಿಶ್ವವಿದ್ಯಾನಿಲಯಗಳಲ್ಲಿ ಪರೀಕ್ಷಾಂಗ ಕುಲಸಚಿವ ವಿಭಾಗ ಯಾವ ರೀತಿ ಇದೆ, ಅದೇ ರೀತಿ ರೈತರ ಬದುಕಿಗೆ ಮಾರುಕಟ್ಟೆ ಎನ್ನುವಂಥದ್ದು ಬಹಳ ಪ್ರಮುಖವಾಗಿದೆ. ಒಂದೊಂದು ರಾಜ್ಯದಲ್ಲಿಯೂ ಕೂಡ ಒಂದೊಂದು ಮಾರುಕಟ್ಟೆ ವ್ಯವಸ್ಥೆ ಇದೆ. ಕರ್ನಾಟಕ ರಾಜ್ಯದಲ್ಲಿಯೂ ಕೂಡ ಬಹಳ ವರ್ಷಗಳಿಂದ ಸರ್ಕಾರಗಳು ವ್ಯವಸ್ಥೆಯಲ್ಲಿ ಬಹಳಷ್ಟು ಸುಧಾರಣೆ ತರುವಂತಹ ಕೆಲಸಗಳನ್ನು ತಿದ್ದುಪಡಿ ಮೂಲಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಂಡು ಬಂದಿವೆ. ಅದೇ ಮಾದರಿಯಲ್ಲಿ ಈ ಸರ್ಕಾರ ಕೂಡ ಎರಡು ಕಲಂಗಳಿಗೆ ತಿದ್ದುಪಡಿ ತಂದಿರುತ್ತದೆ. ಮೊದಲನೆಯದಾಗಿ, ಮಾರುಕಟ್ಟೆ ವ್ಯಾಪ್ತಿಯಲ್ಲಿ ಮಾರಾಟ ಮಾಡಬೇಕೆಂಬ ನಿರ್ಬಂಧವನ್ನು ಸಡಿಲಗೊಳಿಸಿರುವುದು. ಎರಡನೆಯದಾಗಿ, ಮಾರುಕಟ್ಟೆ ಒಳಗಡೆ ಮಾರಾಟ ಮಾಡದೇ ಇದ್ದರೆ ಏನು ದಂಡ ವಿಧಿಸಲಾಗುತ್ತಿತ್ತು ಅದನ್ನು ತೆಗೆಯಲಾಗಿರುವಂಥದ್ದಾಗಿದೆ.

ನಮ್ಮ ಕರ್ನಾಟಕ ರಾಜ್ಯದಲ್ಲಿ ರೈತರು ಬೆಳೆಯತಕ್ಕಂತಹ ಬೆಳೆಗಳಿಗೆ ಇದುವರೆವಿಗೂ ಎ.ಪಿ.ಎಂ.ಸಿ.ಗಳ ಮೂಲಕ ಒಂದು ಬೆಂಬಲ ಬೆಲೆ – supporting price ಎನ್ನುವಂಥದ್ದನ್ನು ನಿರ್ಧಿಷ್ಟವಾಗಿ ಕೊಡುವುದಕ್ಕೆ ಸಾಧ್ಯತೆ ಆಗಲಿಲ್ಲ. ರೈತ ಬೆಳೆದಂತಹ ಬೆಳೆಗಳನ್ನು ಎ.ಪಿ.ಎಂ.ಸಿ. ಯಾರ್ಡ್‌ಗೆ ತೆಗೆದುಕೊಂಡು ಮಾರಾಟ ಮಾಡಬೇಕು ಎನ್ನುವಂತಹ ನಿಯಮ ರೂಪಿಸಿದ ಮೇಲೆ ಇವೊತ್ತಿಗೂ ಕೂಡ ಎ.ಪಿ.ಎಂ.ಸಿ., ಯಾರ್ಡ್ ಒಳಗಡೆ ಬರುವಂತಹ ಕೃಷಿ ಉತ್ಪನ್ನ ಕೇವಲ 30%. ಇನ್ನೂ 70% ಕೃಷಿ ಉತ್ಪನ್ನಗಳು ಎ.ಪಿ.ಎಂ.ಸಿ., ಯಾರ್ಡ್‌ನ ಹೊರಗಡೆ ಮಾರಾಟವಾಗುತ್ತಿದೆ. ಉದಾಹರಣೆಗೆ ಹೇಳಬೇಕಾದರೆ, ಈಗ ನಮ್ಮ ಕರ್ನಾಟಕ ರಾಜ್ಯದಲ್ಲಿ ಭತ್ತ ಕಟಾವಿಗೆ ಬಂದಿದೆ. ಕರ್ನಾಟಕ ರಾಜ್ಯದಲ್ಲಿ ಸರ್ಕಾರ ಖರೀದಿ ಕೇಂದ್ರಗಳನ್ನು ತೆರೆಯುವ ಮೊದಲೇ ಕೇರಳ ಹಾಗೂ ಮತ್ತು ತಮಿಳುನಾಡು ರಾಜ್ಯಗಳಿಗೆ ಭಾರೀ ಪ್ರಮಾಣದಲ್ಲಿ ಭತ್ತ ಹೋಗುತ್ತದೆ. ಇದರ ಮೇಲೆ ಯಾವುದೇ ನಿರ್ಬಂಧ ಇರುವುದಿಲ್ಲ. ಇವೊತ್ತಿನ ದಿವಸ ಪ್ರತಿಯೊಬ್ಬ ರೈತನ ಮನೆಯಲ್ಲಿ ತಾನು ಬೆಳೆದಂತಹ ಬೆಳೆಗಳನ್ನು ಇಟ್ಟುಕೊಳ್ಳುವುದಕ್ಕೆ ಜಾಗ ಇರುವುದಿಲ್ಲ. ಆ ಬೆಳೆಗಳನ್ನು ಕಣದಲ್ಲಿಯೇ ಅಥವಾ ಹೊಲದಲ್ಲಿಯೇ ಮಾರಾಟ ಮಾಡಬೇಕು ಎನ್ನುವ ಪರಿಸ್ಥಿತಿ ಇದೆ. ಒಂದು ವೇಳೆ ರೈತ ತನ್ನ ಬೆಳೆಯನ್ನು ಮಾರುಕಟ್ಟೆಗೆ ತೆಗೆದುಕೊಂಡು ಬಂದರೆ, ಉದಾಹರಣೆಗೆ ತರಕಾರಿ ಇರಬಹುದು ಅಥವಾ ಹಣ್ಣು ಇರಬಹುದು ಅದನ್ನು ಅಲ್ಲಿಯೇ ಮಾರಾಟ ಮಾಡಬೇಕು. ಅಂತಹ ಒಂದು ವ್ಯವಸ್ಥೆ ನಮ್ಮಲ್ಲಿ ಇದೆ. ಆ ಬೆಳೆ ಆ ದಿನ ಎಷ್ಟು ಬೆಲೆಗಾದರೂ ಮಾರಾಟ ಆಗಬಹುದು ಆ ಬೆಲೆಗೆ ರೈತ ಮಾರಾಟ ಮಾಡಬೇಕು. ಅಂತಹ ಒಂದು ವ್ಯವಸ್ಥೆಯನ್ನು ಇದುವರೆವಿಗೂ ಸರ್ಕಾರಗಳು ಕೊಡುತ್ತಾ ಬಂದಿವೆ. ಆದರೆ, ಈ ಮಾರ್ಕೆಟಿಂಗ್ ಸಿಸ್ಟಮ್‌ನಲ್ಲಿ ರೈತನಿಗೆ ಒಳ್ಳೆಯ ಬೆಲೆ ಸಿಗಲಿಲ್ಲ.

ಇವೊತ್ತಿನ ದಿವಸ 170 ರಿಂದ 180 ಕೃಷಿ ಮಾರುಕಟ್ಟೆಗಳು ಅಂದರೆ, ಸಣ್ಣ ಮತ್ತು ಅತಿ ಸಣ್ಣ ಹಾಗೂ ದೊಡ್ಡ ಪ್ರಮಾಣದ ಎಲ್ಲಾ ರೀತಿಯ ಮಾರುಕಟ್ಟೆಗಳು ನಮ್ಮ ರಾಜ್ಯದಲ್ಲಿವೆ. ಇವೊತ್ತಿನ ದಿವಸ ರೈತನಿಗೆ ತನ್ನ ಉತ್ಪನ್ನಗಳಿಗೆ ಒಳ್ಳೆಯ ಬೆಲೆ ಸಿಗಲಿಲ್ಲವೆಂದರೆ, ಆ ಉತ್ಪನ್ನಗಳನ್ನು 2–3 ದಿನ ಇಟ್ಟು, ಮಾರನೆಯ ದಿನ ಮಾರಾಟ ಮಾಡುವಂತಹ ಒಂದು ಕೋಲ್ಡ್ ಸ್ಟೋರೇಜ್ ವ್ಯವಸ್ಥೆಯನ್ನು ಇದುವರೆವಿಗೂ ಕೂಡ ಈ ರಾಜ್ಯದಲ್ಲಿ ಯಾವುದೇ ಸರ್ಕಾರಗಳು ರೈತರ ಪರವಾಗಿ ಮಾಡಲಿಲ್ಲ. ಅಂದರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೈತ ತನ್ನ ಉತ್ಪನ್ನಗಳನ್ನು ಅಂದಿನ ದಿನವೇ ಮಾರಾಟ ಮಾಡಿ ಹೋಗಬೇಕು. ಒಂದು ವೇಳೆ ಆ ಉತ್ಪನ್ನಗಳು ಅಂದರೆ, ತರಕಾರಿ ಅಥವಾ ಸೊಪ್ಪುಗಳನ್ನು ಆ ದಿನ ಮಾರಾಟ ಮಾಡದೇ ಇದ್ದರೆ, ನಾಳೆಯ ದಿವಸ ಬೆಳಗ್ಗೆ ಅದನ್ನು ಯಾರೂ ಕೂಡ 50 ಪೈಸೆ ಬೆಲೆಗೆ ತೆಗೆದುಕೊಳ್ಳುವುದಿಲ್ಲ. ಅಂತಹ ಒಂದು ವ್ಯವಸ್ಥೆಯನ್ನು ನಾವು ಇಟ್ಟುಕೊಂಡು ಬಂದಿದ್ದೇವೆ. ಇರುವಂತಹ ಕಾಯಿದೆಗಳಲ್ಲಿ ಸುಧಾರಣೆ ತರಬೇಕು; ರೈತನಿಗೆ ಬೆಂಬಲ ಬೆಲೆ ಕೊಡಬೇಕು; ಬೆಂಬಲ ಬೆಲೆ ಕೊಡುವುದರ ಬಗ್ಗೆಯೂ ಕೂಡ ಕೆಲವೇ ಕೆಲವು ಉತ್ಪಾದನೆ ಮಾಡಿದಂತಹ ಅಥವಾ ರೈತ ಬೆಳೆದಂತಹ ಬೆಳೆಗಳಿಗೆ ಬೆಂಬಲ ಬೆಲೆ ಕೊಡುವಂಥದ್ದು. ಅದು ಕೂಡ ಎಲ್ಲಾ ರೀತಿಯ ಹೋರಾಟ, ಚಳುವಳಿಗಳನ್ನು ಮಾಡಿದ ನಂತರ ಕೊಡಲಾಗಿರುತ್ತದೆ. ಇವೊತ್ತಿನ ದಿವಸ ನಿಜವಾದ ಬೆಂಬಲ ಬೆಲೆಯನ್ನು ತತ್‌ಕ್ಷಣವೇ ಯಾವುದೇ ಸರ್ಕಾರಗಳು ಕೊಡುತ್ತಿಲ್ಲ. ಅದನ್ನು ಸುಧಾರಣೆ ಮಾಡಬೇಕು. ಅದಕ್ಕೆ ನಮ್ಮೆಲ್ಲರ ಸಹಕಾರ ಇದೆ. ಆದರೆ, ಸುಧಾರಣೆ ನೆಪದಲ್ಲಿ ಯಾರು ಎಲ್ಲಿ ಬೇಕಾದರೂ...

ನಮ್ಮ ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ ಭಾಗದಲ್ಲಿ ಕಾಟನ್ ಬೆಳೆ ಬೆಳೆಯುತ್ತಾರೆ. ಆ ಕಾಟನ್ ಅನ್ನು ತಮಿಳುನಾಡು ರಾಜ್ಯದವರೇ ಖರೀದಿ ಮಾಡುತ್ತಾರೆ. ನಮ್ಮ ರಾಜ್ಯದಲ್ಲಿ ಯಾವುದೇ ಎ.ಪಿ.ಎಂ.ಸಿ., ಗಳಿಗೆ ಕಾಟನ್ ಬರುವುದಿಲ್ಲ. ಅದು ತಮಿಳುನಾಡು ರಾಜ್ಯಕ್ಕೆ ಹೋಗುತ್ತದೆ. ಆದರೆ, ಕಾಯಿದೆಯಲ್ಲಿ ಎಲ್ಲಿ ಬೇಕಾದರೂ ಮಾರಾಟ ಮಾಡಬಹುದೆಂದು ತಿದ್ದುಪಡಿ ತಂದಿದ್ದೇವೆಂದು ಹೇಳಿದ್ದಾರೆ. ಈ ತಿದ್ದುಪಡಿ ಇಲ್ಲದೇ ಇದ್ದರೂ ಕೂಡ ಈಗಲೂ ಹೊರಗಡೆ ಮಾರಾಟವಾಗುತ್ತಿದೆ. ಇವೊತ್ತಿನ ದಿವಸ ಸರ್ಕಾರ ತಂದಿರತಕ್ಕಂತಹ ತಿದ್ದುಪಡಿಯಲ್ಲಿ.., ಪ್ರತಿ ಜಿಲ್ಲಾ ಹಂತದಲ್ಲಿ ಕೋಲ್ಡ್ ಸ್ಟೋರೇಜ್ ಮಾಡಲಿ. ರೈತ ತಾನು ಬೆಳೆದ ಕೃಷಿ ಉತ್ಪನ್ನಗಳಿಗೆ ಆ ದಿನ ಬೆಂಬಲ ಬೆಲೆ ಸಿಗದಿದ್ದರೆ, 2-3 ದಿನ ಅಲ್ಲಿ ಇಡುವಂತಹ ವ್ಯವಸ್ಥೆ ಮಾಡಿ, ಆತನಿಗೆ ಉತ್ತಮ ಬೆಲೆ ಬಂದ ನಂತರ ಮಾರಾಟ ಮಾಡುವಂತಹ ವ್ಯವಸ್ಥೆ ಮಾಡಬೇಕು.

(ಮುಂದುವರೆದಿದೆ...)

(1052)09.12.2020/4.10/ವೈಎಲ್-ಜಿಆರ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ**(ಮುಂದು):-

ಅದು ಬಿಟ್ಟು ಭಾರತ ದೇಶದಲ್ಲಾಗಲಿ ಅಥವಾ ರಾಜ್ಯದಲ್ಲಾಗಲಿ ಎಲ್ಲಿ ಬೇಕಾದರೂ ಮಾರಾಟ ಮಾಡಬಹುದು ಎನ್ನುವಂಥ ಕಾಯ್ದೆಯನ್ನು ಜಾರಿಗೆ ತಂದಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಸಣ್ಣ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅತೀ ಸಣ್ಣ ರೈತರು ನೆಲೆಸಿದ್ದಾರೆ. ತರಕಾರಿ ಬೆಳೆಯುವಂಥ ಯಾವುದೇ ರೈತ ಸುಮಾರು 3 ಎಕರೆ, 4 ಎಕರೆ ಜಾಗದಲ್ಲಿ ಬೆಳೆಯುವುದಿಲ್ಲ. ಕೇವಲ ಅರ್ಧ ಎಕರೆ, ಒಂದು ಎಕರೆ ಜಾಗದಲ್ಲಿ ಹಣ್ಣು-ಹಂಪಲು, ತರಕಾರಿಗಳನ್ನು ಬೆಳೆಯುತ್ತಿದ್ದಾರೆ. ನಾವು ಬೆಳೆದಂಥ ಹಣ್ಣು-ಹಂಪಲುಗಳಾಗಲಿ, ತರಕಾರಿ-ಹೂವುಗಳಾಗಲಿ ಅಥವಾ ದ್ವಿದಳ ಧಾನ್ಯಗಳಾಗಲಿ ಇವುಗಳನ್ನು ಬೆಳೆದು ರಫ್ತು ಮಾಡುವ ಪ್ರಮಾಣ ಶೇಕಡ 2 ರಷ್ಟು ಸಹ ಇಲ್ಲ. ಹಲವಾರು ವರ್ಷಗಳಾದರೂ ಇವತ್ತಿಗೂ ಸಹ ರೈತ ಬೆಳೆದಂಥ ಬೆಳೆಗಳನ್ನು ಅಲ್ಲಿಯೇ ಮಾರಾಟ ಮಾಡುವಂಥ ವ್ಯವಸ್ಥೆ ಬಗೆಹರಿದಿಲ್ಲ. ಇದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕು. ಎ.ಪಿ.ಎಂ.ಸಿ., ಎಂದು ಮಾಡಿ, ಅದಕ್ಕೊಂದು ಆಡಳಿತ ಮಂಡಳಿಯನ್ನು ಮಾಡಲಾಗಿತ್ತು. ಜೊತೆಗೆ ಚುನಾಯಿತ ಸಮಿತಿಗಳನ್ನು ಸಹ ಮಾಡಲಾಗಿದೆ. ಇವುಗಳೆಲ್ಲವನ್ನೂ ಸಬಲೀಕರಣ ಮಾಡಿ, ಅದರ ಮೂಲಕ ರೈತನಿಗೆ ಅನುಕೂಲ ಮಾಡಲು ಸರ್ಕಾರ ಒಂದು ಹಂತಕ್ಕೆ ತೆಗೆದುಕೊಂಡು ಬಂದಿದೆ. ಎ.ಪಿ.ಎಂ.ಸಿ., ಎಂಬುವುದು ಏನಿದೆ, ಅದು ಕೆಲವು ವರ್ಷಗಳ ಕಾಲ ಸತ್ತು ಹೋಗಿದ್ದು, ಅದಕ್ಕೆ ಮರುಚಾಲನೆ ನೀಡಿ, ಜೀವ ತುಂಬುವಂಥ ಕೆಲಸವನ್ನು ಸರ್ಕಾರ ಮಾಡಿದೆ.

ಆದರೆ, ಅವುಗಳನ್ನು ಇವತ್ತಿಗೂ ಸಹ ಸಬಲೀಕರಣ ಮಾಡುವ ನಿಟ್ಟಿನಲ್ಲಿ ಪ್ರಯತ್ನವನ್ನು ಮಾಡದೇ, ವಿಸ್ತರಣೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಈ ವಿಸ್ತರಣೆಯಿಂದ ಏನಾಗುತ್ತದೆ ಎಂದರೆ, ಭಾರಿ-ಭಾರಿ ಕುಳಗಳು, ದೊಡ್ಡ-ದೊಡ್ಡ ಕಂಪನಿಗಳು, ಅವರ ಮನಸ್ಸೋ ಇಚ್ಛೆ ದರವನ್ನು ರೈತರಿಗೆ ನೀಡಿ, ಹಣ್ಣು-ತರಕಾರಿಗಳನ್ನು ಖರೀದಿಸುತ್ತಾರೆ. ರೈತ ಎಲ್ಲಿ ಬೇಕಾದರೂ ಹಣ್ಣು-ತರಕಾರಿಗಳನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡಿಕೊಳ್ಳಬಹುದು ಎಂದು ಮಾನ್ಯ ಸಚಿವರು ಹೇಳಿದರು. ಅದಕ್ಕಿಂತ ಮಿಗಿಲಾಗಿ ಅವನಿಗೆ ಓಪನ್ ಮಾರುಕಟ್ಟೆ ನೀಡಿದಾಗ ಮಾರುಕಟ್ಟೆಗೆ ತರುವಂಥ ಪ್ರಯಾಣ ವೆಚ್ಚವು ಉಳಿತಾಯವಾಗುತ್ತದೆ, ಆತನ ಮನೆ ಬಾಗಿಲು, ಜಮೀನಿನ ಹತ್ತಿರವೇ ಹೋಗಿ ರೈತನ ಬೆಳೆಯನ್ನು ಖರೀದಿ ಮಾಡುತ್ತಾರೆ, ಇದರಿಂದ ರೈತನಿಗೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳುತ್ತಾರೆ ಎಂದು ನಿರೀಕ್ಷೆ ಮಾಡಿದೆ. ರೈತ ಬೆಳೆದಂಥ ಬೆಳೆಯನ್ನು ಮಾರ್ಕೆಟ್‌ಗೆ ತೆಗೆದುಕೊಂಡು ಬಂದು ಮಾರುವಂಥ ವ್ಯವಸ್ಥೆಯಿಂದ ಅಲ್ಲಿನ ಖರ್ಚು-ವೆಚ್ಚಗಳು ದುಬಾರಿಯಾಗುತ್ತದೆ ಎನ್ನುವುದಕ್ಕಿಂತ ಹೆಚ್ಚಾಗಿ ಈ ಸಿಸ್ಟಂನಿಂದ ಏನಾಗುತ್ತದೆ ಎಂದರೆ, ಬೆಲೆ ಕುಸಿತವಾಗುತ್ತದೆ. Open flood ಆದ ಕೂಡಲೇ ಬಂಡವಾಳಶಾಹಿಗಳು, ಕಂಪನಿಗಳು ಮನೆ ಬಾಗಿಲಿಗೆ ಹೋಗಿ ರೈತನ ಬೆಳೆಯನ್ನು ಖರೀದಿ ಮಾಡುತ್ತಾರೆ. ರೈತನಿಗೆ ಮೋಸ ಮಾಡುತ್ತಾರೆ. ಸರಿಯಾಗಿ ಹಣ ನೀಡದೇ ಸಾಲ ತೆಗೆದುಕೊಂಡು ಹೋಗುತ್ತಾರೆ, ಇವತ್ತಿನ ದಿವಸ ತೂಕದಲ್ಲಿ ಮೋಸ ಮಾಡುತ್ತಾರೆ. ಉದಾಹರಣೆಗೆ ಹೇಳುವುದಾದರೆ, ನಾನು ಸಹ ನಮ್ಮ ತಂದೆಯ ಜೊತೆ ಬೆಳೆ ಬೆಳೆಯುತ್ತಿದ್ದೆ, ಬೇಸಾಯ ಮಾಡುತ್ತಿದ್ದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಬ್ಬಾರ್ ಎಂಬ ಸಾಹೇಬರು ನಮ್ಮ ಊರಿಗೆ ಬಂದು ಯಾವಾಗಲೂ ಸಹ ರೇಷ್ಮೆ ಗೂಡನ್ನು ಖರೀದಿ ಮಾಡುತ್ತಿದ್ದರು. ಆತ ಬಂದು 2 ಸಾವಿರ ರೂಪಾಯಿ ಮಾತ್ರ ನೀಡಿ, ಗೂಡು ತೂಕ ಮಾಡಿಕೊಂಡು ಹೋಗುತ್ತಿದ್ದರು. ಆ ಗೂಡು ತೂಕ ಮಾಡುವಾಗ 10 ಕೆ.ಜಿ. ರೇಷ್ಮೆ ಗೂಡು ಇದ್ದರೆ, 2 ಕೆ.ಜಿ. ಏಮಾರಿಸಿ ಬಿಡುತ್ತಿದ್ದರು. ನಾವು ರೈತರು ತೂಗಿ ಕಳುಹಿಸುತ್ತಿದ್ದೆವು. ಜೊತೆಗೆ ಮೂರ್‍ನಾಲ್ಕು ಕಂತುಗಳಲ್ಲಿ ಆತನಿಂದ ದುಡ್ಡನ್ನು ತೆಗೆದುಕೊಳ್ಳಬೇಕಾಗಿತ್ತು. ಆತ ಬಹಳ ಪ್ರಸಿದ್ಧವಾದ ವ್ಯಾಪಾರಿಯಾಗಿದ್ದರು. ಇಂತಹ ವ್ಯವಸ್ಥೆಯನ್ನು ನಾವು ನೋಡಿದ್ದೇವೆ. ಇದನ್ನು ತಪ್ಪಿಸಬೇಕು, ರೈತರು ವಂಚಿತರಾಗುತ್ತಿದ್ದಾರೆ, ತೊಂದರೆಗೊಳಗಾಗುತ್ತಿದ್ದಾರೆ ಎಂದು ಸರ್ಕಾರ ಮಾರ್ಕೆಟಿಂಗ್ ಸಿಸ್ಟಂ ಜಾರಿಗೆ ತಂದು, 'ರೇಷ್ಮೆ ಗೂಡಿನ ಮಾರುಕಟ್ಟೆ' ಎಂದು ತೆರೆಯುತ್ತದೆ.

'ರೇಷ್ಮೆ ಗೂಡಿನ ಮಾರುಕಟ್ಟೆ' ಅಸ್ತಿತ್ವಕ್ಕೆ ಬಂದ ಮೇಲೆಯೂ ನಾನು ರೇಷ್ಮೆ ಗೂಡನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಿದ್ದೇನೆ. ಅಲ್ಲೆಲ್ಲಾ Electronic Weighing Machine ಇರುತ್ತಿತ್ತು. ತೂಕದಲ್ಲಿ ಲೋಪವಾಗಲಿ, ಮತ್ಯಾವುದೇ ತೊಂದರೆ ಇರಲಿಲ್ಲ. ಹಾಗೆಯೇ 'ರೇಷ್ಮೆ ಗೂಡಿನ ಮಾರುಕಟ್ಟೆ' ಗೆ beat ಆದ ಕೂಡಲೇ ಪೇಮೆಂಟ್ ಸಹ ಸರಿಯಾಗಿ ಸಿಗುತ್ತಿತ್ತು. ಇಂತಹ ಮಾರ್ಕೆಟಿಂಗ್ ಪದ್ಧತಿಯನ್ನು ಏತಕ್ಕೆ ತಂದಿದರು? ಇವತ್ತಿಗೂ ಸಹ ರೇಷ್ಮೆ ಗೂಡನ್ನು open flood ನಲ್ಲಿ ಬಿಡುವಂಥ ವ್ಯವಸ್ಥೆಯನ್ನು ಮಾಡಬಹುದಾಗಿತ್ತಲ್ಲವೇ? ಏತಕ್ಕೆ ಮಾಡಲಿಲ್ಲವೆಂದರೆ, ದೊಡ್ಡ-ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ಬಂದು ರೈತನ ಹತ್ತಿರ ಖರೀದಿ ಮಾಡುತ್ತಾರೆ. ರೈತನಿಗೆ ತೊಂದರೆ ಆಗುತ್ತದೆ ಎಂಬ ದೃಷ್ಟಿಯಿಂದ ಮಾಡಲಿಲ್ಲ.

ಅಷ್ಟೇ ಅಲ್ಲ ಯಾವುದೇ food grain, essential commodities ಗಳನ್ನು ಇದಕ್ಕಿಂತ ಹೆಚ್ಚು ದಾಸ್ತಾನು ಮಾಡಬಾರದೆಂಬ ನಿರ್ಬಂಧ ವಿಧಿಸಲಾಗುತ್ತಿತ್ತು. ಆದರೆ, ಈಗ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ flood gate open ಮಾಡಿದ್ದಾರೆ. ಎಷ್ಟೇ ಕೋಟಿ ರೂಪಾಯಿಗಳಾಗಲಿ ಅದನ್ನು ಖರೀದಿ ಮಾಡಿ, ಶೇಖರಣೆ ಮಾಡಿದರೆ ಯಾರು ಸಹ ಪರಿಶೀಲನೆ ಮಾಡುವುದಕ್ಕಾಗಲಿ ಅಥವಾ ಪ್ರಶ್ನೆ ಮಾಡುವುದಕ್ಕಾಗಲಿ ಅವಕಾಶ ಇರುವುದಿಲ್ಲ. ಇದರಿಂದ ದೊಡ್ಡ-ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ಖರೀದಿ ಮಾಡಿ, ಒಂದು, ಎರಡು, ಮೂರು ತಿಂಗಳುಗಳಾದ ಮೇಲೆ ಮಾರ್ಕೆಟಿಂಗ್ ರೈಸ್ ಆದ ಮೇಲೆ scarcity ಉಂಟು ಮಾಡುತ್ತಾರೆ. ಇದರ ಜೊತೆಗೆ ಆತನ್ನು ಕಳ್ಳ ಧನ, ಕಪ್ಪು ಧನವನ್ನು ಜಾರಿ ಮಾಡುತ್ತಾರೆ. ಖರೀದಿ ಮಾಡುವಾಗ ತನ್ನಲ್ಲಿರುವ ಕಪ್ಪು ಧನವನ್ನು ಮಾರ್ಕೆಟಿಂಗ್ ಮಾಡುತ್ತಾನೆ ಮತ್ತು ಎಷ್ಟು ಜನ ರೈತರಿಂದ ಯಾವ ಐಟಂಗಳನ್ನು ಖರೀದಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದೇನೆ ಎನ್ನುವುದಕ್ಕೆ ನಿರ್ದಿಷ್ಟವಾದ ದಾಖಲೆ ಇರುವುದಿಲ್ಲ. ಎಲ್ಲಾ ತೆರಿಗೆಯನ್ನು ಕದಿಯುತ್ತಾನೆ, ಕಪ್ಪು ಹಣವನ್ನು float ಮಾಡುತ್ತಾನೆ, ಅಭಾವವನ್ನು ಸೃಷ್ಟಿಸಿ, ಮಾರುಕಟ್ಟೆಗೆ ದಾಸ್ತಾನು ಮಾಡಿರುವುದನ್ನು ಮಾರಾಟ ಮಾಡುತ್ತಾನೆ. ಇದರಿಂದ ರೈತನಿಗೆ ಅನುಕೂಲವಾಗುತ್ತದೆಯೇ? ಇಂತಹ ಸಂದರ್ಭದಲ್ಲಿ ರೈತ ವಂಚನೆಗೊಳಗಾದರೆ, ಮತ್ತೇನಾದರೂ ಸಮಸ್ಯೆಯಾಗಿ ದೂರು ನೀಡಿದರೆ ಆ ಅಪೀಲುಗಳನ್ನು ಎಲ್ಲಿ ತೀರ್ಮಾನ ಮಾಡುವುದು ಎಂಬುದನ್ನು ಮಾನ್ಯ ಸಚಿವರು ಹೇಳಲಿಲ್ಲ. ಈ ಹಿಂದೆ ಇದ್ದಂತಹ ಕಾಯ್ದೆಯಲ್ಲಿ ರೈತನಿಗೆ ಅನ್ಯಾಯವಾದರೆ ಆತ ನ್ಯಾಯಾಲಯದ ಮೊರೆ ಹೋಗುವಂಥ ವ್ಯವಸ್ಥೆ ಕಲ್ಪಿಸಲಾಗಿತ್ತು.

ಆದರೆ, ನಮ್ಮ ಮಹಾಪುರುಷರು ಈ ವಿಧೇಯಕದಲ್ಲಿ ರೈತನಿಗೆ ಅನ್ಯಾಯವಾದರೆ ಅಸಿಸ್ಟೆಂಟ್ ಕಮೀಷನರ್, ಡೆಪ್ಯೂಟಿ ಕಮೀಷನರ್‌ಗೆ ನೀಡಿದ್ದು, ಒಂದು ತಿಂಗಳೊಳಗೆ ಇತ್ಯರ್ಥ ಮಾಡುವಂತೆ ಮಾಡಿದ್ದಾರೆ. ಅದ್ಯಾವ ಅಸಿಸ್ಟೆಂಟ್ ಕಮೀಷನರ್, ಡೆಪ್ಯೂಟಿ ಕಮೀಷನರ್‌ಗಳು ಇಂತಹ ತಕರಾರು ವ್ಯಾಜ್ಯವನ್ನು ಒಂದು ತಿಂಗಳೊಳಗೆ ಬಗೆಹರಿಸುತ್ತಾರೆಯೋ ನನಗೆ ಗೊತ್ತಿಲ್ಲ. ಇಂತಹ ಒಂದು ಆಡಳಿತ ವ್ಯವಸ್ಥೆಯನ್ನು ಸುಮಾರು 70 ವರ್ಷಗಳಿಂದಲೂ ನೋಡಿಲ್ಲ. ಅಸಿಸ್ಟೆಂಟ್ ಕಮೀಷನರ್, ಡೆಪ್ಯೂಟಿ ಕಮೀಷನರ್‌ನವರ ಹತ್ತಿರ ಏನಾದರೂ ಕೇಳಿದರೆ, ಅವರು ನಮಗೆ ಕೆರೆದುಕೊಳ್ಳುವುದಕ್ಕೆ ಸಮಯವಿಲ್ಲ 150 ಇಲಾಖೆಯನ್ನು ನೋಡಬೇಕೆಂದು ಹೇಳಿ, ಶಾಸಕರು ಹೇಳಿದ ಕೆಲಸವನ್ನು 6 ತಿಂಗಳಾದರೂ ಮಾಡುವುದಿಲ್ಲ. ಕೆಲವು ಮಹಾ ಭ್ರಷ್ಟಚಾರಿ ಅಸಿಸ್ಟೆಂಟ್ ಕಮೀಷನರ್, ಡೆಪ್ಯೂಟಿ ಕಮೀಷನರ್‌ಗಳಿದ್ದಾರೆ. ಈ ರೈತರ ಪ್ರಕರಣವನ್ನು 'ಬಾರಪ್ಪ, ಏನೋ ಬಡ ರೈತ ಮಾರುಕಟ್ಟೆಯಲ್ಲಿ ಮೋಸ ಹೋಗಿದ್ದೀಯಾ' ಎಂದು ಯಾವ ಅಧಿಕಾರಿ ನೋಡುತ್ತಾರೆ ಸ್ವಾಮಿ? ಇಂತಹ ವ್ಯವಸ್ಥೆಯನ್ನು ಜಾರಿಗೆ ತಂದಿದ್ದು ಇದರಿಂದ ರೈತನಿಗೆ ಅನುಕೂಲವಾಗುತ್ತದೆಯೇ? ಇದರ ಜೊತೆಗೆ ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ, ಭಾರತ ದೇಶದಲ್ಲೆಲ್ಲಾ globalisation ಆಗಿದ್ದು, ಎಲ್ಲಾ ಕಡೆ ಮಾಲ್ ಸಿಸ್ಟಂ ಜಾರಿಗೆ ಬಂತು. ಮಾಲ್ ಸಿಸ್ಟಂ ಜಾರಿಗೆ ಬಂದ ಮೇಲೆ ಏನಾಗಿದೆ ಎಂದು ನೋಡಿದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿಯೇ ನೋಡಿದಾಗ ಇವತ್ತು ಮಾಲ್‌ಗಳ ಸಂಖ್ಯೆ ಶೇಕಡ 5 ರಷ್ಟು ಇರಬಹುದು. ಆದರೆ, ಶೇಕಡ 95 ರಷ್ಟು ಇದ್ದಂತಹ ಪೆಟ್ಟಿಗೆ ಅಂಗಡಿಗಳಲ್ಲಿ ಲಕ್ಷಾಂತರ ಜನ ವ್ಯಾಪಾರ ಮಾಡುತ್ತಿದ್ದು, ಇವತ್ತು ದೊಡ್ಡ ಮೀನುಗಳೆಲ್ಲಾ ಬಂದು ಸಣ್ಣ ಮೀನುಗಳನ್ನು ನುಂಗಿದ ಹಾಗೆ ನುಂಗಿಕೊಂಡು ಬಿಟ್ಟಿದೆ. ಎಲ್ಲಾ ಪೆಟ್ಟಿಗೆ ಅಂಗಡಿಗಳು ಮುಚ್ಚಿ ಹೋಗಿವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದಾಹರಣೆಗೆ ಹೇಳುವುದಾದರೆ, 'ಡಿ-ಮಾರ್ಟ್' ಎಂಬ ಒಂದು ದೊಡ್ಡ ಬಜಾರ್ ಅಸ್ತಿತ್ವದಲ್ಲಿದೆ. ನೀವು ಸರ್ವೇ ಮಾಡಿ ನೋಡಿ, 5 ಕಿಲೋ ಮೀಟರ್ ವಿಸ್ತೀರ್ಣದಲ್ಲಿ ಎಲ್ಲೆಲ್ಲಿ 'ಡಿ-ಮಾರ್ಟ್' ಇವೆ, ಅಲ್ಲಿ ಒಂದು ಹೋಲ್‌ಸೇಲ್ ಅಂಗಡಿ ಸಹ ತೆರೆಯದ ರೀತಿ ನುಂಗಿಕೊಂಡು ಬಿಟ್ಟಿದೆ. 5 ಕಿಲೋ ಮೀಟರ್ ವಿಸ್ತೀರ್ಣದಲ್ಲಿ ಸಣ್ಣ-ಪುಟ್ಟ ದಿನಸಿ, ತರಕಾರಿ ಅಂಗಡಿಗಳ್ಯಾವುದು ಉಳಿಯಲಿಲ್ಲ. ಹಾಗೆಯೇ 'ಜಿಯೋ ಮಾರ್ಕೇಟಿಂಗ್' ಎಂಬ ಹೊಸ ಹೆಬ್ಬುಲಿ ಈ ದೇಶದಲ್ಲಿ ಬರುತ್ತಿದ್ದು, ಇದು ಎಲ್ಲಾ ಜನಸಾಮಾನ್ಯರು ಹಾಗೂ ರೈತರನ್ನೂ ಕೂಡಾ ಪೂರ್ಣವಾಗಿ ನುಂಗಿ ಹಾಕಿ ಬಿಡುತ್ತದೆ. ಈ ಕಾಯ್ದೆಯ ಉದ್ದೇಶ ಇವುಗಳಿಗೆ red-carpet ಹಾಸುವ ರೀತಿ ಇದೆ. ಇದರಿಂದ ರೈತರ ಸಬಲೀಕರಣ, ರೈತನಿಗೆ ಉತ್ತೇಜಿತವಾದಂಥ ಬೆಲೆ ನೀಡಲು, ರೈತನಿಗೆ ಒಳ್ಳೆಯ ಮಾರ್ಕೇಟಿಂಗ್ ಸಿಸ್ಟಂ ಇದೆಯೇ? ಇವತ್ತು ಇರುವಂಥ ಮಾರ್ಕೇಟಿಂಗ್ ವ್ಯವಸ್ಥೆಯನ್ನು ಬಲಪಡಿಸುವಂಥ ಕೆಲಸವನ್ನು ಈ ಕಾಯ್ದೆಯಲ್ಲಿ ಮಾಡಬೇಕಾಗಿತ್ತು. ರೈತ ಕಟ್ಟಬೇಕಾಗಿರುವ ತೆರಿಗೆಯನ್ನು ತೆಗೆದು ಹಾಕಲಾಗಿದೆ, ತೆಗೆಯಿರಿ. ಆದರೆ. ಎ.ಪಿ.ಎಂ.ಸಿ., ಮಾರುಕಟ್ಟೆ ಇರಬಹುದು, ಅದರ ಸುತ್ತ ಇರುವ ಕಾಂಪೌಂಡ್ ಒಳಗೆ ತರುವ ಬೆಳೆಯನ್ನು ಮಾತ್ರ ತೆಗೆದುಕೊಳ್ಳಬೇಕಂತೆ, ಅದೇ ಕಾಂಪೌಂಡ್‌ನಿಂದ ಹೊರಗೆ ತಾಲ್ಲೂಕು ವ್ಯಾಪ್ತಿ ಏನಿದೆ, ಈ ತಾಲ್ಲೂಕು ವ್ಯಾಪ್ತಿಯೊಳಗೆ ಯಾರೂ ಸಹ ಅಲ್ಲಿಗೆ ಹೋಗಿ ಖರೀದಿಸುವ ಹಾಗಿಲ್ಲ. ಹಾಸನದಲ್ಲಿರುವ ನನ್ನ ಸ್ನೇಹಿತರೊಬ್ಬರು ಒಂದು ವರ್ಷಕ್ಕೆ ಸುಮಾರು 70 ಲಕ್ಷ ರೂಪಾಯಿ ತೆರಿಗೆ ಕಟ್ಟುತ್ತಿದೆ, ಈಗ ಈ ಕಾಯಿದೆ ಬಂದ ಮೇಲೆ, ಹತ್ತು ಲಕ್ಷ ರೂಪಾಯಿ ಸಹ ತೆರಿಗೆ ಕಟ್ಟಬೇಕಾಗಿಲ್ಲ ಎಂದು ಹೇಳುತ್ತಾರೆ.

(ಮುಂದು). . .

(1053)09.12.2020/4.20/ಎಸ್‌ಕೆ-ಎಂ.ಡಿ.

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ** (ಮುಂದು):-

ಅವರು ಎ.ಪಿ.ಎಂ.ಸಿ., ನಲ್ಲಿ ಹತ್ತಾರು ವರ್ಷಗಳಿಂದ ಅಧಿಕೃತ ವಹಿವಾಟು ನಡೆಸುವಂತವರು. ಅವರು ಎಷ್ಟೇ ಕೋಟಿ ರೂಪಾಯಿಗಳನ್ನು ವ್ಯವಹಾರ ಮಾಡಿದರೂ, ಹತ್ತು ಲಕ್ಷ ರೂಪಾಯಿಗಳನ್ನು ಕಟ್ಟಬೇಕಾಗಿಲ್ಲ ಎಂದು ಬಹಳ ಸಂತೋಷದಿಂದ ಹೇಳಿದ. ಇಂತಹ ಒಂದು ವ್ಯವಸ್ಥೆಗಳನ್ನು ತೆಗೆದುಕೊಂಡು ಬಂದು, ಮಾನ್ಯ ಸಭಾಪತಿಯವರೇ, ನೋಡಿ. ನನಗೆ ಬೇಸರವಿಲ್ಲ. ನಿಮ್ಮ ಪ್ರಯತ್ನಗಳನ್ನಾ, ರೈತರನ್ನು ಮಾರುಕಟ್ಟೆ ವ್ಯವಸ್ಥೆಯಲ್ಲಿ ಸಬಲೀಕರಣ ಮಾಡುವುದಕ್ಕೆ ಮತ್ತು ಪುಷ್ಟಿ ಕೊಡುವುದಕ್ಕೆ Cold Storages ಮಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೈತನಿಗೆ ಬೆಲೆ ಬಿದ್ದಾಗ support price ಕೊಡಿ. Support price ಗೋಸ್ಕರ ಪ್ರತಿ ವರ್ಷ ಬಜೆಟ್‌ನಲ್ಲಿ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಇಡಿ. ಯಾವುದೇ ಬೆಲೆ ಕುಸಿತವಾದ ಕೂಡಲೇ, ಆ ಹತ್ತು ಸಾವಿರ ಕೋಟಿ ರೂಪಾಯಿಗಳಲ್ಲಿ ರೈತನಿಗೆ support price ಕೊಡುತ್ತೇವೆಂದು ಘೋಷಣೆ ಮಾಡಿ. ಇದು ರೈತನಿಗೆ ನೆರವಿಗೆ ಬರುವಂತಹ ಸರ್ಕಾರದ ಕಾರ್ಯಕ್ರಮ. ಸನ್ಮಾನ್ಯ ಸಭಾಪತಿಯವರೇ, ಒಂದೇ ಒಂದು ಹೇಳುತ್ತೇನೆ. ಕಳೆದ ಸಾಲಿನಲ್ಲಿ ನಮ್ಮ ರಾಜ್ಯದಲ್ಲಿಯೇ, ಅಲ್ಲ, ದೇಶದಲ್ಲಿಯೇ ತೊಗರಿ ಬೆಳೆ ತುಂಬಾ ಚೆನ್ನಾಗಿ ಬಂದಿತ್ತು. ತೊಗರಿ ಬೆಳೆ ಚೆನ್ನಾಗಿ ಬಂದಂತ ಸಂದರ್ಭದಲ್ಲಿ ಒಂದು ಕೆ.ಜಿ. ತೋಗರಿ ಬೇಳೆ ಎಂಭತ್ತು ರೂಪಾಯಿ ಇದಿದ್ದು, ಒಂದೇ ತಿಂಗಳಿನಲ್ಲಿ ನೂರು ರೂಪಾಯಿ, ನೂರ ಇಪ್ಪತ್ತು ರೂಪಾಯಿಗಳಾಯಿತು. ಅದರ ಅರ್ಥವೇನು? ಬಂಡವಾಳಶಾಹಿಗಳೆಲ್ಲಾ ಖರೀದಿ ಮಾಡಿ ಒಳಗೆ ಇಟ್ಟು, ಅವರೇ ಕೃತಕವಾಗಿ scarcity create ಮಾಡಿ, ನಂತರ ಮಾರಾಟ ಮಾಡಿದರು. ಅತಿಯಾದಂತಹ ಬೆಳೆ ಬಂದಾಗ, ಇವತ್ತು ಎಲ್ಲಾ ಕಡೆಗಳಲ್ಲಿ ಭತ್ತ ಒಳ್ಳೆಯ ಬೆಳೆಯಾಗಿದೆ. ಸರ್ಕಾರ ಇನ್ನೂ ಕೂಡ ಖರೀದಿ ಕೇಂದ್ರಗಳನ್ನು ತೆರೆಯುವುದಕ್ಕಾಗಲಿಲ್ಲ. ಈಗಾಗಲೇ ನಮ್ಮ ರಾಜ್ಯದಿಂದ ತಮಿಳುನಾಡು, ಕೇರಳಕ್ಕೆ ಭತ್ತ ಹೋಗುತ್ತಿದೆ. Support price ಸರಿಯಾಗಿ ನಿಗಧಿಗೊಳಿಸಿ, ಕೂಡಲೇ ರೈತನ ನೆರವಿಗೆ ಹೋಗಬೇಕು ಎಂದು ಹೇಳಿ ಮಾಡಲಿಲ್ಲ. ಖರೀದಿ ಕೇಂದ್ರಗಳೇ ಪ್ರಾರಂಭ ಮಾಡಿಲ್ಲ. ತಾವು ಯಾವುದೇ ಬೆಳೆಗೆ support price ಕೊಡುತ್ತೀರಿ ಎನ್ನುವುದಕ್ಕೆ ಎ.ಪಿ.ಎಂ.ಸಿ., ಮಾರುಕಟ್ಟೆ ಇದೆಯೆಲ್ಲಾ, ಮಾರುಕಟ್ಟೆಗೆ ತೆಗೆದುಕೊಂಡು ಬಂದು ಅಲ್ಲಿ support price ಗೆ ಮಾರಾಟ ಮಾಡಿ ಎಂದು ಹೇಳಿ. ಪ್ರತಿಯೊಂದಕ್ಕೂ ಪೈಸೆ ಪೈಸೆಗೂ ಲೆಕ್ಕ ಸಿಗುತ್ತದೆ. ಎಲ್ಲಾ ಕಡೆಗಳಲ್ಲಿ Electronic System ಮಾಡಿದ್ದೀರಿ. ಈ ರಾಜ್ಯದಲ್ಲಿರುವ ಎ.ಪಿ.ಎಂ.ಸಿ.,ಯಿಂದ ಎಷ್ಟು ಜನರಿಗೆ ನೌಕರಿಯನ್ನು ಕೊಟ್ಟಿದೆ. ಈ ಕಾಯಿದೆ ಬಂದ ಎರಡು ವರ್ಷದಲ್ಲಿ ಈ ಎಲ್ಲಾ ಎ.ಪಿ.ಎಂ.ಸಿ.ಗಳು ನಗನಾಣ್ಯವಾಗಿ ಹೋಗುತ್ತವೆ. ಎ.ಪಿ.ಎಂ.ಸಿ. ಗಳಿಗೆ ದುಂಬು ಕಟ್ಟಿಕೊಂಡು, ದುಂಬು ಹೊಡೆಯುವುದಕ್ಕೆ ಅಲ್ಲಿ ಯಾರು ದಿಕ್ಕಿರುವುದಿಲ್ಲ. ಯಾವೊಬ್ಬ ರೈತನು ಅಲ್ಲಿ ತಿರುಗಾಡುವುದಿಲ್ಲ. ಇವತ್ತು ಭಾರತ ದೇಶದಲ್ಲಿಯೇ ಎಳನೀರಿಗೆ ವಿಶೇಷವಾದಂತಹ ಮಾರುಕಟ್ಟೆ ಎನ್ನುವುದಾದರೆ, ಅದು ಮದ್ದೂರು. ಇವತ್ತು ಬೆಳೆದಂತಹ ದವಸ-ಧಾನ್ಯಗಳು, ಹಣ್ಣು-ತರಕಾರಿಗಳು, ಎಮ್ಮೆಗಳ ವ್ಯಾಪಾರ, ಕುರಿಗಳ ವ್ಯಾಪಾರ, ಮೇಕೆಗಳ ವ್ಯಾಪಾರ ಇವೆಲ್ಲವೂ ಕೂಡ ಎ.ಪಿ.ಎಂ.ಸಿ., ಮಾರುಕಟ್ಟೆಯ ಮೂಲಕ ನಡೆಯುತ್ತಿದೆ. ಆದರೆ ವಿಸ್ತಾರ ಮಾಡುತ್ತೇವೆಂದು ಮಾಡಿದರೆ, ಮಲ್ಟಿ ನ್ಯಾಷನಲ್ ಕಂಪನಿಗಳು ಬಂದು ಏನು ಮಾಡುತ್ತೇವೆಂದರೆ, ಎ.ಪಿ.ಎಂ.ಸಿ., ಮಾರುಕಟ್ಟೆಯ ವಹಿವಾಟನ್ನು ಕುತ್ತಿಗೆ ಹಿಚುಕಿ ಸಾಯಿಸಿಬಿಡುತ್ತದೆ. ಆ ಕಂಪನಿಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜೊತೆಯಲ್ಲಿ ಫೈಟ್ ಮಾಡುವಂತಹ ಶಕ್ತಿ–ಸಾಮರ್ಥ್ಯ ಎ.ಪಿ.ಎಂ.ಸಿ.,ಗಳಿಗೆ ಮಾತ್ರವಲ್ಲ ಯಾರಿಗೂ ಇಲ್ಲ. ಸರ್ಕಾರಕ್ಕೆ ಇಲ್ಲ, ಇನ್ನೂ ಎ.ಪಿ.ಎಂ.ಸಿ.,ಗಳು ಎಲ್ಲಿಗೆ ಬರುತ್ತದೆ? ಎ.ಪಿ.ಎಂ.ಸಿ.,ಗಳು ಕಂಪನಿಗಳ ಮುಂದೆ ಸ್ಪರ್ಧೆ ಮಾಡುವುದಕ್ಕಾಗುವುದಿಲ್ಲ. ಅಂತಹ ಒಂದು ವ್ಯವಸ್ಥೆ ಬರುತ್ತಿದೆ. ಅದರಿಂದ ನಾವು ಈ ಕಾಯಿದೆ ತರುವುದು ಬೇಡ ಎನ್ನುವಂತಹ ಮಾತನ್ನು ಹೇಳುತ್ತಿದ್ದೇವೆ. ಇನ್ನೂ ಬೇಕಾದರೂ ಮೂರು ಗಂಟೆಗಳ ಕಾಲ ಮಾತನಾಡುತ್ತೇನೆ. ಆದರೆ ದಯವಿಟ್ಟು, ಮಾನ್ಯ ಸದಸ್ಯರುಗಳಿಗೆ ಬೇಸರವಾಗುತ್ತಿದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಇದು ಅತ್ಯಂತ ಪ್ರಮುಖವಾದ ವಿಧೇಯಕ.

**ಸಭಾಪತಿಯವರು:–** ಮಾನ್ಯ ಸದಸ್ಯರೇ ತಮ್ಮ ಮಾತನ್ನು ಮುಗಿಸಿದ್ದೀರಾ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನನ್ನ ಮಾತುಗಳನ್ನು ಇನ್ನು ಹತ್ತು ನಿಮಿಷಗಳಲ್ಲಿ ಮುಗಿಸುತ್ತೇನೆ. ಎ.ಪಿ.ಎಂ.ಸಿ., Marketing System ಎನ್ನುವಂತಹದ್ದು, ರೈತನಿಗೆ ಪ್ರಾಣ ಕೊಡುವಂತಹ ವ್ಯವಸ್ಥೆ. ಇಲ್ಲಿ ಸರ್ಕಾರವೇ ನೇರವಾಗಿ ಮಾಡುವುದಕ್ಕಾಗದೇ ಇರುವುದನ್ನಾ, ಇವರು ಕಂಪನಿಗಳ ಮೂಲಕ ರೈತರಿಗೆ ಅನುಕೂಲ ಮಾಡಿಸುತ್ತೇವೆಂದು ಹೊರಟ್ಟಿದ್ದಾರೆ.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮ ನಿರ್ದೇಶನವನ್ನು ಹೊಂದಿದವರು):–** ಮಾನ್ಯ ಸದಸ್ಯರೇ, ಎ.ಪಿ.ಎಂ.ಸಿ.,ಯಲ್ಲಿ ದಲ್ಲಾಳಿಗಳ ವಿಚಾರದ ಬಗ್ಗೆ ಸ್ವಲ್ಪ ಹೇಳಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿಶ್ವನಾಥ್‌ರವರು ದಲ್ಲಾಳಿಗಳ ವಿಚಾರದ ಬಗ್ಗೆ ನೆನಪು ಮಾಡಿಕೊಳ್ಳುತ್ತಿದ್ದಾರೆ. ಪ್ರಪಂಚದಲ್ಲಿ ಯಾವುದೇ ಕಂಪನಿ, ಯಾವುದೇ ರೈತ ಉತ್ಪಾದನೆ ಮಾಡಿದಂತಹ ವ್ಯಾಪಾರ ವಹಿವಾಟುಗಳ ನಡುವೆ ಮಧ್ಯವರ್ತಿಗಳಿಲ್ಲದೇ, ನೇರವಾಗಿ ಮಾಡುವಂತಹವು ಎಷ್ಟು ಪರ್ಸೆಂಟ್ ಇರತಕ್ಕಂತಹದ್ದನ್ನು ಈ ಸದನದಲ್ಲಿ ಸರ್ಕಾರ ಹೇಳಿ ಬಿಡಲಿ, ನಾನು ಒಪ್ಪಿಕೊಳ್ಳುತ್ತೇನೆ. ರೈತ ಉತ್ಪಾದನೆ ಮಾಡುವ ಪದಾರ್ಥಗಳಿಂದ ಹಿಡಿದು, ಕಂಪನಿಗಳು ತಯಾರು ಮಾಡುವಂತಹ ವಸ್ತುಗಳಿಂದ ಹಿಡಿದು, ಇಂತಹ ವಹಿವಾಟು ವ್ಯಾಪಾರೀಕರಣವನ್ನು ಮಧ್ಯವರ್ತಿಗಳು ಇಲ್ಲದೇ, ಯಾವ ದೇಶದಲ್ಲಿ ಸ್ವತಃ ಕಂಪನಿಯವರೇ, ನೇರವಾಗಿ ಮಾರುಕಟ್ಟೆಗೆ ಮಾರಾಟ ಮಾಡುವಂತಹತಕ್ಕದ್ದು ಇದೆಯೇ? ರೈತರು ಉತ್ಪಾದನೆ ಮಾಡಿದಂತಹದ್ದನ್ನು ನೇರವಾಗಿ, ರೈತನೇ ತೆಗೆದುಕೊಂಡು ಹೋಗಿಬಿಟ್ಟು ಎಲ್ಲೋ ಒಂದು ಕಡೆ ಕೊಟ್ಟುಬಿಟ್ಟು ಬರತಕ್ಕಂತಹ ವ್ಯವಸ್ಥೆ ಎಲ್ಲಿಯಾದರೂ ಈ ಜಗತ್ತಿನಲ್ಲಿದೆಯೇ? ಯಾವ ರೈತ ಶೇಕಡ 80 ರಷ್ಟು ಉತ್ಪಾದನೆ ಮಾಡುತ್ತಾನೆ, ಅವನು ಮಾರುಕಟ್ಟೆಗೆ ಹೋಗಬೇಕೆಂದರೆ, ಮಧ್ಯವರ್ತಿಗಳು ಬೇಕೇ ಬೇಕು. ಇದನ್ನು ಜಗತ್ತಿನಲ್ಲಿ ಯಾವ ಸರ್ಕಾರವೂ ಕೂಡ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು Multinational Company ಗಳು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಇಂತಹ ಏಜೆಂಟರುಗಳಿಂದ Multinational Company ಗಳು ಇವತ್ತು ವ್ಯವಹಾರ ನಡೆಸುತ್ತಿರುವುದು. ಅದರಿಂದ ಎ.ಪಿ.ಎಂ.ಸಿ.,ಗಳಲ್ಲಿ ಬಹಳ ಏಜೆಂಟರು ಇರುತ್ತಾರೆ. ಎಪ್ಪತ್ತು ಲಕ್ಷ ರೂಪಾಯಿಗಳನ್ನು ಸರ್ಕಾರಕ್ಕೆ ತೆರಿಗೆಯನ್ನು ಕಟ್ಟುತ್ತಿದ್ದೆ. ಈಗ ಹತ್ತು ಲಕ್ಷ ರೂಪಾಯಿಗಳನ್ನು ಮಾತ್ರ ಸರ್ಕಾರಕ್ಕೆ ತೆರಿಗೆಯನ್ನು ಕಟ್ಟುತ್ತಿದ್ದೇನೆಂದು ಅದೇ ಏಜೆಂಟರು ಬಂದು ನನಗೆ ಹೇಳಿರುವುದು. ಅವನು ನೋಂದಾಯಿತ ಏಜೆಂಟ್‌ರು. ಪ್ರತಿ ವರ್ಷ ಎಪ್ಪತ್ತು ಲಕ್ಷ ರೂಪಾಯಿಗಳನ್ನು ಕಟ್ಟುತ್ತಿದ್ದೆ.

**ಡಾ. ತಳವಾರ್ ಸಾಬಣ್ಣ (ನಾಮ ನಿರ್ದೇಶನವನ್ನು ಹೊಂದಿದವರು):–** ಆ ಎಪ್ಪತ್ತು ಲಕ್ಷ ರೂಪಾಯಿಗಳು ಯಾರದು, ಅದು ಕೂಡ ರೈತರದೇ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಆ ಎಪ್ಪತ್ತು ಲಕ್ಷ ರೂಪಾಯಿಗಳು ಸರ್ಕಾರದ್ದು. ನಾನು ಸರ್ಕಾರಕ್ಕೆ ಕಟ್ಟುತ್ತಿದ್ದೆ. ಮಾನ್ಯ ಸದಸ್ಯರೇ, ಇದರ ಬಗ್ಗೆ ಹೇಳುತ್ತೇನೆ ದಯವಿಟ್ಟು, ಕುಳಿತುಕೊಳ್ಳಿ. ತೆರಿಗೆಯನ್ನು ಸರ್ಕಾರಕ್ಕೆ ಕಟ್ಟುತ್ತಿದ್ದೆ. ಈಗ ತೆರಿಗೆ ಕಟ್ಟುವುದಕ್ಕೆ ಹತ್ತು ಲಕ್ಷ ರೂಪಾಯಿಗಳು ಸಾಕು ಎಂದು ಹೇಳಿದ. ಇಂತಹವರಿಗೆ ಲಾಭ ಮಾಡುವುದಕ್ಕೆ, ಈ ವಿಧೇಯಕವನ್ನು ತರುತ್ತಿದ್ದೀರಾ. ಆ ಹಣ ರೈತನ ಜೇಬಿಗೆ ಹೋಗುತ್ತದೆಯೇ? ಆ ಹಣ ರೈತನಿಗೆ ಸಿಗುತ್ತದೆಯೇ? ಯಾವ Multinational Company ಗಳು ಮಾರ್ಕೆಟಿಂಗ್‌ನಲ್ಲಿ ರೈತರ ಹಿತವನ್ನು ಬಯಸಿ ಕೆಲಸ ಮಾಡುತ್ತದೆ ಹೇಳಿ. ಇವತ್ತು ಈ ವ್ಯವಸ್ಥೆಯಿಂದ ಕಪ್ಪು ಹಣ ಚೆನ್ನಾಗಿ ಚಲಾವಣೆಯಾಗುತ್ತದೆ. ತೆರಿಗೆಗೆ ವಂಚನೆ ಮಾಡುತ್ತಾರೆ. ರೈತ ಸಮುದಾಯಕ್ಕೂ ತೂಕದಲ್ಲಿ ಮತ್ತು ದರದಲ್ಲಿ ವಂಚನೆ ಮಾಡುತ್ತಾರೆ. ಸರ್ಕಾರಕ್ಕೆ ಕೊಡಬೇಕಾದಂತಹ ತೆರಿಗೆ ಬಾರಿ ಪ್ರಮಾಣದಲ್ಲಿ ಕಡಿತವಾಗುತ್ತದೆ. ಈ ಕಂಪನಿಯವರೆಲ್ಲಾ ಬಂದು exploit ಮಾಡುತ್ತಾರೆ. ಇಷ್ಟೊಂದು ಅಪಾಯ ಮಾರುಕಟ್ಟೆ ವ್ಯವಸ್ಥೆಯಲ್ಲಿ ಎ.ಪಿ.ಎಂ.ಸಿಗಳಿಂದ ಇಲ್ಲ. ಎ.ಪಿ.ಎಂ.ಸಿ.ಗಳಲ್ಲಿಯೂ ದೋಷಗಳಿವೆ. ಆದರೆ ಈ ಪ್ರಮಾಣದಲ್ಲಿ ಎ.ಪಿ.ಎಂ.ಸಿ.ಗಳು ಮಾಡುವುದಕ್ಕೆ ಸಾಧ್ಯತೆಯಿಲ್ಲ ಎನ್ನುವುದನ್ನು ನಾನು ತಮ್ಮ ಮೂಲಕ ಮನದಟ್ಟು ಮಾಡುವುದಕ್ಕೆ ಬಯಸುತ್ತೇನೆ. ದಯವಿಟ್ಟು, ಮಾನ್ಯ ಸಭಾಪತಿಯವರೇ ನನಗೆ ಇನ್ನೇನೂ ನೋವಿಲ್ಲ. ರೈತರ ಪರವಾಗಿ ದಶಕ ದಶಕಗಳಿಂದ ಹೋರಾಟ ಮಾಡಿಕೊಂಡು ಅಧಿಕಾರಕ್ಕೆ ಬಂದಂತಹ ಈ ಜನ ಏತಕ್ಕೋಸ್ಕರ ವಿಧೇಯಕ ತರುತ್ತಿದ್ದಾರೆ? ಪ್ರಪಂಚದಲ್ಲಿರುವ ಜನರು ಜೀವವನ್ನು ಉಳಿಸಿಕೊಂಡು, ಈ ಸಂಕಷ್ಟದಲ್ಲಿರುವಾಗ ಸುಗ್ರಿವಾಜ್ಞೆ ಮೂಲಕ ಈ ವಿಧೇಯಕವನ್ನು ತರುತ್ತಾರಲ್ಲಾ, ಇದರ ಹಿಂದೆ ಷಡ್ಯಂತರ ಏನಿದೆ? ನನಗೆ ಅನುಮಾನ ಇಷ್ಟೊಂದು ತರಾತುರಿಯಲ್ಲಿ ಸುಗ್ರಿವಾಜ್ಞೆ ಮಾಡಿಕೊಂಡು, ಒಂದು ಸಾರಿ

ಆಯಿತು ಅಲ್ಲ. ಎರಡನೇ ಬರಿ ಸುಗ್ರಿವಾಜ್ಞೆ ತರುತ್ತಾರೆ. ಜನ ಪರವಾದಂತಹ ಮತ್ತು ಜನರಿಗೆ ಬೇಕಾದಂತಹ, ಬಡ ರೈತರು ಮತ್ತು ಸಣ್ಣ ಹಿಡುವಾಳಿದಾರ ರೈತರು ಬಯಸುವುದಕ್ಕೋಸ್ಕರ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿ):–** ಮಾನ್ಯ ಮರಿತಿಬ್ಬೇಗೌಡರೇ ಒಂದು ನಿಮಿಷ ನಾನು ಮಾತನಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾತನಾಡಿ.

**ಸಭಾಪತಿಯವರು:–** ಈಗ ಇನ್ನೂ ಹತ್ತು ನಿಮಿಷ ಜಾಸ್ತಿಯಾಯಿತು.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–**ಮಾನ್ಯ ಸಭಾಪತಿಯವರೇ, ರೈತರಿಗೆ ಏನು ಆತಂಕವಾಗಿತ್ತು ಎನ್ನುವಂತಹ ಭಾವನೆಯಿಂದ ಮಾನ್ಯ ಮರಿತಿಬ್ಬೇಗೌಡರು ಮಾತನಾಡುತ್ತಿದ್ದಾರೆ. ಮಾನ್ಯ ಮರಿತಿಬ್ಬೇಗೌಡರೇ ನಾನೊಬ್ಬ ರೈತ. ಕಬ್ಬು ಬೆಳೆದಿದ್ದೇನೆ. ಬೆಲ್ಲ ಮಾಡಿದ್ದೇನೆ. ಹತ್ತಿ, ಜೋಳ ಬಿತ್ತಿದ್ದೇನೆ. ಎಲ್ಲಾ ತರಹದ ವ್ಯವಸಾಯಗಳನ್ನು ಮಾಡಿರುವಂತಹ ನಾನೊಬ್ಬ ಅನುಭವಿ. ನನಗಿಂತ ಹೆಚ್ಚು ಅನುಭವ ಇರಬಹುದು, ನಾನು ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ.

(ಮುಂದು)

(1054) 09.12.2020 4.30 ಟಿಸಿಹೆಚ್–ಎಂಡಿ

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– (ಮುಂದು)**

ಮಾನ್ಯ ಸಭಾಪತಿಯವರೇ, ನಮ್ಮ ಭಾಗದಲ್ಲಿ ಮಹಾಲಿಂಗಪೂರ್, ಜಮಖಂಡಿ ಮತ್ತು ಅಥಣಿ ಪಕ್ಕದ ಮಹಾರಾಷ್ಟ್ರ ಅನೇಕ ಕಡೆ ಎ.ಪಿ.ಎಂ.ಸಿ.,ಗಳಿಗೆ ನಾವು ಬೆಳೆದಿರತಕ್ಕಂಥ ಬೆಳೆಗಳನ್ನು ತೆಗೆದುಕೊಂಡು ಹೋಗುತ್ತಿದ್ದೆವು. ಇದು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರಿಗೆ ಗೊತ್ತಿದೆ. ನಾವು ಬೆಳೆದಿರತಕ್ಕಂಥ ಹತ್ತಿ, ನಾವು ಮಾಡಿರತಕ್ಕಂಥ ಬೆಲ್ಲ, ನಾವು ಬೆಳೆದಿರತಕ್ಕಂಥ ಕಾಳು–ಕಡಿಗಳನ್ನು ಯಾವ ಎ.ಪಿ.ಎಂ.ಸಿಯ ಈ ದಲ್ಲಾಳಿಗಳಿಗೆ ಹೋಗಿ ಕೊಡುತ್ತಿದ್ದೆವಲ್ಲಾ, ಆ ದಲ್ಲಾಳಿಗಳು ನಮ್ಮನ್ನು ಯಾವ ರೀತಿ ನಡೆಸಿಕೊಳ್ಳುತ್ತಿದ್ದರೆಂದು ನಿಮಗೆ ಗೊತ್ತಾ ಸ್ವಾಮಿ? ನಾವು ಆ ದಲ್ಲಾಳಿಗಳ ಗುಲಾಮರಾಗಿದ್ದೆವು. ನಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂತಹ Landlord ಆಗಿದ್ದರೂ ಕೂಡ ನಾವು ಟ್ರಾಕ್ಟರ್‌ನಲ್ಲಿ ಹೋಗಬೇಕು. ನಾವು ಹತ್ತಿ ಮತ್ತು ಬೆಲ್ಲವನ್ನು ತೆಗೆದುಕೊಂಡು ಹೋದ ಕೂಡಲೇ. . .

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನ ಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಶ್ರೀ ಆರ್.ಬಿ.ತಿಮ್ಮಾಪೂರವರೇ, ತಾವು ದಯಮಾಡಿ ಕುಳಿತುಕೊಳ್ಳಬೇಕು. ನಿಮ್ಮ ಒಕ್ಕಲುತನವೂ ನನಗೆ ಗೊತ್ತು, ನಮ್ಮ ಒಕ್ಕಲುತನವೂ ಕೂಡ ನಿಮಗೂ ಗೊತ್ತಿದೆ. ನೋಡಿ, ಆ ದಲ್ಲಾಳಿಗಳು ಯಾವ ರೀತಿ ನಮ್ಮನ್ನು ಹೀಯಾಳಿಸಿ ನೋಡುತ್ತಿದ್ದರೆಂದರೆ, ನಾವು ಅವರಿಗೆ ಕೈ ಮುಗಿಯಬೇಕಿತ್ತು. 'ಅಣ್ಣಾ, ನಾನು 100 ಕ್ವಿಂಟಾಲ್ ಬೆಲ್ಲ ತಂದಿದ್ದೇನೆ, ಸಾಹುಕಾರ್ರೆ 100 ಕ್ವಿಂಟಾಲ್ ಬೆಲ್ಲ ತಂದಿದ್ದೇನೆ. ಅದಕ್ಕೆ ಅವರು ಹೌದಾ! ತಂದಿದ್ದೀಯಲ್ಲಾ ಆಯಿತು, ಯಾವಾಗ ಮಾರುತ್ತೀರಿ? ಅದು ಸವಾಲ್ ಆಗುತ್ತದೆ; ಆಗ ನಿನಗೆ ಹೇಳಿಕಳುಹಿಸುತ್ತೇನೆ ಎಂದು ಹೇಳುತ್ತಿದ್ದರು. 'ಅಣ್ಣಾ, ನಾನು ಊರಿಗೆ ಹಿಂದಿರುಗಿ ಕೂಲಿಯವರಿಗೆ ಸಂಬಳ ಕೊಡಬೇಕು, ಬೇರೆಯವರಿಂದ ಸಾಲ ಪಡೆದ್ದೇನೆ' ಅದನ್ನು ಕೊಡಬೇಕು ಸ್ವಲ್ಪ advance ಕೊಡಿ ಎಂದು ಕೇಳಿದರೆ, ಆತ ಕೊಡುತ್ತಿದ್ದುದು ಕೇವಲ 10 ಸಾವಿರ ರೂಪಾಯಿಗಳು, 20 ಸಾವಿರ ರೂಪಾಯಿಗಳು advance ತೆಗೆದುಕೊಳ್ಳುತ್ತಿದ್ದೆವು. ಆ ಬೆಳೆ ಮಾರುವವರೆಗೆ ಅವರು ನಮಗೆ ಸಾಲ ಕೊಟ್ಟಂತೆ ಕೊಡುತ್ತಿದ್ದರು. ಅದನ್ನು ಮಾರಾಟ ಮಾಡಿದ ಮೇಲೆ ನಮಗೆ ಫೋನ್ ಮಾಡಿ ನಿಮ್ಮ ಬೆಲ್ಲ ಮಾರಿದ್ದೇನೆ, ನಿಮ್ಮ ಹತ್ತಿ ಮಾರಿದ್ದೇನೆ ಮತ್ತು ನಿಮ್ಮ ಕಾಳು ಮಾರಿದ್ದೇನೆ. ನೀವು ಬಂದು ಪಟ್ಟಿ ತೆಗೆದುಕೊಂಡು ಹೋಗು ಎಂದು ಹೇಳುತ್ತಿದ್ದರು. ನಾವು ಅಲ್ಲಿಗೆ ಹೋಗುತ್ತಿದ್ದೆವು. ಈ ದಲ್ಲಾಳಿಗಳು, ಏಜೆಂಟರ್‌ಗಳು ಕಮೀಷನ್ ಎಂದು ನಮ್ಮ ರಕ್ತವನ್ನು ಹೀರಿದ್ದಾರೆ, ರೈತರ ರಕ್ತವನ್ನು ಹೀರಿದ್ದಾರೆ. ನಾವೇ ಅನುಭವಿಸಿದ್ದೇವೆ. ನಾವೇ ಸ್ವತಃ ಕಂಡಿದ್ದೇವೆ. ಅವರು ಮಾರಾಟ ಮಾಡಿದ್ದನ್ನು ಪಟ್ಟಿ ಮಾಡುತ್ತಿದ್ದರು. ಅವರು cess ಎಷ್ಟು, ಹಮಾಲಿ ಕೂಲಿ ಎಷ್ಟು ಇದನ್ನೆಲ್ಲಾ ಬರೆಯುತ್ತಿದ್ದರು. ಅದಾದ ನಂತರ ಅವರು ಬಡ್ಡಿ ಸರಿಯಾಗಿ ಬರೆಯುತ್ತಿರಲಿಲ್ಲ ಕಳ್ಳರು. ನಮ್ಮ ಮುಂದೆ ಸುಮ್ಮನೆ ಪುಟಗಳನ್ನು ತಿರುವುತ್ತಿದ್ದರು. ಅವರು *ballpoint pen* ಉಪಯೋಗಿಸುತ್ತಿರಲಿಲ್ಲ. ಸೀಸದ ಪೆನ್ಸಿಲ್ ಬಳಸಿ ಎಲ್ಲವನ್ನೂ ಲೆಕ್ಕ ಮಾಡುತ್ತಿದ್ದರು. ಇಲ್ಲಿ ನಾವೇನು ಶೇ.36 ಮತ್ತು ಶೇ.40 ಬಡ್ಡಿ ಎಂದು ಮಾತನಾಡುತ್ತೇವೆ. ಆದರೆ ಅಲ್ಲಿ 3 ಟಕ್ಕೆ ಮತ್ತು 4 ಟಕ್ಕೆ ಎಂದು ಮಾತನಾಡುತ್ತಿದ್ದರು. ನಾವು ಆ ಪಟ್ಟಿಯನ್ನೆಲ್ಲಾ ತೆಗೆದುಕೊಂಡು ಲೆಕ್ಕ ಹಾಕಿ ನೋಡಿದರೆ, ನಾವೇನು ಬೆಳೆಯುವುದಕ್ಕೆ ಖರ್ಚು ಮಾಡುತ್ತೇವಲ್ಲಾ, ಅಷ್ಟು ಖರ್ಚನ್ನು ನಾವು ಈ ಏಜೆಂಟ್‌ಗಳಿಗೆ ಕೊಟ್ಟಿರತಕ್ಕಂಥದ್ದು ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನು ಎರಡನೆಯದಾಗಿ, ಇವತ್ತು ಈ ಕಾನೂನನ್ನು ಮಾನ್ಯ ಸಚಿವರಾದ ಶ್ರೀ ಎಸ್.ಟಿ.ಸೋಮಶೇಖರ್‌ರವರು ತಂದಿರಬಹುದು. ಕರ್ನಾಟಕದಲ್ಲಿ 2007ನೇ ಇಸವಿಯಿಂದ ಎ.ಪಿ.ಎಂ.ಸಿ.,ಯಲ್ಲೂ ಕೂಡ ಮಾರಾಟ ಮಾಡಬಹುದು ಮತ್ತು ಹೊರಗಡೆ ಕೂಡ ಮಾರಾಟ ಮಾಡಬಹುದು. ಆದರೆ cessಗೆ ಮಾತ್ರ ಪರಿಣಾಮಕಾರಿಯಾಗಿ ತಂದಿರತಕ್ಕಂಥದ್ದು. ಆದರೆ ಹೊರಗಡೆ ಮತ್ತು ಒಳಗಡೆ ಮಾರಾಟ ಮಾಡಿದರೂ ಕೂಡ ಎ.ಪಿ.ಎಂ.ಸಿ.,ಗೆ cess ಮಾತ್ರ ಕಟ್ಟಬೇಕು. ಇಷ್ಟೇ ಬದಲಾವಣೆ ಇರುವುದು. ಇವತ್ತಿನ ದಿವಸ ಎ.ಪಿ.ಎಂ.ಸಿ.,ಗಳಲ್ಲೇ ನಾವು ಅದನ್ನು ಮಾರಾಟ ಮಾಡಬೇಕು ಎನ್ನತಕ್ಕಂಥ ನಿರ್ಬಂಧ ಇದೆಯಲ್ಲಾ, ಅದರಿಂದ ಹೊರಗಡೆಗೆ ಬಂದಿರುವುದು. 'ನನ್ನ ಬೆಳೆ ನನ್ನ ಹಕ್ಕು' ಬಹುಶಃ ಬೆಳಗಾವಿ ಅಧಿವೇಶನದಲ್ಲಿ ಇರಬಹುದು, ಅವೊತ್ತಿನ ದಿವಸ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮುಖ್ಯಮಂತ್ರಿಗಳು ಇದ್ದರು. ರಾಯಭಾಗ ತಾಲ್ಲೂಕು, ಕಂಕನವಾಡಿ ಗ್ರಾಮದ ಹತ್ತಿರದ ಒಂದು ಹಳ್ಳಿಯವನು. ಸುವರ್ಣ ವಿಧಾನಸೌಧದ ಹೊರಗಡೆ protest ಮಾಡುತ್ತಿದ್ದರು. ಕಬ್ಬಿಗೆ ಬೆಲೆ ಸಿಕ್ಕಿಲ್ಲ, ಕಾರ್ಖಾನೆಯವರು ಕಬ್ಬಿಗೆ ಬೆಲೆಯನ್ನು ಕೊಟ್ಟಿಲ್ಲ. ಬಾಕಿ ಉಳಿಸಿಕೊಂಡಿದ್ದಾರೆಂದು ಪ್ರತಿಭಟನೆ ಮಾಡುತ್ತಿರತಕ್ಕಂಥ ಸಂದರ್ಭದಲ್ಲಿ ಒಬ್ಬ ರೈತ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ. ಆಗ ನಾವೆಲ್ಲರೂ ತಲೆಬಾಗಿಸತಕ್ಕಂಥ ಸಂದರ್ಭ. ಸರ್ಕಾರ ಇರಬಹುದು, ವಿರೋಧ ಪಕ್ಷದವರು ಇರಬಹುದು. ಒಂದು ಸರ್ಕಾರ ಕಣ್ಣೆದುರಿಗೆ, ಒಬ್ಬ ರೈತ ಸುವರ್ಣ ವಿಧಾನಸೌಧದ ಮುಂಭಾಗದಲ್ಲಿ ನನಗೆ ಸಿಗಬೇಕಾಗಿರತಕ್ಕಂಥ ಹಣ ಸಿಕ್ಕಿಲ್ಲ, ಎನ್ನತಕ್ಕಂಥ ವಿಷಯವನ್ನಿಟ್ಟುಕೊಂಡು ಆತ್ಮಹತ್ಯೆ ಮಾಡಿಕೊಂಡರು. ಅದು ಯಾರಿಗೂ ಕೂಡ ಶೋಭೆ ತರತಕ್ಕಂಥದ್ದಲ್ಲ. ಅವೊತ್ತು ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು ಏನು ಸ್ಟೇಟ್‌ಮೆಂಟ್ ಮಾಡಿದರು, ಕಾರ್ಖಾನೆಗಳಿಗೆ ಲೈಸೆನ್ಸ್ ಕೊಡತಕ್ಕಂಥ ಸಂದರ್ಭದಲ್ಲಿ ಸರ್ಕಾರ ಒಂದು ನಿಯಮ ವಿಧಿಸಿದೆ. ಆ ಕಾರ್ಖಾನೆ ವ್ಯಾಪ್ತಿಯಲ್ಲಿ ಎಷ್ಟು ಹಳ್ಳಿಗಳು ಬರುತ್ತವೆಯೋ, ಎಷ್ಟು ಜಮೀನಿದೆಯೋ ಮತ್ತು ಎಷ್ಟು ಕಬ್ಬು ಬೆಳೆಗಾರರು ಇದ್ದಾರೋ ಮತ್ತು ಎಷ್ಟು ಎಕರೆ ಕಬ್ಬು ಬೆಳೆಯುತ್ತದೆಯೋ ಆ ಕಾರ್ಖಾನೆಗೆ ಸರಬರಾಜು ಮಾಡಬೇಕಂತೆ. ಆ ಪರ್ಮಿಷನ್ ತೆಗೆದುಕೊಂಡಿರತಕ್ಕಂಥ ಕಾರ್ಖಾನೆಯವರು ರೈತರನ್ನು ದಿಗ್ಬಂಧನದಲ್ಲಿ ಇಡುತ್ತಾನೆ. ನನ್ನ ಏರಿಯಾದಲ್ಲಿ ಬರತಕ್ಕಂಥ ಕಬ್ಬು ಬೇರೆ ಏರಿಯಾಗೆ ಹೋಗತಕ್ಕಂಥದ್ದಲ್ಲ. ಬೇರೆ ಕಾರ್ಖಾನೆಗೆ ಹೋಗತಕ್ಕಂಥದ್ದಲ್ಲ ಎಂದು ಮಾಡಿದ್ದರು. ಆ ಸಂದರ್ಭದಲ್ಲಿ ಆ ರೈತ ಸಾವಿಗೀಡಾದಾಗ, ಕಾರ್ಖಾನೆಗೆ ಕಬ್ಬು ಕಳುಹಿಸಿದ್ದರಲ್ಲಾ, ಆ ರೈತನ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತೀರ್ಮಾನ ಆಯಿತು. ಅವೊತ್ತಿನ ದಿವಸ ಸನ್ಮಾನ್ಯ ಸಿದ್ದರಾಮಯ್ಯನವರು ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದರು. ರೈತ ಬೆಳೆದಿರತಕ್ಕಂಥ ಬೆಳೆಗೆ ಅವನಿಗೆ ಸ್ವಾತಂತ್ರ್ಯ ಸಿಗಬೇಕು. ಅವನನ್ನು ಆ ದಿಗ್ಬಂಧನದಿಂದ ಹೊರಗೆ ಹಾಕಬೇಕು. 'ನನ್ನ ಬೆಳೆ ನನ್ನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಕ್ಕು' ಎನ್ನತಕ್ಕಂಥದ್ದನ್ನು ಆಗಬೇಕೆಂದು ಹೇಳಿದ್ದರು. ಇದನ್ನು ನಾನು ಹೇಳಲಿಲ್ಲ, ಅವೊತ್ತಿನ ದಿವಸ ಸನ್ಮಾನ್ಯ ಸಿದ್ದರಾಮಯ್ಯನವರೇ, ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಈ ಮಾತನ್ನು ಹೇಳಿರತಕ್ಕಂಥದ್ದು. ಅವೊತ್ತಿನಿಂದ ಇವತ್ತಿನವರೆಗೆ ಯಾವುದೇ ರೈತ, ಬೆಳೆದಿರತಕ್ಕಂಥ ಕಬ್ಬನ್ನು ಯಾವುದೇ ಕಾರ್ಖಾನೆಗೆ ಸರಬರಾಜು ಮಾಡಬಹುದು ಎಂದು ಪ್ರಾರಂಭವಾಗಿರತಕ್ಕಂಥದ್ದು. ಕಾನೂನನ್ನು ಸಡಿಲಗೊಳಿಸಿರತಕ್ಕಂಥದ್ದು. ಮಾನ್ಯ ಎಸ್.ಆರ್.ಪಾಟೀಲ್‌ರವರದ್ದು ಕೂಡ ಸಕ್ಕರೆ ಕಾರ್ಖಾನೆ ಇದೆ. ಯಾವ ರೈತ ಎಲ್ಲಿ ಬೇಕಾದರೂ ಸಹಿತ ತನ್ನ ಬೆಳೆಯನ್ನು ಬೇರೆ ಕಡೆಗೆ ಸಾಗಿಸಬಹುದು ಎನ್ನುವುದನ್ನು ಪ್ರಾರಂಭ ಮಾಡಬೇಕು ಎನ್ನತಕ್ಕಂಥ ಅಪೇಕ್ಷೆಯನ್ನು ವ್ಯಕ್ತಪಡಿಸಿದಂತಹ ಕಾಂಗ್ರೆಸ್ ಸರ್ಕಾರದ ಅವೊತ್ತಿನ ಮುಖ್ಯಮಂತ್ರಿಗಳಾಗಿರತಕ್ಕಂಥ ಸನ್ಮಾನ್ಯ ಸಿದ್ದರಾಮಯ್ಯನವರಿಗೆ ಇವತ್ತಿನ ದಿವಸ ನಾನು ಅಭಿನಂದನೆಗಳನ್ನು ಹೇಳುತ್ತಿದ್ದೇನೆ.

**ಶ್ರೀ ಎಂ.ನಾರಾಯಣ ಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಂದು ಮಾತನ್ನು ಹೇಳಿದರು. ಏನು ಕಾರ್ಖಾನೆಯ ಆಸುಪಾಸಿನಲ್ಲಿ ಇರತಕ್ಕಂಥ ಕಬ್ಬು ಬೆಳೆಗಾರರು ಅದೇ ಕಾರ್ಖಾನೆಗೆ ಸರಬರಾಜು ಮಾಡಬೇಕೆಂದು ಕಾನೂನು ಮಾಡಿರಲಿಲ್ಲ. ಅದೇ ರೀತಿಯಾಗಿ ಯಾರು ಕಬ್ಬು ಅರೆಯತಕ್ಕಂಥ ಕಾರ್ಖಾನೆಗಳಿದ್ದವೋ ಆ ಕಾರ್ಖಾನೆಯವರು ನಮ್ಮ ಹತ್ತಿರ ಹೆಚ್ಚಿಗೆ stock ಇದೆ, ನಾವು ತೆಗೆದುಕೊಳ್ಳುವುದಿಲ್ಲ, ಬೇರೆ ಕಡೆ ಮಾರಿಕೊಳ್ಳಿ ಎಂದು ಹೇಳಿರತಕ್ಕಂಥ ನಿದರ್ಶನ ಕೂಡ ಇದೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಕಬ್ಬು ನಿಯಂತ್ರಣ ಮಂಡಳಿ ಎಂದು ಇದೆ. ಒಂದು ಸಕ್ಕರೆ ಕಾರ್ಖಾನೆಗೆ ಒಂದು ವ್ಯಾಪ್ತಿ ಇರುತ್ತದೆ. ಮತ್ತೊಂದು ಸಕ್ಕರೆ ಕಾರ್ಖಾನೆಗೆ ಒಂದು ವ್ಯಾಪ್ತಿ ಇರುತ್ತದೆ. ಇಷ್ಟು ಕಿಲೋಮೀಟರ್‌ನಲ್ಲಿ ಕಬ್ಬು ಅರೆಯುವಂತಹ ಫ್ಯಾಕ್ಟರಿ ಇರಬೇಕು ಎಂದು ಇರುವುದು ಹಾಗೆಯೇ ಇದೆ. ಆ ಕಾನೂನು ಏನೂ ಬದಲಾವಣೆಯಾಗಿಲ್ಲ. ಆದರೆ ರೈತರು ತಮ್ಮ ಇಚ್ಛೆ ಪ್ರಕಾರ...

**ಶ್ರೀ ಯು.ಬಿ.ವೆಂಕಟೇಶ್ (ವಿಧಾಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಯಾರೂ ಮಾತನಾಡಬಾರದು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಸರ್ವೋಚ್ಚ ನ್ಯಾಯಾಲಯ ರೈತ ತಾನು ಬೆಳೆಯತಕ್ಕಂಥ ಕಬ್ಬನ್ನು ಯಾವ ಫ್ಯಾಕ್ಟರಿಗಳಿಗೆ ಬೇಕಾದರೂ ಸರಬರಾಜು ಮಾಡಬಹುದು ಎಂದು ನಿರ್ಣಯ ಕೊಟ್ಟಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸರ್ವೋಚ್ಚ ನ್ಯಾಯಾಲಯ ನಿರ್ಣಯ ಕೊಟ್ಟಿರುವುದು ನನಗೂ ಗೊತ್ತಿದೆ. ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರೇ, ವಿಷಯ divert ಆಗುವುದು ಬೇಡ. ನೀವು ಇದಕ್ಕೆ ಸೀಮಿತವಾಗಿ.

**ಸಭಾಪತಿಯವರು:-** ಶ್ರೀ ಮರಿತಿಬ್ಬೇಗೌಡ ರವರೇ, ತಮ್ಮ ಮಾತನ್ನು ಮುಂದುವರೆಸಿ. ತಾವು ಈಲ್ಡ್ ಆಗಬೇಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಉಪ ಮುಖ್ಯಮಂತ್ರಿಗಳಾದ ಶ್ರೀ ಲಕ್ಷ್ಮಣ ಸಂಗಪ್ಪ ಸವದಿಯವರು ನಮಗೆ ಗೊತ್ತಿಲ್ಲದೇ ಇರತಕ್ಕಂಥ ಒಂದೆರಡು ಸಂಗತಿಗಳನ್ನು ತಿಳಿಸಿದ್ದಾರೆ. ಅದಕ್ಕೆ ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದಂತಹ ವ್ಯವಸ್ಥೆ ರೈತರಿಗೆ ದಲ್ಲಾಳಿಗಳಿಂದ ಆಗುತ್ತಿದ್ದ ಕಿರುಕುಳ, ಹಿಂಸೆ. ಎ.ಪಿ.ಎಂ.ಸಿ.ಗಳಲ್ಲಿ ಸುಧಾರಣೆ ತರುವುದಕ್ಕೆ ಮೊದಲೇ ಇತ್ತು. ಈಗ ಇದೇ ಸರ್ಕಾರಗಳು ಅದಕ್ಕೆ ಕಡಿವಾಣ ಹಾಕಿ ಸುಧಾರಣೆ ತಂದಂತಹ ವ್ಯವಸ್ಥೆಗಳಲ್ಲಿ ಈಗ ಅದೆಲ್ಲವೂ ಕೂಡ ಕಡಿಮೆಯಾಗಿದೆ. ಅದು ಸಂಪೂರ್ಣವಾಗಿ ನಿಂತುಬಿಟ್ಟಿದೆಯೆಂದು ಕೂಡ ನಾನು ಒಪ್ಪಿಕೊಳ್ಳುವುದಿಲ್ಲ. ಕೆಲವು ಎ.ಪಿ.ಎಂ.ಸಿ.,ಗಳಲ್ಲಿ ಈಗಲೂ ಕೂಡ ಕಿರುಕುಳ ಇರಬಹುದು. ಅಲ್ಲಿನ ಮಾರ್ಕೆಟ್ ಅಧಿಕಾರಿಗಳ ನಿರ್ಲಕ್ಷ್ಯತೆಯಿಂದ ಆಗುತ್ತಿರಬಹುದು. ಆದರೆ, ನಾನು ಒಂದು ಮಾತನ್ನು ಹೇಳುವುದೇನೆಂದರೆ, 'ಅಂತಹ ಗಿರಾಕಿಗಳಿಗೆ ಕಡಿವಾಣ ಹಾಕುವ ಶಕ್ತಿ ಸರ್ಕಾರಕ್ಕಿಲ್ಲ, ಅದನ್ನು ಸುಧಾರಣೆ ತರುವುದಕ್ಕೆ ತಿದ್ದುಪಡಿ ತರತಕ್ಕಂಥ ಶಕ್ತಿ ಸರ್ಕಾರಕ್ಕಿಲ್ಲ'. ಅದಕ್ಕೆ ಸರ್ಕಾರ Multinational Company ಗಳ ಕೈಗೆ ಕೊಡುವುದಕ್ಕೆ ಹೊರಟಿದ್ದಾರೆ. ಅವರ್ಯಾರೋ ಏಜೆಂಟರುಗಳು, ದಲ್ಲಾಳಿಗಳು ಎಂದು ಇದ್ದಾರಲ್ಲಾ, ಆ ದಲ್ಲಾಳಿಗಳನ್ನು ನಿಯಂತ್ರಣ ಮಾಡುವುದಕ್ಕೆ ಅಧಿಕಾರಕ್ಕೆ ಬಂದಂತಹ ಯಾವ ಸರ್ಕಾರದಿಂದಲೂ ಆಗುತ್ತಿಲ್ಲ. ಏನಾದರೂ ಈ Multinational Company ಗಳು ಬಂದರೆ ತಂತಾನೆ ದಲ್ಲಾಳಿಗಳೆಲ್ಲಾ ಸತ್ತುಹೋಗುತ್ತಾರೆ. ನಮ್ಮ ಊರಿನ ಕಡೆ 'ಎತ್ತಿಗೆ ಜ್ವರ ಬಂದರೆ, ಎಮ್ಮೆಗೆ ಬರೆ ಹಾಕು' ಎಂದು ಹೇಳುತ್ತಾರೆ. 'ಇದೇನ್ಲಾ, ಎತ್ತಿಗೆ ಔಷಧಿ ಕೊಡದೇ; ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದ್ಯಲ್ಲಾ' ಎಂದು ಹೇಳುತ್ತಾರೆ. ಆ ರೀತಿ ಹೇಳುತ್ತಾರಲ್ಲಾ. ಏನು ಮಾಡುವುದು ಸ್ವಾಮಿ, ಈ ಹಿಂದೆ ಸಕ್ಕರೆ ಕಂಪನಿಗಳು ಕಡಿಮೆ ಇದ್ದಂತಹ ಸಂದರ್ಭದಲ್ಲಿ ಪ್ರತಿ ಸಕ್ಕರೆ ಕಂಪನಿಗಳಿಗೂ ಕೂಡ ಸರ್ಕಾರವೇ area fix ಮಾಡಿತ್ತು.

(ಮುಂದು...)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1055)9.12.2020/4.40/ಎಂ.ಎಂ-ಎ.ಕೆ

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ (ಮುಂದು):-**

ಏಕೆಂದರೆ, ಆ ಸಕ್ಕರೆ ಕಂಪನಿಗಳು viable ಆಗಿ ನಡೆಯಬೇಕು ಎನ್ನುವ ದೃಷ್ಟಿಯಿಂದ ಸರ್ಕಾರವೇ ಕೆಲವು ಷರತ್ತುಗಳನ್ನು ಹಾಕಿತು. ಈಗ ಆ ಸಕ್ಕರೆ ಕಂಪನಿಗಳು ಸರಿಯಾಗಿ ನಡೆಯುತ್ತಿಲ್ಲ, ದುಸ್ಥಿತಿಗೆ ಹೋಗಿವೆ, ಆರ್ಥಿಕ ನಷ್ಟಕ್ಕೆ ಹೋಗಿವೆ, ರೈತರಿಗೆ ಸರಿಯಾಗಿ ಪೇಮೆಂಟ್ ಮಾಡುತ್ತಿಲ್ಲ, ಏನು ಮಾಡುವುದು ಕಾರ್ಖಾನೆ ನಿಂತಿದೆ, ಕಬ್ಬನ್ನು ಅರೆಯಬೇಕಾಗಿದೆ. Actually, natural ಆಗಿ ಪ್ರಾರಂಭ ಮಾಡಲೇಬೇಕು. ರೈತನ ಕಬ್ಬನ್ನು ಎಲ್ಲಾದರೂ ಸಾಗಿಸು ಎಂದು ಸರ್ಕಾರ ಕೊಡಬೇಕು. ಕೊಡದಿದ್ದರೆ ರೈತ ಸರ್ಕಾರವನ್ನು ಕೇರ್ ಮಾಡುತ್ತಾನೇನು? ಕೇರ್ ಮಾಡುವುದಿಲ್ಲ. ರೈತ ಏನು ದಡ್ಡನಲ್ಲ. ರೈತ ದುಡ್ಡಿಲ್ಲದೇ ದಡ್ಡನಾಗಿದ್ದಾನೆ. ರೈತನಿಗೆ ದುಡ್ಡು ಕೊಡಿ ಯಾವುದೇ ಬಹುರಾಷ್ಟ್ರೀಯ ಕಂಪನಿಯಲ್ಲ ಎಲ್ಲರೂ ಬುಗುಬುಗನೆ ಸುತ್ತಬೇಕು ಹಾಗೆ ಮಾಡುತ್ತಾನೆ. ರೈತನಿಗೆ ದುಡ್ಡು ಸಿಗುವ ಕೆಲಸಗಳನ್ನು, ಕಾರ್ಯಕ್ರಮಗಳನ್ನು ಸರ್ಕಾರ ಮಾಡುತ್ತಿಲ್ಲ. ರೈತ ದಡ್ಡನಲ್ಲ ಅವನ ಕೈಗೆ ದುಡ್ಡು ಕೊಡಿ. ಮಳೆ ನೋಡಿ, ಹವಾಗುಣ ನೋಡಿ ನಮ್ಮ ತಾತ ಮುತ್ತಾತಂದಿರು ಬೇಸಾಯ ಮಾಡಿಕೊಂಡು ಬರುತ್ತಿದ್ದರು. ಯಾವುದೇ ವಿಧವಾದ ರಾಸಾಯನಿಕ ಗೊಬ್ಬರವಿಲ್ಲದೇ, ಯಾವುದೇ ವಿಧವಾದ ಬಿತ್ತನೆ ಬೀಜಗಳನ್ನು ಅವರು ಬೇರೆಯವರಿಂದ ಕೊಂಡುತ್ತಿರಲಿಲ್ಲ. ನಮ್ಮ ಪೂರ್ವಿಕರು ಯಾವ ರೀತಿ ಸಮೃದ್ಧವಾಗಿದ್ದರು, ಯಾವ ರೀತಿ ಬೆಳೆ ಬೆಳೆಯುತ್ತಿದ್ದರು ಎಂದರೆ ಈ ರೈತ ಸಮುದಾಯ ಪ್ರಕೃತಿಯನ್ನೇ ನಂಬಿ ಬದುಕುತ್ತಿದ್ದರು. ಈ ರೈತ ಸಮುದಾಯಕ್ಕೆ ಸರ್ಕಾರಗಳು ತಮ್ಮ ತಮ್ಮ ಸ್ವಹಿತಾಸಕ್ತಿಗೋಸ್ಕರ ಇಂತಹ ಕಾನೂನುಗಳನ್ನು ಮಾಡಿ, ರೈತ ಆತ್ಮಹತ್ಯೆಗೆ ಶರಣಾಗುವ ಹಾಗೆ ಮಾಡುತ್ತಿದ್ದೇವೆ. ದಯಮಾಡಿ ಸರ್ಕಾರ ಇದರ ಬಗ್ಗೆ ದೀರ್ಘವಾಗಿ ಯೋಚನೆ ಮಾಡಬೇಕು. ಶ್ರೀ ಸೋಮಶೇಖರ್ ಅವರು ರೈತರ ಮಕ್ಕಳು. ದಯಮಾಡಿ ರೈತರ ಕುತ್ತಿಗೆ ಹಿಸುಕುವ ಕೆಲಸ ಆಗಬಾರದು. ಸುಧಾರಣೆ ತರುವುದಕ್ಕೆ, ರೈತರಿಗೆ ಒಳ್ಳೆಯ ಮಾರುಕಟ್ಟೆ ಕೊಡುವುದಕ್ಕೆ, ಬೆಂಬಲ ಬೆಲೆ ಕೊಡುವುದಕ್ಕೆ ಅನೇಕ ಯೋಜನೆಗಳು ಸರ್ಕಾರದ ಮುಂದೆ ಇದೆ. ಅವುಗಳನ್ನು ತೆಗೆದುಕೊಂಡು ಬಂದು stabilize ಮಾಡಿ, ಸುಧಾರಣೆ ಮಾಡಿ ಒಳ್ಳೆಯ marketing system ಮಾಡಿ. ಅದು ಬಿಟ್ಟು ಈ ಕಂಪನಿಗಳನ್ನು ಕರೆದುಕೊಂಡು ಬಂದರೆ ರೈತರಿಗೆ ಯಾವ ಬೆಲೆಯೂ ಸಿಗುವುದಿಲ್ಲ ಸರ್ಕಾರಕ್ಕೆ ಬರುವ ತೆರಿಗೆ ಕೂಡ ಹಾಳು, ಕಪ್ಪು ಹಣ float ಆಗುತ್ತದೆ ಅವನು ಇನ್ನೂ ಬಹಳ ದಪ್ಪಗಾಗುತ್ತಾನೆ. ದಯವಿಟ್ಟು ಇಂತಹ ಮಸೂದೆಯನ್ನು ವಾಪಸ್

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳಿ. ಏತಕ್ಕೆ ಇವರು ರಾತ್ರಿಯಿಂದ; ಒಬ್ಬ ಕಳ್ಳ ಹಗಲೆಲ್ಲಾ ಶಕುನ ಚೆನ್ನಾಗಿದೆಯೆಂದು ಹಗಲಿನಲ್ಲಿ ಕಳ್ಳತನ ಮಾಡುತ್ತಿದ್ದನಂತೆ ಆಗ ಒಂದು ಸಲ ಸಿಕ್ಕಿಹಾಕಿಕೊಂಡನಂತೆ. ಹಾಗೆ ಇವರು ಶಕುನ ಚೆನ್ನಾಗಿದೆಯೆಂದು ಸುಗ್ರೀವಾಜ್ಞೆ ತಂದು ರೈತರನ್ನು ಪೂರ್ಣವಾಗಿ ನಿರ್ನಾಮ ಮಾಡುವ ಕೆಲಸಕ್ಕೆ ಹೋಗುತ್ತಿದ್ದಾರೆ. ಬಿ.ಜೆ.ಪಿ.ಯ ಶ್ರೀ ವಾಜಪೇಯಿಯವರ ಸರ್ಕಾರ ಇತ್ತು. ಈಗಿರುವುದು ಆ ಬಿ.ಜೆ.ಪಿ.ಯ 'ವಾಜಪೇಯಿ' ಸರ್ಕಾರವಲ್ಲ 'ಬ್ರಿಟಿಷ್' ಸರ್ಕಾರ ಇದು. ರೈತರನ್ನು ಕೊಲ್ಲುವಂತಹ ಸರ್ಕಾರವಿದು. ಇದಕ್ಕೆ ನನ್ನ ಸಂಪೂರ್ಣ ವಿರೋಧವಿದೆ. ರೈತರ ಬದುಕನ್ನು ಹಾಳು ಮಾಡುವಂತಹ ಕಾಯಿದೆ ಇದು. ದಯಮಾಡಿ ಇದನ್ನು ವಾಪಸ್ ತೆಗೆದುಕೊಳ್ಳಬೇಕು.

**ಡಾ: ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, 'ಬ್ರಿಟಿಷ್' ಸರ್ಕಾರ ಎನ್ನುವುದನ್ನು ಕಡತದಿಂದ ತೆಗೆಸಬೇಕು.

**ಶ್ರೀ ಮರಿತಿಬ್ಬೇಗೌಡ:-** ನಾನು ಸರ್ಕಾರವನ್ನು ಬಹಳ ಒತ್ತಾಯಪೂರ್ವಕವಾಗಿ ಕೇಳುತ್ತಿದ್ದೇನೆ. ಇದರಿಂದ ಯಾವ ರೈತರೂ ಉದ್ಧಾರವಾಗುವುದಿಲ್ಲ, ಯಾವ ಮಾರುಕಟ್ಟೆಯೂ ಸುಧಾರಣೆಯಾಗುವುದಿಲ್ಲ.

**ಡಾ: ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ನಾವು ಚುನಾವಣೆಯಲ್ಲಿ ಗೆದ್ದು ಬಂದಿದ್ದೇವೆ. ಬ್ರಿಟಿಷ್ ಸರ್ಕಾರ ಎಂದರೆ ತಪ್ಪಾಗುತ್ತದೆ. ದಯಮಾಡಿ ಆ ಪದವನ್ನು ಕಡತದಿಂದ ತೆಗೆಸಬೇಕು.

**ಶ್ರೀ ಮರಿತಿಬ್ಬೇಗೌಡ:-** ಇದನ್ನು ನೀವು ಪಟ್ಟಭದ್ರ ಹಿತಾಸಕ್ತಿಗೋಸ್ಕರ ತರುತ್ತಿದ್ದೀರಿ. ಇದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಇದಕ್ಕೆ ನಮ್ಮ ಬೆಂಬಲ, ಸಹಕಾರ ಇಲ್ಲ. ಈಗಾಗಲೇ ಭೂ ಸುಧಾರಣೆ ಕಾಯಿದೆಯಿಂದ ರೈತರ ಜೀವ ಹೊರಟು ಹೋಗಿದೆ. ಈಗ ಈ ಮಾರುಕಟ್ಟೆ ವ್ಯವಸ್ಥೆಯ ಕಾಯಿದೆ ಜಾರಿಗೆ ಬಂದರೆ ರೈತರು ಸಂಪೂರ್ಣವಾಗಿ ನಿರ್ನಾಮವಾಗುತ್ತಾರೆ. ಕರ್ನಾಟಕ ರಾಜ್ಯದಲ್ಲಿ ವ್ಯವಸ್ಥಿತವಾದ ಒಂದು ಮಾರುಕಟ್ಟೆ ವ್ಯವಸ್ಥೆ ಇತ್ತು. ಅದನ್ನು ಬಲಗೊಳಿಸಿ, ಅದರಲ್ಲಿ ಇನ್ನೂ ಉತ್ತೇಜನವಾದಂತಹ ಕಾರ್ಯಕ್ರಮಗಳನ್ನು, ಯೋಜನೆಗಳನ್ನು, cold storage ಗಳನ್ನು ಜಿಲ್ಲಾ ಹಂತದಲ್ಲಿ ಎಲ್ಲಾ ಕಡೆ ತಂದು ಮಾಡಿದರೆ ಅದರಿಂದ ರೈತರಿಗೆ ಅನುಕೂಲವಾಗುತ್ತದೆ ಹೊರತು ಇದರಿಂದ ಅಲ್ಲ. ಸಂಪೂರ್ಣವಾಗಿ ಈ ಕಾಯಿದೆಗೆ ನನ್ನ ವಿರೋಧ ಇದೆ. ನಿಜವಾಗಿ ಇದು ಜನಪರವಾದಂತಹ ಕಾಯಿದೆಯಲ್ಲ ರೈತ ವಿರೋಧಿ ಕಾಯಿದೆಯಾಗಿದೆ ಇದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಈಗ ಶ್ರೀ ಅಲ್ಲಂವೀರಭದ್ರಪ್ಪ.

**ಶ್ರೀ ಸುನೀಲ್ ವಲ್ಯಾಪುರ್:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಬ್ರಿಟಿಷ್ ಸರ್ಕಾರ ಎನ್ನುವುದನ್ನು ಕಡತದಿಂದ ತೆಗೆಸಿ. ಸದನಕ್ಕೆ ಗೌರವ ತರುವಂತಹ . . .

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಕಡತದಿಂದ ತೆಗೆಯಬೇಕಾದರೆ ಅದು unparliamentary ಆಗಿರಬೇಕು. ಬ್ರಿಟಿಷ್ ಸರ್ಕಾರ ಎನ್ನುವುದು unparliamentary ಅಲ್ಲ.

(ಗೊಂದಲ)

**ಶ್ರೀ ಸುನೀಲ್ ವಲ್ಯಾಪುರ್:–** ಇವರೇನು ಇಟಲಿಯಿಂದ ಬಂದಿದ್ದಾರಾ?

**ಶ್ರೀ ಎನ್. ರವಿಕುಮಾರ್:–** ಬ್ರಿಟಿಷ್ ಸರ್ಕಾರ ಹೇಗಿತ್ತು ಎನ್ನುವುದನ್ನು ವಿಸ್ತರಣೆ ಮಾಡಲಿ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಅದು unparliamentary ಇದ್ದರೆ ಕಡತದಿಂದ ತೆಗೆಯಬೇಕು.

**ಶ್ರೀ ಎನ್. ರವಿಕುಮಾರ್:–** ಇದು ಚುನಾಯಿತ ಸರ್ಕಾರವಾಗಿದೆ. ಜನರಿಂದ ಆಯ್ಕೆಯಾದಂತಹ ಸರ್ಕಾರ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪಮುಖ್ಯಮಂತ್ರಿ):–** ನೀವು ಹೇಳಿದ ಹಾಗೆ ಇದು unparliamentary ಅಲ್ಲ ಅದನ್ನು ನಾನು ಕೂಡ ಒಪ್ಪುತ್ತೇನೆ. ಆದರೆ ಭಾರತ ದೇಶದಲ್ಲಿ 130 ಕೋಟಿ ಜನಸಂಖ್ಯೆ ಇದೆ ಈ ದೇಶದಲ್ಲಿರುವ ಪಾರ್ಲಿಮೆಂಟ್, ಸರ್ಕಾರಗಳು ಹಾಗೂ 130 ಕೋಟಿ ಜನರಿಗೆ ಅವಮಾನ ಮಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಉಪಮುಖ್ಯಮಂತ್ರಿಯವರೇ, ತಾವು ಹೇಳಿದ್ದು ನಿಜ. ನಾವು West Minister Parliamentary System ಅನ್ನು practice ಮಾಡುತ್ತಿದ್ದೇವೆ. ಅದು ಅವಮಾನವೇ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಬ್ರಿಟಿಷ್ ಸರ್ಕಾರ ಎಂದರೆ ನಾವಿಲ್ಲಿ ಇರುವುದಕ್ಕಾಗುವುದಿಲ್ಲ.

(ಗೊಂದಲ)

**ಶ್ರೀ ಬಿ.ಕೆ. ಹರಿಪ್ರಸಾದ್:–** ಅವರು ಹೇಳಿರುವುದು ಬ್ರಿಟಿಷ್ ಸರ್ಕಾರ ಇದೆಯೆಂದು ಹೇಳಿದ್ದಾರೆ. ಅದರಲ್ಲಿ ತಪ್ಪೇನಿಲ್ಲ.

(ಗೊಂದಲ)

**ಶ್ರೀ ಬಿ.ಸಿ. ಪಾಟೀಲ್:–** ನೀವು 2019ರ ಪ್ರಣಾಳಿಕೆಯಲ್ಲಿ . . . ಈಗ ಬ್ರಿಟಿಷ್ ಸರ್ಕಾರ, ಆಗ ಇರಲಿಲ್ಲವೇ? ಎಲ್ಲಾದರೂ ಇರಿ ಕನ್ನಡಿಗರಾಗಿರಲಿ.

(ಗೊಂದಲ)

**ಶ್ರೀ ಎನ್. ರವಿಕುಮಾರ್:–** ಬ್ರಿಟಿಷ್ ಸರ್ಕಾರ ಎನ್ನುವುದನ್ನು ಕಡತದಿಂದ ತೆಗೆದು ಹಾಕಬೇಕು. ಸರ್ವಾಧಿಕಾರವನ್ನು ಈ ದೇಶದಲ್ಲಿ ಹೇರಿದಂತಹವರು ಇವರು. ಚುನಾಯಿತ ಸರ್ಕಾರವನ್ನು ಈ ರೀತಿ ಅಪಮಾನ ಮಾಡುವುದು ಸರಿಯಲ್ಲ ಅದನ್ನು ಕಡತದಿಂದ ತೆಗೆಯಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

(ಗೊಂದಲ)

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ ಕಾಂಗ್ರೆಸ್ ಪರಿಸ್ಥಿತಿ ಏನೆಂದು ಗೊತ್ತಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಈ ದೇಶದ ಪ್ರಧಾನಮಂತ್ರಿಯವರು ಅಮೆರಿಕಾದಲ್ಲಿ 'ನಮಸ್ತೆ ಟ್ರಂಪ್' ಅನ್ನುತ್ತಾರೆ ಅದು ಅವಮಾನವಲ್ಲವೇ?

(ಗೊಂದಲ)

**ಶ್ರೀ ವೈ.ಎ. ನಾರಾಯಣಸ್ವಾಮಿ:–** ನಾವು ಸಂವಿಧಾನವನ್ನು ಅನುಸರಿಸುತ್ತಿದ್ದೇವೆ. East Minister ಇಲ್ಲ ಮತ್ತು West Minister ಇಲ್ಲ. We are following only the Constitution of India given by Dr. Ambedkar.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಎನ್. ರವಿಕುಮಾರ್:–** ಇದು parliamentary system ಗೆ ಅವಮಾನ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, I will intervene. ಈಗ ಮಾನ್ಯ ಮರಿತಿಬ್ಬೇಗೌಡರು ಹೇಳಿರುವುದು . . .

**ಸಭಾಪತಿಯವರು:– ಅದು unparliamentary ಆದರೆ ಕಡತದಿಂದ ತೆಗೆಯಿರಿ.**

(ಗೊಂದಲ)

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಈ ದೇಶದಲ್ಲಿ ಸಂವಿಧಾನ supreme.

**ಶ್ರೀ ಎಸ್.ಆರ್. ಪಾಟೀಲ್:–** ಅದು ಚುನಾಯಿತ ಸರ್ಕಾರಕ್ಕೆ ಅವಮಾನ ಮಾಡಬೇಕೆನ್ನುವಂತಹ...

(ಗೊಂದಲ)

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಇಲ್ಲಿ South Minister ಇಲ್ಲ, North Minister ಇಲ್ಲ. ಇಲ್ಲಿ ಬರೀ ಸಂವಿಧಾನ ಇದೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಅನೇಕ ಸಂದರ್ಭಗಳಲ್ಲಿ ಇಂತಹ ಶಬ್ಧಗಳ ಪ್ರಯೋಗವಾದಾಗ ತಮಗೆ ನಾವು ದೂರು ಕೊಟ್ಟರೆ ಅದನ್ನು ಕಡತದಿಂದ ತೆಗೆದಂತಹ ಉದಾಹರಣೆ ಇದೆ. ಬ್ರಿಟಿಷ್ ಸರ್ಕಾರ ಎನ್ನುವುದು ಪ್ರಜಾಪ್ರಭುತ್ವಕ್ಕೆ ಗೌರವ ತರುವುದಲ್ಲ. ದಯವಿಟ್ಟು ಆ ಪದವನ್ನು ತೆಗೆದು ಹಾಕಬೇಕೆಂದು ನನ್ನ ವಿನಂತಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರೇಕೆ ಆ ಶಬ್ಧವನ್ನು ಬಳಕೆ ಮಾಡಿದ್ದಾರೆಂದರೆ, ಸದನ ಇದು. ಕಂಪನಿ ಸರ್ಕಾರ (ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಬ್ರಿಟಿಷ್ ಆಡಳಿತ ನಿಮ್ಮದು. ರಾತ್ರೋ ರಾತ್ರಿ ಎಲ್ಲಾ ತರುತ್ತಿದ್ದರು. ಬ್ರಿಟಿಷರಿಗಿಂತ ಕೀಳು ಆಡಳಿತವಿದು. ರಾತ್ರೋ ರಾತ್ರಿ ಸುಗ್ರೀವಾಜ್ಞೆ ತರುವುದು, ಪದೇ ಪದೇ ರೈತರ ಪ್ರಾಣವನ್ನು ಲೆಕ್ಕಿಸದೇ ಬ್ರಿಟಿಷ್ ಸರ್ಕಾರಕ್ಕಿಂತ ಕೀಳು ಸರ್ಕಾರ ಇದು.

(ಗೊಂದಲ)

**ಶ್ರೀ ಎಸ್.ಟಿ. ಸೋಮಶೇಖರ್(ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಇವತ್ತು ರೈತರಿಗೆ ಅನುಕೂಲವಾಗಲಿ ಎನ್ನುವ ಒಂದೇ ದೃಷ್ಟಿಯಿಂದ ಇದನ್ನು ಪ್ರಧಾನಮಂತ್ರಿಯವರು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ತಂದಿರುವುದಾಗಿದೆ. ಅದನ್ನು ಬಿಟ್ಟು appreciate ಮಾಡಬೇಕಾದಂತಹ ಮಾನ್ಯ ಮರಿತಿಬ್ಬೇಗೌಡರು ಈ ರೀತಿ ಮಾತನಾಡಿದರೆ ಏನಾಗುತ್ತದೆ?

**ಶ್ರೀ ಆರ್.ಬಿ. ತಿಮ್ಮಾಪೂರ:-** ರೈತ ವಿರೋಧಿ ಕಾನೂನನ್ನು ಯಾರು ಪ್ರಶಂಸೆ ಮಾಡುತ್ತಾರೆ?

**ಶ್ರೀ ನಸೀರ್ ಅಹಮದ್:-** ಇಡೀ ರಾಷ್ಟ್ರದಲ್ಲಿ ರೈತರು ಗಲಾಟೆ ಮಾಡುತ್ತಿದ್ದಾರೆ.

(ಗೊಂದಲ)

**ಡಾ: ತೇಜಸ್ವಿನಿಗೌಡ:-** ನಾವು ಭಾರತೀಯರು. I am an Indian citizen. ಬ್ರಿಟಿಷ್ ಸರ್ಕಾರ ಎಂದರೆ . . . ಸಾಧ್ಯವಿಲ್ಲ.

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮಹಾರಾಷ್ಟ್ರ, ಪಂಜಾಬ್ ಗಳಲ್ಲಿ ಏನಾಗುತ್ತಿದೆ ಎಂಬುದು ಗೊತ್ತಿದೆಯೇ?. . . ಕರ್ನಾಟಕದ ರೈತರಿಗೆ ಅನುಕೂಲವಾಗುತ್ತದೆಯೇ ಇಲ್ಲವೇ ಎಂಬುದನ್ನು ನಿಮ್ಮ ಆತ್ಮ ಮುಟ್ಟಿ ಹೇಳಿ.

(ಗೊಂದಲ)

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1056) 09-12-2020/ 04-50/ ಕೆಹೆಚ್-ಎಕೆ

**(ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಮ್ಮ ಕೇಂದ್ರ ಸರ್ಕಾರ... **(ಗೊಂದಲ)** ... ತಮ್ಮನ್ನೆಲ್ಲಾ ಹೊಗಳಿ ಹೊಗಳಿ ಹಾಳು ಮಾಡಿದೆ. ಅದೆಲ್ಲಾ ಹಾಳಾಗಲಿ.

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಆರ್.ಬಿ.ತಿಮ್ಮಾಪೂರರವರೇ ಒಂದು ನಿಮಿಷ. ಮಲ್ಟಿ-ನ್ಯಾಷನಲ್ ಕಂಪನಿಯ ಬಗ್ಗೆ ಹೇಳುತ್ತಾರೆ. ಹಿಂದಿನ ಸರ್ಕಾರ ಎಷ್ಟು ಮಲ್ಟಿ-ನ್ಯಾಷನಲ್ ಕಂಪನಿಗೆ ಲೈಸೆನ್ಸ್ ಕೊಟ್ಟಿದೆ? ಜೆಡಿ(ಎಸ್) ಸರ್ಕಾರ ಆಡಳಿತದಲ್ಲಿದ್ದಾಗ ಮಲ್ಟಿ-ನ್ಯಾಷನಲ್ ಕಂಪನಿಗೆ ಲೈಸೆನ್ಸ್ ಕೊಟ್ಟಿದೆ. ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು . . .

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಚಿವರೇ, . . .

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಎಲ್ಲರೂ ಮಲ್ಟಿ-ನ್ಯಾಷನಲ್ ಕಂಪನಿಗೆ ಲೈಸೆನ್ಸ್ ಅನ್ನು ಕೊಟ್ಟಿದ್ದಾರೆ. ಆದರೆ ಯಾವುದೂ ಏನು ತೊಂದರೆ ಆಗಲಿಲ್ಲ. ಇವತ್ತಿನ ದಿವಸ ಟೊಮೋಟೋ ಮತ್ತು ತರಕಾರಿಗಳಿಗೆ ರಿಲಯನ್ಸ್ ಲೆಸೆನ್ಸ್ ಅನ್ನು ಕೊಟ್ಟರು. ಎ.ಪಿ.ಎಂ.ಸಿ., 200 ರೂಪಾಯಿ ಹಾಕುತ್ತಾರೆ ಎಂದು ಹೇಳಿದರು.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಚಿವರೇ, ಅವರು ಹೇಳಿರುವುದಕ್ಕೆ ಉತ್ತರ ಕೊಟ್ಟಿದ್ದಾರೆ.

**Sri NASEER AHMED:** Online marketing ಮಾಡಿದ್ದೀರಾ?

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ನಾವು ಎಲ್ಲಾ ಮಾಡಿದ್ದೇವೆ. ರೈತರಿಗೆ ಆನ್‌ಲೈನ್ ವ್ಯವಸ್ಥೆ ಮಾಡಿದ್ದೇವೆ. ರೈತರಿಗೆ ಎಲ್ಲಾ ರೀತಿಯಲ್ಲೂ ಅನುಕೂಲ ಮಾಡಬೇಕು. ರೈತರಿಗೆ ಎಲ್ಲಾ ರೀತಿಯಲ್ಲೂ ಉಚಿತ ಸೇವೆಯನ್ನು ಕೊಡಬೇಕು. ಅದನ್ನೆಲ್ಲವನ್ನೂ ಮಾಡಿದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು co-operative movement ನಿಂದ ಬಂದಿರುವವರು. ಈಗ ಎಲ್ಲರ ಜೊತೆ ಸಹಕಾರ ಕೊಡುತ್ತೀರಾ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಅಲ್ಲಂ ವೀರಭದ್ರಪ್ಪನವರೇ, ತಮಗೆ ಮಾತನಾಡುವುದಕ್ಕೆ ಕಷ್ಟವಾದರೆ ನಂತರ ಮಾತನಾಡಿ.

**ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯರೇ, ಅವರು ಏನು ಎ.ಪಿ.ಎಂ.ಸಿ. ವಿಧೇಯಕಕ್ಕೆ ತಿದ್ದುಪಡಿಯನ್ನು ತಂದಿದ್ದಾರೆ. ತಾವು ಬಹಳ ಆಲೋಚನೆ ಮಾಡಿ, ಮತ್ತೊಮ್ಮೆ ರೈತರ ಜೊತೆಯಲ್ಲಿ ಚರ್ಚೆ ಮಾಡಿ, ಇದಕ್ಕೆ ಏನಾದರೂ ತೀರ್ಮಾನ ಮಾಡಬೇಕು. ಈಗಾಗಲೇ ನಮ್ಮ ಗೌರವಾನ್ವಿತ ಸದಸ್ಯರು ಬಹಳಷ್ಟು ವಿಷಯಗಳನ್ನು ಹೇಳಿದ್ದಾರೆ. ಇವತ್ತಿನ ದಿವಸ ಈಗಾಗಲೇ ಮಾನ್ಯ ಉಪ ಮುಖ್ಯಮಂತ್ರಿಯವರು ತಮ್ಮ ಭಾಗದಲ್ಲಿ ರೈತರನ್ನು ವ್ಯಾಪಾರಿಗಳು ಯಾವ ರೀತಿ ನೋಡುತ್ತಿದ್ದರು ಎನ್ನುವ ಬಗ್ಗೆ ಒಂದು ಉದಾಹರಣೆಯನ್ನು ಕೊಟ್ಟಿದ್ದಾರೆ. ಮುಂದೆ ಈ ರೀತಿ ಏಕೆ ಆಗಬಾರದು, ಆಗಬಹುದು ಎಂಬುದರ ಬಗ್ಗೆ ನಾವು ಏಕೆ ಆಲೋಚನೆ ಮಾಡಬಾರದು? ನಾವು ಎ.ಪಿ.ಎಂ.ಸಿ. ಇಲ್ಲವೆಂದ ಮೇಲೆ ಒಬ್ಬ ವ್ಯಾಪಾರಿ ತನ್ನ ಲಾಭಕ್ಕೆ ಕೆಲಸ ಮಾಡುತ್ತಾನೆಯೇ ಹೊರತು, ರೈತರ ಬಗ್ಗೆ ಆಲೋಚನೆ ಮಾಡುವುದಿಲ್ಲ. ಈ ಹಿನ್ನೆಲೆಯಲ್ಲಿಯೇ ನಾವು ಎ.ಪಿ.ಎಂ.ಸಿ. ಕಾಯ್ದೆಯನ್ನು ತಂದಿದ್ದು, ಈ ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ರೈತರನ್ನು ತಂದಿರುವುದು. ಇವತ್ತಿನ ದಿವಸ ತಮಗೆಲ್ಲಾ ಗೊತ್ತಿದೆ. ಇವತ್ತಿನ ದಿವಸ ಯಾವಾಗಲೂ ಮಾರುಕಟ್ಟೆಯಲ್ಲಿ ಯಾವುದೇ ಬೆಳೆ, ಯಾವುದೇ ತರಕಾರಿಗಳು ಇದ್ದರೂ ಕೂಡ fluctuations ಆಗುತ್ತಿರುವಂತಹ ಬಹಳಷ್ಟು ಸಂದರ್ಭಗಳು ಪ್ರತಿ ವರ್ಷ ನಮ್ಮ ರಾಜ್ಯದಲ್ಲಿ ಮತ್ತು ನಮ್ಮ ದೇಶದಲ್ಲಿ ಇದೆ. ರೈತರು ಎ.ಪಿ.ಎಂ.ಸಿ. ಕಾಯ್ದೆ ಬಂದಾಗ, ಆತನಿಗೆ ಸರಿಯಾದ ಬೆಲೆ ಸಿಗದಿದ್ದಾಗ, ಆತ ಬೆಳೆಗಳನ್ನು ಮಾರುವುದಿಲ್ಲ. ಮರು ದಿವಸ ಮತ್ತೆ ಎಲ್ಲಾ ಮುಖ್ಯಸ್ಥರನ್ನು, ಎಲ್ಲಾ ಪಕ್ಷದ ರೈತ ಮುಖಂಡರುಗಳನ್ನು ಕಂಡು, ನಮಗೆ ಒಳ್ಳೆಯ ಬೆಲೆ ಸಿಗಬೇಕೆಂದಾಗ ನಾವು ಸರ್ಕಾರದ ಮೊರೆ ಹೋಗುತ್ತೇವೆ. ಸರ್ಕಾರ ಇದಕ್ಕೆ Minimum Support Price (MSP) ಅನ್ನು ಕೊಡುತ್ತದೆ. ಇದನ್ನು ಮೊದಲೇ ಮಾಡುವುದಿಲ್ಲ. ಯಾವಾಗ ಮಾಡುತ್ತದೆ ಎಂದರೆ, ರೈತರು ಗೊಂದಲ, ಮುಷ್ಕರ . . .

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಒಂದೇ ಒಂದು ವಿಚಾರದ ಬಗ್ಗೆ ಮಾತ್ರ ಮಾತನಾಡುತ್ತೇನೆ. ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಹಿರಿಯ ಸದಸ್ಯರಾದ ಅಲ್ಲಂ ವೀರಭದ್ರಪ್ಪರವರು ಹೇಳಿದ ಹಾಗೆ ಇವತ್ತಿನ ದಿವಸ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ವಿಧೇಯಕದಲ್ಲಿ ತರುತ್ತಿರುವಂತಹದ್ದರಲ್ಲಿ ಬೆಂಬಲ ಬೆಲೆಯನ್ನು ನಿಗದಿ ಮಾಡುವಂತಹ ಅಧಿಕಾರ ಮಲ್ಟಿ–ನ್ಯಾಷನಲ್ ಕಂಪನಿಗೆ ಹೋಗುತ್ತದೆ. ಮಲ್ಟಿ–ನ್ಯಾಷನಲ್ ಕಂಪನಿಯವರು ಏನು ಬೆಂಬಲ ಬೆಲೆಯನ್ನು ಹೇಳುತ್ತದೆಯೋ, ಅದನ್ನು ಸರ್ಕಾರ ಮಾಡಬೇಕಾದಂತಹ ದಿನ ಬರುತ್ತದೆ. ದಯಮಾಡಿ, ಈ ವಿಚಾರವನ್ನು ತಾವು ಗಮನಿಸಬೇಕು.

**ಶ್ರೀ ಅಲ್ಲಂ ವೀರಭದ್ರಪ್ಪ:–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ರೈತರು, ಎಲ್ಲಾ ಮುಖಂಡರುಗಳು ಸರ್ಕಾರದ ಮುಂದೆ ಹೋದಾಗ ಮಾತ್ರ Minimum Support Price ಅನ್ನು ಕೊಡುತ್ತಾರೆ. ಇವತ್ತಿನ ದಿವಸ ಗುಲ್ಬರ್ಗಾದಲ್ಲಿ ತೋಟಗಾರಿಕಾ ಬೆಳೆಗೆ Minimum Support Price ಇಲ್ಲದಾಗ Minimum Support Price ಅನ್ನು ಕೊಡಬೇಕೆಂದು ಅಲ್ಲಿಯೇ ಒಂದು ಕಾರ್ಪೊರೇಷನ್ ಅನ್ನು ಮಾಡಿದ್ದಾರೆ. ಇವತ್ತಿನ ದಿವಸ Cotton Corporation of India ಎಲ್ಲಾ ಜಿಲ್ಲೆಗಳಲ್ಲಿ ಮತ್ತು ತಾಲ್ಲೂಕುಗಳಲ್ಲಿ ಇವೆ. ಇವತ್ತು ರೈತರಿಗೆ ಬೆಲೆ ಸಿಗದಿದ್ದಾಗ Cotton Corporation of India ದಲ್ಲಿ ಭಾಗವಹಿಸುತ್ತಾರೆ. ರೈತರು ಬೆಳೆದಂತಹ ಹತ್ತಿಗೆ ಒಳ್ಳೆಯ ಬೆಲೆ ಸಿಗುತ್ತದೆ. ಇದೇ ರೀತಿ ಮೆಣಸಿನಕಾಯಿಯೂ ಕೂಡ ಮಾಡಬೇಕೆಂದು ಕೇಳುತ್ತಿದ್ದೇವೆ. ರೈತರು ಬೆಳೆದಂತಹ ಬೇರೆ ಬೇರೆ ಬೆಳೆಗಳಿಗೂ ಕೂಡ ಈ ರೀತಿಯ ಸರ್ಕಾರದಿಂದ ಒಂದು ಕಾರ್ಪೋರೇಷನ್ ಮಾಡಬೇಕೆಂದು ಹೇಳುತ್ತಿದ್ದೇವೆ. ಇವತ್ತಿನ ದಿವಸ ಭತ್ತ ಬೆಳೆ ಬೆಳೆದಾಗ ಇವತ್ತಿನವರೆಗೆ ಸರ್ಕಾರ ಮುಂದೆ ಬಂದಿಲ್ಲ. ಯಾವುದೇ Minimum Support Price ಅನ್ನು ಕೊಟ್ಟಿಲ್ಲ. ಇದರ ಬಗ್ಗೆ ಇವತ್ತಿನ ದಿವಸ ಕೆಳಮನೆಯಲ್ಲಿಯೂ ಕೂಡ ಬಹಳ ಚರ್ಚೆಯಾಗಿದೆ. 500 ರೂಪಾಯಿಗಳಿಗಿಂತ ಜಾಸ್ತಿ Minimum Support Price ಅನ್ನು ಕೊಟ್ಟು, ರೈತರನ್ನು ಬದುಕಿಸಬೇಕೆಂಬ ಕೂಗು ಆ ಮನೆಯಲ್ಲಿಯೂ ಕೂಡ ಇದೆ. ಇದರ ಬಗ್ಗೆ ಇಲ್ಲಿಯೂ ಕೂಡ ಹೇಳುತ್ತಿದ್ದೇವೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರಾದ ಮರಿತಿಬ್ಬೇಗೌಡರವರು ಸಭಾಪೀಠವನ್ನು ಅಲಂಕರಿಸಿದರು)**

ಇವತ್ತಿನವರೆಗೂ ರೈತನ ಬೆಳೆಗಳನ್ನು ಖರೀದಿ ಮಾಡುವಂತಹ ವ್ಯವಸ್ಥೆ ಮತ್ತು ಭತ್ತ ಖರೀದಿ ಮಾಡುವಂತಹ ವ್ಯವಸ್ಥೆಯನ್ನು ಇನ್ನು ಸರ್ಕಾರ ಮಾಡಿರುವುದಿಲ್ಲ. ಈ ಸಮಯದಲ್ಲಿ ಇದನ್ನು ತಾವು ಮಾಡಬೇಕೆಂದು ಈ ಮೂಲಕ ಹೇಳುತ್ತಿದ್ದೇನೆ. ಇವತ್ತಿನ ದಿವಸ ಈಗಾಗಲೇ ರೈತ ಬೆಳೆದಂತಹ ಬೆಳೆಗೆ ಒಳ್ಳೆಯ ಬೆಲೆ ಸಿಗುತ್ತದೆ ಎಂದು ತಾವು ಹೇಳುತ್ತೀರಿಯೇ ಹೊರತು ರೈತರು ಬೆಳೆದಿರುವಂತಹ ಯಾವುದೇ ತರಕಾರಿಗಳು ಮತ್ತು ಯಾವುದೇ ಬೆಳೆಗಳು ಇರಬಹುದು. ಅದನ್ನು ಕೋಲ್ಡ್ ಸ್ಟೋರೇಜ್‌ನಲ್ಲಿಟ್ಟು ಒಳ್ಳೆಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಲೆ ಬಂದಾಗ ಮಾರಾಟ ಮಾಡುವಂತಹ ವ್ಯವಸ್ಥೆಯನ್ನು ತಾವು ಇನ್ನು ಮಾಡಿರುವುದಿಲ್ಲ. ಉದಾಹರಣೆಗೆ, ನಾನು grains ಬಗ್ಗೆ ಹೇಳುವುದಿಲ್ಲ. ತೋಟಗಾರಿಕೆ ವ್ಯವಸ್ಥೆಯಲ್ಲಿ ಅವುಗಳು perishable ಆಗುತ್ತದೆ ಎಂದು ಅನಿಸುತ್ತದೆ. ಇವತ್ತಿನ ದಿವಸ ನಿಂಬೆಹಣ್ಣು ಇರಬಹುದು, ಕಾಯಿಪಲ್ಯ ಇರಬಹುದು, ರೈತರು ಎಲ್ಲ ತರುತ್ತಾರೆ. ನಮ್ಮ ಬಳ್ಳಾರಿಯಂತಹ ಬಿಸಿಲಿನಲ್ಲಿ ಎರಡೇ ದಿವಸಕ್ಕೆ ಅದು ಹಾಳಾಗುತ್ತದೆ. ಅಲ್ಲಿ ರೈತ ಕಷ್ಟಪಟ್ಟು ಬೆಳೆದಂತಹ ಬೆಳೆಗಳನ್ನು ಮಾರುಕಟ್ಟೆಗೆ ತರುವುದರೊಳಗೆ ಶೇಕಡಾ 30 ರಷ್ಟು ಬೆಳೆ ನಾಶವಾಗಿರುತ್ತದೆ. ರೈತನು ಮಾರುಕಟ್ಟೆಗೆ ಬಂದಾಗ ಅಲ್ಲಿ ಯಾವುದೇ ರೀತಿಯ ವ್ಯವಸ್ಥೆ ಇಲ್ಲದೇ ಆ ಬಿಸಿಲಿಗೆ ಎಲ್ಲಾ ಕೊಳೆತು ಹೋಗಿ, ಒಟ್ಟಾರೆಯಾಗಿ ಆತ ಶೇಕಡಾ 25 ರಿಂದ 30 ರಷ್ಟು ಮಾರಾಟ ಮಾಡುತ್ತಾನೆ. ಇದರ ಬಗ್ಗೆ ಈಗಿನ ಸರ್ಕಾರ ಆಲೋಚನೆ ಮಾಡಿಲ್ಲ. ಇವತ್ತಿನ ದಿವಸ ತಾವು ಆ ಕಡೆಗೆ ಬನ್ನಿ. ಸೋಲಾರ್ ಸಿಸ್ಟಂನಿಂದ 30 ಕೆಜಿ ಯಿಂದ 100 ಕೆಜಿ ಸಾಮರ್ಥ್ಯ ಇರುವಂತಹ ಕೋಲ್ಡ್ ಸ್ಟೋರೇಜ್ ಮಾಡಿದರೆ, ಅದರಲ್ಲಿ ಆ ರೈತ ತನ್ನೆಲ್ಲಾ ಬೆಳೆಗಳನ್ನು ಇಟ್ಟುಕೊಂಡು, ಆ ರೈತ ಏನು ಬೆಳೆಗಳನ್ನು ಬೆಳೆದಿರುತ್ತಾನೆ. ಅದನ್ನು ಮಾರಾಟ ಮಾಡಿದರೆ, ಆತನಿಗೂ ಲಾಭ ಸಿಗುತ್ತದೆ. ಆ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಈ ರೀತಿಯಲ್ಲಿ modified thinking ಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಕೊಡುತ್ತೇನೆ. ಇವತ್ತಿನ ದಿವಸ ಈ ರೀತಿಯ ವ್ಯವಸ್ಥೆಯನ್ನು ರೈತರಿಗೆ ಕೊಡದೇ ಇದ್ದರೆ, ಬಹಳಷ್ಟು ರೈತರಿಗೆ ಅನ್ಯಾಯವಾಗುತ್ತದೆ. ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಈಗಾಗಲೇ ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರು ಹೇಳಿದರು, ತಾವು ಏಕೆ ಈ ರೀತಿಯ ವ್ಯವಸ್ಥೆಯನ್ನು ಮಾಡುತ್ತಿದ್ದೀರಿ ಎಂದರೆ, ರೈತನ ಹತ್ತಿರ ಹಣ ಇರುವುದಿಲ್ಲ. ತಾನು ಬೆಳೆಗಳನ್ನು ಬೆಳೆಯಬಹುದು. ಆ ಬೆಳೆಗಳನ್ನು ಮಾರುಕಟ್ಟೆಗೆ ತಂದು transport charges ಅನ್ನು ಕೊಡದಿದ್ದ ಹಾಗೆ, ಒಂದೆರಡು ದಿವಸ ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ಇಡುವಂತಹ ಶಕ್ತಿ ಕೂಡ ಆತನಲ್ಲಿ ಇರುವುದಿಲ್ಲ. ಅದಕ್ಕೆ ನಾವು ಅಲ್ಲಿಯೇ ಕೊಂಡುಕೊಳ್ಳುತ್ತೇವೆ ಎಂದು ಹೇಳುತ್ತೇವೆ. ಇವತ್ತಿನ ದಿವಸ ಏನಾಗಿದೆ ಎಂದರೆ, ಬಹಳಷ್ಟು ದಲ್ಲಾಳಿಗಳು, ಅಲ್ಲಿಯೇ ಕೊಂಡು ಕೊಂಡು ಎಲ್ಲವನ್ನೂ ವ್ಯಾಪಾರ ಮಾಡಿ, ಇವತ್ತಿನ ದಿವಸ ಬಹಳಷ್ಟು ಜಾಗದಲ್ಲಿ ಕೋಟಿಗಟ್ಟಲೆ ಹಣವನ್ನು ಹಾಳು ಮಾಡಿಕೊಂಡು ಊರು ಬಿಟ್ಟು ಹೋಗಿಬಿಟ್ಟಿದ್ದಾರೆ. ನಮ್ಮ ಜಾಗದಲ್ಲಿ, ನಮ್ಮ ಏರಿಯಾದಲ್ಲಿ 10 ಜನರು 20 ಕೋಟಿ ರೂಪಾಯಿಗಳನ್ನು ರೈತರಿಗೆ ಕೊಡಬೇಕಾಗಿರುವುದನ್ನು ಕೊಂಡು ಕೊಂಡು ಮಾರಾಟ ಮಾಡಿ, ಊರು ಬಿಟ್ಟು ಹೋಗಿದ್ದಾರೆ. ಇದರಿಂದ ಅವನು ಈ ರೀತಿ ಕೊಟ್ಟರೆ ರೈತರ ಸಾವು ಆಗುತ್ತದೆ? ಅವನಿಗೆ ಸುಲಭ ರೀತಿಯಲ್ಲಿ ಯಾವುದೂ ಮಾರುತ್ತಾನೋ ಹಾಗೆಯೇ ಕೊಟ್ಟುಬಿಡುತ್ತಾನೆ. ನಾನು ಇಲ್ಲಿಗೆ ಬಂದು ತೆಗೆದುಕೊಳ್ಳುತ್ತೇನೆ ಎಂದಾಗ ಆ ರೈತನಿಗೆ ಖುಷಿಯಾಗಿ ಬಿಡುತ್ತದೆ. ನಾನು ಬಳ್ಳಾರಿಗೆ ಹೋಗುವ ಆಗಿಲ್ಲ. ತಾನು ಬೆಳೆದ ಬೆಳೆಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಂಡು ಎ.ಪಿ.ಎಂ.ಸಿ. ಗೆ ಹೋಗುವ ಆಗಿಲ್ಲ. 3 ದಿವಸಗಳ ಕಾಲ ತಡೆಯುವ ಆಗಿಲ್ಲ. ಇದಕ್ಕೆ ಬಿಲ್ಲು ಮಾಡಿ, ಇಲ್ಲಿಯೇ ಕೊಡುತ್ತಾರೆ ಎಂದು ಯೋಚನೆ ಮಾಡುತ್ತಾನೆ. ಈ ರೀತಿಯಾಗಬಾರದೆನ್ನುವ ಚಿಂತನೆಯಿಂದ ಎ.ಪಿ.ಎಂ.ಸಿ. ಯಾರ್ಡ್ ಇರಬೇಕಾಗುತ್ತದೆ. ಎ.ಪಿ.ಎಂ.ಸಿ. ಯಾರ್ಡ್ ಇದ್ದರೆ ಮಾತ್ರ ರೈತರು ಬರುತ್ತಾರೆ. ಇವತ್ತಿನ ದಿವಸ ದೊಡ್ಡ ದೊಡ್ಡ ಕಂಪನಿಗಳೇ ಕೊಡದಿದ್ದರೆ ನಷ್ಟವಾಗುತ್ತದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದರು. ಇವತ್ತಿನ ದಿವಸ 2 ಕೆಜಿ ಒಂದು ಕ್ವಿಂಟಾಲ್‌ಗೆ ಮಾಡಿದರೆ ಎಷ್ಟೋ ನಷ್ಟವಾಗುತ್ತದೆ. ಯಾವ ರೀತಿ electronic weighing machine ಅವರ ಹತ್ತಿರ ಇರುತ್ತದೋ, ಇಲ್ಲವೋ, ಅವರು ಹೇಗೆ ತೂಕ ಮಾಡುತ್ತಾರೋ ಎಂಬುದು ನಮಗೆ ಗೊತ್ತಿಲ್ಲ. ಯಾವ ರೀತಿ ಪಟ್ಟಿ ಬರೆಯುತ್ತಾರೆ ಎಂಬುದು ನಮಗೆ ಗೊತ್ತಿಲ್ಲ. It is really going to be difficult to the farmers. ಆ ಹಿನ್ನೆಲೆಯಲ್ಲಿ ಇದರ ಬಗ್ಗೆ ತಾವು ಮತ್ತೊಂದು ಬಾರಿ ಆಲೋಚನೆ ಮಾಡಬೇಕು. ಹಿಂದಿನ ಸರ್ಕಾರಗಳು ಇದೆಲ್ಲಾ ಅಂಶಗಳನ್ನು ಅರಿತುಕೊಂಡು ಎ.ಪಿ.ಎಂ.ಸಿ.ಗಳನ್ನು ತಂದಿರುವುದು. ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ಕಳ್ಳತನ ಇರುವುದಿಲ್ಲ. ಅಲ್ಲಿ ಒಳ್ಳೆಯ ಬೆಲೆ ಸಿಗದಿದ್ದರೆ, ನಾವು ಇಷ್ಟು ಮಾತನಾಡುವ ಬದಲು Minimum Support Price ಇದರಲ್ಲಿ ಬಹಳ ಮುಖ್ಯವಾದ ವಿಷಯವಾಗಿದೆ. ಎ.ಪಿ.ಎಂ.ಸಿ. ಬಗ್ಗೆ ಮಾತನಾಡುವ ಕಾಲಕ್ಕೆ ನಾವು Minimum Support Price ಅನ್ನು ಕೊಡಬೇಕು. ಮಾನ್ಯ ಎಸ್.ಎಂ.ಕೃಷ್ಣರವರು ಕಾಂಗ್ರೆಸ್ ಪಕ್ಷದಲ್ಲಿ ಇದ್ದಾಗ ಆಲೂಗಡ್ಡೆ ಮತ್ತು ಈರುಳ್ಳಿಗೆ ಬೆಲೆ ಕಡಿಮೆಯಾದಾಗ ಆವತ್ತು ನಾವಿದ್ದೇವೆ ಎಂದು ಹೇಳಿ 10 ಕೋಟಿ ರೂಪಾಯಿಗಳನ್ನು ಇದಕ್ಕೋಸ್ಕರ ಇಟ್ಟಿದ್ದರು. Minimum Support Price ಅನ್ನು ಮಾಡಿದ್ದೆವು. ಆಗ ನಾವು ರೈತರನ್ನು ಉಳಿಸಿದ್ದೆವು. ತೆಂಗಿನಕಾಯಿಗೆ ರೋಗಗಳು ಬಂದಾಗ we went one step further by giving them free medicines and pesticides. ಈ ರೀತಿ ಸರ್ಕಾರಗಳು ರೈತರನ್ನು ಉಳಿಸುವುದಕ್ಕೆ ಚಿಂತನೆ ಮಾಡಬೇಕೇ ಹೊರತು, ಇವತ್ತು ಯಾರೋ ಒಬ್ಬ wholesaler ಗೆ ಬೆಳೆಗಳನ್ನು ಕೊಟ್ಟು, ಅವನಿಂದ ಮತ್ತೆ ತೆಗೆದುಕೊಳ್ಳಬೇಕು. ಆತ ಕೊಡುವುದಿಲ್ಲವೆಂದರೆ ನಾವು ಜಿಲ್ಲಾಧಿಕಾರಿಯವರ ಹತ್ತಿರ ಹೋಗಬೇಕು. ಆ ರೈತ ಬಡವ ಎಂಬುದು ತಮಗೆ ಗೊತ್ತಿದೆ. ಮೂರನೇ ದಿವಸಕ್ಕೆ ಅವನಿಗೆ ಹಣ ಸಿಗದೇ ಇದ್ದರೆ, ಬಹಳ ಕಷ್ಟವಾದಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈ ವ್ಯವಸ್ಥೆಯಲ್ಲಿ ಏನಿದೆ ಎಂದರೆ, ಅಲ್ಲಿಗೆ ಹೋಗಬೇಕು, ಇಲ್ಲಿಗೆ ಹೋಗಬೇಕು. ಇದಕ್ಕೆ ಏನಾದರೂ ಒಂದು Special Officer ಅನ್ನು ನೇಮಕ ಮಾಡಿ. ತಾವು ನಿಜವಾಗಿಯೂ ಮಾಡಬೇಕೆಂದರೆ, the government should appoint a Special

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Officer who can take complaints. ರೈತ ದೂರನ್ನು ಕೊಟ್ಟ ಮೇಲೆ, ಎರಡು ದಿವಸದೊಳಗೆ ವಿಚಾರಣೆ ಮಾಡುವಂತಹ ಒಂದು power ಕೊಟ್ಟರೆ, ರೈತ ಬದುಕಿಕೊಳ್ಳುತ್ತಾರೆಯೇ ಹೊರತು, ತಾವು ತಿಂಗಳು ಕಾಲ ತೆಗೆದುಕೊಂಡರೆ, ರೈತ ಬದುಕುವುದಕ್ಕೆ ಆಗುವುದಿಲ್ಲ. ಸರಿಯಾದ ರೀತಿಯಲ್ಲಿ ಪರಿಹಾರ ಕೂಡ ಸಿಗುವುದಿಲ್ಲ. ದಯವಿಟ್ಟು, ಇದರ ಬಗ್ಗೆ ಆಲೋಚನೆ ಮಾಡಿ. Minimum Support Price ಕೊಟ್ಟು ನಮ್ಮ ಭಾಗದ ರೈತರನ್ನು ಉಳಿಸುವುದಕ್ಕೆ ಯಾವ ರೀತಿಯಲ್ಲಿ ತಾವು ಆಲೋಚನೆ ಮಾಡುತ್ತೀರಿ ಎನ್ನುವ ಬಗ್ಗೆ ಹೇಳಬೇಕೆಂದು ತಿಳಿಸಿ, ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

(ಮುಂದು)

**(1057) 5:00 ಎಸ್‌ಪಿಆರ್/ವಿಕೆ 09/12/2020**

**(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಪ್ರಸ್ತುತ ಕಾಯ್ದೆಯ ಬಗ್ಗೆ ಬಹಳ ಸವಿಸ್ತಾರವಾದ ಚರ್ಚೆಯಾಗುತ್ತಿದೆ. ಯಾವುದೇ ಕಾಯ್ದೆಯನ್ನು ಕಾರ್ಯರೂಪಕ್ಕೆ ತರುವ ಮುನ್ನ ಅದರ ಬಗ್ಗೆ ಆರೋಗ್ಯಪೂರ್ಣವಾದ ಚರ್ಚೆಯಾದರೆ ಮಾತ್ರವೇ ಅದರಿಂದ ಮುಂದಿನ ದಿನಗಳಲ್ಲಿ ರಾಜ್ಯದ ಸರ್ವತೋಮುಖ ಅಭಿವೃದ್ಧಿ ಹಾಗೂ ನಾಡಿನ ಜನರ ಹಿತಕ್ಕಾಗಿ ಸರಿಯಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ಚರ್ಚೆಯಾಗಲೇ ಬೇಕಾಗಿದೆ ಹಾಗೂ ಇದು ಚರ್ಚೆ ಮಾಡುವ ವಿಚಾರವೂ ಸಹ ಆಗಿದೆ. ಈ ಸಂದರ್ಭದಲ್ಲಿ ನನಗೆ ಜಾನಪದದ ಹಾಡೊಂದು ನೆನಪಿಗೆ ಬರುತ್ತಿದೆ. ಶ್ರೀ ಗೋವಿಂದ ಕಾರಜೋಳ ರವರು ಪ್ರಸ್ತುತ ಸದನದಲ್ಲಿದ್ದಾರೆ. ಅವರು ಒಂದು ರೀತಿಯಾಗಿ ಜಾನಪದ ಸಾಹಿತಿಗಳಾಗಿದ್ದಾರೆ. ನಮ್ಮ ನಾಡಿನಲ್ಲಿ ರೈತಾಪಿ ಬದುಕಿಗೆ ತೊಡಗಿಸಿಕೊಂಡ ರೈತ ಅದರಲ್ಲೂ ವಿಶೇಷವಾಗಿ ರೈತ ಮಹಿಳೆ ಬೆಳಗ್ಗೆ ಎದ್ದ ತಕ್ಷಣವೇ ದೇವರನ್ನು ಹಾಗೂ ಬೇರೆ ಯಾರನ್ನೂ ನೆನೆಯದೇ ಕೇವಲ ಭೂಮಿ ತಾಯಿಯನ್ನು ನೆನೆಯುತ್ತಾಳೆ. ಏಕೆಂದರೆ ಆ ಭೂಮಿ ತಾಯಿಯು ಎಲ್ಲರಿಗೂ ಅನ್ನವನ್ನು ಕೊಡುತ್ತಾಳೆ ಹಾಗೂ ಅವಳನ್ನು ನೆನೆದರೆ, ನಮ್ಮೆಲ್ಲರ ಸರ್ವತೋಮುಖ ಅಭಿವೃದ್ಧಿಯಾಗುತ್ತದೆ. **'ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ; ಎಳ್ಳು ಜೀರಿಗೆ ಬೆಳೆಯೋಳ ಭೂಮಿತಾಯಿನ ಎದ್ದೊಂದು ಘಳಿಗೆ ನೆನೆದೇನು'** ಎಂಬ ನಾಣ್ಣುಡಿ ಇದೆ. ಅದೇ ರೀತಿಯಾಗಿ ಇನ್ನು ಮುಂದಿನ ದಿನಗಳಲ್ಲಿ ಬೆಳಗ್ಗೆ ಎದ್ದ ತಕ್ಷಣವೇ ಯಾರನ್ನು ನೆನೆಯಬೇಕು ಎನ್ನುವ ವಿಚಾರದ ಬಗ್ಗೆಯೂ ಸಹ ನನಗೆ ಆಲೋಚನೆಯಾಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೈತ ಮಹಿಳೆಯು ತಾನು ಬೆಳಗ್ಗೆ ಎದ್ದ ತಕ್ಷಣ ಎಳ್ಳು, ಜೀರಿಗೆ ಬೆಳೆಯುವ ಭೂಮಿತಾಯಿಯನ್ನು ನೆನೆದರೆ, ಅವರ ಕುಟುಂಬ, ಮನೆತನಗಳಿಗೆ ಒಳ್ಳೆಯದಾಗುತ್ತದೆ ಮತ್ತು ನಾಡಿನ ಸರ್ವತೋಮುಖ ಅಭಿವೃದ್ಧಿಯಾಗುತ್ತದೆಂದು ಭಾವಿಸುತ್ತಾಳೆ. ಆದರೆ ಇವತ್ತಿನ ದಿವಸ ಈ ಕಾಯ್ದೆಯನ್ನು ಕಾರ್ಯರೂಪಕ್ಕೆ ತಂದರೆ, ನಾವು ನಮ್ಮ ಮನೆಯ ಹತ್ತಿರ ಬರುವ Corporate Company ಗಳನ್ನು ನೆನೆಯಬೇಕಾಗುತ್ತದೆ ಏಕೆಂದರೆ ಅವರು ನಮಗೆ ದರ ನೀಡಬೇಕೆಂದು ಬೇರೆ ರೀತಿಯಾಗಿ ನೆನೆಯಬೇಕಾಗುತ್ತದೆ. ಇವತ್ತಿನ ದಿವಸ ಆ ರೀತಿಯಾದ ಪರಿಸ್ಥಿತಿ ಇದೆ. ನಿನ್ನೆಯ ದಿನ ಮಾನ್ಯ ಸದಸ್ಯರು ಉಲ್ಲೇಖಿಸಿದಂತೆ, **'ಸ್ವರ್ಗದ ಬಾಗಿಲು ಎಲ್ಲಿಹುದು ಅಣ್ಣ, ಉಳುವ ರೈತನ ನೇಗಿಲಳಡಿಗದೆ ಅಣ್ಣ; ನೇಗಿಲ ಗೆರೆಯೇ ಸ್ವರ್ಗದ ಹಾದಿಯೂ ಹಾದಿಗೋಯ್ಯುವ ಬೀದಿಯು'** ಇದನ್ನು ದೊಡ್ಡ ದೊಡ್ಡ ವ್ಯಕ್ತಿಗಳು, ಮಹಾನ್ ಪುರುಷರು ಹಾಗೂ ದಾರ್ಶನಿಕರು ಹೇಳಿದ್ದಾರೆ. ಅವರುಗಳು ಸ್ವರ್ಗದ ಬಾಗಿಲು ನೇಗಿಲ ಗೆರೆಯ ಹಾದಿಯಲ್ಲಿದೆ ಎಂದು ಹೇಳುತ್ತಾರೆ. ಆದರೆ, ಇವತ್ತಿನ ದಿವಸ ನೇಗಿಲ ಗೆರೆಯ ಹಾದಿಯಲ್ಲಿ ನರಕದ ಬಾಗಿಲು ಇದೆ. ಇದು ಬಹಳ ಪ್ರಮುಖವಾದ ವಿಚಾರವಾಗಿದೆ. **'ನಿಮಿಷದಿಂ ನಿಮಿಷಕ್ಕೆ, ದಿವಸದಿಂ ದಿವಸಕ್ಕೆ ಭವಿಷ್ಯವ ಚಿಂತಿಸದೇ ಬದುಕನು ನೂಕುತಿರು, ಭವಿಷ್ಯವ ಚಿಂತಿಸದಿ ಬದುಕನು ನೂಕಿದರು ವಿವರಗಳ ಜೋಡಿಸುವ ಯಜಮಾನ ಬೇರಿಹನು ಸವೆಸು ನೀ ಜನುಮವನು ಮಂಕುತಿಮ್ಮ'** ಎಂಬುದಾಗಿ ಶ್ರೀ ಡಿ.ವಿ.ಗುಂಡಪ್ಪರವರು ಒಂದು ಪದ್ಯದಲ್ಲಿ ಹೇಳುತ್ತಾರೆ. ಇದರರ್ಥ ಭವಿಷ್ಯದ ಬಗ್ಗೆ ಚಿಂತಿಸುವುದು ಬೇಡ, ಇವನು ನಿಮಿಷದಿಂದ ನಿಮಿಷಕ್ಕೆ ಮತ್ತು ದಿನದಿಂದ ದಿನಕ್ಕೆ ಮಾಡುವ ಕರ್ಮವನ್ನು ಲೆಕ್ಕ ಹಾಕುತ್ತಿರುತ್ತಾರೆ. One fine day it results. ಹೀಗಾಗಿ ಭವಿಷ್ಯದ ಬಗ್ಗೆ ಚಿಂತಿಸದೇ ಜನ್ಮವನ್ನು ಸವೆಸಬೇಕು ಎಂದು ಹೇಳುತ್ತಾರೆ. ಅವರೇನು ಸುಮ್ಮನೆ ಹೇಳಿಲ್ಲ. ಶ್ರೀಯುತ ಡಿ.ವಿ.ಗುಂಡಪ್ಪನವರು ಮಹಾನ್ ವಿದ್ಯಾವಂತರಲ್ಲ; ಕೇವಲ ಎಲ್.ಎಸ್. ಪಾಸ್ ಆಗಿದ್ದರು. ಇಂತಹ ಅನೇಕ ದಾರ್ಶನಿಕ ಕಥೆಗಳನ್ನು ಹಾಗೂ ಸಾಮಾಜಕ್ಕೆ ಅವಶ್ಯಕವಾದ ಕಗ್ಗಗಳನ್ನು ಬರೆದುಕೊಟ್ಟಿದ್ದಕ್ಕಾಗಿ, ಮುಂದಿನ ದಿನಗಳಲ್ಲಿ ಅವರಿಗೆ ಗೌರವ ಡಾಕ್ಟರೇಟ್ ದೊರಕಿತು. ಇವರು ಬರೆದ ಪದ್ಯಗಳ ಮುಖಾಂತರ ನಾವು ಇವತ್ತಿನ ದಿವಸ ಜೀವನವನ್ನು ನಡೆಸುತ್ತಿದ್ದೇವೆ. **'ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು, ಕಲ್ಲಾಗು ಕಷ್ಟಗಳ ಮಳೆ ವಿಧಿ ಸುರಿಯೇ, ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಗೆ ಎಲ್ಲರೊಳಗೊಂದಾಗು ಮಂಕುತಿಮ್ಮ'** ಎನ್ನುವ ಮಾತನ್ನು ಮತ್ತೊಂದು ಪದ್ಯದ ಮುಖಾಂತರ ನಮಗೆ ತಿಳಿಸುತ್ತಾರೆ. ಅದರಂತೆ ಸರ್ಕಾರ ಮತ್ತು ಸಹಕಾರ ಸಚಿವರು ಬೆಲ್ಲ ಸಕ್ಕರೆಯಂತಾದಾಗ ಮಾತ್ರವೇ ಎಲ್ಲರೂ ಒಂದಾಗುವುದಕ್ಕೆ ಸಾಧ್ಯವಾಗುತ್ತದೆ. ಆ ಪದ್ಯದಂತೆ ಸರ್ಕಾರವು ಬೆಲ್ಲ ಸಕ್ಕರೆಯಂತಾಗಬೇಕೆಂದು ನಾನು ಎಲ್ಲರ ಪರವಾಗಿ ಸರ್ಕಾರವನ್ನು ಕೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಸ್ತುತ ವಿಧೇಯಕವನ್ನು ಮಂಡಿಸಿದ ಸಂದರ್ಭದಲ್ಲಿ ಈ ವಿಚಾರದಲ್ಲಿ ನಾವು ಎಲ್ಲಾ ರೀತಿಯ ತಜ್ಞರನ್ನು ಭೇಟಿ ಮಾಡಿ, ಅವರೊಂದಿಗೆ ಮಾತನಾಡಿದ್ದೇವೆ ಎಂಬುದಾಗಿ ಸಹಕಾರ ಸಚಿವರು ಹೇಳಿದರು. ಇದನ್ನು ನಾನು ಅಲ್ಲಗೆಳೆಯುವುದಿಲ್ಲ. ಪ್ರಸ್ತುತ ಸದನದಲ್ಲಿ ಕೃಷಿ ಸಚಿವರೂ ಸಹ ಉಪಸ್ಥಿತರಿದ್ದಾರೆ. ಅವರು ಕೃಷಿಯಲ್ಲಿ ಆಸಕ್ತಿಯನ್ನು ಹೊಂದಿ, ಕೃಷಿ ಮಾಡಿ, ಬೆಳೆ ಮತ್ತು ಒಳ್ಳೆಯ ತರಕಾರಿಗಳನ್ನು ಬೆಳೆದಿದ್ದಾರೆ. ಸಮಾಜಕ್ಕೆ ಒಳ್ಳೆಯ ಕೊಡುಗೆ ನೀಡಿದವರನ್ನು ಸನ್ಮಾನಿಸಿ ಪ್ರಶಸ್ತಿಗಳನ್ನು ನೀಡುತ್ತಾರೆ. ನಮ್ಮ ನಾಡಿನಲ್ಲಿ ಇಂತಹ ಸಾವಿರಾರು ಕೃಷಿಕರು ಇದ್ದಾರೆ. ಕೃಷಿ ಬದುಕನ್ನೇ ಅವಲಂಬಿಸಿ, ಅದನ್ನೇ ಸಂಪೂರ್ಣವಾಗಿ ಮೈಗೂಡಿಸಿಕೊಂಡು, ಅದರಲ್ಲೇ ತಮ್ಮ ಬದುಕನ್ನು ತೊಡಗಿಸಿಕೊಂಡಿರುವ ಬಹಳಷ್ಟು ಜನರಿದ್ದಾರೆ. ಸಹಕಾರ ಸಚಿವರು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಭೇಟಿ ನೀಡಿದ್ದಾರೆ. ಇಲ್ಲಿನ ಬಹಳಷ್ಟು ಸದಸ್ಯರು ರೈತಾಪಿ ವರ್ಗದಿಂದ ಬಂದವರಾಗಿದ್ದಾರೆ. ಆದರೆ, ಅವರುಗಳ ಚರ್ಚೆ ಮಾಡುವ ಸಂದರ್ಭದಲ್ಲಿ ಪ್ರಸ್ತುತ ವಿಧೇಯಕವನ್ನು ಮಂಡಿಸುವ ವಿಚಾರದ ಬಗ್ಗೆ ಎಷ್ಟರಮಟ್ಟಿಗೆ ಚರ್ಚಿಸಲಾಗಿದೆ. ಇದು ಸಮಯೋಚಿತವಾಗಿದೆ ಹಾಗೂ ಯಾವ ಕಾರಣಕ್ಕಾಗಿ ಇದನ್ನು ಜಾರಿಗೊಳಿಸಬೇಕು ಇದರಿಂದ ಯಾವ ರೀತಿಯಾಗಿ ರೈತರ ಸರ್ವತೋಮುಖ ಅಭಿವೃದ್ಧಿಯಾಗುತ್ತದೆ ಎನ್ನುವ ವಿಚಾರಗಳ ಬಗ್ಗೆ ಇನ್ನಷ್ಟು ಹೆಚ್ಚಿಗೆ ತಿಳಿಸಬೇಕಾಗಿತ್ತು ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ. ಇದರ ಬಗ್ಗೆ ಮಾನ್ಯ ಅಲ್ಲಂ ವೀರಭದ್ರಪ್ಪನವರು ಈಗಾಗಲೇ ಮಾತನಾಡಿದ್ದಾರೆ. ಎ.ಪಿ.ಎಂ.ಸಿ.ಗಳು ಬರುವ ಮುಂಚೆ, ಯಾರು ಬೇಕಾದರೂ ಎಲ್ಲಿ ಬೇಕಾದರೂ ರೈತ ಬೆಳೆದ ಬೆಳೆಗಳನ್ನು ಮಾರಾಟ ಮಾಡಬಹುದಾದ ಪರಿಸ್ಥಿತಿ ಇತ್ತು. ಇದು ಸರಿಯಾದುದಲ್ಲ ಎನ್ನುವ ಕಾರಣಕ್ಕಾಗಿ ಎ.ಪಿ.ಎಂ.ಸಿ.ಗಳನ್ನು ಜಾರಿಗೆ ತರಲಾಗಿತ್ತು. ಇಂತಹ ಎ.ಪಿ.ಎಂ.ಸಿ.ಗಳು ಅಸ್ತಿತ್ವಕ್ಕೆ ಬಂದು 54 ವರ್ಷಗಳಾಗಿದ್ದು, ಅವುಗಳ ಸ್ಥಿತಿಗಳನ್ನು ನಾವು ನೋಡಿದ್ದೇವೆ. ಈ ಅವಧಿಯಲ್ಲಾದ ಬದಲಾವಣೆಗಳಿಂದ ಪುನಃ ಮೊದಲಿನ ಸ್ಥಿತಿಗೆ ತೆಗೆದುಕೊಂಡು ಹೋಗುವ ವ್ಯವಸ್ಥೆಯು ಸರಿಯಾದ ಕ್ರಮವೇ? ಎ.ಪಿ.ಎಂ.ಸಿ.ಗಳ ದೈನಂದಿನ ವ್ಯವಹಾರಗಳ ಮಾಹಿತಿ ತೆಗೆಯಿರಿ. ಯಾವ ಬೆಳೆಯು ಮಾರುಕಟ್ಟೆಗೆ ಬರುತ್ತದೆ? ಇವತ್ತಿನ ದಿವಸ ಕೋಲಾರ ಜಿಲ್ಲೆಯು perishable goods ಬೆಳೆಯುವುದರಲ್ಲಿ ಮೊದಲನೇ ಸ್ಥಾನದಲ್ಲಿದೆ. ಅದೇ ರೀತಿಯಾಗಿ ಚಿಕ್ಕಮಗಳೂರು ಹಾಗೂ ಭಾಗಶಃ ಶಿವಮೊಗ್ಗ, ಚಿತ್ರದುರ್ಗ ಮತ್ತು ಹಾಸನ ಜಿಲ್ಲೆಗಳು ನಂತರದ ಸ್ಥಾನದಲ್ಲಿವೆ. ಈ ಪ್ರದೇಶಗಳಲ್ಲಿ ಹಣ್ಣು ತರಕಾರಿಗಳನ್ನು ಬೆಳೆಯುತ್ತಾರೆ. ರಾಜ್ಯದ ಉತ್ತರ ಕರ್ನಾಟಕ ಭಾಗದಲ್ಲಿ ಬಹಳಷ್ಟು ಬೇಳೆ, ದವಸ-ಧಾನ್ಯಗಳನ್ನು ಬೆಳೆಯುತ್ತಾರೆ. ಮಂಗಳೂರು ಭಾಗದಲ್ಲಿ ಬಹಳ ಚೆನ್ನಾಗಿ ಬಣ್ಣದ ಸೌತೇಕಾಯಿಯನ್ನು ಹೊರತುಪಡಿಸಿದರೆ, ಬೇರೆ ಯಾವುದೇ ಬೆಳೆಯನ್ನು ಬೆಳೆಯುವುದಿಲ್ಲ. ಎಲ್ಲೆಲ್ಲಿ ನೀರಾವರಿ ಸೌಲಭ್ಯವಿದೆ ಅಲ್ಲೆಲ್ಲಾ ಬೆಳೆಗಳನ್ನು ಬೆಳೆಯುತ್ತಾರೆ. ನನಗೂ ಸಹ 50-60 ಎಕರೆ ನೀರಾವರಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಮೀನು ಇದೆ. ನಾನೂ ಸಹ ತರಕಾರಿಗಳನ್ನು ಬೆಳೆದಿದ್ದೇನೆ ಹಾಗೂ ವಾಸ್ತವ ಪರಿಸ್ಥಿತಿಗಳನ್ನು ನೋಡಿದ್ದೇನೆ. ಶೇಕಡಾ 85 ರಷ್ಟು ಸಣ್ಣ ಮತ್ತು ಅತೀ ಸಣ್ಣ ರೈತರು ಮಾತ್ರವೇ ವಿವಿಧ ತರಕಾರಿ, ಹೂವು ಮತ್ತು ಹಣ್ಣುಗಳನ್ನು ಬೆಳೆಯುತ್ತಾರೆ. ಅವರ ಬಳಿ ಗರಿಷ್ಠವಾಗಿ 2 – 2½ ಎಕರೆ ಭೂಮಿ ಮಾತ್ರವೇ ಇರುತ್ತದೆ. ಇವತ್ತಿನ ದಿವಸ ಸ್ವಲ್ಪ ಮಟ್ಟಿಗೆ ಯುವಕರು, ಪದವೀಧರರು ಮತ್ತು ಕೃಷಿಯಲ್ಲಿ ಪದವಿಯನ್ನು ಪಡೆದವರು ಕೃಷಿ ಮಾಡಲು ಮುಂದೆ ಬಂದಿದ್ದಾರೆ. ಅವರುಗಳು ತಮ್ಮ ತಂದೆ ಮಾಡಿರುವ ಕೃಷಿಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಆಸಕ್ತಿಯನ್ನು ಹೊಂದಿದ ಯುವಕರು 10–20–50 ಎಕರೆ ಭೂಮಿಯಲ್ಲಿ ಟೊಮೆಟೊವನ್ನು ಬೆಳೆದಿರುವವರಿದ್ದಾರೆ ಹಾಗೂ ಬೆಳೆಯುತ್ತಿದ್ದಾರೆ. ಅವರುಗಳು ಬಹಳಷ್ಟು ಚೆನ್ನಾಗಿ ಬೆಳೆದಿದ್ದಾರೆ. ಕೋಲಾರ ಜಿಲ್ಲೆಯಲ್ಲಿನ 2–3 ಪದವೀಧರ ಯುವಕರು 120 ಎಕರೆ ಜಮೀನಿನಲ್ಲಿ ಟೊಮೆಟೊವನ್ನು ಬೆಳೆದಿರುವುದನ್ನು ನಾನು ನೋಡಿದ್ದೇನೆ.

(ಮುಂದು)

(1058)09–12–2020(05–10)ಬಿಎಸ್‌ಡಿ–ವಿಕೆ

**ಶ್ರೀ ಎಸ್.ಎಲ್.ಭೋಜೇಗೌಡ** (ಮುಂದು)

ಇಬ್ಬರು ಮೂವ್ವರು bank employees ಕೆಲಸಕ್ಕೆ ರಾಜೀನಾಮೆ ಕೊಟ್ಟು agriculture ಮಾಡಿರುವುದನ್ನು ನೋಡಿದ್ದೇನೆ. ವೆನಿಲಾ ಬೆಳೆದಿರುವುದನ್ನು ನೋಡಿದ್ದೇನೆ. ಹಾಗಾಗಿ ಕೃಷಿಕರು ಎಂದರೆ ಮುಂಚೆ ಕೃಷಿ ಬದುಕನ್ನು ಮಾಡುವವರೆಲ್ಲರೂ ಕೃಷಿಕರು ಎಂದಿತ್ತು. ಆದರೆ ನಾನು ನೋಡಿದಂತೆ ಹಾಗೂ ಅನುಭವದ ಪ್ರಕಾರ ಕೃಷಿಕರು ಬ್ರಾಹ್ಮಣ ಕುಟುಂಬದಲ್ಲಿ ಉತ್ತಮ ಹಾಗೂ expert ಕೃಷಿಕರು ಇದ್ದರು. ದಯಮಾಡಿ ಯಾರೂ ತಪ್ಪು ತಿಳಿದುಕೊಳ್ಳಬಾರದು. ಅದು ಕಾರವಾರ ಅಥವಾ ನಮ್ಮ ಕಡೆ ಇರಬಹುದು ಅಥವಾ ಶಿವಮೊಗ್ಗ ಜಿಲ್ಲೆ ಇರಬಹುದು. ಬ್ರಾಹ್ಮಣ ಜನಾಂಗದ ಒಳ್ಳೆಯ ಕೃಷಿಕರಿದ್ದರು. Well knowledge ಹಾಗೂ ಹಿರಿಯರು ಕೃಷಿ ಮಾಡುತ್ತಿದ್ದರು. ಇವತ್ತು ಆ ಕುಟುಂಬದಲ್ಲಿ 100ಕ್ಕೆ 90 ಭಾಗ ಯಾರೂ ಕೃಷಿಕರು ಇಲ್ಲ. ಅವರು ಉಳಿದಿಲ್ಲ. ಅವರ ಮಕ್ಕಳು ಬೇರೆ ಬೇರೆ ಕೆಲಸಗಳಿಗೆ ಹೋಗಿ ಕೃಷಿಯನ್ನು ಬಿಟ್ಟು ಹೋದರು. ಕೃಷಿಯನ್ನು ಏಕೆ ಬಿಟ್ಟು ಹೋದರು? ಓದಿ ವಿದ್ಯಾವಂತರಾಗಿ ಬಿಟ್ಟುಹೋದರು ಎಂಬುದು ಒಂದು ಕಡೆ. ಇನ್ನೊಂದು ಕಡೆ ಏನಾಗಿದೆ ಪರಿಸ್ಥಿತಿ ಎಂಬುದನ್ನು ಮೊನ್ನೆ ಮಾತನಾಡುವಾಗ ಹೇಳಿದೆ. ನಮ್ಮ ಅಪ್ಪ agriculturist, ನಾನು agriculturist, ನನ್ನ ಮಗನನ್ನು agriculturist ಆಗಿ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇನೆ. ಆ ಪ್ರಯತ್ನದಲ್ಲಿ 25 percent

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

success ಆಗಿದ್ದೇನೆ. ನನ್ನ ಹಾಗೆ ನೂರಕ್ಕೆ ಎಂಭತ್ತು ಭಾಗ ಕೃಷಿಕ ಕುಟುಂಬದವರು, ಕೃಷಿ ಜಮೀನನ್ನು ಹೊಂದಿರುವವರು ಕೃಷಿಯಲ್ಲಿಯೇ ಮುಂದುವರೆಸಲು ಮಕ್ಕಳಿಗೆ ತಿಳಿ ಹೇಳಿದರೆ ಸಾಧ್ಯವಾಗುತ್ತಿಲ್ಲ. ಮಕ್ಕಳನ್ನು ಕೃಷಿ ಬದುಕಿನಲ್ಲಿ ಉಳಿಸಲು ಸಾಧ್ಯವಾಗುತ್ತಿಲ್ಲ. ಕಾರಣವೇಂದರೆ ಕೃಷಿ ಲಾಭದಾಯಕ ಎನ್ನುವ ವಿಚಾರವನ್ನು ತೋರಿಸುವುದಕ್ಕೆ ಸಾಧ್ಯವಾಗಲೇ ಇಲ್ಲ. ಅದು ಆಗುತ್ತಿಲ್ಲ.

Parliament ನಲ್ಲಿ ಮೊನ್ನೆ ಪ್ರಧಾನಮಂತ್ರಿ ಮೋದಿಜಿರವರು 2022ಕ್ಕೆ ದುಪ್ಪಟ್ಟು income ಮಾಡುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಯಡಿಯೂರಪ್ಪನವರು ಮೊನ್ನೆ budget ನಲ್ಲಿಯೂ ಮುಂದಿನ ಎರಡು ವರ್ಷಗಳಲ್ಲಿ ದುಪ್ಪಟ್ಟು ಮಾಡುತ್ತೇವೆ ಎಂದು ಹೇಳಿದ್ದಾರೆ. ಹೇಗೆ ದುಪ್ಪಟ್ಟು ಮಾಡುವುದು? ದುಪ್ಪಟ್ಟು ಆಗುತ್ತದೆ ಎಂದು ಹೇಳಿ ಏಕೆ ಆಗಲಿಲ್ಲ? ಮೊದಲು ದುಪ್ಪಟ್ಟು ಮಾಡುವ ವಿಧಾನ ಬೇಕಲ್ಲವೇ? ಈ ರೀತಿ ಕಾಯ್ದೆಯನ್ನು ಮಾಡುವುದರಿಂದ ಕೃಷಿಕನ ಆದಾಯ ದುಪ್ಪಟ್ಟು ಆಗುತ್ತದೆಯೇ? Cooperative Minister ಇದ್ದಾರೆ. ಇವತ್ತು ಯಾರ್ಯಾರು ರೈತರ ನೆರವಿಗೆ ಹಾಗೂ ರೈತರಿಗೆ ಆರ್ಥಿಕವಾಗಿ ಏನಾದರೂ ಅಲ್ಪ–ಸ್ವಲ್ಪ ಒಳ್ಳೆಯದಾಗಿದೆ ಎಂದು ಹೇಳಿದರೆ ಅದು ನಮ್ಮ Cooperative Bank ಗಳ ಮುಖಾಂತರ ಆಗಿದೆ. Cooperative Societies ಹಾಗೂ HOPCOMS ಗಳ ಮುಖಾಂತರ ಆಗಿದೆ. ನಂತರ Cooperative Societies ಸಂಸ್ಥೆಗಳು ಏನಿವೆ, ಅವುಗಳ ಮೂಲಕ ರೈತರ ಬದುಕು ಹಸನಾಗಬೇಕೇ ವಿನಃ, ಯಾವುದೇ Nationalised Banks ಗಳ ಮೂಲಕ ಹಸನಾಗುವುದು ಕನಸು ಮತ್ತು ಭ್ರಮೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅವುಗಳಿಗೆ ಶಕ್ತಿ ತುಂಬಿ, ಇವತ್ತು Cooperative Bank ಗಳು ಇವೆ, ಮಾನ್ಯ ಸಚಿವರು ಇದ್ದಾರೆ, ಇವತ್ತು Cooperative Bank ಗಳ ಮುಖಾಂತರ ಸಾವಿರಾರು ಕೋಟಿ ರೂಪಾಯಿಗಳ ಸಾಲವನ್ನು ರೈತರಿಗೆ ಬೆಳೆ ಸಾಲ ಮತ್ತು ಬೇರೆ ಬೇರೆ ಕೃಷಿ ಸಾಲವನ್ನು ನೀಡಿರುವ ಸಂದರ್ಭದಲ್ಲಿ...... ಇವತ್ತು ಕೃಷಿ ಬದುಕಿನಲ್ಲಿ ರೈತರಿಗೆ ಎಷ್ಟು percentage ಮುಟ್ಟಿದೆ? ಇದೆಲ್ಲದರ ನಡುವೆ ಕೇವಲ 18ರಿಂದ 19 percent ರೈತರನ್ನು ಮಾತ್ರ ಮುಟ್ಟಿದ್ದೇವೆ. ಹಾಗಿದ್ದರೆ ಇನ್ನೂ 80 percent reach ಆಗುವುದಕ್ಕೆ ಏಕೆ ಆಗಿಲ್ಲ? ಇದರ ಬಗ್ಗೆ ಆಲೋಚನೆ ಮಾಡಬೇಕಾಗಿದೆ. ಹಾಗಾಗಿ ಕೃಷಿ ಬದುಕನ್ನು ಅವಲಂಬಿಸುವವರಿಗೆ ಇಂತಹ Cooperative Bank ಗಳ ಮುಖಾಂತರ ಬೆಳೆ ಸಾಲ ರೂ.3 ಲಕ್ಷಗಳನ್ನು interest free loan ನಲ್ಲಿ ಕೊಡುತ್ತಿದ್ದೇವೆ, ರೂ.10 ಲಕ್ಷಗಳವರೆಗೆ zero percent interest ನಲ್ಲಿ ಕೊಡುತ್ತಿದ್ದಾರೆ, ಅದನ್ನು ಹೆಚ್ಚು ಮಾಡಬೇಕು, ಯಾವ ಕೃಷಿಕನು ಯಾರಿಗೂ ದ್ರೋಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದಿಲ್ಲ. ಯಾವ ರೈತನು Bank ಸಾಲ ಕಟ್ಟದೇ ಓಡಿಹೋಗುವುದಿಲ್ಲ. ಮೊನ್ನೆ ಕೊಟ್ಟಿರುವ ಬೆಳೆ ಸಾಲ 100 percent recovery ಆಗಿದೆ. ರೂ.10 ಲಕ್ಷಗಳವರೆಗೆ ಕೊಟ್ಟಿರುವ ಕೃಷಿ ಸಾಲ 100 percent recovery ಇದೆ. ಆದರೆ ವೈಮಾನಿಕದಲ್ಲಿ ಏನಾದರೂ ವ್ಯತ್ಯಾಸವಾದರೆ, natural calamity ಹೆಚ್ಚು ಕಡಿಮೆ ಆದಾಗ ಏನೋ ಅಲ್ಪಸ್ವಲ್ಪ ವಿಳಂಬವಾಗಬಹುದು. ಆ ಸಮಯದಲ್ಲಿ ತಡೆಯಬೇಕಾಗುತ್ತದೆ. ಅವನಿಗೆ ಇನ್ನೂ ಹೆಚ್ಚಿನ ಸಾಲ ಕೊಟ್ಟು ಶಕ್ತಿ ತುಂಬಬೇಕಾಗುತ್ತದೆ. ಈ ರೀತಿ ಶಕ್ತಿ ತುಂಬಿದರೆ ಅವನು ಇನ್ನು ಹೆಚ್ಚು ಬೆಳೆ ಬೆಳೆದು, ಆ ಬೆಳೆ ಬಂದ ಸಂದರ್ಭದಲ್ಲಿ rate ನಲ್ಲಿ ಸ್ವಲ್ಪ ವ್ಯತ್ಯಾಸವಾದರೂ ತಡೆದುಕೊಳ್ಳುತ್ತಾನೆ. ನಮಗೆ ತೊಂದರೆಯಿಲ್ಲ, Bank ಸಹಾಯ ಮಾಡುತ್ತದೆ, ಸರ್ಕಾರ ಸಹಾಯ ಮಾಡುತ್ತದೆ ಎನ್ನುವ ಧೈರ್ಯ ಇರುತ್ತದೆ. ಈ ರೀತಿ ಧೈರ್ಯ ತುಂಬುವ ಮೂಲಕ, ಕೃಷಿ ಬದುಕು ಲಾಭದಾಯಕ ಎಂದು ತೋರಿಸುವ ಮೂಲಕ, ನಮ್ಮ ಯುವ ಪೀಳಿಗೆಯನ್ನು ಕೃಷಿ ಬದುಕಿನಲ್ಲಿ ತೊಡಗಿಸುವುದಕ್ಕೆ ಬೇರೆ ರೀತಿ ಆಲೋಚನೆ ಮಾಡಿದರೆ ತುಂಬಾ ಒಳ್ಳೆಯದಾಗುತ್ತದೆ.

Group farming ವ್ಯವಸಾಯದ ಬಗ್ಗೆ ಆಲೋಚನೆ ಮಾಡಲಿ. ಅದನ್ನು ತೋರಿಸಲಿ. ಜೊತೆಗೆ traditional land ಬಗ್ಗೆ ಹೇಳಬೇಕೆಂದರೆ, ಹಿರಿಯರು ತೋಟ ಮಾಡುತ್ತಿದ್ದರು, ಅವರು ಎಲ್ಲಿ ತೋಟ ಮಾಡುತ್ತಿದ್ದರು? ಯಾವ ಜಾಗದಲ್ಲಿ ತೋಟ ಮಾಡುತ್ತಿದ್ದರು? ಫಲವತ್ತಾದ ಹಾಗೂ ನೀರು ಹೆಚ್ಚಾಗಿ ದೊರಕುವ ಜಾಗದಲ್ಲಿ ತೋಟ ಮಾಡುತ್ತಿದ್ದರು. ಅದು traditional. ಭತ್ತವನ್ನು ಎಲ್ಲಿ ಬೆಳೆಯುತ್ತಿದ್ದರು? ತಗ್ಗಿನ ಪ್ರದೇಶದಲ್ಲಿ ನೀರಿನಲ್ಲಿಯೇ ಭತ್ತವನ್ನು ಬೆಳೆಯುತ್ತಿದ್ದರು. ರಾಗಿಯನ್ನು ಎಲ್ಲಿ ಬೆಳೆಯುತ್ತಿದ್ದರು? ಬರಡು, ಬಂಜರು ಭೂಮಿ ಹಾಗೂ dry land ನಲ್ಲಿ ರಾಗಿಯನ್ನು ಬೆಳೆಯುತ್ತಿದ್ದರು. ಇವತ್ತು ರಾಗಿ ಬೆಳೆಯುವ ಜಾಗದಲ್ಲಿಯೂ ಒಂದು borewell ಹಾಕುವುದು, ಅಲ್ಲಿಯೂ ಅಡಿಕೆ ಗಿಡ ನೆಡುವುದು, ಇನ್ನೊಂದು ಕಡೆ ತೆಂಗಿನ ತೋಟ ಮಾಡುವುದು. ಹೀಗಾಗಿ traditional land ಗಳನ್ನು ಉಳಿಸಿ, traditional land ಗಳಲ್ಲಿ ಇಂತಹ area ಗಳಲ್ಲಿ ಇಂತಹ crop ಬೆಳೆದರೆ supporting price ಅನ್ನು ನಾವು ಕೊಡುತ್ತೇವೆ, ಈ ರೀತಿ encourage ಮಾಡುತ್ತೇವೆ, ಸಾಲ ಕೊಡುತ್ತೇವೆ, ಇಲ್ಲಿ ಈ ಬೆಳೆ ಬೆಳೆಯಿರಿ, ಅಲ್ಲಿ ಆ ಬೆಳೆ ಬೆಳೆಯಿರಿ ಎಂದು ತಿಳಿಸಬೇಕು. ಯಾರೋ ಒಬ್ಬರು ಈರುಳ್ಳಿ ಬೆಳೆದರು, ದೇಶದಲ್ಲಿ ಒಂದು ಕೆ.ಜಿ. ಈರುಳ್ಳಿಗೆ ರೂ.100 ಆಯಿತು, ಆಗ ಅಲ್ಲಿಯೂ ಈರುಳ್ಳಿ ಬೆಳಿ, ಇಲ್ಲಿಯೂ ಈರುಳ್ಳಿ ಬೆಳಿ, ಎಲ್ಲಕಡೆ ಈರುಳ್ಳಿ ಬೆಳೆದು last ಗೆ ರೂ.10 ಕ್ಕೆ ಈರುಳ್ಳಿಯನ್ನು ಕೇಳುವವರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿಕ್ಕಿರುವುದಿಲ್ಲ. ಇದರ ಬಗ್ಗೆ programme ಮಾಡಬೇಕಾಗಿದೆ. ದಯಮಾಡಿ ಇಂತಹದ್ದರ ಬಗ್ಗೆ ಆಲೋಚನೆ ಮಾಡದಿದ್ದರೆ ಕೃಷಿಕನ ಬದುಕು ಬರಡಾಗುತ್ತದೆ.

ಇವತ್ತು ರೈತರು ಬೆಳೆ ಬೆಳೆಯುತ್ತಿದ್ದಾರೆ. ಶೇಕಡ 80 ಭಾಗ ಯಾವುದೇ ತರಕಾರಿಗಳು ವ್ಯಾಪಾರವಾಗುತ್ತಿಲ್ಲವೇ? ಎಲ್ಲವೂ APMC ಮಾರುಕಟ್ಟೆಯಲ್ಲಿ ವ್ಯಾಪಾರವಾಗುತ್ತಿದೆಯೇ? ಮನೆ ಹತ್ತಿರ ಮಾರುತ್ತಿಲ್ಲವೇ? ಬರಲಿ ಬಿಡಿ, ಹತ್ತಾರು ಜನ ವ್ಯಾಪಾರಸ್ಥರು ಇರುತ್ತಾರೆ, ಅವರು ಏನೇನು support ಇದೆಯೋ, ಆ price ಅನ್ನು ಕೂಗುತ್ತಾರೆ. ಹರಾಜು ಕೂಗಿ ತೆಗೆದುಕೊಂಡು ಹೋಗುತ್ತಾರೆ. ಅಲ್ಪಸ್ವಲ್ಪ ವ್ಯತ್ಯಾಸ ಇರಬಹುದು. ದಳ್ಳಾಳಿಗಳ ಕಾಟ ಇಲ್ಲ ಎಂದು ನಾನು ಹೇಳುವುದಿಲ್ಲ. ದಳ್ಳಾಳಿಗಳನ್ನು ಮೆಟ್ಟುವ, ದಳ್ಳಾಳಿಗಳಿಗೆ ಉತ್ತರ ಕೊಡುವ ಶಕ್ತಿ ರೈತರಿಗೆ ಈಗಾಗಲೇ ಬಂದಿದೆ. ಅಷ್ಟು ಸುಲಭ ಅಲ್ಲ, ಮೂಟೆ ತೆಗೆದು ಬಿಚ್ಚಿಕೊಂಡು ಹೊಡೆಯುತ್ತಾರೆ. ಆ ತರಹ ಪರಿಸ್ಥಿತಿ ರೈತರಲ್ಲಿಯೂ ಬಂದಿದೆ. ರೈತರಲ್ಲಿ ಒಗ್ಗಟ್ಟು ಇದೆ. ಮಾರುಕಟ್ಟೆಯಲ್ಲಿ ಎಲ್ಲರೂ ಒಗ್ಗಟ್ಟಾಗುತ್ತಾರೆ. ದಳ್ಳಾಳಿಗಳನ್ನು control ಮಾಡುವ ಶಕ್ತಿ ಸರ್ಕಾರಕ್ಕಿದೆ. ಅದನ್ನು ಸರ್ಕಾರ ಮಾಡಲಿ. ಇವತ್ತು RTO ಕಛೇರಿ, Sub-Registrar ಕಛೇರಿಗಳಿಗೆ ಹೋದರೆ ದಳ್ಳಾಳಿಗಳು ಇಲ್ಲವೇ? ಅವರನ್ನು ನಿಯಂತ್ರಣ ಮಾಡುವುದಕ್ಕೆ ಆಗಿದೆಯೇ? ಇವತ್ತು ದಳ್ಳಾಳಿಗಳ ಮುಖಾಂತರ RTO ಕಛೇರಿಗಳಲ್ಲಿ ನಡೆಯುತ್ತಿದ್ದು, ಈ ಕೆಲಸ ಮಾಡಿಕೊಂಡು ಬಾ ಎಂದು ನಾನು ಏನಾದರೂ ಕೊಡಬೇಕೆಂದರೆ RTO Office ಗೆ ಕೊಡಬೇಕು. ನಾನು RTO Office ಗೆ ಹೋಗಿ direct ಕೊಡುವುದಕ್ಕೆ ಆಗುವುದಿಲ್ಲ. ಈ ಪಿಡುಗು ನಿನ್ನೆ–ಮೊನ್ನೆ ಬಂದಿರುವ ವಿಚಾರವೇ? ಶೇಕಡ 90 ಭಾಗ ತೆಂಗಿನಕಾಯಿ ಯಾವುದಾದರೂ APMC Market ಗೆ ಬಂದು ಮಾರಾಟವಾಗುತ್ತಿದೆಯೇ? ಎಲ್ಲೋ ಅರಸೀಕೆರೆ ಮತ್ತು ತಿಪಟೂರು ಕಡೆ ಆಗಬಹುದು. ಮಾನ್ಯ ಮರಿತಿಬ್ಬೇಗೌಡರು ಮಾತನಾಡುವಾಗ ಮದ್ದೂರು ಎಳನೀರಿಗೆ No. 1 Market ಎಂದು ಹೇಳಿದರು. ಅವರು ಬಂದು ತೋರಿಸಲಿ, ಯಾವ ಹಳ್ಳಿಗಳಲ್ಲಿ, ಊರುಗಳಲ್ಲಿ, ಹೋಬಳಿ Headquarter ಗಳಲ್ಲಿ load ಗಟ್ಟಲೆ ತೆಂಗಿನ ಕಾಯಿ load ಆಗುತ್ತದೆ. ನಂತರ direct ಆಗಿ ಅದು ಬಾಂಬೆಗೆ ಹೋಗುತ್ತದೆ. ಈರುಳ್ಳಿ ಹೊಲದಲ್ಲಿಯೇ load ಆಗಿ ಹೋಗುತ್ತದೆ. ಇವರು ಕಾನೂನು ತಂದು ಹೊಲದಿಂದ ಹೋಗಬೇಕಾಗಿಲ್ಲ. ಹೊಲದಿಂದ ನೇರವಾಗಿ ಹೋಗುತ್ತದೆ. ಕೋಸು ಇತ್ಯಾದಿಗಳು ಅಲ್ಲಿಂದ load ಆಗಿ direct ಆಗಿ ಬೆಂಗಳೂರು ಮಾರುಕಟ್ಟೆಗೆ ಬರುತ್ತದೆ. ಎಲ್ಲವೂ APMC Market ಮುಖಾಂತರ ನಡೆಯುತ್ತಿದೆಯೇ? ರೈತರು ಬಹಳ ಬುದ್ಧಿವಂತರಿದ್ದಾರೆ. ಇವತ್ತು ಕೋಲಾರದ ಮಾರುಕಟ್ಟೆಯಲ್ಲಿ ಏನು ನಡೆಯುತ್ತಿದೆ, ಹುಬ್ಬಳ್ಳಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾರುಕಟ್ಟೆಯಲ್ಲಿ ಏನು ನಡೆಯುತ್ತಿದೆ, ಬೆಳಗಾವಿ ಮತ್ತು ಮಂಗಳೂರು ಮಾರುಕಟ್ಟೆಗಳಲ್ಲಿ ಏನು ನಡೆಯುತ್ತಿದೆ, ಸಾವಿರಾರು load ತರಕಾರಿ ಮಂಗಳೂರಿಗೆ ಹೋಗುತ್ತದೆ. ಇಡೀ ಕರಾವಳಿ ಪ್ರದೇಶದಲ್ಲಿ ತರಕಾರಿ ಎಲ್ಲಿಂದ ಬರುತ್ತದೆ? ಗೋವಾಕ್ಕೆ ಹೋಗುತ್ತದೆ, ಗೋವಾದಲ್ಲಿ ಬೆಳೆಯುತ್ತಾರೆಯೇ? ಊಟಿಯ ಜನರು ಇಲ್ಲಿ ಮಾರುವುದಿಲ್ಲವೇ? ಈ ಕಾಯ್ದೆಯನ್ನು ತಂದು ಮಾಡುವುದರಿಂದ ನಮ್ಮಲ್ಲಿರುವ ಗಾದೆಯಂತೆ 'ಹಾರುವ ಮಗನಿಗೆ ಏಣಿ ಹಾಕಿಕೊಟ್ಟಂತೆ' ಆಗುತ್ತದೆ. ಮೊದಲೇ ದಳ್ಳಾಳಿಗಳ ಕಾಟ ಇದೆ. ಅದರಲ್ಲಿ ಖರೀದಿ ಮಾಡಲು ಮನೆ ಹತ್ತಿರ ಬರುತ್ತಾರೆ ಎಂದುಕೊಂಡು, ಏನೋ ಒಂದೆರಡು ಎಕರೆಯಲ್ಲಿ ತರಕಾರಿ ಬೆಳೆದಿದ್ದು, ಬೆಳಗ್ಗೆ ಕೊಯ್ದು ಸಾಯಂಕಾಲವಾದರೂ ಯಾರು ಬರದಿದ್ದರೆ ಏನು ಮಾಡಬೇಕು? ಏನು ಮಾಡಬೇಕು? ಸಾಯಂಕಾಲ ಯಾರೋ ಒಬ್ಬರು ಬಂದು throw away price ಗೆ ಕೇಳಿದ, beans ಅನ್ನು ನೋಡುತ್ತಾನೆ, 'ಏನೋ ಅಷ್ಟರಲ್ಲಿ ಇದೆ' ಎಂದು ಹೇಳುತ್ತಾನೆ, ರೈತ ಯಾರ್ಯಾರೋ ಬರುತ್ತಾರೆ ಎಂದು ಬೆಳಗ್ಗೆಯಿಂದಲೇ ತರಕಾರಿ ಕೊಯ್ದು ಇಟ್ಟಿರುತ್ತಾನೆ. ಯಾರಾದರೂ ಬಂದರೆ ಬಂದರು, ಇಲ್ಲದಿದ್ದರೆ ಇಲ್ಲ. ಸಾಯಂಕಾಲ ಅವರೇ ಮಾತನಾಡಿಕೊಂಡು, ಕೊನೆಯಲ್ಲಿ ಯಾರೋ ಒಬ್ಬರು ಒಂದು ಕೆ.ಜಿಗೆ ರೂ.5 ಕೊಡು ಎನ್ನುತ್ತಾನೆ, ರೈತ ಇನ್ನೇನು ಮಾಡುವುದಕ್ಕೆ ಆಗುತ್ತದೆ, ಕೊನೆಯಲ್ಲಿ 'ಆಯಿತು ತಗೋಂಡು ಹೋಗಪ್ಪ' ಎನ್ನುತ್ತಾನೆ, ಇಲ್ಲದಿದ್ದರೆ ಗೊಬ್ಬರದ ಗುಂಡಿಗೆ ಎಸೆಯಬೇಕಾಗುತ್ತದೆ. ಇಲ್ಲಿ ಒಂದು ನಿರ್ದಿಷ್ಟವಾದ ಜಾಗ ಇದೆ, ಆ ಜಾಗಕ್ಕೆ ತೆಗೆದುಕೊಂಡು ಹೋಗಿ ಒಬ್ಬ ಕೇಳಿಲಿಲ್ಲ ಎಂದರೆ ಇನ್ನೊಬ್ಬ ಕೇಳುತ್ತಾನೆ, ಅವನು ಇಲ್ಲದಿದ್ದರೆ ಇನ್ನೊಬ್ಬ ಕೇಳುತ್ತಾನೆ, ಈ ಭಯ ಇರುತ್ತದೆ. Officer ಗಳ ಭಯ ಇರುತ್ತದೆ. APMC strengthen ಆಗುತ್ತದೆ. ಇದನ್ನು ಮಾಡಬೇಕು. ರೂ.25 ಕೋಟಿಗಳ cess collect ಮಾಡಿ, cess ಎಲ್ಲಿಗೆ ಹೋಯಿತು?

(ಮುಂದು)

(1059)/09.12.2020/5.20/ಹೆಚ್‌ವಿಃಬಿಎನ್‌ಎಸ್

**ಶ್ರೀ ಎಸ್.ಎಲ್.ಭೋಜೇಗೌಡ**(ಮುಂದುವರೆದದ್ದು):-

ಸನ್ಮಾನ್ಯ ಸಭಾಪತಿಯವರೇ, ರೈತರ ದುಡ್ಡು ವಾಪಸ್ಸು ಸರ್ಕಾರಕ್ಕೆ ಬರುತ್ತದೆ. ಸರ್ಕಾರದ ದುಡ್ಡು ಎಲ್ಲಿಗೂ ಹೋಗಲಿಲ್ಲ. ಈ ನಿಟ್ಟಿನಲ್ಲಿ ಕೆಲಸ ಮಾಡಿದರೆ, ರೈತರ ಬದುಕಿನಲ್ಲಿ ಒಳ್ಳೆಯದಾಗುತ್ತದೆ. ರೈತರು ಬೆಳೆದಂತಹ ಬೆಳೆಯನ್ನು ಎಲ್ಲಿ ಬೇಕಾದರೂ ಮಾರಾಟ ಮಾಡುವುದಕ್ಕೆ ಈ ಕಾಯಿದೆಯ ಮೂಲಕ ಸ್ವತಂತ್ರ ನೀಡಲಾಗುತ್ತಿದೆ ಎನ್ನುವ ಮಾತು ಸುಳ್ಳು. ಈಗಲೂ ಕೂಡ 100ಕ್ಕೆ 85ರಷ್ಟು ರೈತರು ಸರ್ವ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ವತಂತ್ರರಾಗಿ ತಾವು ಬೆಳೆದಂತಹ ಬೆಳೆಯನ್ನು ಮಾರಾಟ ಮಾಡುತ್ತಿದ್ದಾರೆ. ಉತ್ತರ ಕರ್ನಾಟಕ ಭಾಗದ ಬಗಗೆ ನನಗೆ ಗೊತ್ತಿಲ್ಲ ಆದರೆ, ನಮ್ಮಲ್ಲಿ ಯಾವ ಕಾಳು ಬೆಳೆಯೂ ಎ.ಪಿ.ಎಂ.ಸಿ. ಮಾರುಕಟ್ಟೆಗೆ ಬರುತ್ತಿಲ್ಲ. ನಾನು ಪ್ರಮುಖವಾಗಿ ಅಡಕೆ ಬೆಳೆಗಾರನಾಗಿದ್ದೇನೆ. ನಾವು ಮರದ ಮೇಲೆ ಇರುವ ಹಸಿರು ಅಡಕೆ ಕಾಯಿಯನ್ನೇ ಗೇಣಿಗೆ ಕೊಡುತ್ತೇವೆ. ಅವನು ತೆಗೆದುಕೊಂಡು ಹೋಗಿ ಬೇರೆ ಎಲ್ಲೋ ಮಾರಾಟ ಮಾಡುತ್ತಾನೆ. ನನ್ನ ಮನೆಯ ಹತ್ತಿರ ಬರುವುದಿಲ್ಲ. ಅಡಕೆಯನ್ನು ಚಿಲ್ಲರೆ ತೂಕಕ್ಕೆ ಮತ್ತು ಕ್ವಿಂಟಾಲ್ ಲೆಕ್ಕದಲ್ಲಿಯೂ ಕೊಡುತ್ತೇವೆ. ನನ್ನನ್ನು ಒಳಗೊಂಡಂತೆ ನೂರರಲ್ಲಿ ತೊಂಭತ್ತು ಭಾಗದಷ್ಟು ಅಡಕೆ ಬೆಳೆಗಾರರು ಯಾರೂ ಎ.ಪಿ.ಎಂ.ಸಿ.ಗೆ ಬಂದು ಮಾರಾಟ ಮಾಡುತ್ತಿಲ್ಲ.

**ಶ್ರೀ ಎಸ್.ಟಿ.ಸೋಮಶೇಖರ್:-** ಸನ್ಮಾನ್ಯ ಸಭಪತಿಯವರೇ, ಶಿವಮೊಗ್ಗ ಜಿಲ್ಲೆಯಲ್ಲಿ ಎ.ಪಿ.ಎಂ.ಸಿ.ಗೆ ತಂದು ಮಾರಾಟ ಮಾಡುತ್ತಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಶಿವಮೊಗ್ಗ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವರ್ತಕರಿದ್ದಾರೆ. ಅಲ್ಲಿ Malenadu adike Maratada Sahakara Sangha, niyamitha, shimoga (MAMCOS) ಇದೆ. ಅಲ್ಲಿಗೆ ಅಡಕೆ ತೆಗೆದುಕೊಂಡು ಹೋಗಿ ಇಡುತ್ತಾರೆ. ಇದೊಂದು ದೊಡ್ಡ ಸಹಕಾರ ಸಂಸ್ಥೆಯಾಗಿದೆ. ಬೆಳೆಗಾರರು ಯಾವುದೋ ಒಂದು ದಿನ ಅಲ್ಲಿಂದ ಅಡಕೆಯನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಾರೆ. ಹಾಪ್‌ಕಾಮ್ಸ್‌ಗೆ ಮತ್ತು ನಮ್ಮ ಸಹಕಾರಿ ಸಂಸ್ಥೆಗಳಿಗೆ ಸರ್ಕಾರ ಶಕ್ತಿ ತುಂಬಬೇಕಾಗಿದೆ. ರೈತರು ಯಾರೂ ಯಾರ ಮನೆ ಬಾಗಿಲಿಗೂ ಹೋಗಬೇಕಾಗಿಲ್ಲ. ಒಳ್ಳೆ ಮಳೆ-ಬೆಳೆಯಾದರೆ, ರೈತರು ಯಾರೂ ಯಾವ ಬ್ಯಾಂಕಿಗೂ, ಯಾರ ಮನೆ ಬಾಗಿಲಿಗೂ ಸಾಲ ಬೇಡಿ ಹೋಗುವುದಿಲ್ಲ. ಆದರೆ, ಹವಾಮಾನದಲ್ಲಿ ಆಗುವ ವೈಪರೀತ್ಯಗಳ ಕಾರಣದಿಂದಾಗಿ ಮತ್ತು ಆತನ ಬದುಕಿನ ಪ್ರಶ್ನೆಯಾಗಿರುವುದರಿಂದ ರೈತ ಸಾಲ ಮಾಡುತ್ತಾನೆ. ಈ ನಾಡಿನಲ್ಲಿ ನಾವು ಕೃಷಿಯ ಮೇಲೆಯೇ ಅವಲಂಭಿತವಾಗಿದ್ದೇವೆ. ಕೃಷಿ ಬದುಕು ಉಳಿಯಬೇಕಾದರೆ, ನಮ್ಮ ಮುಂದಿನ ಪೀಳಿಗೆ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಬೇಕಾದರೆ, ಯುವ ಪೀಳಿಗೆಗೆ ಶಕ್ತಿ ತುಂಬುವಂತಹ ಕೆಲಸವನ್ನು ಮಾಡಿದರೆ ಒಳ್ಳೆಯದಾಗುತ್ತದೆ ಎನ್ನುವುದು ನನ್ನ ಸಲಹೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಾನೊಬ್ಬ ಕೃಷಿಕನಾಗಿ ಕೃಷಿ ವಲಯವನ್ನು ಸರಿಯಾದ ರೀತಿಯಲ್ಲಿ ಪ್ರತಿನಿಧಿಸದೇ ಹೋದರೇ ನನ್ನ ಬಗ್ಗೆ ಹೊರಗಡೆ ಯಾರೂ ಮಾತನಾಡಬಾರದು ಎನ್ನುವ ದೃಷ್ಟಿಯಿಂದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಮಾತುಗಳನ್ನಾಡುತ್ತಿದ್ದೇನೆ. ಸರ್ಕಾರ ಈ ಕಾಯಿದೆಯನ್ನು ತಂದು ಯಾರದೋ ಮನೆ ಬಾಗಿಲನ್ನು ನಾವು ಕಾಯುವಂತೆ ಮಾಡಬಾರದೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ ಮತ್ತು ಈ ಕಾಯಿದೆಯನ್ನು ಸಂಪೂರ್ಣವಾಗಿ ವಿರೋಧಿಸುತ್ತಿದ್ದೇನೆ.

**ಶ್ರೀ ಪಿ.ಆರ್.ರಮೇಶ್(ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಈ ವಿಧೇಯಕದಲ್ಲಿ ಎರಡೇ ಎರಡು ತಿದ್ದುಪಡಿಗಳನ್ನು ತಂದಿದೆ. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ(ನಿಯಂತ್ರಣ ಮತ್ತು ಅಭಿವೃದ್ಧಿ) ವಿಧೇಯಕದಲ್ಲಿ 8ನೇ ಪ್ರಕರಣ ಮತ್ತು 117ನೇ ಪ್ರಕರಣಗಳಿಗೆ ತಿದ್ದುಪಡಿಯನ್ನು ತರಲಾಗಿದೆ. ಈ ಸಂದರ್ಭದಲ್ಲಿ ನನಗೆ ಒಂದು ಕಥೆ ನೆನಪಾಗುತ್ತಿದೆ. ಒಬ್ಬ ರೈತ ಬಯಲಿನಲ್ಲಿ ಒಂದು ಮನೆ ಕಟ್ಟಿಕೊಂಡಿರುತ್ತಾನೆ. ಒಮ್ಮೆ ಜೋರಾಗಿ ಮಳೆ ಬರುತ್ತದೆ. ರೈತನ ಮನೆ ಮುಂದೆ ಒಂದು ಒಂಟೆ ಮಳೆಯಲ್ಲಿ ನೆನಯುತ್ತಾ ನಿಂತಿರುತ್ತದೆ. ಮಳೆಯಲ್ಲಿ ಅದಕ್ಕೆ ಒಂದು ಆಸರೆ ಬೇಕಾಗಿರುತ್ತದೆ. ರೈತ ಒಂಟೆ ತಲೆಯನ್ನು ಸೂರಿನಲ್ಲಿರಿಸಿಕೊಂಡು, 'ಮಳೆ ನಿಂತ ಮೇಲೆ ಹೋಗು' ಎಂದು ಹೇಳುತ್ತಾನೆ. ಆದರೆ, ಒಂಟೆ ಇಡೀ ಮನೆಯನ್ನೇ ಧ್ವಂಸ ಮಾಡುತ್ತದೆ. ಸರ್ಕಾರ ತಂದಿರುವ ಈ ವಿಧೇಯಕ ಈ ಕಥೆಯ ರೀತಿ ಇದೆ. ಪಾಪ ಅವರಿಗೆ ಇದರ ಬಗ್ಗೆ ಏನೂ ಗೊತ್ತಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಈ ತಿದ್ದುಪಡಿ ವಿಧೇಯಕದಲ್ಲಿ ಮಾರುಕಟ್ಟೆ ಸಮಿತಿಯನ್ನು ಹೊಸದಾಗಿ ಸೇರ್ಪಡೆ ಮಾಡಲಾಗಿದೆ. ಇಷ್ಟು ದಿನಗಳ ಕಾಲ ಈ ಸಮಿತಿಯ ಅಸ್ತಿತ್ವ ಇರಲಿಲ್ಲ. ಪ್ರಕರಣ 8(3)ರಲ್ಲಿ;

(ಎ) ಅಧಿಸೂಚಿತ ಕೃಷಿ ಉತ್ಪನ್ನಗಳನ್ನು;

**1.** ಒಂದು ತಾಲ್ಲೂಕು ಕೃಷಿ ಉತ್ಪನ್ನ ಸಹಕಾರ ಕ್ರಯವಿಕ್ರಯ ಸಂಘ;

**2.** ಒಂದು ಪ್ರಾಥಮಿಕ ಕೃಷಿ ಸಹಕಾರ ಪತ್ತಿನ ಸಂಘ ಮತ್ತು;

**3.** ರಾಜ್ಯ ಸರ್ಕಾರದ ಅನುಮತಿ ಪಡೆದ ಇತರ ಯಾವುದೇ ಸಹಕಾರ ಸಂಘ ಇವುಗಳ ಮೂಲಕ ಖರೀದಿ ಅಥವಾ ಮಾರಾಟ ಮಾಡುವುದಕ್ಕೆ;

(ಬಿ) ಒಬ್ಬ ಚಿಲ್ಲರೆ ವ್ಯಾಪಾರಿಯು ಅಧಿಸೂಚಿತ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೆ;

(ಸಿ) ಕರಾರು ವ್ಯವಸಾಯದ ಒಪ್ಪಂದದ ಮೇರೆಗೆ ಕರಾರು ವ್ಯವಸಾಯ ಉತ್ಪಾದಕನು ಕರಾರು ವ್ಯವಸಾಯ ಪ್ರಾಯೋಜಕನಿಗೆ ಮಾರಾಟ ಮಾಡುವುದಕ್ಕೆ;

(ಡಿ) ಕೃಷಿಕನಿಂದ 72ಎ. ಪ್ರಕರಣದ ಮೇರೆಗೆ ಲೈಸೆನ್ಸುದಾರನು ಅಧಿಸೂಚಿತ ಕೃಷಿ ಉತ್ಪನ್ನವನ್ನು

"ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೇರವಾಗಿ ಖರೀದಿ ಮಾಡಿರುವುದಕ್ಕೆ;

ಎಂದು ಇದೆ. ಹಿಂದೆ ಮಾರುಕಟ್ಟೆಯ ವಿಕೇಂದ್ರೀಕರಣ ವ್ಯವಸ್ಥೆ ಇತ್ತು. ತಾಲ್ಲೂಕು ಮಟ್ಟದಲ್ಲಿ ಮತ್ತು ಹೋಬಳಿ ಮಟ್ಟದಲ್ಲಿ ಎಲ್ಲೆಲ್ಲಿ ಆಯಾಯ ಉತ್ಪನ್ನಗಳನ್ನು ಉತ್ಪಾದಿಸಲಾಗುತ್ತಿತ್ತೋ ಅಲ್ಲಿಯೇ ಅವುಗಳಿಗೆ ಸಂಬಂಧಪಟ್ಟ ಮಾರುಕಟ್ಟೆಗಳು 1966ರಲ್ಲಿ ಈ ಕಾಯಿದೆ ಜಾರಿಗೆ ಬಂದಾಗಿನಿಂದಲೂ ಕಾರ್ಯಾಚರಣೆ ಮಾಡುತ್ತಿವೆ. ಇವತ್ತು ಈ ವಿಧೇಯಕದ ಮೂಲಕ ಆ ವ್ಯವಸ್ಥೆಯನ್ನು ಸಂಪೂರ್ಣವಾಗಿ ರದ್ದುಪಡಿಸಿದ್ದಾರೆ. ಅಲ್ಲಿ ಯಾರಿಗೂ ಮಾರಾಟ ಮಾಡುವುದಕ್ಕೆ ಅವಕಾಶವಿಲ್ಲ.

ಸನ್ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಕೇಳಬಯಸುವುದೇನೆಂದರೆ, ಈ ವಿಧೇಯಕವನ್ನು ಮೇ, 2020ರಿಂದ ತರಲಾಗಿದೆ ಎಂದು ಹೇಳುತ್ತಿದ್ದಾರೆ. ಮೇ, 2020ರಲ್ಲಿ ವಿಧೇಕಯವನ್ನು ತರಾತುರಿಯಲ್ಲಿ ತಂದು ಅಧ್ಯಾದೇಶವನ್ನು ಹೊರಡಿಸಿದ ಮೇಲೆ ರೈತರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಎಷ್ಟು ಕೆಲಸವನ್ನು ಮಾಡಲಾಗಿದೆಯೆನ್ನುವುದು ನನ್ನ ಪ್ರಶ್ನೆಯಾಗಿದೆ. ರೈತರ ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೆ ಮಾರುಕಟ್ಟೆಗಳನ್ನು ಸೃಜಿಸಬೇಕು ಮತ್ತು ರೈತರಿಗೆ ಒಳ್ಳೆಯದಾಗಬೇಕೆನ್ನುವ ಉದ್ದೇಶದ ಹಿನ್ನೆಲೆಯಲ್ಲಿ ಈ ವಿಧೇಯಕವನ್ನು ತರುವುದಕ್ಕೂ ಮೊದಲು ಮೇ ತಿಂಗಳಿನಲ್ಲಿ ಅಧ್ಯಾದೇಶವನ್ನು ತಂದಿದ್ದಾರೆ. ಮೇ ತಿಂಗಳಿನಿಂದ ಡಿಸೆಂಬರ್‌ವರೆಗೆ ಒಟ್ಟು 07 ತಿಂಗಳ ಅವಧಿಯಲ್ಲಿ ಅಧ್ಯಾದೇಶದ ಮೂಲಕ ಎಷ್ಟು ಜನ ರೈತರಿಗೆ ಈ ಸರ್ಕಾರ ಒಳ್ಳೆಯದು ಮಾಡಿದೆ, ಯಾರ್ಯಾರಿಗೆ ಒಳ್ಳೆಯದು ಮಾಡಿದೆ ಎನ್ನುವುದರ ಬಗ್ಗೆ ಸರ್ಕಾರ ಮಾಹಿತಿ ನೀಡಬೇಕಾಗಿದೆ.

**(ಈ ಹಂತದಲ್ಲಿ ಸನ್ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು.)**

ಈ ವಿಧೇಯಕದ ಮೂಲಕ ಸರ್ಕಾರ ಎರಡು ಪ್ರಕರಣಗಳಿಗೆ ತಿದ್ದುಪಡಿಯನ್ನು ತಂದಿದೆ. ಈ ಎರಡು ಪ್ರಕರಣಗಳಿಗೆ ಸಂಬಂಧಪಟ್ಟಂತೆ ತಂದಿರುವಂತಹ ತಿದ್ದುಪಡಿ ಅಧ್ಯಾದೇಶ ಯಾವ ರೀತಿಯಲ್ಲಿ ಪರಿಣಾಮಬೀರುತ್ತದೆ ಮತ್ತು ಯಾರಿಗೆ ಅನುಕೂಲವಾಗುತ್ತದೆ ಎನ್ನುವುದರ ಬಗ್ಗೆ ನಾವೆಲ್ಲರೂ ಆಲೋಚಿಸಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ತುಮಕೂರು ರಸ್ತೆಯಲ್ಲಿ ತುಮಕೂರಿಗೆ 10 ಕಿಲೋಮೀಟರ್ ದೂರ ಇರುವಾಗಲೇ ಬಲಭಾಗದಲ್ಲಿ ಸುಮಾರು 120 ಎಕರೆ ಪ್ರದೇಶದಲ್ಲಿ 'Food Park' ಇದೆ. ಇಲ್ಲಿ ಕೆಲಸ ಮಾಡುವವರಿಗೆ ಒಂದು ಅಪಾರ್ಟ್‌ಮೆಂಟ್ ಕಟ್ಟಿಸಿದ್ದಾರೆ. ಬಹಳ ದೊಡ್ಡ ಜಾಗದಲ್ಲಿ ಕೋಲ್ಡ್ ಸ್ಟೋರೇಜ್ ಮಾಡಿದ್ದಾರೆ. ಮಾರುಕಟ್ಟೆಗೆ ಅವಶ್ಯಕವಿರುವ ಎಲ್ಲ ವ್ಯವಸ್ಥೆಗಳನ್ನು ಮಾಡಿದ್ದಾರೆ. ಇಂತಹ ಸಂಸ್ಥೆಗಳನ್ನು ಬೆಳೆಸುವುದಕ್ಕೆ ಸರ್ಕಾರ ಈ ಅಧ್ಯಾದೇಶವನ್ನು ಮಾಡಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(1060) 9.12.2020 5.30 ಪಿಕೆ:ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ.ಆರ್.ರಮೇಶ್ (ಮುಂದುವರೆದಿದೆ)**

ತಾವು ಅಲ್ಲಿ ಹೋಗಿ ನೋಡಿದ್ದೀರೋ ಇಲ್ಲವೋ ಗೊತ್ತಿಲ್ಲ. ಮಾನ್ಯ ಸಹಕಾರ ಸಚಿವರು ಹೋಗಿದ್ದಾರೋ ಇಲ್ಲವೋ ಗೊತ್ತಿಲ್ಲ, ಕೃಷಿ ಸಚಿವರು ಅಲ್ಲಿಗೆ ಹೋಗಿದ್ದಾರೋ ಇಲ್ಲವೋ ಗೊತ್ತಿಲ್ಲ. ಆದರೆ ನಾನು ಹೋಗಿ ಅದನ್ನು ಕುತೂಹಲದಿಂದ ನೋಡಿದ್ದೇನೆ. ಅವರು ಈಗ ಇಡೀ ಕರ್ನಾಟಕದಲ್ಲಿ ನೆಟ್‌ವರ್ಕ್ ಕ್ರಿಯೇಟ್ ಮಾಡುತ್ತಿದ್ದಾರೆ. ಅದು ಯಾವರೀತಿ ಎಂದರೆ, ಪ್ರತಿ ಹಳ್ಳಿಗಳಿಗೆ ತಮ್ಮ ಏಜೆಂಟ್‌ಗಳನ್ನು ಬಿಡುತ್ತಾರೆ. ಈ ಏಜೆಂಟ್‌ಗಳು ರೈತರ ಉತ್ಪನ್ನಗಳನ್ನು ತೆಗೆದುಕೊಳ್ಳುವಾಗ ಅಗ್ರಿಮೆಂಟ್ ಮಾಡಿಕೊಳ್ಳುತ್ತಾರೆ. Agro-Business Entities. ಈ entities, they enter into the agreement. ಯಾರ ಜೊತೆಗೆ ಎಂದರೆ, ರೈತರು ಮತ್ತು ಅವರ ದಲ್ಲಾಳಿಗಳ ಜೊತೆ. ಇಲ್ಲಿ ದಲ್ಲಾಳಿಗಳು ಹಳ್ಳಿ ಹಳ್ಳಿಗೂ ಹರಡುತ್ತಾರೆ. ಅಡ್ವಾನ್ಸ್ ಕೊಡುತ್ತಾರೆ. ಒಬ್ಬ ರೈತನ ಕೈಗೆ ಒಂದು ಲಕ್ಷ ರೂಪಾಯಿ ಕೊಟ್ಟ ತಕ್ಷಣ ಆತನಿಗೆ ಪ್ರಾಣ ಬಂದ ಹಾಗಾಗುತ್ತದೆ. ಆದರೆ ಅಗ್ರಿಮೆಂಟ್ ಆದಮೇಲೆ ಆತ ಬಹಳಷ್ಟು ಕಷ್ಟ ಅನುಭವಿಸುತ್ತಾನೆ. ಆತ ಕೊನೆಗೆ ನ್ಯಾಯಾಲಯಕ್ಕೆ ಹೋಗುವಂತಹ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದು ಈ ವಿಧೇಯಕದ ವಾಸ್ತವವಾಗಿದೆ. Corporate Sectors ಗೆ Agro-Business Sectors ಗೆ ಸಹಾಯ ಮಾಡುವುದಕ್ಕೆ ಇದನ್ನು ತರಲಾಗುತ್ತಿದೆ. 7 ತಿಂಗಳಲ್ಲಿ ಯಾವ ರೈತರಿಗೆ ಇದರಿಂದ ಸಹಾಯವಾಗಿದೆ? ಯಾರಿಗೆ ಒಳ್ಳೆಯದಾಗಿದೆ? ತುರ್ತಾಗಿ ಸುಗ್ರೀವಾಜ್ಞೆಯನ್ನು ತಂದಿದ್ದರಿಂದ ಯಾರಿಗೆಲ್ಲಾ ಸಹಾಯವಾಗಿದೆ ಎನ್ನುವುದು ನಮ್ಮ ರಾಜ್ಯದ ಜನತೆಗೆ ಗೊತ್ತಾಗಬೇಕು, ದಯವಿಟ್ಟು ಹೇಳಿ. ಈ ಕಾಯಿದೆ ಬಂದಿದ್ದರಿಂದ ಯಾರಿಗೆ ಒಳ್ಳೆಯದಾಗಿದೆ? ನಿಮ್ಮ Corporate friends ಗೆ wings C£ÀÄß correctly spread ಮಾಡಿ, ಸುಲಭವಾಗಿ ನಮ್ಮ ರಾಜ್ಯದಲ್ಲಿ ಬೇರು ಬಿಡುವುದಕ್ಕೆ ಇದನ್ನು ಜರೂರಾಗಿ ತಂದಿದ್ದೀರಿ. ನಿಮ್ಮ ಮೇಲೆ ದೆಹಲಿಯಿಂದ ಎಷ್ಟು ಒತ್ತಡ ಇದೆ ಎನ್ನುವುದು ನನಗೆ ಗೊತ್ತು. ಕೇವಲ ಕರ್ನಾಟಕದಲ್ಲಲ್ಲ, ಈ ಎ.ಪಿ.ಎಂ.ಸಿ. ಇಡೀ ದೇಶದಲ್ಲಿ ಬರುತ್ತಿದೆ. ಕೆಲವು ರಾಜ್ಯಗಳು ಇದನ್ನು ವಿರೋಧ ಮಾಡುತ್ತಿವೆ. ಅದಕ್ಕೋಸ್ಕರವೇ ಮಾನ್ಯ ಮೋದಿಯವರು, ಎಲ್ಲಾ ರಾಜ್ಯಗಳಲ್ಲೂ ಬಿಜೆಪಿ ಸರ್ಕಾರ ಇರಬೇಕು ಎಂದು ಹೇಳುತ್ತಾರೆ. ಇವತ್ತು ಜಿ.ಎಸ್.ಟಿ. ಏನಾಗಿದೆ? ನೋಟ್ ಬಂದಿ ಬಂತು. ಆಗ ಜನಕ್ಕೆ, Counterfeit Notes ಅನ್ನು ನಾವು ತೆಗೆಯುತ್ತೇವೆ, ಭ್ರಷ್ಟಾಚಾರವನ್ನು ನಿಲ್ಲಿಸುತ್ತೇವೆ, ಕಪ್ಪು ಹಣವನ್ನು ನಿಲ್ಲಿಸುತ್ತೇವೆ, ಭಯೋತ್ಪಾದನೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಲ್ಲಿಸುತ್ತೇವೆ ಎಂದು ಹೇಳಿದರು. ನೋಟ್ ಬಂದಿ ಮಾಡುವುದರಿಂದ 5 ಲಕ್ಷ ಕೋಟಿ ಹಣ ಸರ್ಕಾರಕ್ಕೆ ಬರುತ್ತದೆ ಎಂದು ತಿಳಿಸಿದರು. ಹಿಂದೆ ನಾನು ಕೆಲವು ಟಿ.ವಿ.ಗಳಿಗೆ ಸಂದರ್ಶನ ಕೊಟ್ಟಾಗ, ಇದರ ಹಿಂದೆ ಬಹಳ ದೊಡ್ಡ ಹುನ್ನಾರ ಇದೆ ಎಂದು ಹೇಳಿದ್ದೆ. ಅದರ ವಿವರಣೆ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಭಾಪತಿಯವರೇ, ನೋಟ್ ಬಂದಿ ಆದಮೇಲೆ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದವರು, 99.7 ಪರ್ಸೆಂಟ್ ಹಣ ವಾಪಸ್ಸು ಬಂತು ಎಂದು ಹೇಳಿದರು. 5 ಲಕ್ಷ ಕೋಟಿ ರೂಪಾಯಿಗಳು ಏನಾಯಿತು? Counterfeit Notes ನಿಂತಿದೆಯೇ? ಭಯೋತ್ಪಾದನೆ, ಕಪ್ಪು ಹಣ, ಭ್ರಷ್ಟಾಚಾರ ನಿಂತಿದೆಯೇ? ಏಷ್ಯಾದಲ್ಲೇ ಭ್ರಷ್ಟಾಚಾರದಲ್ಲಿ ಇಂಡಿಯಾ ನಂಬರ್ ಒನ್ ಎಂದು ಹೇಳುತ್ತಿದ್ದಾರೆ. ರಾತ್ರಿ 12 ಗಂಟೆಗೆ ಡೀಮಾನಿಟೈಸೇಷನ್ ಮಾಡಿ, ದೇಶಕ್ಕೆ ಎರಡನೆಯ ಸ್ವಾತ್ಯಂತ್ರ ತರುತ್ತಿದ್ದೇವೆ, ಒಕ್ಕೂಟದ ವ್ಯವಸ್ಥೆಯನ್ನು ಬಲಪಡಿಸುತ್ತಿದ್ದೇವೆ ಎಂದು ಹೇಳಿದಿರಿ. ನಮ್ಮ ಸಂವಿಧಾನ ಪ್ರಜಾಪ್ರಭುತ್ವಕ್ಕೆ ಏನೆಲ್ಲಾ ಶಕ್ತಿ ಕೊಟ್ಟಿತ್ತೋ ಆ ವ್ಯವಸ್ಥೆ ಎಲ್ಲವೂ ಇವತ್ತು ಸಡಿಲವಾಗುತ್ತಿದೆ. ಈ ಆ್ಯಕ್ಟ್ State subject ಆಗಿದೆ, it is not in Central List, it is in State List. ಆದರೂ ಒತ್ತಡ ತಂದು ದೇಶದ ಮಾರುಕಟ್ಟೆ ಉತ್ಪನ್ನಗಳನ್ನು, agricultural produce ಅನ್ನು ಹಿಡಿತದಲ್ಲಿ ಇಟ್ಟುಕೊಳ್ಳುವುದಕ್ಕೆ ಈ ಎರಡು ಸೆಕ್ಷನ್ಸ್ ಕೇವಲ it is a gate. ಮುಂದಿನ ದಿನಗಳಲ್ಲಿ ಬಹಳ ದೊಡ್ಡದಾಗಿ ಬೆಳೆದುಕೊಳ್ಳುತ್ತದೆ. ಆ ದೊಡ್ಡ ಬೇರುಗಳು ಉಳಿದುಕೊಳ್ಳುತ್ತವೆ. ಪಂಜಾಬ್‌ನಲ್ಲಿ ರೈತ ಚಳುವಳಿ ಏಕೆ ಅಷ್ಟೊಂದು ಗಂಭೀರವಾಗುತ್ತಿದೆ ಎಂದರೆ ಇದರ ಬಿಸಿ ಅವರಿಗೆ ತಟ್ಟಿದೆ. ಈಗಾಗಲೇ ಅಲ್ಲಿ ಫುಡ್ ಪಾರ್ಕ್‌ಗಳನ್ನು ಮಾಡಿದ್ದಾರೆ. ಅಲ್ಲಿ ಒಬ್ಬ ರೈತನ ಹತ್ತಿರ ಗೋದಿಯನ್ನು ಕೆ.ಜಿ.ಗೆ ರೂ. 8–10 ರಂತೆ ತೆಗೆದುಕೊಳ್ಳುತ್ತಾರೆ. ನಂತರ ಅದನ್ನು ಕಂಪನಿ, refine ಮಾಡುತ್ತಾರೋ, ಇನ್ನೊಂದು ಮಾಡುತ್ತಾರೋ ಆ ಗೋದಿಯನ್ನು ರೂ. 120ಕ್ಕೆ ಮಾರುತ್ತಿದ್ದಾರೆ. ಅಂದರೆ, 1000 ಪರ್ಸೆಂಟ್‌ಗಿಂತ ಜಾಸ್ತಿ ಬೆಲೆಗೆ ಮಾರಾಟ ಮಾಡುತ್ತಾರೆ. ಇಂತಹ ಒಂದು ವ್ಯವಸ್ಥೆ ಬರುತ್ತಿದೆ. ಅಗ್ರಿಮೆಂಟ್ ಮುಗಿಸಿಕೊಳ್ಳುತ್ತಾರೆ. ನಮ್ಮಲ್ಲಿ small and moderate farmers ಜಾಸ್ತಿ ಇದ್ದಾರೆ, 86–87 ಪರ್ಸೆಂಟ್, ನಮ್ಮಲ್ಲಿ ಕೇವಲ ಒಂದು ಹೆಕ್ಟೇರ್‌ಗಿಂತ ಕಡಿಮೆ ಜಾಗವನ್ನು ಹೊಂದಿರುವ ರೈತರಿದ್ದಾರೆ. ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ಇಂತಹ ಒಂದು ಕಾಯಿದೆ ಮಾರಕವನ್ನು ತರುತ್ತದೆ, ಇದರಿಂದ ಏನಾಗುತ್ತದೆ ಎಂದು ಹೇಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ ಇನ್ನು 5 ನಿಮಿಷದಲ್ಲಿ ನಿಮ್ಮ ಮಾತುಗಳನ್ನು ಮುಗಿಸಿ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಇನ್ನು ಸ್ವಲ್ಪ ಜಾಸ್ತಿ ಸಮಯ ಕೊಡಿ, ಮುಗಿಸುತ್ತೇನೆ. ಹಿಂದೆ ಮಾರುಕಟ್ಟೆ ನೀತಿ ಇತ್ತು. ಆ ನೀತಿಯಿಂದ ಪ್ರತಿವರ್ಷ ಎ.ಪಿ.ಎಂ.ಸಿ. ಮೂಲಕ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುಮಾರು ರೂ.600 ಕೋಟಿ ಸಂಗ್ರಹವಾಗುತ್ತಿತ್ತು. ಇದರಿಂದ ಸರ್ಕಾರಕ್ಕೆ ಇನ್‌ಕಮ್ ಟ್ಯಾಕ್ಸ್, ಜಿಎಸ್‌ಟಿ ಎಂದು ನೂರಾರು ಕೋಟಿ ಬರುತ್ತಿತ್ತು. ಇವತ್ತು ಅದೆಲ್ಲಾ ನಾಶವಾಗುತ್ತದೆ. Public Distribution System ಬಿದ್ದು ಹೋಗುತ್ತದೆ. ವೇರ್ ಹೌಸ್‌ಗಳು ಖಾಲಿಯಾಗುತ್ತವೆ. ರೈತರಿಂದ ಲಕ್ಷಾಂತರ ಟನ್ ಬೆಳೆಗಳನ್ನು ಸಂಗ್ರಹಣೆ ಮಾಡುತ್ತಿದ್ದೀರಿ, ಆದರೆ ಈಗ ನಿಮಗೆ ಯಾರು ಧಾನ್ಯಗಳನ್ನು ತಂದು ಕೊಡುತ್ತಾರೆ? ಕಂಪನಿಯವರು ಆ ಇಡೀ ಬೆಳೆಗಳನ್ನು ತೆಗೆದುಕೊಳ್ಳುತ್ತಾರೆ. Public Distribution System ಅಡಿ ಒಂದು ರೂಪಾಯಿಗೆ ಧಾನ್ಯವನ್ನು ಏನು ಕೊಡಲಾಗುತ್ತಿತ್ತೋ ಅದನ್ನು ಹೇಗೆ ಕೊಡುತ್ತೀರಿ? ನೀವು ಆ ರೀತಿ ಕೊಡಬೇಕು ಎಂದು ಕಂಪನಿಯವರ ಹತ್ತಿರ ಹೋಗಿ ಕೈ ಚಾಚಬೇಕು, negotiate ಮಾಡಬೇಕು. ಅವರು ಬೆಳೆಗಳನ್ನು ಸ್ಟಾಕ್ ಮಾಡುತ್ತಾರೆ. ನಮ್ಮ ರಾಜ್ಯದಲ್ಲಿ ಸುಮಾರು 518 ಎಪಿಎಂಸಿ ಗಳಿವೆ. ಕೇಂದ್ರ ಮತ್ತು ರಾಜ್ಯದ ವೇರ್ ಹೌಸ್‌ಗಳು ಬೇಕಾದಷ್ಟಿವೆ. ಕಂಪನಿಯವರು ಇವೆಲ್ಲವನ್ನೂ ಕಬ್ಜಾ ಮಾಡಿಕೊಳ್ಳುತ್ತಾರೆ. ಬಿ.ಎಸ್.ಎನ್.ಎಲ್. ಅನ್ನು 3ಜಿಗೆ ಸೀಮಿತಗೊಳಿಸಿದರು. ಬೇರೆ ಕಂಪನಿಗಳು 5ಜಿ ಗೆ ಹೋಗುತ್ತಿವೆ. ಹೀಗಿದ್ದರೆ ಬಿ.ಎಸ್.ಎನ್.ಎಲ್. ಹತ್ತಿರ ಯಾರು ಹೋಗುತ್ತಾರೆ? ಎಲ್ಲರೂ 5ಜಿ ಹೊಂದಿರುವಂತಹ ಕಂಪನಿಗೆ ಹೋಗುತ್ತಾರೆ. ನಮ್ಮ ಸರ್ಕಾರಿ ಸಂಸ್ಥೆಗಳನ್ನು ಯಾವರೀತಿ degrade ಮಾಡುತ್ತಿದ್ದೇವೆ ಎಂದರೆ, 108 ರೇಲ್ವೆಯನ್ನು ಖಾಸಗೀಕರಣಗೊಳಿಸಿ, ಇಂಡಿಯನ್ ರೇಲ್ವೆ ಎಂದು ಹಾಕುವ ಬದಲು, ಅವರ ಕಂಪನಿಯ ಹೆಸರುಗಳನ್ನು ಹಾಕುತ್ತಿದ್ದಾರೆ. ಮಂಗಳೂರಿನ ಏರ್‌ಪೋರ್ಟ್ ಹೆಸರು ಬಿಜೆ ಎಂದಿತ್ತು. ಈಗ ಅದು ಹೋಗಿ ಬೇರೆ ಹೆಸರು ಬಂದಿದೆ.

**ಶ್ರೀಮತಿ ಭಾರತಿ ಶೆಟ್ಟಿ:-** ಅದು ಬಹಳ ಕಡೆ ಆಗಿದೆ. ಅದು ಜನರಿಗೆ ಒಳ್ಳೆಯದಾಗುತ್ತಿದೆ.

**ಶ್ರೀ ಪಿ.ಆರ್.ರಮೇಶ್:-** ನಿಮಗೆ ಒಳ್ಳೆಯದಾಗುತ್ತಿದೆ. ಯಾವ ಜನರಿಗೆ ಒಳ್ಳೆಯದಾಗಿದೆ ದಯವಿಟ್ಟು ಹೇಳಿ. ರೈತರಿಗೆ, common people ಗೆ ಏನು ಒಳ್ಳೆಯದಾಗಿದೆ? Unorganised sector ನಲ್ಲಿ ಏನು ಬದಲಾವಣೆಯಾಗಿದೆ? ಇದು ಗಂಭೀರವಾದ ವಿಚಾರವಾಗಿದೆ. ಇವತ್ತು Public Distribution System ಹೋಯಿತು. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ರೈತರಿಗೆ ಏನೆಲ್ಲಾ urea subsidy, agricultural subsidy, equipment subsidy ಕೊಡುತ್ತಿದ್ದವೋ ಅವೆಲ್ಲವೂ ನಾಳೆ ಕಟ್ ಆಗುತ್ತದೆ. ಈಗ ರೈತರಿಗೆ ಕೊಡುತ್ತಿರುವ ಉಚಿತ ವಿದ್ಯುತ್ ಕಟ್ ಆಗುತ್ತದೆ. ರೈತರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಮಾಜಿಕವಾಗಿ ಸಾಕಷ್ಟು ಬೆಂದು-ನೊಂದು ಅವರು ಜೀವನವನ್ನು ಕಳೆದುಕೊಳ್ಳುವುದಕ್ಕೆ ಇದು ನಾಂದಿ ಆಗುತ್ತದೆ.

(ಮುಂದು . . .)

(1061) 9-12-2020 5.40 ಡಿಎಸ್-ಜಿಆರ್

**ಶ್ರೀ ಪಿ.ಆರ್.ರಮೇಶ್(ಮುಂದು):-**

ಎ.ಪಿ.ಎಂ.ಸಿ., ಕಾಯ್ದೆಗೆ ನೀವು ತಿದ್ದುಪಡಿ ತರುತ್ತಿರುವಂಥದ್ದು ಎರಡೇ ಸೆಕ್ಷನ್‌ಗೆ. ಇವತ್ತು ಎರಡು ಸೆಕ್ಷನ್ ತಿದ್ದುಪಡಿಯನ್ನು ತರುವ ಮೂಲಕ ಗೇಟ್‌ನಲ್ಲಿದ್ದಾರೆ. ಮುಂದೆ ರೂಲ್ಸ್ ಮಾಡುತ್ತಾರೆ. ಆ ರೂಲ್ಸ್ ಮಾಡಿದ ಮೇಲೆ ಕೇಂದ್ರ ಸರ್ಕಾರ ಮಧ್ಯ ಪ್ರವೇಶ ಮಾಡುತ್ತದೆ. ಅವರ ಶಿಫಾರಸ್ಸು ಬರುತ್ತದೆ. ಅದಕ್ಕೆ ಒಂದಿಷ್ಟು ಸೇರಿಸುತ್ತೀರಿ. ದೇಶದಲ್ಲಿ ಒಂದು ನೇಷನ್, ಒಂದು ಎ.ಪಿ.ಎಂ.ಸಿ., ಆಗುತ್ತದೆ. ಒಂದು ಮಾರ್ಕೆಟ್ ಆಗುತ್ತದೆ. ಇದು ದೇಶಕ್ಕೆ ಬಹಳ ದೊಡ್ಡ ಆಘಾತವಾಗುತ್ತದೆ. ರೈತರನ್ನು agro-business entity ಯವರು ಮೊಸಳೆ ಬಾಯಿಗೆ ಸಣ್ಣ ಪುಟ್ಟ ಪ್ರಾಣಿಗಳು ನದಿಗಳಿಗೆ ಅಥವಾ ಕೆರೆಗಳಿಗೆ ಹೋದಾಗ ಹೇಗೆ ಹಿಡಿದುಕೊಳ್ಳುತ್ತದೆ ಹಾಗೆ ಹಿಡಿದುಕೊಂಡು ಒಂದೊಂದನ್ನೇ ಮೊಸಳೆ ತಿನ್ನುತ್ತಿರುತ್ತದೆ. ರೈತರ ಬಾಳು ಹಾಳಾಗುತ್ತದೆ. ಅಗ್ರಿಮೆಂಟ್ ಮಾಡಿಕೊಂಡುಬಿಡುತ್ತಾರೆ. ಕೊನೆಗೆ ಏನು ಮಾಡುವುದಕ್ಕಾಗುವುದಿಲ್ಲ. ಈ ಕಾಯ್ದೆಯಲ್ಲಿರುವಂತಹ ವಿಷಯದ ಬಗ್ಗೆ ಮುಂದಿನ ದಿನಮಾನಗಳಲ್ಲಿ ಬಹಳಷ್ಟು ರೈತರು ನ್ಯಾಯಾಲಯಕ್ಕೆ ಹೋಗುತ್ತಾರೆ. ದಯವಿಟ್ಟು ನೀವು ತುಮಕೂರಿನಲ್ಲಿರುವಂತಹ ಫುಡ್ ಪಾರ್ಕ್‌ಗೆ ಒಂದು ಸಲ ಹೋಗಿ ನೋಡಿ. ನೀವು ಹೋಗಿದ್ದೀರೋ ಏನೋ ನನಗೆ ಗೊತ್ತಿಲ್ಲ. ಹೋಗಿದ್ದರೆ ಬಹಳ ಸಂತೋಷ, ಹೋಗದಿದ್ದರೆ ದಯವಿಟ್ಟು ಹೋಗಿ ಬನ್ನಿ. ಅಲ್ಲಿ ಏನು ನಡೆಯುತ್ತಿದೆ, ಯಾವ ರೀತಿ ನಡೆಯುತ್ತಿದೆ, ಏನೆಲ್ಲಾ ಮಾಡುತ್ತಿದ್ದಾರೆ, ಅವರಿಗೆ ಈ ಕಾಯ್ದೆಯನ್ನು ತಂದು ಹೇಗೆ ಸಹಾಯ ಮಾಡುತ್ತಿದ್ದಾರೆಂದರೆ ಸಂಪೂರ್ಣವಾಗಿ ಅವರು agricultural produce ಅನ್ನು ತೆಗೆದುಕೊಳ್ಳುವುದಕ್ಕೆ ನೆಟ್‌ವರ್ಕ್‌ನ್ನು ಕ್ರಿಯೆಟ್ ಮಾಡಿಬಿಟ್ಟಿದ್ದಾರೆ. ಆ ನೆಟ್‌ವರ್ಕ್ ಕ್ರಿಯೆಟ್ ಮಾಡುವುದಕ್ಕಾಗಿಯೇ ಇವರು Section 8(3) of the Act ಅನ್ನು ತೆಗೆದಿರುವುದು. ಬೇರೆಯವರೆಲ್ಲಾ ಹೋಬಳಿ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಕೃಷಿ ಮಾರುಕಟ್ಟೆ ಇತ್ತು ಅವರಿಗೆಲ್ಲಾ ಸರ್ಕಾರದ ಬದ್ಧತೆ ಏನಿತ್ತು, ಆ ಬದ್ಧತೆಯನ್ನೆಲ್ಲಾ ಸಂಪೂರ್ಣವಾಗಿ ಮುರಿದು ಹಾಕಿದರು. ಆ ಸಬ್-ಸೆಕ್ಷನ್ ತೆಗೆದು ಹಾಕಿಬಿಟ್ಟರು. ಇನ್ನೊಂದು ಸೆಕ್ಷನ್‌ನ್ನು ಹಾಕಿದರು. ಮಾರ್ಕೆಟ್ ಕಮಿಟಿಯಿಂದ ನಿಯಂತ್ರಣ ಎಂದು ಮಾಡಿದರು. ಆ ಕಮಿಟಿ ರೆಗ್ಯುಲೇಟ್ ಮಾಡುತ್ತದೆ. ಇಡೀ ರಾಜ್ಯದಲ್ಲಿ ಕೃಷಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ಪನ್ನಗಳ ಮಾರಾಟವನ್ನು ರೆಗ್ಯುಲೇಟ್ ಮಾಡತಕ್ಕಂಥದ್ದು ಮಾರ್ಕೆಟ್ ಕಮಿಟಿ. That is agro-business entity. ಅವರೇನು ಮಾಡುತ್ತಾರೆಂದರೆ, ಒಬ್ಬ ರೈತನ ಹತ್ತಿರ ಮೂರು ವರ್ಷ ಧಾನ್ಯವನ್ನು ಕೊಡಬೇಕೆಂದು ಅಗ್ರಿಮೆಂಟ್ ಮಾಡಿಕೊಳ್ಳುತ್ತಾರೆ. ಅವರು ಐವತ್ತು ಸಾವಿರ ರೂಪಾಯಿ, ಒಂದು ಲಕ್ಷ ರೂಪಾಯಿ ಅಡ್ವಾನ್ಸ್ ಕೊಟ್ಟು ಅಗ್ರಿಮೆಂಟ್ ಮಾಡಿಕೊಳ್ಳುತ್ತಾರೆ. ಆ ಅಗ್ರಿಮೆಂಟ್ ಮಾಡಿದ ಮೇಲೆ ಒಂದು ವರ್ಷ ಅವನ ಹತ್ತಿರ ತೆಗೆದುಕೊಂಡು ಒಳ್ಳೆಯ ಬೆಲೆ ಕೊಡುತ್ತಾರೆ. ಇನ್ನು ಒಂದು ವರ್ಷ ಬೆಲೆ ಹೆಚ್ಚಿಸುತ್ತಾರೆ. ಅವನಿಗೆ ಗೊತ್ತಿದೆ, ಒಂದು ಕೆ.ಜಿ. ಗೆ ನೂರು ರೂಪಾಯಿಗಳು ಎಂದು. ಎರಡನೇ ವರ್ಷ ಅಗ್ರಿಮೆಂಟ್ ಪ್ರಕಾರ ಅವರು 50 ರೂಪಾಯಿಗಳನ್ನು ಕೊಡಬೇಕು. ಆಗ ಅವನು ಏನು ಮಾಡುತ್ತಾನೆಂದರೆ, 50 ರೂಪಾಯಿಗಳಿಗೆ ಅವನ ಉತ್ಪನ್ನವನ್ನು ಕೊಡಲೇಬೇಕು. ಇಲ್ಲದಿದ್ದರೆ ನ್ಯಾಯಾಲಯಕ್ಕೆ ಹೋಗುತ್ತಾರೆ ಅಥವಾ ಬೇರೆ ಬೇರೆ ಲೆಕ್ಕದಲ್ಲಿ ರೈತನನ್ನು squeeze ಮಾಡುತ್ತಾರೆ. ಈ ರೀತಿ ನಡೆಯುತ್ತದೆ. ಆಮೇಲೆ Minimum Support Price ಪೂರ್ಣವಾಗಿ ಇಲ್ಲ. ಎ.ಪಿ.ಎಂ.ಸಿ., ಯನ್ನು ಸರ್ಕಾರದಿಂದ ಏನು ಮಾಡುತ್ತಾರೆ ಅದು ಸಂಪೂರ್ಣವಾಗಿ ಹೋಗಿಬಿಡುತ್ತದೆ. ಅದು ಹೋದಾಗ ರೈತ Minimum Support Price ಕೇಳುವುದಕ್ಕೆ ಬರುವುದೇ ಇಲ್ಲ. ಅವನು ನೇರವಾಗಿ agro-business entity ಜೊತೆ ಇರುತ್ತಾನೆ. ನೀವು ತಂದಿರುವುದು ಸಿಂಪಲ್ ಆಗಿ ಎರಡೇ ಸೆಕ್ಷನ್. ಇದು ನೋಡುವುದಕ್ಕೆ demonitisation ತರಹ ಕಾಣುತ್ತಿದೆ. ರಿಸರ್ವ್ ಬ್ಯಾಂಕ್‌ನವರು 99.7 ಪರ್ಸೆಂಟ್ ಕರೆನ್ಸಿ ನೋಟುಗಳು ವಾಪಸ್ಸು ಬಂದುಬಿಟ್ಟಿತು ಎಂದು ಹೇಳಿದರು. Demonitisation ಅನ್ನು ನವೆಂಬರ್–2016 ರಲ್ಲಿ ತಂದಾಗ ನಮ್ಮ ದೇಶದಲ್ಲಿ ಕ್ರಾಂತಿಕಾರಿಯಾದಂತಹ ಒಂದು ಆರ್ಥಿಕ ನೀತಿ ಬರುತ್ತಿದೆ, ಅದಕ್ಕೇನೋ ಮಾಡುತ್ತಿದ್ದಾರೆಂದು ನಾವು ತಿಳಿದುಕೊಂಡಿದ್ದೆವು. ಅದರಿಂದ ಇವತ್ತು ನಾವು ಎಲ್ಲಿ ಕುಳಿತಿದ್ದೇವೆ? ಇವತ್ತು ಪೂರ್ತಿಯಾಗಿ ನಮ್ಮ ಆರ್ಥಿಕತೆ minus twenty-seven ಗೆ ಹೋಗಿದೆ. ಪಾತಾಳಕ್ಕೆ ಹೋಗಿಬಿಟ್ಟಿದೆ, ನೆಲದಲ್ಲೂ ಇಲ್ಲ. ಆ ರೀತಿ ಇದು ಒಂದು. ಇವತ್ತು ನೀವು ತರುವ ಕಾಯ್ದೆಗಳು ಕೇಂದ್ರ ಸರ್ಕಾರದ್ದು, ಅದರ ನೀತಿಗಳು ಅಥವಾ ಕಾರ್ಯಕ್ರಮಗಳು ಜನರಿಗೆ ಮುಟ್ಟುತ್ತಿದೆಯೇ? ಅದರಿಂದ ಯಾರಿಗೆ ಸಹಾಯವಾಗುತ್ತಿದೆ? ಈ ಕಾಯ್ದೆಯನ್ನು ರಾಜ್ಯ ಸರ್ಕಾರ ತಂದಿಲ್ಲ. ಸರ್ಕಾರದ ಮೇಲೆ ಒತ್ತಡ ತಂದು ಏನು ಮಾಡಬೇಕೆಂದು ಎಗ್ಸಾಮಿನ್ ಮಾಡಿ ಕಳುಹಿಸಿರುವ ಆಧಾರದ ಮೇಲೆ ಈ ಕಾಯ್ದೆಯನ್ನು ತಂದಿದ್ದಾರೆ. ಈ ಕಾಯ್ದೆಯನ್ನು ತಂದು ನಮ್ಮ ರಾಜ್ಯದ ರೈತರು ಸಂಪೂರ್ಣವಾಗಿ ಸರ್ವನಾಶ ಆಗುತ್ತಾರೆ. ಅವರು ಮುಂದೆ ಭೂಮಿಯನ್ನು ಕಳೆದುಕೊಳ್ಳುತ್ತಾರೆಯೋ ಏನೋ ಗೊತ್ತಿಲ್ಲ. ಅದಕ್ಕೊಂದು ಕಾಯ್ದೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಂದಿದ್ದೀರಿ. ಲೇಬರ್ ಆಕ್ಟ್ ತಂದಿದ್ದೀರಿ. ಅದು ಕೂಡ ಬರುತ್ತದೆ. ಅದರಿಂದ repercussion, effects ಏನೆಲ್ಲಾ ಆಗುತ್ತದೆಂದು ಗೊತ್ತಾಗುತ್ತದೆ. ಜನಗಳಿಗೆ ಅಥವಾ ನಮ್ಮ ಸಾಮಾನ್ಯ ಜನಗಳಿಗೆ ಒಳ್ಳೆಯದಾಗುವಂತಹ ಕಾಯ್ದೆಗಳು ಯಾವುದು ಕಾಣುತ್ತಿಲ್ಲ. ಎಲ್ಲಾ ಕಠೋರವಾದಂತಹ ಕಾಯ್ದೆಗಳನ್ನು ಮಾತ್ರ ತರುತ್ತಿದ್ದಾರೆ. ಇದರಿಂದ ನಾಳೆ ದಿವಸ ಏನಾಗುತ್ತದೆಂದರೆ, ಗಂಭೀರವಾದಂತಹ ಸ್ಥಿತಿಗೆ ನಮ್ಮ ರಾಜ್ಯ ಬರುತ್ತದೆ, ನಮ್ಮ ದೇಶ ಕೂಡ ಬರುತ್ತದೆ. ಈ ಕಾಯ್ದೆಯನ್ನು ತರುತ್ತಿದ್ದಾರಲ್ಲಾ ಇನ್ನು ಒಂದು ವರ್ಷ ನೋಡಿ, ಇದರ ತೊಂದರೆಗಳೇನು ಎಂಬುದು ಗೊತ್ತಾಗುತ್ತದೆ. ಯಾವ ರೀತಿ ರೈತರು ಕುಣಿಯುತ್ತಾರೆ ಅಥವಾ ಅವರ ಸಂಕಟಗಳನ್ನು ತೋರಿಸಿಕೊಳ್ಳುತ್ತಾರೆಂಬುದು ಗೊತ್ತಾಗುತ್ತದೆ. ಒಂದೊಂದೇ ತೊಂದರೆಗಳು ಬರುತ್ತವೆ. ಅದುವರೆವಿಗೂ ಗೊತ್ತಾಗುವುದಿಲ್ಲ. Demonitisation ಮಾಡಿದಾಗ ಏನಾಯಿತು, ಜಿ.ಎಸ್.ಟಿ., ತಂದಾಗ ಏನಾಯಿತು, privatisation, ಒಂದೊಂದೇ ಲೀಸ್ ಕೊಡುತ್ತಿರುವುದು ಏನಾಯಿತು, ಅದೇ ರೀತಿ ಕಾರ್ಪೋರೇಟ್ ಕಂಪನಿಗೆ ಸಹಾಯ ಮಾಡುವುದಕ್ಕೆ ಸರ್ಕಾರ ಸುಗ್ರೀವಾಜ್ಞೆಯನ್ನು ತಂದಿದೆ. ಇದನ್ನು ತರುವುದಕ್ಕೆ ಜರೂರು ಏನಿದೆ? ಯಾವ ರೈತ ಇದನ್ನು ತೆಗೆದುಕೊಂಡು ಬರಬೇಕೆಂದು ಕೇಳಿದ್ದಾರೆ? ಬಿಜೆಪಿ ಗೆ ಅವರು ಓಟು ಹಾಕಿದ್ದಕ್ಕೆ ಅವರ ತಲೆಯ ಮೇಲೆ ಚಪ್ಪಡಿ ಕಲ್ಲನ್ನು ಹಾಕುತ್ತಿದ್ದಾರೆ ಎಂದಾಯಿತು. ಅದಕ್ಕೆ ಏನು ಬೇಕಾದರೂ ಮಾಡಬಹುದೇ? Consultative course ಹಾಕಿಕೊಳ್ಳಬೇಕು. ಎಷ್ಟು ಜನ ರೈತರ ಹತ್ತಿರ ಅವರು consultation ಮಾಡಿದ್ದಾರೆ? ಎಷ್ಟು ಜನರ ಹತ್ತಿರ ಅವರು consultation ಮಾಡಿದ್ದಾರೆ? Public domine ನಲ್ಲಿ ಎಷ್ಟು ಜನರ ಹತ್ತಿರ ಇದರ ಬಗ್ಗೆ ಮಾತನಾಡಿದ್ದಾರೆ? ಇದು ಚರ್ಚೆಯಲ್ಲ, ಇದೊಂದು ಡ್ರಾಫ್ಟ್. ಇದು ದೆಹಲಿಯಿಂದ ಬಂದಿರುವುದು. ಅದಕ್ಕೆ ತಕ್ಕಂಥೆ ಫ್ರೇಮ್ ಮಾಡಿದ್ದಾರೆ. ಎರಡು ಸೆಕ್ಷನ್‌ನಿಂದ ಇಡೀ Agricultural Produce Marketing ಏನಿದೆ ಆ ಮಾರ್ಕೆಟಿಂಗ್ ಸಂಪೂರ್ಣವಾಗಿ ಸರ್ವನಾಶ ಮಾಡುವುದಕ್ಕೆ ತಂದಿರುವಂತಹ ವಿಧೇಯಕವಾಗಿದೆ. ಇದರಿಂದ ನಮ್ಮ ರೈತಾಪಿ ಬಳಗ ಸಂಪೂರ್ಣವಾಗಿ ನಶಿಸಿ ಹೋಗುವಂಥದ್ದಾಗುತ್ತದೆ. ಅವರು ಸಿಕ್ಕಿಹಾಕಿಕೊಂಡು ಬಿಡುತ್ತಾರೆ, ಅದರಿಂದ ಅವರು ಬಿಡಿಸಿಕೊಳ್ಳುವುದಕ್ಕಾಗುವುದಿಲ್ಲ. ಆ ಪರಿಸ್ಥಿತಿ ತರುವಂತಹ ಕಾಯ್ದೆಯನ್ನು ಸರ್ಕಾರ ತಂದಿದೆ. ಸರ್ಕಾರ ಸುಗ್ರೀವಾಜ್ಞೆ ತಂದಿರುವುದು ಇದುವರೆವಿಗೂ ಎಷ್ಟು ಜನರಿಗೆ ಸಹಾಯವಾಗಿದೆ, ನಮ್ಮ ರಾಜ್ಯಕ್ಕೆ ಎಷ್ಟು ಸಹಾಯವಾಗಿದೆ, ನಮ್ಮ ಕೃಷಿಕರಿಗೆ ಎಷ್ಟು ಸಹಾಯವಾಗಿದೆ? ದಯವಿಟ್ಟು ಇದರ ಬಗ್ಗೆ ಉತ್ತರ ಕೊಡುವಾಗ ಮಾನ್ಯ ಸಚಿವರು ಹೇಳಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಡಾ॥ತಳವಾರ್ ಸಾಬಣ್ಣ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಾನು ಬಹಳ ಸಮಯ ತೆಗೆದುಕೊಳ್ಳುವುದಿಲ್ಲ ಮತ್ತು ನಾನು ಕಥೆಯೂ ಹೇಳುವುದಿಲ್ಲ, ಹಾಡು ಆಡುವುದಿಲ್ಲ. ಐದು ನಿಮಿಷದಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಾನು ಮನಸ್ಸು ಮಾಡಿದರೆ ಒಂದು ಗಂಟೆಯ ಸಮಯ ತೆಗೆದುಕೊಳ್ಳಬಹುದು. ನಾನು ಅರ್ಥಶಾಸ್ತ್ರದಲ್ಲಿ ಪ್ರೊಫೆಸರ್ ಆಗಿದ್ದೇನೆ. ನಾನು ಐದು ನಿಮಿಷದಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಇಡೀ ರಾಷ್ಟ್ರದ ಅರ್ಥ ವ್ಯವಸ್ಥೆ, ರಾಜ್ಯದ ಅರ್ಥ ವ್ಯವಸ್ಥೆ ಎಲ್ಲರಿಗೂ ಗೊತ್ತಿದೆ. ನಾನು ಅರ್ಥಶಾಸ್ತ್ರದ ಪ್ರೊಫೇಸರ್ ಆಗಿದ್ದೆ, ವಿದ್ಯಾರ್ಥಿ ಆಗಿದ್ದೆ. ನಾನು 35-40 ವರ್ಷ ಅದರಲ್ಲಿ ಅಧ್ಯಯನ ಮಾಡಿ ರಿಸರ್ಚ್ ಮಾಡಿ, ಈಗ ಇಲ್ಲಿ ಪ್ರವೇಶ ಮಾಡಿದ್ದೇನೆ. ಒಂದು ದುರಂತದ ಸಂಗತಿ ಎಂದರೆ, ಸ್ವತಂತ್ರ್ಯ ಸಿಕ್ಕಿ 70 ವರ್ಷಗಳಾದರೂ ಕೂಡ ರೈತರ ಹೆಸರಿನಲ್ಲಿ ನಾವು ಬಹಳ ಮಾತನಾಡುತ್ತೇವೆಯೇ ಹೊರತು ಒಂದು ಉತ್ತಮವಾದಂತಹ ಮಾರುಕಟ್ಟೆ ಕೊಡಲು ವಿಫಲರಾಗಿದ್ದೇವೆ. ಏಕೆಂದರೆ, ಇಲ್ಲಿ ಎ.ಪಿ.ಎಂ.ಸಿ., ತೆಗೆದು ಹಾಕುತ್ತಿಲ್ಲ, ಎ.ಪಿ.ಎಂ.ಸಿ., ಇರುತ್ತದೆ. ಎ.ಪಿ.ಎಂ.ಸಿ., ಯಲ್ಲಿ ಏನಾಗುತ್ತಿದೆ ಎಂದರೆ, ಎ.ಪಿ.ಎಂ.ಸಿ., ಗೆ ಹೋದಾಗ ಅಲ್ಲಿ ಸಂಘಟಿತರಾಗಿರುವಂತಹ ದಲ್ಲಾಳಿಗಳು, ವ್ಯಾಪಾರಿಗಳು ಇರುತ್ತಾರೆ. ಹೋಗತಕ್ಕಂಥ ರೈತರು ಅಸಂಘಟಿತರಾಗಿರುತ್ತಾರೆ. ಸಂಘಟಿತರಾಗಿರುವಂತಹ ಈ ದಲ್ಲಾಳಿಗಳು ಮತ್ತು ವ್ಯಾಪಾರಿಗಳು ಆರ್ಥಿಕ ದೃಷ್ಟಿಯಿಂದ ಬಲಿಷ್ಠರಾಗಿರುತ್ತಾರೆ. ಆದರೆ ರೈತರು ಮಾತ್ರ ಬಹಳ ವೀಕ್ ಇರುತ್ತಾರೆ. ಸಾಲ ತೆಗೆದುಕೊಂಡಿರುತ್ತಾರೆ ಮತ್ತು ಅವರ ಕುಟುಂಬದ ವೆಚ್ಚವನ್ನು ನಿಭಾಯಿಸಬೇಕಾಗಿರುತ್ತಾರೆ. ತರಾತುರಿಯಲ್ಲಿ ಅವರು ತಮ್ಮ ವಸ್ತುವನ್ನು ಮಾರಾಟ ಮಾಡಬೇಕಾಗಿರುತ್ತದೆ.

(ಮುಂದು)

1062/9-12-2020/5-50/ಬಿಕೆಪಿ-ಜಿಆರ್

**ಡಾ॥ ತಳವಾರ್ ಸಾಬಣ್ಣ** (ಮುಂದು):

ಅವರ ಕುಟುಂಬದ ವೆಚ್ಚವನ್ನು ನಿರ್ವಹಿಸಬೇಕಾಗಿದ್ದರಿಂದ ತರಾತುರಿಯಲ್ಲಿ ತಮ್ಮ ವಸ್ತುವನ್ನು ಮಾರಾಟ ಮಾಡಬೇಕಾಗಿರುತ್ತದೆ. ಇಂತಹ ದುರ್ವ್ಯವಸ್ಥೆಯನ್ನು ದಳ್ಳಾಳಿಗಳು ಉಪಯೋಗ ಮಾಡಿಕೊಳ್ಳುವುದನ್ನು ನಾವುಗಳು ಇಲ್ಲಿಯವರೆಗೆ ಕಂಡಿದ್ದೇವೆ. ನಮ್ಮ ಅಧ್ಯಯನಗಳ ಪ್ರಕಾರ ಶೇಕಡಾ 60 ರಿಂದ 70 ರಷ್ಟು ಸಣ್ಣ ರೈತರು ಸಣ್ಣ ಪ್ರಮಾಣದಲ್ಲಿ ಬೆಳೆಯುತ್ತಾರೆ. ಅದನ್ನು ಅವರು ಯಾವಾಗ ಮಾರುಕಟ್ಟೆಗೆ ತರುತ್ತಾರೆಂದರೆ ಅವರು ಕುಟುಂಬದ ವೆಚ್ಚವನ್ನು ಮತ್ತು ಬೇಕಾದಷ್ಟು ದವಸಧಾನ್ಯಗಳನ್ನಿಟ್ಟುಕೊಂಡು, ಉಳಿದುದನ್ನು ಮಾರುಕಟ್ಟೆಗೆ ತರುತ್ತಾರೆ. ಅದನ್ನು ತರಬೇಕಾದರೆ ಅವರುಗಳು ಸರ್ಕಸ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಸಣ್ಣ ರೈತರು ಮಾರುಕಟ್ಟೆಗೆ ಹೆಚ್ಚಿಗೆ ಧಾನ್ಯಗಳನ್ನು ತರುವುದಿಲ್ಲ. ಮಾರುಕಟ್ಟೆಗೆ ಬರುವವರು ಅಂದರೆ ಮಧ್ಯಮ ವರ್ಗದವರು ಮತ್ತು ದೊಡ್ಡ ದೊಡ್ಡ ರೈತರು. ಅವರು ಮಾರುಕಟ್ಟೆಗೆ ಬಂದಾಗ ಏನಾಗುತ್ತದೆ ಎಂದರೆ, 10 ರಿಂದ 16 ಸಂಖ್ಯೆಯವರೆಗೆ ಮಧ್ಯವರ್ತಿಗಳನ್ನು ಎದುರಿಸಬೇಕಾಗುತ್ತದೆ. ಒಬ್ಬ ರೈತ ತನ್ನ ವಸ್ತುವನ್ನು 10 ರೂ.ಗಳಿಗೆ ಮಾರಾಟ ಮಾಡಿದರೆ, ಅದೇ ವಸ್ತು ಗ್ರಾಹಕರಿಗೆ ತಲುಪಬೇಕಾದರೆ 50 ರೂಪಾಯಿಗಳಾಗುತ್ತದೆ. ರೈತಾಪಿ ಜನರಿಗೆ 10 ರೂ.ಗಳು ಸಿಕ್ಕಿದರೆ ಇನ್ನುಳಿದ 40 ರೂ.ಗಳನ್ನು ಅಂದರೆ, 10 ರಿಂದ 16 ದಳ್ಳಾಳಿಗಳು ತಮ್ಮ ಭಾಗವನ್ನು ಇದರಲ್ಲಿ ಪಡೆಯುತ್ತಾರೆ. ರೈತರಿಗೆ ಸಿಗುವುದು 10 ರೂ. ಮಾತ್ರ. ಈ 40 ರೂ.ಗಳನ್ನು ಪಡೆದವರು 70 ಲಕ್ಷ-80 ಲಕ್ಷ ರೂಪಾಯಿಗಳ ತೆರಿಗೆಯನ್ನು ಪಾವತಿಸುತ್ತಾರೆ. ಆ ವಿಷಯ ಇಲ್ಲಿ ಬೇರೆ. ಹೀಗಿರುವಾಗ ರೈತನಿಗೆ ಅನುಕೂಲವಾಗುವ ಸ್ಥಿತಿ ಯಾವಾಗ ಬರುತ್ತದೆ? ಮಧ್ಯವರ್ತಿಗಳಿಂದ ರೈತರು ಶೋಷಣೆಗೆ ಒಳಗಾಗುತ್ತಿರುವುದು ವಿಷವರ್ತುಲವಾಗಿ ಮಾರುಕಟ್ಟೆಯಲ್ಲಿ ಬೆಳೆದುಕೊಂಡು ಬಂದಿದೆ. ಇದಕ್ಕೆ ವಿಶೇಷ ಸರ್ಕಲ್ ಎಂದು ಕರೆಯುತ್ತೇವೆ. ಇದರಲ್ಲಿ 70 ವರ್ಷಗಳಿಂದ ರೈತ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿದ್ದಾನೆ. ಅವರಿಗೆ ಯಾವುದೇ ರೀತಿಯಿಂದ ಉಪಯೋಗವಾಗಿಲ್ಲ. ತೂಕದಲ್ಲಿ ವ್ಯಾಪಾರಿಗಳು ಏರುಪೇರು ಮಾಡುತ್ತಾರೆ. ತೆರಿಗೆಯನ್ನು ಸಹ ಅವರು ಕಟ್ಟುವುದಿಲ್ಲ. ಸೆಸ್, ದೇವರ ಕೆಲಸಕ್ಕೆಂದು ಆ ಹಣ ಈ ಹಣ ಕೊಡಿ ಎಂದು ಹೇಳಿ ರೈತರಿಂದ ಹಣ ವಸೂಲಿ ಮಾಡುತ್ತಾರೆ. ರೈತ ಮಾರುಕಟ್ಟೆಯಿಂದ ಹೊರಗಡೆ ಬರಬೇಕಾದರೆ ಅವನು ವಾಹನದಲ್ಲಿ ಓಡಾಡಲಿಕ್ಕೆ ಅವನ ಕಿಸೆಯಲ್ಲಿ ದುಡ್ಡು ಇರುವುದಿಲ್ಲ. ಇಂತಹ ಒಂದು ವ್ಯವಸ್ಥೆ ಎ.ಪಿ.ಎಂಸಿ., ಮಾರುಕಟ್ಟೆಯಲ್ಲಿದೆ. ಹೀಗಾಗಿ, ರೈತನಿಗೆ ಏನೂ ಸಿಗುತ್ತಿಲ್ಲ. ಇಂತಹ ಒಂದು ಸಂದರ್ಭದಲ್ಲಿ ನಾವು ಏನು ಮಾಡಬೇಕು? ಇತ್ತೀಚೆಗೆ ನಾವು ಹೊಸ ಬೆಳವಣಿಗೆಯನ್ನು ಸಾಮಾನ್ಯವಾಗಿ ಕಾಣುತ್ತೇವೆ. ಅದು ಏನೆಂದರೆ ರೈತರು ಸ್ಥಳೀಯವಾಗಿ ಅವರಿಗೆ ಇರತಕ್ಕಂತಹ ವ್ಯಾಪಾರಿಗಳು ಅಥವಾ ಫರ್ಟಿಲೈಸರ್ ವ್ಯಾಪಾರಿಗಳಾಗಿರಬಹುದು, ಸೀಡ್ಸ್ ವ್ಯಾಪಾರಿಗಳಾಗಿರಬಹುದು, ಅವರುಗಳು ರೈತರುಗಳಿಗೆ ಮುಂಗಡ ಸಾಲವಾಗಿ ಹಣ ಕೊಡುತ್ತಾರೆ. ಅವರು ಸಾಲವನ್ನು ಯಾವ ಒಂದು ಷರತ್ತಿನ ಮೇಲೆ ಕೊಡುತ್ತಾರೆಂದರೆ ಅವರು ಕೊಟ್ಟಂತಹ ಹಣಕ್ಕೆ 30-40% ಬಡ್ಡಿಯನ್ನು ಹಾಕುತ್ತಾರೆ ಮತ್ತು ರೈತರು ದವಸಧಾನ್ಯಗಳನ್ನು ಉತ್ಪಾದನೆ ಮಾಡಿದ ಮೇಲೆ, ಅದನ್ನು ಮಾರಾಟ ಮಾಡುವಾಗ ಆ ವ್ಯಾಪಾರಿಗಳಿಗೆ ಮಾರಾಟ ಮಾಡಬೇಕು. ಹೀಗಾಗಿ ರೈತರ ಹತ್ತಿರ ಯಾವುದೇ ಧಾನ್ಯಗಳು ಉಳಿಯುವುದಿಲ್ಲ. ನನಗೆ ಧಾನ್ಯ ಉಳಿಯದಿದ್ದರೂ ಪರವಾಗಿಲ್ಲ. ನನ್ನ ಸಾಲ ತೀರಿದರೆ ಸಾಕೆನ್ನುವ ಪರಿಸ್ಥಿತಿಗೆ ರೈತ ಬರುತ್ತಾನೆ. ಇಂತಹ ಸ್ಥಿತಿಯಲ್ಲಿ ನಾವು ಎ.ಪಿ.ಎಂ.ಸಿ.,ಗಳು ಇರಬೇಕೋ ಅಥವಾ ಬೇಡವೋ ಎನ್ನುವುದರ ಬಗ್ಗೆ ಯೋಚನೆಯನ್ನು ಮಾಡಬೇಕು. ಇಂತಹ ದುಸ್ಥಿತಿಯಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎ.ಪಿ.ಎಂ.ಸಿ.ಗಳನ್ನು ಇಟ್ಟುಕೊಂಡಿದ್ದರೂ ಸಹ ಕೆಲವೊಂದು ಬದಲಾವಣೆಗಳನ್ನು ತರಬೇಕೆಂದು ಅಪೇಕ್ಷಿಸಿದಾಗ ನಾವು ಅದನ್ನು ಸ್ವಾಗತಿಸಬೇಕು. ಏಕೆಂದರೆ, ತಮಗೆಲ್ಲರಿಗೂ ಗೊತ್ತಿರುವಂತೆ ಕೇಂದ್ರ ಸರ್ಕಾರವು ರೈತರ ಆದಾಯವನ್ನು ದ್ವಿಗುಣಗೊಳಿಸಬೇಕೆಂದು ಹೇಳುತ್ತಾರೆ. ಕಳೆದ ಮೂರು ದಿನಗಳಿಂದ ನಾನು ರೈತರ ಬಗೆಗಿನ ಮಾತುಗಳನ್ನು ಕೇಳುತ್ತಿದ್ದೇನೆ. ರೈತರ ಬಗ್ಗೆ ಎಲ್ಲರೂ ಮಾತನಾಡುತ್ತಾರೆ ಹಾಗೂ ಅವರ ಆದಾಯವನ್ನು ದ್ವಿಗುಣಗೊಳಿಸಬೇಕೆಂದು ಹೇಳುತ್ತಿದ್ದಾರೆ. ಇದಕ್ಕಿರುವ ಅಸ್ತ್ರವೆಂದರೆ, ರೈತನು ತನಗೆ ಎಲ್ಲಿ ಲಾಭ ದೊರೆಯುತ್ತದೆಯೋ ಅಲ್ಲಿ ಮಾರಾಟ ಮಾಡುವ ಸ್ವಾತಂತ್ರ್ಯವನ್ನು ನೀಡುವುದೇ ಇದರ ಉದ್ದೇಶವಾಗಿದೆ. ಇದನ್ನು ಹೊರತುಪಡಿಸಿ, ಅನ್ಯ ಮಾರ್ಗವಿಲ್ಲವೆಂದು ನನ್ನ ಅಪೇಕ್ಷೆಯಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಕಾಯ್ದೆಯಲ್ಲಿ ಬದಲಾವಣೆಗಳನ್ನು ತಂದರೆ ರೈತರು ಮಾಡಿಕೊಳ್ಳುವ ಆತ್ಮಹತ್ಯೆಯ ಪ್ರಮಾಣ ಕಡಿಮೆಯಾಗುತ್ತದೆ ಅಥವಾ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಮೇಯವು ಬರುವುದಿಲ್ಲ. ರೈತರು ಹಳ್ಳಿಗಳಿಂದ ಪಟ್ಟಣಗಳಿಗೆ ಹೋಗುವ ವಲಸೆಯನ್ನು ತಡೆಗಟ್ಟಬಹುದು. ಈ ಕಾಯ್ದೆಯಲ್ಲಿ ಆಗುವ ಮಾರ್ಪಾಡುಗಳನ್ನು ನಾನು ಸ್ವಾಗತಿಸುತ್ತೇನೆ. ನಾನು Economics Professor ಆಗಿ 70 ವರ್ಷಗಳ ನಂತರ ವಿದ್ಯಾರ್ಥಿಯಾಗಿ, ಪ್ರಾಧ್ಯಾಪಕನಾಗಿ, ಸಂಶೋಧಕನಾಗಿ ನೋಡುತ್ತಿದ್ದೇನೆ. ಈ 40 ವರ್ಷಗಳಲ್ಲಿ ಬದಲಾವಣೆಯ ಗಾಳಿ ಬರುತ್ತಿದೆ. ಇದನ್ನು ನಾವು ಸ್ವಾಗತಿಸಬೇಕೆಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ ನಮಸ್ಕರಿಸುತ್ತೇನೆ.

## 6. ಪ್ರಕಟಣೆ

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

'ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ 104 ನೇ ನಿಯಮದ ಮೇರೆಗೆ, ವಿಧಾನಸಭೆಯು ದಿನಾಂಕ 09/12/2020 ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುವುದು ಮತ್ತು ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

(1) ಕರ್ನಾಟಕ ಸಂಸದೀಯ ಕಾರ್ಯದರ್ಶಿಗಳ ವೇತನ, ಭತ್ಯೆಗಳು ಮತ್ತು ಸಂಕೀರ್ಣ ಉಪಬಂಧಗಳ (ನಿರಸನಗೊಳಿಸುವ) ವಿಧೇಯಕ, 2020

(2) ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕ, 2020

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**7. ಕರ್ನಾಟಕ ಕೃಷಿ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2020ರ ಮೇಲೆ ಮುಂದುವರೆದ ಚರ್ಚೆ**

**ಶ್ರೀ ಬಸವರಾಜ ಪಾಟೀಲ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಈಗಾಗಲೇ ನಮ್ಮ ಹಲವಾರು ಹಿರಿಯ ಸದಸ್ಯರು ಸಾಕಷ್ಟು ವಿಷಯಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಹೀಗಾಗಿ ನಾನು ಅಂತಹ ವಿಷಯಗಳ ಬಗ್ಗೆ ಪ್ರಸ್ತಾಪಿಸುವುದಿಲ್ಲ. ಕೇವಲ ಕೆಲವು ತಾಂತ್ರಿಕ ವಿಷಯಗಳನ್ನು ಹಾಗೂ ಅದನ್ನು ಯಾವ ರೀತಿಯಾಗಿ ಬಗೆಹರಿಸಬೇಕೆನ್ನುವುದರ ಬಗ್ಗೆ ಮಾತ್ರವೇ ತಮ್ಮ ಮುಖಾಂತರ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ. Raichur is one of the best markets in the State. ಅಲ್ಲಿ e-Market ಮತ್ತು e-tendering system ಇದೆ. ಇವತ್ತಿನ ದಿವಸ ಅಲ್ಲಿ ಯಾವುದೇ ರೀತಿಯಾದ ಮಾಲುಗಳು ಬರಲಿ, ಅಲ್ಲಿ ಖರೀದಿದಾರರು e-tendering ಮಾಡುತ್ತಾರೆ. ಹೀಗಾಗಿ ಅದರ ಮೌಲ್ಯ ಯಾರಿಗೂ ಸಹ ತಿಳಿಯುವುದಿಲ್ಲ. ಅಪರಾಹ್ನ 12 ಗಂಟೆಯ ನಂತರ ಟೆಂಡರ್‌ನ್ನು ತೆರೆಯಲಾಗುವುದು. ಯಾರು ಹೆಚ್ಚು ಮೊತ್ತವನ್ನು ಬಿಡ್ ಮಾಡಿರುತ್ತಾರೋ, ಅವರಿಗೆ ಟೆಂಡರ್‌ನ್ನು ನೀಡಲಾಗುವುದು. ಇಂತಹ ಒಳ್ಳೆಯ ವ್ಯವಸ್ಥೆಯು ಮಾರುಕಟ್ಟೆಯಲ್ಲಿದೆ. ಇತ್ತೀಚೆಗೆ, ಎಲ್ಲಾ ಬಿಡ್‌ದಾರರು ತಮ್ಮ ತಮ್ಮ ಮಾಲುಗಳನ್ನು ತೆಗೆದುಕೊಂಡರು. ಅಲ್ಲಿನ ಮಾರುಕಟ್ಟೆಯಲ್ಲಿ 250-300 ದೊಡ್ಡ ಅಂಗಡಿಗಳಿವೆ. ಆದರೆ ಒಬ್ಬ ಖರೀದಿದಾರ ಮಾತ್ರವೇ ಅಲ್ಲಿನ ಎಲ್ಲಾ ಅಂಗಡಿಗಳನ್ನು ಖರೀದಿ ಮಾಡಿ one fine day 32 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು. ಆದರೆ ಅದನ್ನು ಕೊಡದೇ, ಹಣವನ್ನು ತಾನೆ ತೆಗೆದುಕೊಂಡು ಹೋದನು. ಮಾರುಕಟ್ಟೆಯಲ್ಲಿನ ಒಂದು ಅಂಗಡಿಗೆ 10 ಲಕ್ಷ ರೂಪಾಯಿಗಳನ್ನು, ಮತ್ತೊಂದು ಅಂಗಡಿಗೆ 50 ಲಕ್ಷ ರೂಪಾಯಿಗಳನ್ನು, ಇನ್ನೊಂದು ಅಂಗಡಿಗೆ 70 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿತ್ತು. A.P.M.C., is valuable for this reason only. ಈ ಕಾರಣಕ್ಕಾಗಿಯೇ ಎ.ಪಿ.ಎಂ.ಸಿ.,ಗೆ ಮಹತ್ವವಿದೆ. ಉದಾಹರಣೆಗೆ ಹೇಳುವುದಾದರೆ, ಮಾನ್ಯ ಸಚಿವರ ಅಂಗಡಿಯೊಂದು ಇದೆ ಎಂದು ತಿಳಿದುಕೊಳ್ಳಿ, ಅಲ್ಲಿಗೆ ನಾವು ಮಾಲನ್ನು ಹಾಕಿರುತ್ತೇವೆ. ಅವರು ಅದನ್ನು ಯಾರೋ ಖರೀದಿದಾರರಿಗೆ ನೀಡುತ್ತಾರೆ. ಅಲ್ಲಿ ಬೆಳೆಗಳಿಗೆ ಅನುಗುಣವಾಗಿ 12, 10, 9 ದಿನಗಳನ್ನು ಪಾವತಿಗಾಗಿ ತೆಗೆದುಕೊಳ್ಳುತ್ತಾರೆ. ತೊಗರಿ ಬೆಳೆ 12 ದಿನಗಳು, ಹತ್ತಿಗೆ 20-22 ದಿನಗಳು ಇತ್ಯಾದಿಯಾಗಿ ಪ್ರತ್ಯೇಕವಾದ ಸಮಯಾವಕಾಶವಿದೆ. ಒಂದು ವೇಳೆ ಖರೀದಿದಾರರಿಗೆ ಮಾಲನ್ನು

ಕೊಡದೇ ಇದ್ದರೂ ಸಹ ನಿಗದಿತ ಸಮಯದೊಳಗೆ ರೈತರಿಗೆ ಹಣ ಪಾವತಿಸಬೇಕು. ಇಂದು ಒಂದು ರೀತಿಯಾದ safety factor ಆಗಿದೆ. ರೈತರು ಇವತ್ತಿನ ದಿನವೇ ನಾವು ಮಾಲನ್ನು ಮಾರಾಟ ಮಾಡಿದ್ದೇವೆ, ನಮಗೆ ಕಷ್ಟವಿದೆ, ಇವತ್ತಿನ ದಿನವೇ ಹಣದ ಅವಶ್ಯಕತೆ ಇದೆ ಎಂದು ಹೇಳಿದರೆ, ನಿಗದಿತ ಕಾಲಮಿತಿಯ ಶೇಕಡಾವಾರು ಮೊತ್ತವನ್ನು ಕಡಿತಗೊಳಿಸಿ, ಅಂಗಡಿಯವರು ಹಣ ಪಾವತಿ ಮಾಡುತ್ತಾರೆ. ಅದನ್ನೂ ಸಹ back page ನಲ್ಲಿ ಮುರಿಯುತ್ತಾರೆ. ಇದನ್ನು ಮಾನ್ಯ ಲಕ್ಷ್ಮಣ ಸವದಿರವರು ಪ್ರಸ್ತಾಪಿಸಿದ್ದರು. ಎ.ಪಿ.ಎಂ.ಸಿ.ಯಲ್ಲಿ ಸ್ವಲ್ಪ ಮಟ್ಟಿಗಾದರೂ ಇಂತಹ ಸುರಕ್ಷತೆ ಇರುತ್ತದೆ. ಮುಂದಿನ ದಿನಗಳಲ್ಲಿ 'ತೆರೆದ ಮಾರುಕಟ್ಟೆ' ಪ್ರಾರಂಭವಾಗುತ್ತದೆ. ಇದರಿಂದ ಒಳ್ಳೆಯದೇ ಆಗುತ್ತದೆ. ಆದರೆ, ಅದು ಬೇರೆ ವಿಷಯವಾಗಿದೆ. ಈಗಾಗಲೇ ಶೇಕಡ 70 – 90 ರಷ್ಟು ಮಾಲುಗಳನ್ನು ತೆರೆದ ಮಾರುಕಟ್ಟೆಯಿಂದಲೇ ಖರೀದಿ ಮಾಡುವುದನ್ನು ನಾನು ನೋಡಿದ್ದೇನೆ. ಮಾನ್ಯ ಸದಸ್ಯರು ಶುಗರ್ ಕೇನ್ ಬಗ್ಗೆ ಪ್ರಸ್ತಾಪಿಸಿದ್ದಾರೆ. ಹಿಂದೆ ನಮ್ಮಲ್ಲಿ ಶುಗರ್ ಕೇನ್ ಕಾರ್ಖಾನೆಯು ಹೊಸದಾಗಿ ಪ್ರಾರಂಭವಾಗಿತ್ತು. ಆಗಲೂ ಸಹ ನಾನು ಈ ಸದನದ ಸದಸ್ಯನಾಗಿದ್ದೆನು. ಆಗ ಕಾರ್ಖಾನೆಯವರು ನನ್ನನ್ನು ಮಾತನಾಡಿಸಿದಾಗ, ನಾನು ಅವರಿಗೆ ಯಾವ ರೀತಿಯ ಅನುಕೂಲವಾಗಬೇಕೆಂದು ಕೇಳಿದೆನು. ನಮ್ಮ ಭಾಗದಲ್ಲಿ ತುಂಗಭದ್ರಾ ಮತ್ತು ಕೃಷ್ಣಾ ನದಿಗಳು ಹರಿಯುತ್ತವೆ. ಅವುಗಳ ಮಧ್ಯ ಭಾಗದಲ್ಲಿ ಕಾರ್ಖಾನೆಯನ್ನು ಪ್ರಾರಂಭಿಸುವುದಾಗಿ ತಿಳಿಸಿದ್ದರು. ಅಲ್ಲಿ ಒಂದು ಲಕ್ಷಕ್ಕೂ ಹೆಚ್ಚಿನ ನೀರಾವರಿ ಪ್ರದೇಶಗಳಿವೆ. ಅವರೇ ತಿಳಿಸಿದಂತೆ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸಲು ಅವರಿಗೆ 50-60 ಗ್ರಾಮಗಳ ಅವಶ್ಯಕತೆ ಇತ್ತು. ಒಂದು ಸಕ್ಕರೆ ಕಾರ್ಖಾನೆ viable ಆಗಬೇಕಾದರೆ, ಅದನ್ನು ಪ್ರಾರಂಭಿಸಲು ಪರವಾನಿಗೆಯನ್ನು ನೀಡಬೇಕಾದರೆ, ಇಂತಿಷ್ಟು ನೀರಾವರಿ ಪ್ರದೇಶವಿದ್ದರೆ ಮಾತ್ರವೇ ಅದು viable ಆಗುವಂತಹ ನಿಯಮವನ್ನಿಟ್ಟುಕೊಂಡೇ ಕಾರ್ಖಾನೆಗೆ ಪರವಾನಿಗೆಯನ್ನು ನೀಡುತ್ತಾರೆಯೇ ಹೊರತು ಇಂತಹ ನಿರ್ದಿಷ್ಟ ಪ್ರದೇಶದಲ್ಲಿಯೇ ಕಾರ್ಖಾನೆಯನ್ನು ಪ್ರಾರಂಭಿಸಬೇಕೆಂಬ ನಿಯಮವೇನೂ ಪರವಾನಿಗೆಯಲ್ಲಿಲ್ಲ. ಅಲ್ಲಿನ ಗ್ರಾಮಗಳನ್ನು ಗಣನೆಗೆ ತೆಗೆದುಕೊಂಡು ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸಲು ಪರವಾನಿಗೆಯನ್ನು ನೀಡಲಾಗಿರುತ್ತದೆ ವಿನಃ ಇಂತಹ ಗ್ರಾಮದಲ್ಲಿಯೇ ಪ್ರಾರಂಭಿಸಬೇಕೆಂಬ ನಿಯಮವನ್ನು ಸರ್ಕಾರ ವಿಧಿಸಿರುವುದಿಲ್ಲ. So, the farmer is at liberty to sell his produce anywhere in our State or other State also. ನಾವು ಮಹಾರಾಷ್ಟ್ರ ರಾಜ್ಯದಲ್ಲಿ ನೋಡುತ್ತಿದ್ದೇವೆ. ಒಂದು ವೇಳೆ ಕಬ್ಬಿನ ಬೆಲೆ ಜಾಸ್ತಿ ಇದ್ದರೆ, ನಮ್ಮ ರೈತರು ನಮ್ಮ ರಾಜ್ಯದ ಕಾರ್ಖಾನೆಯವರಿಗೆ ಕಬ್ಬನ್ನು ನೀಡದೇ, ನೆರೆಯ ಮಹಾರಾಷ್ಟ್ರ ರಾಜ್ಯದ ಕಾರ್ಖಾನೆಯವರಿಗೆ ನೀಡುತ್ತಾರೆ. ಒಮ್ಮೊಮ್ಮೆ ಮಹಾರಾಷ್ಟ್ರ ರಾಜ್ಯದಲ್ಲಿ ಬೆಳೆದ ಕಬ್ಬು ನಮ್ಮ ರಾಜ್ಯಕ್ಕೆ ಬರುವ ಸಂದರ್ಭಗಳೂ ಸಹ ಇರುತ್ತವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ಆಶಯವೇನೆಂದರೆ, ಮಾಲನ್ನು ಯಾರೇ ಖರೀದಿ ಮಾಡಲಿ, ರೈತರಿಗೆ security ನೀಡಬೇಕು. ಮುಂದಿನ ದಿನಗಳಲ್ಲಿ ಯಾವುದೇ ಒಂದು ಕಂಪೆನಿ ಸ್ಥಾಪನೆಯಾಗಬಹುದು, ಆಗ 10 ಸಾವಿರ ಕ್ವಿಂಟಾಲ್ ತೊಗರಿಯನ್ನು ಖರೀದಿ ಮಾಡುವಂತಾಗಬಹುದು. ರೈತನಿಗೆ ಸರಿಯಾದ ರೀತಿಯಲ್ಲಿ ಹಣ ನೀಡಿಲ್ಲವೆಂದಾದರೆ, ಆಗ ಸರ್ಕಾರವು ಏನು ಮಾಡುತ್ತದೆ? ಈ ರೀತಿಯ ಸಮಸ್ಯೆಯನ್ನು ಬಗೆಹರಿಸುವುದರಲ್ಲಿಯೂ ಸಹ ಸರ್ಕಾರವು ಗಮನಹರಿಸಬೇಕು. ಏಕೆಂದರೆ ಯಾರೋ ಒಬ್ಬರು ಬಂದು ಮಾಲನ್ನು ಖರೀದಿಸಿ, ನಂತರದ ದಿನಗಳಲ್ಲಿ ಚೆಕ್ಕನ್ನು ನೀಡುವುದಾಗಿ ತಿಳಿಸುತ್ತಾರೆ. ಹಾಗೆ ಹೋದವರು ಪುನಃ ಹಿಂದಿರುಗಿ ಬರುವುದೇ ಇಲ್ಲ. ನಂತರ, ನ್ಯಾಯಾಲಯದಲ್ಲಿ ವ್ಯಾಜ್ಯವನ್ನು ಬಗೆಹರಿಸುವುದು ಬಹಳ ದೊಡ್ಡ ಸಮಸ್ಯೆಯಾಗುತ್ತದೆ.

(ಮುಂದು)

**(1063) 09.12.2020 06.00 ಎಸ್‌ವಿ-ಎಂಡಿ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಪಾಟೀಲ್ ಇಟಗಿ (ಮುಂದು):-**

ಇಲ್ಲಿಯೇ ಚೀಲವನ್ನು ತುಂಬಿ ನೆಟ್ ಹಾಕಿರುವ labour charge ಅನ್ನು ಕೊಡುವುದಕ್ಕೆ ನಮ್ಮ ಬಳಿ ಹಣವಿರುವುದಿಲ್ಲ. 10-20 ಮಂದಿಯನ್ನು ಕರೆದುಕೊಂಡು ಚೀಲ ತುಂಬಿ ನೆಟ್ ಹಾಕಿ ಬರುತ್ತಾರೆ. ಅವರಿಗೆ ಕೂಲಿ ಕೊಡುವುದಕ್ಕೆ ದುಡ್ಡು ಇರುವುದಿಲ್ಲ. ಅಂಥದ್ದರಲ್ಲಿ ಸಮಯ ಬಂದರೆ ಕೋರ್ಟ್‌ಗೆ ಹೋಗಿ ಎಂದು ಹೇಳುತ್ತಾರೆ. ಅಂತಹ ಪರಿಸ್ಥಿತಿ ನಿರ್ಮಾಣವಾಗುವುದನ್ನು ಇಂದು ಈ ಕಾಯಿದೆಯಲ್ಲಿ ನಾವು ನೋಡಬಹುದು. ಇದಕ್ಕೆ ತಾವು ಪರಿಹಾರ ಹುಡುಕಬೇಕು.

ಇಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳು, ಮಾನ್ಯ ಸಚಿವರು ಎಲ್ಲರೂ ಇದ್ದಾರೆ. ಈ MSP (Minimum Support Price) ಎನ್ನುವುದು ಬಹಳ ಮುಖ್ಯವಾದ ವಿಷಯ. ಇಂದು ರೈತರಿಗೆ ನೀವೇನಾದರೂ ಒಳ್ಳೆಯದನ್ನು ಮಾಡಬೇಕಾದರೆ ಪ್ರತಿಯೊಂದು product ಗೂ ಜೂನ್ ತಿಂಗಳಿನಲ್ಲಿ MSP ಅನ್ನು ನಿಗದಿ ಪಡಿಸಬೇಕು. ಈ ಹಿಂದೆ ಮಾನ್ಯ ಎಸ್.ಎಂ.ಕೃಷ್ಣ ಅವರ ಸರ್ಕಾರವಿದ್ದಾಗ ನಾವು "ರೈತರ ಬಗ್ಗೆ ತಾವು ಏನೂ ಮಾಡುತ್ತಿಲ್ಲವೆಂದು ಪ್ರತಿ ವರ್ಷ ರೂ.500 ಕೋಟಿಗಳ Revolving Fund ಅನ್ನು ಪ್ರಾರಂಭಿಸಿ ಎಂದು ಹೇಳಿದ್ದೆವು. ಈಗ ನಮಗೆ ರೂ.2.5 ಲಕ್ಷ ಕೋಟಿಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಯವ್ಯಯವಿದೆ. ರೂ.5,000 ಅಥವಾ ರೂ.10,000 ಕೋಟಿ ರೈತರ ಸಲುವಾಗಿ ಮೀಸಲಿಡಲು ಏನೂ ತೊಂದರೆಯಿರುವುದಿಲ್ಲ. ಪ್ರತಿವರ್ಷ ರೂ.10,000 ಕೋಟಿಗಳ Revolving Fund ಅನ್ನು ಮಾಡಿ. ಉದಾಹರಣೆಗೆ ರಾಯಚೂರು ಮಾರುಕಟ್ಟೆಯಲ್ಲಿ *RAPCMS (Raichur Agricultural Produce Co-operative Marketing Society)* ಹಾಗೂ ಇತರ Institutions ಇವೆ. ಅಲ್ಲಿ MSP ತೆಗೆದುಕೊಳ್ಳಲು ಅವಕಾಶವಿದೆ. ಆ ಒಂದು ಅಂಗಡಿಯಲ್ಲಿ MSP ತೆಗೆದುಕೊಳ್ಳುತ್ತಾರೆಂದು ತಿಳಿದ ತಕ್ಷಣ ಉಳಿದ 250 ಅಂಗಡಿಗಳಲ್ಲಿಯೂ ಬ್ಯಾಲೆನ್ಸ್ ಬರುವುದನ್ನು ನಾವು ಕಾಣುತ್ತೇವೆ. ಕಳೆದ ವರ್ಷ ತೊಗರಿಗೆ ರೂ.4,800, 5,100, 5,300ಗಳನ್ನು ತೆಗೆದುಕೊಳ್ಳುತ್ತಿದ್ದರು. ಯಾವಾಗ ಸರ್ಕಾರವು Marketing Federation ಖರೀದಿ ಕೇಂದ್ರಗಳನ್ನು ಪ್ರಾರಂಭಿಸಿತೋ ತಕ್ಷಣ ರೂ. 5,600, 5,700 ಈ ರೀತಿ ಬೆಲೆಯೇರಿತು. Marketing Federation ಅನ್ನು effective ಆಗಿ ಪ್ರಾರಂಭಿಸಿದ ನಂತರ ರೂ.6,000ಕ್ಕೆ ಬಂದಿತು. ರೂ.50–100ಗಳ ವ್ಯತ್ಯಾಸಕ್ಕೆ ರೈತ ತಲೆ ಕೆಡಿಸಿಕೊಳ್ಳುವುದಿಲ್ಲ. ಪ್ರತಿಯೊಂದು ಮಾರುಕಟ್ಟೆಯಲ್ಲಿಯೂ MSP competitive rate ಅನ್ನು ಇಡತಕ್ಕ ಕೆಲಸ ಮಾಡಿದಾಗ ಮಾತ್ರ ರೈತರಿಗೆ ಬೆಲೆ ಸಿಗುತ್ತದೆ. ಇಲ್ಲದಿದ್ದರೆ ಖರೀದಿ ಮಾಡುವವನು ಶೇ.100 exploit ಮಾಡುವುದೇ ಅವನ ಗುರಿಯಾಗಿರುತ್ತದೆ. ಎಲ್ಲಿಯವರೆಗೆ MSP ಅನ್ನು ಸರಿ ಮಾಡುವುದಿಲ್ಲವೋ ಅಲ್ಲಿಯವರೆಗೆ ಏನೂ ಆಗುವುದಿಲ್ಲ.

ಪ್ರತಿ ವರ್ಷವೂ ಕಬ್ಬು ಬೆಳೆಗಾರರು ನಮಗೆ ಕಾರ್ಖಾನೆಯಿಂದ ಹಣ ಬಂದಿಲ್ಲವೆಂದು ಹೇಳುತ್ತಾರೆ. ಅದಕ್ಕೇನಾದರೂ ಒಂದು ಪರಿಹಾರ ಹುಡುಕಬೇಕಲ್ಲವೆ? ಯಾವುದಾದರೊಂದು ಕಾನೂನು ತರಬೇಕು. ಒಂದು ವೇಳೆ ಕಾರ್ಖಾನೆಯವರು ಹಣ ಕೊಡದಿದ್ದರೆ ಬ್ಯಾಂಕ್‌ಗೆ ಲಿಂಕ್ ಮಾಡಬೇಕು. ರೈತನು ಇಷ್ಟು ಟನ್ ಕಬ್ಬು ಕೊಟ್ಟಿದ್ದಾನೆ, ಮೊದಲನೆಯ ಕಂತು, ಎರಡನೆಯ ಕಂತು ಎಂಬುದನ್ನು ನಿಗದಿ ಪಡಿಸಬೇಕು. ಆ capacity ಇರುವವರಿಗೆ ಮಾತ್ರ ಕಬ್ಬು ಕಾರ್ಖಾನೆಯನ್ನು ಕೊಡಬೇಕು. ಇಲ್ಲದಿದ್ದರೆ ಕೊಡಬಾರದು. ಪ್ರತಿ ವರ್ಷ ಧರಣಿ ಮಾಡುವುದೇ ಆಗಿದೆ. ಇದನ್ನು ಎಷ್ಟು ದಿವಸ ಕೇಳಬೇಕು? ಇದೆಲ್ಲವೂ MSP ಯ ಮೇಲೆ ಅವಲಂಬಿತವಾಗಿದೆ. ಆದ್ದರಿಂದ MSP ಅನ್ನು ನಿಗದಿಪಡಿಸಬೇಕು. ರೈತರನ್ನು ಕರೆದು cost of cultivation ಅನ್ನು ನೋಡಿ, ಸಾಧ್ಯವಾದಷ್ಟು ರೈತರಿಗೆ ಅನುಕೂಲ ಮಾಡಿಕೊಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಬಸವರಾಜ ಇಟಗಿಯವರೇ, ಈಗ ತಾವು ಕಬ್ಬಿನ ವಿಷಯವನ್ನು ಪ್ರಸ್ತಾಪಿಸಿರುವುದರಿಂದ ನಾವು ಅನಿವಾರ್ಯವಾಗಿ ಮಾತನಾಡಬೇಕಾಗುತ್ತದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಉಪಮುಖ್ಯಮಂತ್ರಿಯವರೇ, ತಾವು ಹೇಳಿ. ನನಗೆ ತಿಳಿದಿರುವುದನ್ನು ನಾನು ಹೇಳಿದ್ದೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಈಗಾಗಲೇ ಅದಕ್ಕೆ ಕೇಂದ್ರ ಸರ್ಕಾರವು recovery basis ಮೇಲೆ ದರ ನಿಗದಿ ಪಡಿಸಿರುತ್ತದೆ. ಅದಕ್ಕೆ ರೈತ ಕಬ್ಬು ಕಳುಹಿಸಿದ 14 ದಿನಗಳೊಳಗಾಗಿ ಹಣವನ್ನು ಕೊಡದಿದ್ದರೆ ಅವನಿಗೆ ಬಡ್ಡಿ ಸಮೇತ ಪಾವತಿ ಮಾಡಬೇಕೆಂಬ ಕಾನೂನು ಇದೆ. ಮಾನ್ಯ ಎಸ್.ಆರ್.ಪಾಟೀಲರು, ನಾನು ಹಾಗೂ ಇನ್ನಿತರ ಸಾಕಷ್ಟು ಮಂದಿ ಇದ್ದಾರೆ. ರಾಜಕಾರಣಿಗಳು ಇದ್ದಾರೆ, ರಾಜಕಾರಣಿಗಳನ್ನು ಹೊರತುಪಡಿಸಿದವರೂ ಇದ್ದಾರೆ. 14 ದಿನಗಳಲ್ಲಿ ಕಬ್ಬಿಗೆ ಕಾರ್ಖಾನೆ ಮಾಲೀಕ ಹಣ ಕೊಡದೆ ಹೋದರೆ including interest ಕೊಡಬೇಕು ಎಂದು ಕಾನೂನು ಇದೆ. 16% ಬಡ್ಡಿ ಇದೆ. ಕಾನೂನು ಇದ್ದರೂ ಸಹ ಅದನ್ನು ಜಾರಿಗೆ ತರಲಿಕ್ಕೆ ಆಗಿರುವುದಿಲ್ಲ. ಪರವಾನಗಿಯನ್ನು ನೀಡುವಾಗ capacity ಯನ್ನು ನೋಡಿ ಕೊಡಬೇಕೆಂದು ತಾವು ಹೇಳಿದಿರಿ. ಬ್ಯಾಂಕ್‌ನವರು ಸಾಲ ಕೊಡುವಾಗಲೇ ಕಾರ್ಖಾನೆಯ ಮಾಲೀಕನ ಆಸ್ತಿಯನ್ನು pledge ಮಾಡಿಕೊಂಡಿರುತ್ತಾರೆ. Plant, Machinery and Property including private property ಸಹಿತ pledge ಮಾಡಿಕೊಂಡಿರುತ್ತಾರೆ. ನಮ್ಮ ದೇಶದಲ್ಲಿ ವ್ಯವಸ್ಥೆ ಆ ರೀತಿಯಾಗಿದೆ. ನಾವೆಲ್ಲರೂ ಹೇಳುತ್ತೇವೆ, ಭಾಷಣ ಮಾಡುತ್ತೇವೆ. ರೈತರ ಹಿತವನ್ನು ಕಾಪಾಡಬೇಕು, ರೈತರನ್ನು ಉಳಿಸಬೇಕು ಎಂದೆಲ್ಲಾ ಹೇಳಿ ರೈತರನ್ನು ಅಟ್ಟಕ್ಕೇರಿಸುತ್ತೇವೆ. ವಾಸ್ತವಿಕವಾಗಿ ನಾವು ರೈತರನ್ನು ಉಳಿಸುವಂತಹ ಕೆಲಸದಲ್ಲಿ ಅವರ ಹಿತವನ್ನು ಕಾಪಾಡಿದ್ದೇವೆ ಎಂದು ಪ್ರಾಮಾಣಿಕವಾಗಿ ನಮ್ಮ ಎದೆಯ ಮೇಲೆ ಕೈ ಇಟ್ಟು ಹೇಳಿದರೆ ರೈತರಿಗೂ ಸ್ವಲ್ಪ ಸಮಾಧಾನವಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಇಟಗಿಯವರೇ, ಇದು *FRP (Fair and Remunerative Price)* ಎಂದು ಹೇಳಿ ಪ್ರತಿ ಟನ್ ಕಬ್ಬಿನ *recovery* ಯ ಮೇಲೆ ನಿಗದಿಯಾಗಿರುತ್ತದೆ. ಉದಾಹರಣೆಗೆ ನಾವು ಒಂದು ಸಕ್ಕರೆ ಕಾರ್ಖಾನೆಯನ್ನು ನಡೆಸುತ್ತೇವೆ. *FRP* ನ ಪ್ರಕಾರ *excluding transportation harvesting* ರೂ.2300ರ ಸಮೀಪ ಬೀಳುತ್ತದೆ. ಹೆಚ್ಚು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*recovery* ಇದ್ದವರಿಗೆ ರೂ.2500ರ ತನಕ ಕೊಟ್ಟಿದ್ದಾರೆ. ನಮ್ಮದು ರೂ.2300 *FRP* ಇದ್ದರೂ *we are paying Rs. 2500.* ಅವರು ಹೇಳಿದಂತೆ 14 ದಿನಗಳಲ್ಲಿ ಕೊಡಲಿಕ್ಕಾಗುವುದಿಲ್ಲ. ರೂ.200/- ಪ್ರತಿ ಟನ್‌ಗೆ ಎಂದರೆ ಸುಮಾರು 15 ಲಕ್ಷ ಟನ್ ಕಬ್ಬು *crush* ಮಾಡಿದರೆ ರೂ.30 ಕೋಟಿ *extra* ಕೊಡಬೇಕಾಗುತ್ತದೆ. ಇಂತಹ ಕಾರ್ಖಾನೆಯಲ್ಲಿ ಇಷ್ಟು ಹಣ ಕೊಡುತ್ತಾರೆ, ನೀವೇಕೆ ಕೊಡುವುದಿಲ್ಲ ಎಂದು ರೈತರು ಪ್ರಶ್ನಿಸುತ್ತಾರೆ. FRP ಎಂದು ಹೇಳಿದರೆ ನಿಮ್ಮದೇನಿದೆಯೋ ನಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. Recovery ಕೆಲವರಿಗೆ ಹೆಚ್ಚಿರುತ್ತದೆ, ಕೆಲವರಿಗೆ ಕಡಿಮೆ ಇರುತ್ತದೆ. ಕೆಲವು ಮಂದಿಗೆ distillery, co-generation ಇರುತ್ತದೆ, ಕೆಲವು ಮಂದಿಗೆ distillery, co-generation ಇರುವುದಿಲ್ಲ. In general, FRP ಗಿಂತಲೂ ಕಡಿಮೆ ನೀಡಿದರೆ ನಮ್ಮನ್ನು prosecute ಮಾಡಲು ಕಾನೂನು ಇದೆ. FRP ಗಿಂತಲೂ ಕಡಿಮೆ ಕೊಡುವ ಹಾಗೆ ಇಲ್ಲ ಎಂದು ಕೇಂದ್ರ ಸರ್ಕಾರದವರು ನಿಗದಿ ಪಡಿಸಿದ್ದಾರೆ. ಅದರ ಮೇಲೂ ರೂ.200 ಕೊಡುವಂತಹ ಪರಿಸ್ಥಿತಿ ಇದೆ. ಹೀಗಾಗಿ ರೈತರಿಗೆ ನ್ಯಾಯವಾದ ಬೆಲೆ ಸಿಗುತ್ತದೆ ಎಂಬುದು ನನ್ನ ಭಾವನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ನನ್ನ ಮನವಿ ಏನೆಂದರೆ ಇವೆಲ್ಲಾ ಸಮಸ್ಯೆಗಳನ್ನು ಪ್ರತಿ ವರ್ಷ ಎಲ್ಲಾ ಸರ್ಕಾರಗಳು, ಎಲ್ಲಾ ಸಚಿವರು ಎದುರಿಸುತ್ತವೆ. ಆದ್ದರಿಂದ ಸಾಧ್ಯವಾದಷ್ಟು ಒಳ್ಳೆಯದನ್ನು ಮಾಡುವ ನಿಟ್ಟಿನಲ್ಲಿ ಸರ್ಕಾರ ಯೋಚನೆ ಮಾಡಬೇಕು.

MSP ಬಗ್ಗೆ ಬಹಳ ಗಂಭೀರವಾಗಿ ಯೋಚಿಸಬೇಕು. ಮೊನ್ನೆ ಸಚಿವರನ್ನು ಭೇಟಿಯಾಗಿ ಮಾತನಾಡಿದೆನು. ನಮ್ಮ ಬಳಿ paddy ಬಂದಿದ್ದು, ಸಿಕ್ಕಾಪಟ್ಟೆ ಮಳೆಯಾಗಿ ಶೇ.50 ಸಹ yield ಬಂದಿರುವುದಿಲ್ಲ. ನಮ್ಮ MSP Rs. 1866/- per quintal ಇದೆ. ಅಲ್ಲಿ ರೂ. 1030 – 1050 per 75 Kg bag ಮಾರಲಾಗುತ್ತಿದೆ. It is around Rs. 1200/- ಹೋಗುತ್ತದೆ. ಈಗ ನಮಗೆ ರೂ.600 ಕಡಿಮೆ ಆಯಿತು. ರೈತರು ಕೇಳುವುದೇನೆಂದರೆ 1866+500 ಹೆಚ್ಚುವರಿ ಕೊಡಿ ಎಂದು. ತೆಂಗು ಮುಂತಾದವುಗಳಿಗೆ ಕೊಟ್ಟಹಾಗೆ ನಮಗೂ ಕೊಡಿ ಎಂದು ಮನವಿ ಮಾಡುತ್ತಿದ್ದೇವೆ. Basic price ನಲ್ಲಿಯೇ ರೂ.600 ಕಡಿಮೆ ಇದೆ. ಈ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರದವರು ಮಾರುಕಟ್ಟೆ ಬೆಲೆ slump ಆಗಿದೆ ಎಂದು ತಿಳಿದ ತಕ್ಷಣ ಒಂದು ಖರೀದಿ ಕೇಂದ್ರವನ್ನು ಪ್ರಾರಂಭಿಸಬೇಕು. ಒಂದು ದಿನಕ್ಕೆ ಕೇವಲ 1000 ಕ್ವಿಂಟಾಲ್ ಅಷ್ಟೇ ಖರೀದಿ ಮಾಡಬೇಕು. ಖರೀದಿ ಕೇಂದ್ರ ಪ್ರಾರಂಭವಾಯಿತೆಂದರೆ ರೈಸ್ ಮಿಲ್‌ನವರು 150-200 ರೂ,ಗಳು ಹೆಚ್ಚಿಸುತ್ತಾರೆ. 1050 ಇದ್ದುದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

1250 ಆಗುತ್ತದೆ. ಮಾನ್ಯ ಅಲ್ಲಂ ವೀರಭದ್ರಪ್ಪನವರು ಹೇಳಿದಂತೆ Cotton Corporation of India (CCI) ದು best marketing ಇದೆ. ಪ್ರತಿವರ್ಷ ಮಾರುಕಟ್ಟೆ ಏರುವ ವೇಳೆಗೆ CCI ನವರು ಅಲ್ಲಿ ಮಿಲ್ ಪ್ರಾರಂಭಿಸಿ ಕುಳಿತು ಬಿಡುತ್ತಾರೆ. ಅವರ MSP ದರ 5,800 ಇದೆ. ಒಂದು ತಿಂಗಳು ಅವರು ತಡವಾಗಿ ಪ್ರಾರಂಭಿಸಿದರು. ಮೊದಲು ನಮ್ಮ ಹತ್ತಿ ರೂ.4800, 4900, 5000 ವರೆಗೆ ಇತ್ತು. ಯಾವಾಗ ಮಾರುಕಟ್ಟೆ ಪ್ರಾರಂಭವಾಗುತ್ತದೆ ಎಂದು ತಿಳಿಯಿತೋ ಆಗ ರೂ.5,200 ಆಯಿತು. ಈಗ ಅಲ್ಲಿ CCI ಪ್ರಾರಂಭವಾಗಿದ್ದು, ರೂ.5,600 ಇದೆ. ನಾನು ಒಬ್ಬ ಹತ್ತಿ ಬೆಳೆಯುವ ರೈತ. ನಾವು ಅಲ್ಲಿ ಕ್ಯೂನಲ್ಲಿ ನಿಂತು CCI ಗೆ ಮಾರುವ ಬದಲು ಪಕ್ಕದಲ್ಲಿರುವ ಮಿಲ್‌ನವರು ರೂ.5,650, 5,700 ಕೊಡುತ್ತಾರೆ. ಅಲ್ಲಿಯೇ ಕೊಟ್ಟುಬಿಡುತ್ತೇವೆ. ನನಗೆ around ರೂ.5800 ಸಿಕ್ಕ ಹಾಗೆ ಆಗುತ್ತದೆ. ಈ ತರಹ MSP ರೈತರಿಗೆ ಅನುಕೂಲ ಎಷ್ಟು ಆಗುತ್ತದೆ ಎಂಬುದನ್ನು ತಾವು ಗಮನಿಸಬೇಕು. ಪ್ರತಿ ವರ್ಷ ರೂ.10,000 ಕೋಟಿ Revolving Fund ಇಟ್ಟುಕೊಳ್ಳಿರಿ.

**(...ಮುಂದು)**

(1064) 09.12.2020 6.10 ಕೆಜಿ–ಎಂಡಿ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಪಾಟೀಲ್ ಇಟಗಿ (ಮುಂದು):-**

ಯಾವಾಗ ಅವಶ್ಯಕತೆ ಇರುವುದಿಲ್ಲವೋ ಆಗ ಸರ್ಕಾರಕ್ಕೆ ಬಳಕೆ ಮಾಡಿ. ಬೇರೆ ಬೇರೆ ಕೆಲಸಗಳಿಗೆ ಬಳಕೆ ಮಾಡಿ. ನಾವು ಬೇಡ ಎನ್ನುವುದಿಲ್ಲ. ಆದರೆ, revolving fund ಇರಬೇಕಲ್ಲವೇ; ಇವತ್ತು ಟೊಮೋಟೋ, ತೆಂಗಿನ ಕಾಯಿ, ಕಾಟನ್ pulses ಕಡಿಮೆ ಆಯಿತು ಎಂದರೆ, ತಕ್ಷಣ ಸರ್ಕಾರ ಇದೆ ಎಂದರೆ, ರೈತರಿಗೆ ಒಂದು ಆತ್ಮವಿಶ್ವಾಸ ತರುವಂತಹ ಕೆಲಸ ಆಗಬೇಕಲ್ಲವೇ; ರೈತರು ಬಂದು ಸಚಿವರ ಕಛೇರಿ ಮುಂದೆ ಧರಣಿ ಮಾಡಿ ನಮಗೆ ಖರೀದಿ ಕೇಂದ್ರ ಕೊಡಿ ಎಂದು ಹೋರಾಟ ಮಾಡಿದ ಮೇಲೆ ತೆಗೆಯುವುದರಲ್ಲಿ ಅರ್ಥ ಏನಿದೆ? A farmer should feel that the Government is with him. ಇವತ್ತು ನಮಗೆ ಏನಾದರೂ ಕಷ್ಟ ಬಂದಾಗ ಸರ್ಕಾರ ನಮ್ಮ ಜೊತೆಗೆ ಇದೆ ಎನ್ನುವಂತಹ feel ಬರಬೇಕು. ಅದನ್ನು feel ಮಾಡುವುದಕ್ಕೆ ಆಗುತ್ತಿಲ್ಲ. ಸುಮ್ಮನೆ ಕಾಟಾಚಾರಕ್ಕೆ ಖರೀದಿ ಕೇಂದ್ರ ತೆಗೆಯುತ್ತೇವೆಂದರೆ, that is not the way. ದಯವಿಟ್ಟು ಇದರ ಬಗ್ಗೆ ಮಾನ್ಯ ಸಚಿವರು ಪರಿಶೀಲನೆ ಮಾಡಬೇಕು. ಸದನದಲ್ಲಿ ಸಾಕಷ್ಟು ಜನ ಹಿರಿಯ ಸದಸ್ಯರು ಇದ್ದೀರಿ. ಮಾನ್ಯ ಕೃಷಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರು ನಮ್ಮ ರಾಜ್ಯದ ಅನೇಕ ಜಿಲ್ಲೆಗಳಿಗೆ ಭೇಟಿಕೊಟ್ಟು ರೈತರ ಕಷ್ಟಗಳನ್ನು ಆಲಿಸಿ ಬಂದಿದ್ದಾರೆ. ನಮ್ಮ ಸರ್ಕಾರ ಇದ್ದಾಗಲೂ ಇದನ್ನೇ ಹೇಳಿರುತ್ತಾರೆ. ನಿಮ್ಮ ಸರ್ಕಾರ ಇದ್ದಾಗಲೂ ಸಹ ಇದನ್ನೇ ಹೇಳುತ್ತೀದ್ದಿರಿ. 'ಹೊಸ ಕೃಷಿ ನೀತಿ' ಜಾರಿಗೆ ತರುತ್ತೇವೆಂದು ಹೇಳಿದ್ದಾರೆ. ಏನು ಹೊಸ ಕೃಷಿ ನೀತಿಯನ್ನು ಜಾರಿಗೆ ತರುತ್ತಾರೆ. ಇದು ಏನೆಂದು ನಮಗೆ ತಿಳಿಯುತ್ತಿಲ್ಲ. ನಾನು ಐದು ವರ್ಷಗಳಿಂದ ಸದನಕ್ಕೆ ಬರುತ್ತಿದ್ದೇನೆ. ಮುಂದೆ ಇನ್ನೊಂದು ವರ್ಷ ಇದನ್ನೇ ಕೇಳುತ್ತೇನೆ. ಅಲ್ಲಿಗೆ ಒಟ್ಟು ಆರು ವರ್ಷಗಳ ಕಾಲ ಇದನ್ನು ಕೇಳಿದಂತೆ ಆಗುತ್ತದೆ. ಆದರೆ, ಹೊಸ ಕೃಷಿ ನೀತಿಯಲ್ಲಿ ಏನು ಇರುವುದಿಲ್ಲ.

ಮಾನ್ಯ ಸಭಾಪತಿಯವರೇ, ನಾವು ಚಿಕ್ಕವರಾಗಿದ್ದಾಗ ಶಾಲೆಯ ರಜೆಯ ದಿವಸಗಳಲ್ಲಿ ಊರಿಗೆ ಹೋಗುತ್ತಿದ್ದೆವು. ನನ್ನನ್ನು ಧಾರವಾಡದ ಹಾಸ್ಟೆಲ್‌ನಲ್ಲಿ ಬಿಟ್ಟಿದ್ದರು. ಸುಮಾರು 15 ರಿಂದ 30 ದಿವಸಗಳ ಕಾಲ ರಜೆಯ ದಿವಸಗಳಲ್ಲಿ ಊರಿನಲ್ಲಿ ಇರುತ್ತಿದ್ದೆ. ಆಗಿನ ಕಾಲದಲ್ಲಿ ಹಳ್ಳಿಗಳಿಗೆ ಖರ್ಜೂರದ ಹಣ್ಣು ಬರುತ್ತಿತ್ತು. ನಮ್ಮ ತಾಯಿಯವರು ನಮಗೆ ಎಂದೂ ಸಹ ಹಣ್ಣುಗಳನ್ನು ಕೊಳ್ಳಲು ಹಣವನ್ನು ಕೊಟ್ಟಿಲ್ಲ. ಆಗ ನಾವು ನಮ್ಮ ತಾಯಿಯವರನ್ನು ಖರ್ಜೂರದ ಹಣ್ಣು ಬಂದಿದೆ ಎಂದು ಹೇಳಿದರೆ, ಆಗ ಅವರು ಖರ್ಜೂರ ಹಣ್ಣಿಗೆ ಬದಲಾಗಿ ಸ್ವಲ್ಪ ಜೋಳ ಅಥವಾ ಹತ್ತಿಯನ್ನು ಕೊಟ್ಟು ಕೊಡಿಸುತ್ತಿದ್ದರು. ಆಗ barter system ಇತ್ತು. ಆಗಿನ ಕಾಲದಲ್ಲಿ ಯಾವ ರೈತನ ಬಳಿಯು ಸಹ ಹಣ ಇರಲಿಲ್ಲ. 90% barter system ಇರುತ್ತಿತ್ತು. ನಮ್ಮ ತಂದೆಯವರು ಒಕ್ಕಲುತನ ಮಾಡುತ್ತಿದ್ದರು. ಆಗ ನಾವು ಬೆಳೆಯುತ್ತಿದ್ದ ಜೋಳದಲ್ಲಿಯೇ ಕೂಲಿಕಾರ್ಮಿಕರ ವರ್ಷದ ಸಂಬಳ ಎಲ್ಲವೂ ಹೋಗಿ ಉಳಿದಿದ್ದು ಮಾತ್ರ ಮಾರುಕಟ್ಟೆಗೆ ಹೋಗುತ್ತಿತ್ತು. ಆಗ cashless ಇತ್ತು. ಈಗ digital system ಇದೆ.

ಮಾನ್ಯ ಸಭಾಪತಿಯವರೇ, ನನಗೆ ಯಾರೋ ಒಬ್ಬ ವ್ಯಕ್ತಿ ಎಸ್.ಬಿ.ಐ.,ರವರು ಎಂದು ಫೋನ್ ಮಾಡಿದ್ದ. ಆಗ ನಾನು ಸ್ವಲ್ಪ ಬೇರೆ ಕೆಲಸದಲ್ಲಿ busy ಯಾಗಿ ಇದ್ದೆ. ಆತ ನನಗೆ ನಿಮ್ಮದ್ದು ಸ್ವಲ್ಪ SBI ATM card number ಗೆ ಸಂಬಂಧಿಸಿದಂತೆ feeding ನಲ್ಲಿ ವ್ಯತ್ಯಾಸಗಳಾಗಿರುವುದರಿಂದ ಅದನ್ನು ಬದಲಾವಣೆ ಮಾಡಬೇಕಾಗಿದೆ ಎಂದು ಹೇಳಿದ. ಆಗ ನಾನು ಆ ವ್ಯಕ್ತಿಯನ್ನು ಎಲ್ಲಿಂದ ಮಾತನಾಡುತ್ತಿದ್ದೀರಿ ಎಂದು ಕೇಳಿದೆ. ಆತ ಎಸ್.ಬಿ.ಐ., ಸೆಂಟ್ರಲ್ ಬ್ಯಾಂಕಿನಿಂದ ಎಂದು ಹೇಳಿದ. ಆಗ ನಾನು ತಕ್ಷಣವೇ ನನ್ನ ATM card number ಅನ್ನು ಹೇಳಿಬಿಟ್ಟೆ. ನಂತರ ರೂ.49,500/-ಗಳನ್ನು ಡ್ರಾ ಮಾಡಿದ್ದರು. ನಾನು ಪೊಲೀಸ್ ಠಾಣೆಗೆ ದೂರು ಕೊಟ್ಟೆ, ಯಾರನ್ನಾದರೂ ಹಿಡಿದಿದ್ದಾರೆಯೇ? ಆ ಘಟನೆಯಾದ ಮೇಲೆ ನನಗೆ ಅರಿವು ಬಂದಿದೆ. ಈ ಪರಿಸ್ಥಿತಿ digital system ದ್ದು ಇದೆ. ದೂರು ಕೊಡಬೇಕೆಂದು ಎಲ್ಲವನ್ನು ಬರೆದುಕೊಟ್ಟೆ. Cyber Crime ನಲ್ಲಿ ನನ್ನ ಗೆಳೆಯ ಇನ್ಸ್‌ಪೆಕ್ಟರ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದ್ದಾನೆ. ಎಷ್ಟು ಬರೆದುಕೊಟ್ಟರೆ ಏನು ಪ್ರಯೋಜನ? ನನಗೆ ಪೋನ್ ಮಾಡಿದ್ದವರಿಗೆ ಪೋನ್ ಮಾಡಿದರೆ, ಅದು ಬಿಹಾರದ ಭಿಕ್ಷುಕರ ನಂಬರ್ ಬರುತ್ತದೆ. ನನಗೆ ಯಾವ ಮೊಬೈಲ್ ನಂಬರ್‌ನಿಂದ ಮಾಡಿದ್ದರೋ ಅವರು ಭಿಕ್ಷುಕರು ಇರುತ್ತಾರೆ. ಅವರ ಕೈಯಲ್ಲಿ ಮೊಬೈಲ್ ಇರುವುದಿಲ್ಲ. ಬಾಂಬೆ ಇಲ್ಲವೇ ರಾಯಘಡದಲ್ಲಿ ಇರುವಂತಹವರ ಮೊಬೈಲ್ ನಂಬರ್ ಇರುತ್ತದೆ. ಅವರನ್ನು ಯಾರು ಬಂಧಿಸುತ್ತಾರೆ. ನಮಗೆ ಆಗಿನ ಕಾಲದಲ್ಲಿ guarantee ಇತ್ತು. ನಾವು ನೇರವಾಗಿ ಹತ್ತಿ ತೆಗೆದುಕೊಂಡು ಹೋಗಿ ಅಂಗಡಿಗೆ ಕೊಟ್ಟು ಅದಕ್ಕೆ ಎಷ್ಟು ಖರ್ಜೂರದ ಹಣ್ಣು ಬರುತ್ತಿತ್ತು ಅಷ್ಟನ್ನು ತೆಗೆದುಕೊಂಡು ಮನೆಗೆ ಬರುವ ದಾರಿಯ ಮಧ್ಯದಲ್ಲಿಯೇ ತಿಂದುಬಿಡುತ್ತಿದ್ದೆವು. ಕರದಂಟು, ಪೇಪರ್ ಮಿಠಾಯಿ, ಖರ್ಜೂರದ ಹಣ್ಣು, biscuit ಗಳು ಏನು ಸಿಗುತ್ತಿದ್ದವು ಅವುಗಳನ್ನು ತಿನ್ನುತ್ತಿದ್ದೆವು. ಆದರೆ, ನಾವು ಆ ಕಾಲದಲ್ಲಿ ಬಹಳ ಸಂತೋಷವಾಗಿದ್ದೆವು. ಆಗ ಜೀವನ ಬಹಳ ಸುಂದರವಾಗಿತ್ತು. Marketing system was used only when it was required. ಇಲ್ಲವೆಂದರೆ ಅನಾವಶ್ಯಕವಾಗಿ ಮಾರುಕಟ್ಟೆಗೆ ಹೋಗುತ್ತಿರಲಿಲ್ಲ. ಈ cash flow ಆದ ಮೇಲೆ 99% ಮಾರುಕಟ್ಟೆಗೆ ಬರುವಂತಹ ಪರಿಸ್ಥಿತಿ ಬಂದಿದೆ. ಅದು one of the factors ಆಗಿದೆ. Exploitation ಆಗುವುದು ಇಲ್ಲಿ. ಯಾವುದೇ ಒಂದು ವಸ್ತುವನ್ನು ರೈತ produce ಮಾಡಿದ ಮೇಲೆ ಅದು consumer ಗೆ ಹೋಗುವಷ್ಟರಲ್ಲಿ ಸಿಕ್ಕಾಪಟ್ಟೆ ಬೆಲೆ ಜಾಸ್ತಿಯಾಗುತ್ತದೆ. This is where the Government has to control. ಇವತ್ತು ರೈತರಿಗೆ 10 ರೂಪಾಯಿ ಕೊಡುತ್ತೀರಿ, ತಾವು ಎಷ್ಟು ಕೊಡುತ್ತೀರಿ ಅಷ್ಟರಲ್ಲಿಯೇ ಏನಾದರೂ ಮಾಡಿ ರೈತ ಜೀವನ ಮಾಡಿಕೊಂಡು ಸಂತೋಷವಾಗಿದ್ದಾರೆ. But you are not able to reduce that gap. ಅದರ ಬಗ್ಗೆ ಯಾರು ತಲೆಕೆಡಿಸಿಕೊಳ್ಳುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಬೇಗ ಮಾತನಾಡಿ ಮುಗಿಸಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, 5 ರಿಂದ 10 ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ. ತಾವು ಸಮಯ ಕೊಟ್ಟರೆ ಮಾತನಾಡುತ್ತೇನೆ. ಇಲ್ಲವೆಂದರೆ ನಾನು ಬಹಳ ತಲೆ ತಿನ್ನುವುದಿಲ್ಲ. ನಾನು ಬಿಲ್ಲಿನ ಬಗ್ಗೆ ಮಾತನಾಡುತ್ತಿದ್ದೇನೆ. ಮಾನ್ಯ ಸದಸ್ಯರಾದ ಶ್ರೀ ಮಲ್ಕಾಪೂರೆ ರವರು ಮುಂದಿನ ದಿವಸಗಳಲ್ಲಿ ಔಡಲೇ ಬೆಳೆಯುತ್ತಾರೆ. ಅದಕ್ಕೆ ಮಾರುಕಟ್ಟೆ ಎಲ್ಲಿದೆ ಎಂಬುದು ಗೊತ್ತಿದೆಯೇ? ಸರ್ಕಾರ ಯಾವುದಾದರೂ ಎ.ಪಿ.ಎಂ.ಸಿ.,ಯಲ್ಲಿ marketing information ಅನ್ನು ಇಟ್ಟಿದೆಯೇ? ನಮ್ಮ ರಾಜ್ಯದಲ್ಲಿ ಸಾಕಷ್ಟು ಬೆಳೆಗಳನ್ನು ಬೆಳೆಯುತ್ತೇವೆ. ಆ ಬೆಳೆಗಳಿಗೆ ಎಷ್ಟು ಬೆಲೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದೆ. ಅದಕ್ಕೆ ಎಲ್ಲಿ ಮಾರುಕಟ್ಟೆ ಇದೆ ಎಂಬುದು ಗೊತ್ತಿಲ್ಲ. ಸಾಮಾನ್ಯ ಬೆಳೆಗಳನ್ನು ಬೆಳೆಯುವವರಿಗೆ ಸಿಕ್ಕಿಬಿಡುತ್ತದೆ. ಮಾನ್ಯ ಬಸವರಾಜ ಹೊರಟ್ಟಿಯವರು Gerbera flowers ಬೆಳೆಯುತ್ತಾರೆ. ಅದು ಎಲ್ಲಿ ಮಾರಾಟ ಆಗುತ್ತದೆ, ಅದಕ್ಕೆ ಎಷ್ಟು ಬೆಲೆ ಇದೆ ಎಂದು ಗೊತ್ತಿಲ್ಲ. ಅದರ ಬಗ್ಗೆ ಜನಸಾಮಾನ್ಯರಿಗೆ ಗೊತ್ತಿಲ್ಲ. The Government has to look after this. ಪ್ರತಿಯೊಂದು ಎ.ಪಿ.ಎಂ.ಸಿ., ಮಾರುಕಟ್ಟೆಯಲ್ಲಿ ನಮ್ಮ ರಾಜ್ಯದಲ್ಲಿ ಸಾಮಾನ್ಯವಾಗಿ ಎಷ್ಟು ಬೆಳೆಗಳನ್ನು ಬೆಳೆಯುತ್ತಾರೆ, ನಮಗೆ ಆ agricultural information ಬೇಕು. Either Agriculture Department through RSK (Raitha Samparka Kendra) ದಲ್ಲಿ ಸಿಗಬೇಕು. ಇಲ್ಲವೆಂದರೆ ಮಾರಕಟ್ಟೆಯಲ್ಲಿ ಸಿಗಬೇಕು. ಅದು ಎಲ್ಲಿ ಸಿಗುವುದಿಲ್ಲ. ರೈತರು ಹುಡುಕಿಕೊಂಡು ಹೋಗಬೇಕು. ನಮ್ಮಲ್ಲಿ ಬೆಳೆಯುತ್ತಾರೆ. ನಾವು ಆಂಧ್ರದ ಆಧೋನಿಗೆ ಹುಡುಕಿಕೊಂಡು ಹೋಗಬೇಕು. ಅವರಲ್ಲಿಯೂ ಒಬ್ಬರು ಅಥವಾ ಇಬ್ಬರು ಖರೀದಿದಾರರು ಇರುತ್ತಾರೆ. ಅವರು ಕೇಳಿದಷ್ಟು ಬೆಲೆಗೆ ಕೊಡಬೇಕು. ಪರಂಗಿ ಹಣ್ಣು ಬೆಳೆದರೆ ರಂಜಾನ್ ಹಬ್ಬದ ಸಂದರ್ಭದಲ್ಲಿ ಮಾತ್ರ ಅದಕ್ಕೆ ಬೆಲೆ ಸಿಗುತ್ತದೆ. ಇಲ್ಲವೆಂದರೆ, ಅದು ಜಮೀನಿನಲ್ಲಿ ಕೊಳೆಯುತ್ತದೆ. ರಂಜಾನ್ ಹಬ್ಬದ ಸಂದರ್ಭದಲ್ಲಿ ಬೆಳೆದವರು ಮಾತ್ರ rich ಆಗಿಬಿಡುತ್ತಾರೆ. ಒಂದು ವೇಳೆ ಆ ಸಂದರ್ಭವನ್ನು ತಿಳಿಯಲಾರದೆ ಪರಂಗಿ ಹಣ್ಣು ಬೆಳೆದರೆ ಅದನ್ನು ಮಾರುಕಟ್ಟೆಯಿಂದ ತೆಗೆದುಕೊಂಡು ಮನೆಗೆ ಹೋಗಬೇಕಾಗುತ್ತದೆ. Transportation charges ಸಹ ಬರುವುದಿಲ್ಲ. This information is required to the farmers. ಈ ಎಲ್ಲಾ ಮಾಹಿತಿಗಳನ್ನು ರೈತ ಸಂಪರ್ಕ ಕೇಂದ್ರದಲ್ಲಿ ಅಥವಾ Agriculture Wing or Agriculture University ನಲ್ಲಿ collect ಮಾಡಿ ಜನಸಾಮಾನ್ಯರಿಗೆ ಮುಟ್ಟುವಂತಹ ಕೆಲಸ ಮಾಡಿದಾಗ ಮಾತ್ರ ರೈತ ಯಾವ ಸಂದರ್ಭದಲ್ಲಿ ಯಾವ ಬೆಳೆಯನ್ನು ಬೆಳೆಯಬೇಕು, ಯಾವ ಬೆಳೆಗೆ ಬೆಲೆ ಬರುತ್ತದೆ ಎನ್ನುವುದರ ಬಗ್ಗೆ aware ಆಗಿ ಸಾಧ್ಯವಾದಷ್ಟು ಮಟ್ಟಿಗೆ ಸುಧಾರಿಸುತ್ತಾರೆ. ಈಗಿನ ಕಾಲದ ಮಕ್ಕಳು ಸಾಧ್ಯವಾದಷ್ಟು ವಿದ್ಯಾವಂತರಾಗುತ್ತಿದ್ದಾರೆ. ಆಗಿನ ಕಾಲದಲ್ಲಿ ಬಹಳಷ್ಟು ಜನರು ಅವಿದ್ಯಾವಂತರು ಇರುತ್ತಿದ್ದರು. ಹಾಗಾಗಿ, ಅವರಿಗೆ ಸರಿಯಾದಂತಹ ಮಾಹಿತಿ ಇರುತ್ತಿರಲಿಲ್ಲ. ಈಗ ರಾಜ್ಯ ಸರ್ಕಾರಗಳು basic education ಕೊಡುವುದರಿಂದ ಒಂದು ಹಂತದವರಿಗೆ literate ಆಗಿದ್ದಾರೆ. ಕನಿಷ್ಠ ಪಕ್ಷ ಎಸ್.ಎಸ್.ಎಲ್.ಸಿ.,ಯವರೆಗಾದರೂ ವ್ಯಾಸಂಗ ಮಾಡಿರುತ್ತಾರೆ. ಹಾಗಾಗಿ, ಅವರಿಗೆ ಸಾಕಷ್ಟು ತಿಳಿವಳಿಕೆ ಇರುತ್ತದೆ. ಇಂತಹ ಒಂದು facility ಅನ್ನು create ಮಾಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಈ ಸೂಟ್ ವ್ಯವಸ್ಥೆ ಬಗ್ಗೆ (ಕೊಸರು) ತಮಗೆ ಗೊತ್ತಿರಬೇಕೆಂದು ಅನಿಸುತ್ತದೆ. ನಾವು ಮಾರುಕಟ್ಟೆಗೆ ಹೋದಾಗ, ಉದಾಹರಣೆಗೆ ನಮ್ಮದು 10 ಕ್ವಿಂಟಾಲ್ ತೊಗರಿ ಇರುತ್ತದೆ ಎಂದು ತಿಳಿದುಕೊಳ್ಳಿ. ಅವರು ಹೇಳಿದಂತೆ, Electronic Weighing Machine ಎಲ್ಲವೂ ಇವೆ. ಕೊನೆಗೆ ಮಾರುಕಟ್ಟೆಯಲ್ಲಿ ನೂರಕ್ಕೆ ಒಂದು ಕೆ.ಜಿ ಸೂಟ್/ಕೊಸರು ಅಂದು ಬಿಡುತ್ತಾರೆ. ನಮ್ಮ ಕಡೆ ನೂರು ಕೆ.ಜಿಗೆ ಒಂದು ಕೆ.ಜಿ., ಇಲ್ಲವೇ 100 ಕೆ.ಜಿಗೆ 2 ಕೆ.ಜಿ., ಎಂದು ಸೂಟ್/ಕೊಸರು ಇಟ್ಟುಬಿಡುತ್ತಾರೆ. ಈ ರೀತಿ ಸೂಟ್‌ನ್ನು/ಕೊಸರನ್ನು ಏಕೆ ತೆಗೆಯಬೇಕು? ಅದಕ್ಕೆ reasons ಬೇಕಲ್ಲವೇ? ಅದನ್ನು ನಿಯಂತ್ರಣ ಮಾಡಬೇಕಾಗುತ್ತದೆ.

**ಶ್ರೀ ಲಕ್ಷಣ ಸಂಗಪ್ಪ ಸವದಿ (ಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೇ, ಒಬ್ಬರು ಗೊತ್ತಿಲ್ಲದೆ ಕಿಸೆ ಹೊಡೆಯುತ್ತಾರೆ. ಇನ್ನೊಬ್ಬರು ಹೇಳಿ ಕಿಸೆ ಹೊಡೆಯುತ್ತಾರೆ. ಸೂಟ್ ಎನ್ನುವುದು ಹೇಳಿ ಕಿಸೆ ಹೊಡೆಯುವುದು.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು. ಅದಕ್ಕೆ ಏನಾದರೂ ಮಾಡಿ. ಸುಮ್ಮ ಸುಮ್ಮನೆ ಸೂಟ್ ಹೆಸರಿನಲ್ಲಿ ರೈತರನ್ನು, ಈಗ ನಾಳೆ ದಿವಸ Multinational Company ಗಳು ಬರುತ್ತವೆ, 100 ಕೆ.ಜಿಗೆ 2 ಕೆ.ಜಿ., ತೆಗೆಯುತ್ತಾರೆ. ಏಕೆಂದರೆ, ಅವರು ಪ್ಲೂಟೆಯನ್ನು ಮೇಲಕ್ಕೆ ಎತ್ತಿದ ಕೂಡಲೇ ಇದರಲ್ಲಿ ಅದು ಇದೆ, ಇದು ಇದೆ, ಚೆನ್ನಿಗೆ ಹಾಕಿಕೊಂಡು ಬನ್ನಿ ಎಂದು ಹೇಳುತ್ತಾರೆ. ಆಗ ಚೆನ್ನಿ ಎಲ್ಲಿಂದ ತರಬೇಕು ಹೇಳಿ. ಕಾಟನ್‌ಗೆ cotton staple length ಮೇಲೆ ಬೆಲೆ ನಿಗದಿಯಾಗುತ್ತದೆ. 36, 38 staple length ಎಂದು ಇರುತ್ತದೆ. ಆ staple length ಮೇಲೆ rate ನಿಗದಿಯಾಗುತ್ತದೆ. ಇವತ್ತು ರೈತರಿಗೆ ಯಾವ cotton variety ಅನ್ನು ಬೆಳೆದಿದ್ದೇವೆ, ಅದರ staple length ಏನೆಂದು ಸಹ ಗೊತ್ತಿರುವುದಿಲ್ಲ.

(1065)09-12-2020(6-20)ಎಂವಿ-ಎಕೆ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಪಾಟೀಲ್ ಇಟಗಿ(ಮುಂದು...):–**

ನಾವು ಯಾವ cotton variety ಯನ್ನು ಬೆಳೆದಿದ್ದೇವೆ ಮತ್ತು ಅದರ staple length ಏನು ಎಂಬುದು ಗೊತ್ತಿರುವುದಿಲ್ಲ. ಅವರು ಊರಿಗೆ ಬಂದು ಏನು ಹೇಳುತ್ತಾನೆಂದರೆ, ನಿಮ್ಮ staple

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

length ಕಡಿಮೆ ಇದೆ ಅದು ನಿಮಗೆ ಬರುವುದಿಲ್ಲವೆಂದು ಹೇಳುತ್ತಾರೆ. ಈಗ ಒಂದೊಂದು varieties ಒಳಗೆ ಕಡಿಮೆ staple length ನಿಂತಿರುತ್ತದೆ. ಕೆಲವೊಂದು varieties ಒಳಗೆ high staple length ಇರುತ್ತದೆ. ರೈತ ಮಾರ್ಕೆಟ್‌ಗೆ ಹೋಗಿ ಬೀಜ ಚೆನ್ನಾಗಿದೆ ಎಂದು ಅದನ್ನು ತಂದು ಬೆಳೆ ಬೆಳೆಯುತ್ತಾನೆ. ಆದರೆ, ರೈತನಿಗೆ ಅದರ staple length ಗೊತ್ತಿರುವುದಿಲ್ಲ. ಆಮೇಲೆ ಈ paddy ಒಳಗೆ moisture ಎಂದು ಇದೆ. ಅದರಲ್ಲಿ ಶೇಕಡ 18 moisture ಇದ್ದರೆ ಅವರು ತೆಗೆದುಕೊಳ್ಳುವುದಿಲ್ಲವೆನ್ನುತ್ತಾರೆ. ಈಗ ಅದು ಶೇಕಡ 14 ರಿಂದ 15 moisture ಇದ್ದರೆ ಅದನ್ನು ತೆಗೆದುಕೊಳ್ಳುವುದಿಲ್ಲ. ಆಗ ಅದರ ದರವನ್ನು ಕಡಿಮೆ ಮಾಡಿಬಿಡುತ್ತಾರೆ. ಅವನು moisture machine ಅನ್ನು ಹಿಡಿದುಕೊಂಡು ಬಂದಿರುತ್ತಾನೆ. ನಿಮ್ಮ cotton ನ moisture ಇನ್ನು ಶೇಕಡ 15 ಇದೆ. ಅದು ಏನಾದರೂ ಶೇಕಡ 18 ಬಂದರೆ ಮಾತ್ರ ರೇಟ್ ಎಂದು ಹೇಳುತ್ತಾರೆ. ಅದರಲ್ಲಿ ಅವರು ಆ produce ಅನ್ನು ಪೂರ್ತಿ ಒಣಗಿಸಿ ತರುತ್ತಾರೆ. It is exploitation of farmers. ಅದು ನಾಲ್ಕು ಸಾವಿರ ಮತ್ತು ಐದು ಸಾವಿರ ಇದ್ದರೆ, ಅದನ್ನು ಒಣಗಿಸುವುದಕ್ಕೆ ಹತ್ತು ಸಾವಿರ ರೂಪಾಯಿ ಖರ್ಚಾಗುತ್ತದೆ. ಅದನ್ನು ಒಣಗಿಸಿದ ಮೇಲೆ ಅವರು correct ಆಗಿರುವ ಮತ್ತು full dry ಆಗಿರುವ ಮಾಲ್ ತೆಗೆದುಕೊಂಡರೆ ಸೀದಾ ಆಗುತ್ತದೆ. Again, the farmer is exploited there.

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸದರಿ ವಿಧೇಯಕಕ್ಕೆ ಸಂಬಂಧಪಟ್ಟಂತೆ ಮಾತನಾಡಲಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ವಿಧೇಯಕದ ಬಗ್ಗೆಯೆ ಮಾತನಾಡುತ್ತಿದ್ದೇನೆ. ಮಾನ್ಯ ಸದಸ್ಯರು ಸಹ ರೈತರೇ ಎಂದು ಅನಿಸುತ್ತಿದೆ. ಇದು ಮಾರ್ಕೆಟಿಂಗ್ ಅಥವಾ ಏನು?

**ಶ್ರೀ ಸುನೀಲ್ ವಲ್ಯಾಪುರ್:–** ಮಾನ್ಯ ಸಭಾಪತಿಯವರೇ, ನಾವು ಸಹ ಸೂಟ್‌ನಲ್ಲಿ ಇದ್ದೇವೆ. ನಮ್ಮಲ್ಲೂ ಸಹ ತೊಗರಿ ಬೆಳೆಯನ್ನು ಬೆಳೆಯುತ್ತಾರೆ. ಅದನ್ನು ಸರಿಯಾಗಿ ಹೇಳಿದ್ದಾರೆ. ನಾನು ಅವರ ಪರವಾಗಿಯೇ ಮಾತನಾಡಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, what I am speaking is about marketing only. ನೀವು broader sense ನಲ್ಲಿ ಅರ್ಥ ಮಾಡಿಕೊಳ್ಳಿ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸೂಟ್ ಬಗ್ಗೆ ಮಾತನಾಡಿದರು. ತೊಗರಿ ಸಮಸ್ಯೆಯು ಇದರಲ್ಲೇ ಇದೆ ಮತ್ತು ರಾಯಚೂರು ಜಿಲ್ಲೆಯಲ್ಲೂ ಸಹ ಇದೇ ಸಮಸ್ಯೆ ಇದೆ. ಆದರೆ ಸದಸ್ಯರು ಸಂಬಂಧಪಟ್ಟ ವಿಧೇಯಕ ಬಗ್ಗೆ ಮಾತನಾಡಲಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಇದು ವಿಧೇಯಕದಲ್ಲೇ ಇದೆ. ನಾನು ಮಾರ್ಕೆಟ್‌ನಲ್ಲಿ ಏನು ಲೋಪದೋಷವಿದೆ ಎಂದು ಹೇಳುತ್ತಿದ್ದೇನೆ. Let the Hon'ble Member understand what is APMC. Whatever I am speaking is concerned with marketing only, not other things. ಅವರಿಗೆ ಅಷ್ಟೇ ಗೊತ್ತಿದೆ. ನಮಗೆ ಕೇವಲ ಕಥೆ ಹೇಳುವುದಕ್ಕೆ ಬರುವುದಿಲ್ಲ. ತಾಂತ್ರಿಕವಾಗಿ ಏನು ತೊಂದರೆಯಾಗುತ್ತದೆ ಅದನ್ನು ಹೇಳಿ ಎಂದರೆ ಹೇಳುತ್ತೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಸರ್ಕಾರದವರು ಹೇಳಿದ್ದನ್ನು ಮಾತನಾಡಬೇಕೆಂದು ಏನಾದರೂ ಇದೆಯೇ? ತಾವು ಅದರ ಬಗ್ಗೆ ಸ್ವಲ್ಪ ಗಮನ ಕೊಡಬೇಕು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನಾನು ಮಾರ್ಕೆಟಿಂಗ್ ಬಿಟ್ಟು ಬೇರೆ ಏನಾದರೂ ಮಾತನಾಡಿದ್ದೇನೆಯೇ ಎಂದು ತಿಳಿಸಿ. Whatever I am speaking is concerned with marketing only.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸರ್ಕಾರ ಹೇಳುವುದನ್ನೇ ಕೇಳುವುದಾದರೆ ನಾವು ಹೊರಗಡೆ ಹೋಗಿ ಬಿಡುತ್ತೇವೆ. ಅವರು ವಿಧೇಯಕವನ್ನು ಪಾಸ್ ಮಾಡಿ ಕೊಡಿ. ಪ್ರಜಾಪ್ರಭುತ್ವದಲ್ಲಿ ಚರ್ಚೆಯಾದ ನಂತರ ಅದರ ಮೇಲೆ ತೀರ್ಮಾನ ತೆಗೆದುಕೊಳ್ಳುತ್ತಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಗಮನಕ್ಕೆ ಬಂದ ಹಾಗೆ ನಾನು ಮಾರ್ಕೆಟಿಂಗ್ ಬಿಟ್ಟು ಬೇರೆ ಏನಾದರೂ ಮಾತನಾಡಿದ್ದೇನೆಯೇ?. ಮಾರ್ಕೆಟಿಂಗ್‌ನಲ್ಲಿ ಏನು ಲೋಪದೋಷಗಳಿವೆ, ಅದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದು. ಅಷ್ಟು ಹೇಳುವುದಕ್ಕೆ ಇಲ್ಲವೆಂದರೆ ನಾನು ಮಾತನಾಡುವುದು ಅರ್ಥವಿಲ್ಲ. ಈ ಸಿಸ್ಟಮ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನ್ನು ತಂದ ಮೇಲೆ Essential Commodities Act ಪಾತ್ರ ಏನು ಎಂಬುದನ್ನು ಸರ್ಕಾರ ಹೇಳಬೇಕು. ನಾಳೆ ಒಂದು ದಿನ ಹೆಚ್ಚಿನ ಮಳೆ ಮತ್ತು ಬರಗಾಲ ಬಂದಾಗ ಜನರಿಗೆ ಅವಶ್ಯವಿರುವ ದವಸ ದಾನ್ಯಗಳು ಸರ್ಕಾರದ ನಿಯಂತ್ರಣದಲ್ಲಿ ಇರುವುದಿಲ್ಲ. ಇಲ್ಲಿಯವರೆಗೂ Essential Commodities Act ಇತ್ತು. ಆಗ ಸರ್ಕಾರ ಏನು ಮಾಡುತಿತ್ತು ಎಂದರೆ, ಇಷ್ಟೇ ದಿವಸ ದಾಸ್ತಾನು ಮಾಡಬೇಕು ಮತ್ತು ಸರ್ಕಾರದಿಂದ ಏನಾದರೂ ಆ ದಾಸ್ತಾನನ್ನು ತೆಗೆದುಕೊಳ್ಳಬೇಕೆಂದು ಆದೇಶ ಬಂದಾಗ ಅದನ್ನು ತೆಗೆದುಕೊಳ್ಳುವಂತಹ ಶಕ್ತಿ ಕೂಡ ಸರ್ಕಾರದ ಬಳಿ ಇತ್ತು. ಆದರೆ, ಇಂತಹ ಪರಿಸ್ಥಿತಿ ಬಂದಾಗ ನಾಳೆ ಏನು ಮಾಡುತ್ತಾರೆಂದು ಹೇಳಲಿ. That has to be addressed. ಏಕೆಂದರೆ, ಬಹಳ clean ಆಗಿ address ಮಾಡಬೇಕಾಗುತ್ತದೆ. ಮಾನ್ಯ ಹಿರಿಯ ಸಚಿವರೊಬ್ಬರು ಮಾತನಾಡುವಾಗ ಹೇಳಿದರು PDS (Public Distribution System) ಬರುತ್ತದೆಂದು. ಈ Public Distribution System ಇಷ್ಟು ದಿವಸ ಏನು ಮಾಡುತ್ತಿದ್ದರು. ಎಲ್ಲಾ ಮಿಲ್‌ಗಳಲ್ಲಿ levy ತೆಗೆದುಕೊಂಡು, ಕೇಂದ್ರ ಸರ್ಕಾರದವರು 25-26 ರೂಪಾಯಿಗಳಿಗೆ ಖರೀದಿ ಮಾಡಿ ನಮಗೆ ಒಂದು ರೂಪಾಯಿಗೆ ಕೊಡುತ್ತಿದ್ದರು. ಕೇಂದ್ರ ಸರ್ಕಾರದವರು ಅಕ್ಕಿಗೆ ಎ, ಬಿ ಮತ್ತು ಸಿ ಎಂದು ಗ್ರೇಡ್‌ಗಳನ್ನು ನಿಗದಿಪಡಿಸಿ ಅದಕ್ಕೆ ಒಂದು ದರವನ್ನು ನಿಗದಿಪಡಿಸಿದ್ದರು. ಬಡತನ ರೇಖೆಗಿಂತ ಕೆಳಗಿರುವವರಿಗೆ ಒಂದು ರಾಜ್ಯದಲ್ಲಿ ಉಚಿತವಾಗಿ ಅಕ್ಕಿ ನೀಡಿದರೆ ಮತ್ತೆ ಒಂದೊಂದು ರಾಜ್ಯದಲ್ಲಿ ಒಂದು ಮತ್ತು ಎರಡು ರೂಪಾಯಿಗಳ ದರ ನಿಗದಿಪಡಿಸಿದ್ದಾರೆ. ಇದು ನಿಯಂತ್ರಣ ತಪ್ಪಿದರೆ ಇದಕ್ಕೂ ಸಹ ಸಮಸ್ಯೆಯಾಗುತ್ತದೆ. ಇದರ ಬಗ್ಗೆ ಏನು ಮಾಡಬೇಕೆಂದು ಸಹ ಹೇಳಬೇಕು. ಆಂಧ್ರಪ್ರದೇಶದಲ್ಲಿ ಬಹುಶಃ ಎಲ್ಲರೂ ಹಿರಿಯ ಸಚಿವರಿದ್ದಾರೆ ಅಲ್ಲಿ ನೋಡಿರಬಹುದು ಅನಿಸುತ್ತದೆ. ನಾವು ರಾಯಚೂರು ಜಿಲ್ಲೆಯಿಂದ ಶ್ರೀಶೈಲಕ್ಕೆ ಹೋಗುತ್ತೇವೆ. ಅಲ್ಲಿ ಸ್ವಲ್ಪ ಚೆನ್ನಾಗಿರುವಂತಹ ತಾಲ್ಲೂಕುಗಳು ಬರುತ್ತವೆ. ಅಲ್ಲಿ ಒಂದು ಪಟ್ಟಣದಲ್ಲಿ...

**ಸಭಾಪತಿಯವರು:-** ತಮ್ಮ ಮಾತನ್ನು ಬೇಗ ಮುಗಿಸಿ ಏಳೂವರೆ ಗಂಟೆಯವರೆಗೆ ಮಾತ್ರ ಸಮಯವಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಮಾತನಾಡುವುದು ಇನ್ನು ಹಚ್ಚಿಗೆ ಇದೆ. ಆದರೆ, ಎರಡು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಮಾನ್ಯ ಕೃಷಿ ಸಚಿವರ ಗಮನಕ್ಕೆ ತರುವುದೇನೆಂದರೆ, ರೈತ ಮಾರುಕಟ್ಟೆ ಎಂದು ಇದೆ. ಈ ಹಿಂದೆ ನಮ್ಮ ಸರ್ಕಾರ ಇದ್ದಾಗ ರೈತ ಮಾರುಕಟ್ಟೆಯನ್ನು ತಂದಿದ್ದೆವು. ಇವತ್ತು ಏನೆಂದರೆ, ಹೋಬಳಿ, ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿ ಶೇಕಡಾ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

70 ರಿಂದ 80ರಷ್ಟು small and marginal farmers ಇದ್ದೇವೆ. ನಮ್ಮ ಉತ್ಪಾದನೆ ಬಹಳ ದೊಡ್ಡ ಪ್ರಮಾಣದಲ್ಲಿ ಇರುವುದಿಲ್ಲ. ಇದು ಏನೆಂದರೆ, regular ಆಗಿ ಆ ರೈತರು ಮಾರುಕಟ್ಟೆಗೆ ಹೋಗುತ್ತಾರೆ. ಈಗ ಗುಲ್ಬರ್ಗದಲ್ಲಿ MSK Mill ಎಂದು ಇದೆ. ಆ MSK Mill ಗೆ ಸುತ್ತಲಿನ ಸುಮಾರು ಐವತ್ತು ಹಳ್ಳಿ ಜನರು ಅಲ್ಲಿಗೆ ಬರುತ್ತಾರೆ. ಅಲ್ಲಿ ತಾಜಾ ಕಾಯಿಪಲ್ಯ ಸಿಗುತ್ತದೆ. ಪ್ರತಿದಿನ ಬೆಳಗ್ಗೆ ತರುತ್ತಾರೆ. ಅದಕ್ಕೆ ಯಾರೂ ಸಹ ಮಧ್ಯವರ್ತಿಗಳೇ ಇಲ್ಲ. ನೇರವಾಗಿ ಬರುತ್ತಾರೆ, MSK Mill ಹತ್ತಿರ ಸಾಕಷ್ಟು ಜಾಗ ಇದೆ. ಇದು ಮಾನ್ಯ ಸುನೀಲ್ ವಲ್ಯಾಪುರ್‌ರವರಿಗೆ ಗೊತ್ತಿದೆ, ಬಹುಶಃ ಅವರು ಸಹ ಅಲ್ಲೇ ಕಾಯಿಪಲ್ಯ ತೆಗೆದುಕೊಳ್ಳುತ್ತಾರೆ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ನಾವು ಕಾಯಿಪಲ್ಯವನ್ನು ಅಲ್ಲೇ ತೆಗೆದುಕೊಳ್ಳುತ್ತೇವೆ. ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೆ, ಅದಕ್ಕೆ ಮೊನ್ನೆ ವಿಶೇಷವಾಗಿ KKRDB (Kalyana Karnataka Region Development Board), ಯಿಂದ ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾದ ಮಾನ್ಯ ಗೋವಿಂದ ಕಾರಜೋಳರವರು ಮತ್ತು ಅಲ್ಲಿನ ಜಿಲ್ಲೆಯ ಶಾಸಕರು ಮತ್ತು ನಾವೆಲ್ಲರೂ ಸಹ ಸೇರಿಕೊಂಡು ಆ ಮಾರ್ಕೆಟ್ ಅನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಸುಮಾರು ಐದು ಕೋಟಿ ರೂಪಾಯಿಗಳನ್ನು ಕಾಯ್ದಿರಿಸಿದ್ದೇವೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನಾನು ಹೇಳಿರುವುದು ಸರಿಯಿದೆ. ಮಾನ್ಯ ಸದಸ್ಯರ ಮನೆಯಲ್ಲಿ ಅಲ್ಲಿಂದಲ್ಲೇ ಕಾಯಿಪಲ್ಯವನ್ನು ತರುತ್ತಾರೆಂದು ನನಗೆ ಗೊತ್ತಿದೆ. ಅದು ರೈತ ಸಂತೆ. ಈ ತರಹದವುಗಳನ್ನು create ಮಾಡಬೇಕಾಗುತ್ತದೆ. ಪ್ರತಿ ಹೋಬಳಿ ಮತ್ತು ತಾಲ್ಲೂಕಿನಲ್ಲಿ ಈ ರೈತ ಸಂತೆ ಮಾಡಬೇಕು. ಮೊದಲನೆಯದಾಗಿ ಇಲ್ಲಿ ಮಧ್ಯವರ್ತಿಗಳು ಇರುವುದಿಲ್ಲ. ಎರಡನೆಯದಾಗಿ ಒಂದು ಒಳ್ಳೆಯ ದರ ಸಿಗುತ್ತದೆ ಹಾಗೂ ಗ್ರಾಹಕರಿಗೆ ತಾಜಾ ಕಾಯಿಪಲ್ಯ ಸಿಗುತ್ತದೆ. ಉದಾಹರಣೆಗೆ ರಾಯಚೂರಿನಲ್ಲಿ ಮದುವೆಯಾದರೆ ನಮಗೆ ಹೆಚ್ಚಿಗೆ ಬೇಕಾದಾಗ ಸಂಪೂರ್ಣವಾಗಿ ಬೆಳಗಾವಿಯಿಂದ ಕಾಯಿಪಲ್ಯ ತರಿಸುತ್ತೇವೆ. ಬೆಳಗ್ಗೆ ಲಾರಿ ಹೊರಟರೆ ಸಂಜೆಗೆ ಬಂದು ತಲುಪುತ್ತದೆ. ಈಗ ಕಾಯಿಪಲ್ಯಗಳಿವೆ ಆದರೆ cold storage ಗಳು ಇಲ್ಲ. ಮಾನ್ಯ ಎಸ್.ಎಲ್.ಭೋಜೇಗೌಡರು ಹೇಳಿದ ಹಾಗೆ, 50 ರಿಂದ 100 ಎಕರೆಗಳಲ್ಲಿ ಬೆಳೆದಾಗ ಅವುಗಳಿಗೆ cold storage ಗಳು ಇಲ್ಲ. ಬಹುಶಃ cold storage ನ concept ಸರ್ಕಾರಕ್ಕೆ ಗೊತ್ತಿಲ್ಲವೆಂದು ಅನಿಸುತ್ತದೆ. ಈಗ ಯಾರದಾದರೂ cold storage ಇದ್ದರೆ ಕೇವಲ ಖಾಸಗಿಯವರದ್ದು ಮಾತ್ರ ಇದೆ. ಮಾನ್ಯ ಕೃಷಿ ಸಚಿವರಾದ

ಬಿ.ಸಿ.ಪಾಟೀಲ್‌ರ ಪಕ್ಕದ ಕ್ಷೇತ್ರದಲ್ಲಿ ಐವತ್ತೈವತ್ತು cold storage ಗಳಿವೆ. ಅಲ್ಲಿ ಒಂದಾದರೂ ಸಹ ಸರ್ಕಾರದ್ದು ಇದೆಯೇ?

**ಶ್ರೀ ಬಿ.ಸಿ.ಪಾಟೀಲ್ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ 32 ಸರ್ಕಾರಿ cold storage ಗಳಿವೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಬ್ಯಾಡಗಿ ಒಂದೇ ಊರಿನಲ್ಲಿ ಒಂದೇ ಕಡೆ 50 cold storage ಗಳಿವೆ.

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, warehouse ಗಳಲ್ಲಿ ಇಲ್ಲ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ಮತ್ತು ಬ್ಯಾಡಗಿಯನ್ನು ತುಲನೆ ಮಾಡಿ ನೋಡಿ. ಅದು ಯಾವ ratio ದಲ್ಲಿ ಇರಬೇಕೆಂದು.

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಬೇರೆ ಬೇರೆ ಕಡೆ ಇರಬಹುದು. ಆದರೆ, ಎ.ಪಿ.ಎಂ.ಸಿ.ಯಲ್ಲಿ ಇಲ್ಲ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಬ್ಯಾಡಗಿಯಲ್ಲಿ 50 ರಿಂದ 60 cold storage ಗಳಿವೆ. ಆದರೆ, ಇಡೀ ರಾಜ್ಯಕ್ಕೆ ಸರ್ಕಾರದ್ದು 30 cold storage ಗಳು ಸಾಕಾಗುತ್ತವೆಯೇ?

**ಶ್ರೀ ಬಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇಲ್ಲ ಮತ್ತು ಗೊತ್ತಿಲ್ಲವೆಂದು ಹೇಳಿದರು. ಅದಕ್ಕೆ ಇದೆ ಎಂದು ಹೇಳಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಚಿವರು ಅರ್ಥ ಮಾಡಿಕೊಂಡರೆ, ಅದು ಇಲ್ಲದ ಹಾಗೆಯೇ ಅಲ್ಲವೇ? The government has not applied its mind towards cold storage. ಈಗ ನಮ್ಮ ಸರ್ಕಾರವಿರಬಹುದು ನಿಮ್ಮ ಸರ್ಕಾರವಿರಬಹುದು. ಅದಕ್ಕೆ ಯಾರಾದರೂ mind apply ಮಾಡಿದ್ದಾರೆಯೇ ಎನ್ನುವುದು ಉದ್ದೇಶ. ಈಗ ಒಂದೆರಡು ಅಥವಾ ಮೂರು ಇರುವುದು ಬೇರೆ. ಕೊನೆಗೆ ಶೇಕಡಾ 30ರಷ್ಟು, 40ರಷ್ಟು ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

50ರಷ್ಟಾದರು ಇರಬೇಕಲ್ಲವೆ. ಇವತ್ತು ಸಾಕಷ್ಟು perishable goods ಬರುತ್ತವೆ. ಈಗ ಯಾವುದೇ ರೈತ ಉದ್ದಾರವಾಗಬೇಕಾದರೆ, ಅವನು ಬೆಳೆಯುವಂತಹ ಬೆಳೆ perish ಆಗದ ರೀತಿಯಲ್ಲಿ ನೋಡಿಕೊಳ್ಳಬೇಕು ಮತ್ತು keeping quality ಇಡಬೇಕು. Marketable quality ಇಡಬೇಕು. ಉದಾಹರಣೆಗೆ; ಹುಣಸೆ ಹಣ್ಣನ್ನು ವರ್ಷಾನುಗಟ್ಟಲೆ ಉಪಯೋಗಿಸಬಹುದು. ಅದನ್ನು ಹಾಗೆ ಇಟ್ಟರೆ ಅದರ ದರ ಬರುವುದಿಲ್ಲ. ಅದು ಕಪ್ಪಾಗಿ ಹೋಗುತ್ತದೆ. It is perishable. ಅದರ ಬಣ್ಣ ಬದಲಾವಣೆಯಾದ ಕೂಡಲೆ ಶೇಕಡಾ 50ರಷ್ಟು ದರ ಕಡಿಮೆಯಾಗುತ್ತದೆ. ಇವತ್ತು ಅಂತಹವುಗಳಿಗೂ ಸಹ cold storage ಬೇಕು. ಕಡ್ಲೆಗೆ cold storage ಬೇಕು. Cold storage facility is required for lot of commodities. ಅದಕ್ಕೆ ನನ್ನ ಮನವಿ ಏನೆಂದರೆ, ಈ ನಿಟ್ಟಿನಲ್ಲಿ ಸಾಕಷ್ಟು ಅಭಿವೃದ್ಧಿಯಾಗಬೇಕು. ಸಾಕಷ್ಟು ಅಭಿವೃದ್ಧಿಯಾದಾಗ ಮಾತ್ರ ಹಂತ ಹಂತವಾಗಿ ರೈತರಿಗೆ ಸಹಾಯ ಮಾಡುವಂಥದ್ದು ಆಗಬೇಕು. ಸರ್ಕಾರ ಒಂದೇ ದಿವಸ ಇದೆಲ್ಲವನ್ನು ಹೇಳಿದ ತಕ್ಷಣ ಮಾಡುವುದಕ್ಕೆ ಆಗುವುದಿಲ್ಲ. But the intention of the government should be towards help farmers. ಆ ದಾರಿ ಅದರಲ್ಲಿ ಇದ್ದಾಗ ಮಾತ್ರ ಐದು ಮತ್ತು ಹತ್ತು ವರ್ಷದಲ್ಲಿ ಕ್ರಮೇಣವಾಗಿ ಇವೆಲ್ಲಾ ಕೂಡ ಆಗುವಂಥದ್ದು ಆಗುತ್ತದೆ. ಆಂಧ್ರಪ್ರದೇಶದ ಮಾರ್ಕೆಟ್ ಸಿಸ್ಟಮ್ ಅನ್ನು ತರುವುದಕ್ಕೆ ಮಾನ್ಯ ಸಚಿವರ examine ಮಾಡಬೇಕು. ಆಮೇಲೆ ಈ ವಿಧೇಯಕದ ಆತಂಕ ಏನೆಂದರೆ, ನಾಳೆ ದೊಡ್ಡ ದೊಡ್ಡವರು ಬಂದು ನಮ್ಮನ್ನು ಖಲಾಸ್ ಮಾಡುತ್ತಾರೆ. ಕೇವಲ ಖಾಲಿ ಮಾತುಗಳನ್ನು ಆಡುವುದರ ಬದಲು, ಒಂದು ಒಳ್ಳೆಯ ಮಾತನ್ನು ಹೇಳುತ್ತೇನೆ. ಈಗ ಸಾರ್ವಜನಿಕರ ತಲೆಯಲ್ಲಿ ಏನಿದೆ ಎಂದರೆ, ಈ ವಿಧೇಯಕ ಜಾರಿಗೆ ತರುತ್ತಾರೆ, ಅದರಿಂದ ದೊಡ್ಡ ದೊಡ್ಡ ಕಂಪನಿಗಳು ಬರುತ್ತವೆ, ಆಗ ನಮ್ಮನ್ನು ಖಲಾಸ್ ಮಾಡಿಬಿಡುತ್ತಾರೆಂದು. ಆಗ ರೈತರು ಆ ಕಂಪನಿಗಳ ಗುಲಾಮರಾಗಿರುವಂತೆ ಆಗುತ್ತದೆ. ಕಂಪನಿಯವರು ಹೇಳಿದ ದರಕ್ಕೆ ಮಾರಾಟ ಮಾಡಬೇಕು.

**(ಮುಂದು...)**

(1066)-09.12.2020-06.30-LL-AK

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಪಾಟೀಲ್ ಇಟಗಿ(ಮುಂದುವರೆದಿದ್ದು...)**

ಅವರು ಹೊರಗಡೆ ಬಿಡುಗಡೆ ಮಾಡಿದಾಗ ಮಾತ್ರ ನಾವು ತಿನ್ನಬೇಕು. ಇಲ್ಲದೇ ಇದ್ದರೆ ಇಲ್ಲ. ಉದಾಹರಣೆಗೆ, ಅಕ್ಕಿಯನ್ನು ಖರೀದಿ ಮಾಡಿ, 8 ದಿವಸ ಬಿಡುಗಡೆ ಮಾಡದೇ ಇದ್ದರೆ ನಾವು ಉಪವಾಸ

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರಬೇಕು ಹಾಗೂ ಬಿಡುಗಡೆ ಮಾಡಿದ ದಿವಸವೇ ತಿನ್ನಬೇಕು. ಇದಕ್ಕೆ ಏನಾದರೂ ನಿಯಂತ್ರಣ ಬೇಕಲ್ಲವೇ ಎಂಬ ಒಂದು ಆತಂಕ ರೈತರಲ್ಲಿದೆ. ಆದರೆ, ಸರ್ಕಾರದವರು ದ್ವಿಗುಣ ಆಗುತ್ತದೆಯೆಂದು ಲೆಕ್ಕ ಹಾಕುತ್ತಾರೆ. ಆದರೆ, ಈ ಹಿಂದೆ ಕೂಡ ಶೇಕಡ 70ರಿಂದ 80ರಷ್ಟು ಹೊರಗೆ ಮಾರಿರುತ್ತೇವೆ. ಆಗ ಯಾವುದೇ ನಿರ್ಬಂಧ ಇರಲೇ ಇಲ್ಲ. ಈಗ ಬಂದಿರುವಂತಹ ಮಾರ್ಟ್‌ಗಳನ್ನು ನೋಡಿದರೆ ಅಂದರೆ, ಡಿ-ಮಾರ್ಟ್, ಜಿಯೋ ಮಾರ್ಟ್, ರಿಲಯನ್ಸ್, ಮೋರ್, ಗ್ರೀನ್ ಮಾರ್ಟ್ ಮತ್ತು ವಾಲ್ ಮಾರ್ಟ್‌ಗಳು ಹೇಗೆ ಅಭಿವೃದ್ಧಿ ಹೊಂದುತ್ತವೆ ಹಾಗೆಯೇ ರೈತರ ರೊಕ್ಕ ಇನ್ನೂ ಹೆಚ್ಚಿಗೆ ತಿನ್ನುತ್ತಾ ಹೋಗುತ್ತಾರೆ. ಇದರಿಂದಾಗಿ, ಮಧ್ಯವರ್ತಿಗಳಿಗೆ ಹೆಚ್ಚಿನ ಬೆಲೆ ಸಿಗುತ್ತದೆಯೇ ಹೊರತು, ಉತ್ಪಾದಕರಿಗೆ ಜಾಸ್ತಿ ಸಿಗುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಈ ವಿಧೇಯಕವನ್ನು ಹಿಂದಕ್ಕೆ ತೆಗೆದುಕೊಂಡು ಇನ್ನಷ್ಟು ಸುಧಾರಣೆಗಳನ್ನು ಮತ್ತು ಕೆಲವು ಬದಲಾವಣೆಗಳನ್ನು ಮಾಡಿ ತಂದಾಗ ಮಾತ್ರ ನನಗೆ ಒಪ್ಪಿಗೆ ಕೊಡತಕ್ಕ ಮನಸ್ಸಾಗುತ್ತದೆ ಎಂಬ ಮಾತನ್ನು ಹೇಳಿ, ಹೆಚ್ಚಿನ ಸಮಯಾವಕಾಶ ನೀಡಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**8. ಪ್ರಕಟಣೆ**

**ಸಭಾಪತಿಯವರು:-** ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ **ನಿಯಮ 104ರ** ಮೇರೆಗೆ ವಿಧಾನ ಸಭೆಯು ದಿನಾಂಕ:09.12.2020ರಂದು **"ಕರ್ನಾಟಕ ಧನವಿನಿಯೋಗ (ಸಂಖ್ಯೆ.4) ವಿಧೇಯಕ", 2020**ನ್ನು ಹಾಗೂ 2020ನೇ ಸಾಲಿನ **"ಕರ್ನಾಟಕ ರಾಜ್ ವಿಶ್ವವಿದ್ಯಾನಿಲಯಗಳ ಮತ್ತು ಇತರ ಕಾನೂನು(ಎರಡನೇ ತಿದ್ದುಪಡಿ) ವಿಧೇಯಕ"** ವನ್ನು **ತಿದ್ದುಪಡಿಗಳೊಂದಿಗೆ** ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

**೯. ಕರ್ನಾಟಕ ಕೃಷಿ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, ೨೦೨೦ರ ಮೇಲೆ ಮುಂದುವರೆದ ಚರ್ಚೆ.**

**ಶ್ರೀ ಕೆ.ಎ. ತಿಪ್ಪೇಸ್ವಾಮಿ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ನಮ್ಮ ದೇಶದಲ್ಲಿ ಸುಮಾರು 15 ರಿಂದ 16 ರಾಜ್ಯಗಳಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಕಾಯಿದೆ ಇದೆ. 1966ನೇ ಇಸವಿಯಲ್ಲಿ ಬಂದಂತಹ ಕಾಯಿದೆಯನ್ನು ಜಾರಿಗೆ ತಂದಿರುವುದರಲ್ಲಿ ನಮ್ಮ ಕರ್ನಾಟಕ ರಾಜ್ಯ ಮೊಟ್ಟಮೊದಲನೆಯದು. ನಮ್ಮ ರಾಜ್ಯದಲ್ಲಿ ಸುಮಾರು 200 ಕೃಷಿ ಉತ್ಪನ್ನ ಮಾರುಕಟ್ಟೆಗಳು ಮತ್ತು ಸುಮಾರು 160 ಕೃಷಿ ಉತ್ಪನ್ನ ಉಪ ಮಾರುಕಟ್ಟೆಗಳಿವೆ. ಈ ಎಲ್ಲಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾರುಕಟ್ಟೆಗಳನ್ನು ಕಳೆದ ಹಲವಾರು ದಶಕಗಳಿಂದ ನಮ್ಮ ರಾಜ್ಯ ಸರ್ಕಾರ ವಿಶ್ವಬ್ಯಾಂಕಿನ ಸಾಲದಿಂದ ಮತ್ತು ನಬಾರ್ಡ್‌ನಿಂದ ತಂದಂತಹ ಸಾವಿರಾರು ಕೋಟಿ ರೂಪಾಯಿ ಸಾಲದಿಂದ ಇವುಗಳನ್ನು ನಿರ್ಮಾಣ ಮಾಡಿದೆ. ಅದು ಆಕ್ಷನ್ ಫ್ಲಾಟ್‌ಫಾರ್ಮ್ ಇರಬಹುದು, ಕೋಲ್ಡ್ ಸ್ಟೋರೇಜ್ ಇರಬಹುದು, ಗೋಡೌನ್‌ಗಳು ಇರಬಹುದು; ಈ ರೀತಿಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದಕೋಸ್ಕರ ಸರ್ಕಾರ ಸಾಲ ಪಡೆದು ಮಾರುಕಟ್ಟೆಗಳನ್ನು ನಿರ್ಮಾಣ ಮಾಡಿದೆ. ಈ ಮಾರುಕಟ್ಟೆಗಳಲ್ಲಿ ಇಡಬಹುದಾದಂತಹ ಉತ್ಪನ್ನಗಳನ್ನು ಶೇಖರಣೆ ಮಾಡುವ ಸಲುವಾಗಿ ಗೋಡೌನ್ ಇದೆ. ಅದೇ ರೀತಿ ರೈತರು ತಂಗಲು ಅತಿಥಿ ಗೃಹ ನಿರ್ಮಾಣ ಮಾಡಿದ್ದಾರೆ ಮತ್ತು ಹೋಟೆಲ್ ವ್ಯವಸ್ಥೆ ಸಹ ಇದೆ. ಅಲ್ಲದೇ, ರೈತ ತಾನು ತಂದಂತಹ ಕೃಷಿ ಉತ್ಪನ್ನಗಳನ್ನು ದಾಸ್ತಾನು ಮಾಡಬಹುದು ಮತ್ತು ಅದರ ಮೇಲೆ ಅಡಮಾನ ಸಾಲ ತೆಗೆದುಕೊಳ್ಳುವುದಕ್ಕೆ ಅಲ್ಲಿರುವಂತಹ ಬ್ಯಾಂಕುಗಳಲ್ಲಿ ವ್ಯವಸ್ಥೆ ಕೂಡ ಒದಗಿಸಲಾಗಿರುತ್ತದೆ. ಇದಲ್ಲದೇ ರೈತರು, ವ್ಯಾಪಾರಸ್ಥರು ಹಾಗೂ ಇತರರನ್ನೊಳಗೊಂಡಂತೆ, ಈ ಕಾಯಿದೆಯಲ್ಲಿ ಸದುದ್ದೇಶ ಏನಿದೆ? ಈ ಮಸೂದೆಯ 'Statement of Objects and Reasons' ಏನು ಹೇಳುತ್ತವೆ, ಅದನ್ನು ಕೂಡ ಕಾರ್ಯಗತ ಮಾಡುವುದಕ್ಕೆ ಒಂದು ಚುನಾಯಿತ ಸಮಿತಿ ಕೂಡ ಅಲ್ಲಿ ಇದೆ.

ಇವೊತ್ತಿನ ದಿವಸ ರಾಜ್ಯ ಸರ್ಕಾರ ಈ ಕಾಯಿದೆಯಲ್ಲಿ ಏನು ತಿದ್ದುಪಡಿ ತಂದಿದೆ, ಇದು ನನ್ನ ಮಟ್ಟಿಗೆ ಮತ್ತು ನಮ್ಮ ಪಕ್ಷದ ಮಟ್ಟಿಗೆ ಕೇಂದ್ರ ಸರ್ಕಾರದ ಒತ್ತಾಯದ ಮೇರೆಗೆ ತಿದ್ದುಪಡಿಯನ್ನು ತಂದಿರುತ್ತದೆ. ಈಗ ತಂದಿರುವಂತಹ ತಿದ್ದುಪಡಿಗಳು ಕೇಂದ್ರ ಸರ್ಕಾರ ಏನು 3 ಕೃಷಿ ಕಾನೂನುಗಳನ್ನು ತಂದಿದೆ, ಅದಕ್ಕೆ ಅನುಗುಣವಾಗಿದೆ ಎನ್ನುವುದು ನನ್ನ ಭಾವನೆ. Those Acts are - 'The Farmers Produce Trade and Commerce (Promotion and Facilitation) Act, 2020; The Farmers (Empowerment and Protection) Agreement of Price Assurance and Farm Services Act, 2020; and The Essential Commodities (Amendment) Act, 2020. ಏಕೆಂದರೆ, ಈ 3 ಕಾಯಿದೆಗಳು ಮತ್ತು ಪ್ರಸ್ತುತ ತಂದಿರುವಂತಹ ಕಾಯಿದೆಗೆ ಒಂದು ಇಂಟರ್‌ಲಿಂಕ್ ಇದೆ. ಕೇಂದ್ರ ಸರ್ಕಾರ ತಂದಿರುವಂತಹ ಕಾಯಿದೆಗಳು ಮತ್ತು ಎ.ಪಿ.ಎಂ.ಸಿ. ಕಾಯಿದೆ ಒಂದಕ್ಕೊಂದು ಅವಲಂಬಿತವಾಗಿವೆ. ಇದನ್ನು ನಾವು interwoven ಎಂದು ಹೇಳುತ್ತೇವೆ. ಅಂದರೆ, ಒಂದಕ್ಕೊಂದು ಅವಲಂಬನೆ ಇದೆ ಮತ್ತು Contract Farming Act ಏನು ಕೇಂದ್ರ ಸರ್ಕಾರ ತಂದಿದೆ, ಆ ಆಕ್ಟ್ ರಾಜ್ಯದಲ್ಲಿ ಜಾರಿಯಾಗದಿದ್ದರೂ ಸಹ ಈ ಎ.ಪಿ.ಎಂ.ಸಿ. ಆಕ್ಟ್ ಮುಖಾಂತರ ಅದನ್ನು ಜಾರಿ

"ಉಪಯೋಗಿಸಕೂಡದು" ಪತ್ರಿಕಾ ಪ್ರಕಟಣೆಗಾಗಿ ಅಥವಾ ನ್ಯಾಯಾಲಯಗಳಲ್ಲಿ

ಮಾಡುವುದಕ್ಕೆ ಕೇಂದ್ರ ಸರ್ಕಾರ ಹೊರಟಿದೆ. ರಾಜ್ಯ ಸರ್ಕಾರ ಏತಕ್ಕೋಸ್ಕರ ಈ ಎ.ಪಿ.ಎಂ.ಸಿ. ಆಕ್ಟ್‌ಗೆ ತಿದ್ದುಪಡಿ ತಂದಿದ್ದಾರೆಂದರೆ, ಕೇಂದ್ರ ಸರ್ಕಾರದ ಒತ್ತಾಯ, ದೊಡ್ಡ ದೊಡ್ಡ ಕಂಪನಿಗಳು, ಅಂತರಾಷ್ಟ್ರೀಯ ಕಂಪನಿಗಳು, ರೀಟೈಲ್ ಕಂಪನಿಗಳು, ಮಾಲ್ ಮಾಲೀಕರು ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಒತ್ತಾಯದ ಮೇಲೆ ಈ ಎ.ಪಿ.ಎಂ.ಸಿ. ಆಕ್ಟ್‌ನ ಸೆಕ್ಷನ್ 8 ಮತ್ತು 117 ಕ್ಕೆ ತಿದ್ದುಪಡಿ ಪ್ರಸ್ತಾಪಿಸಲಾಗಿದೆ. ಆದರೆ, ಈ ತಿದ್ದುಪಡಿಗಳಿಂದ ರೈತ ಸಮುದಾಯಗಳಿಗೆ ಸಾಕಷ್ಟು ಪರಿಣಾಮ ಆಗುತ್ತದೆ. ಅವುಗಳನ್ನು ವಿಶ್ಲೇಷಣೆ ಮಾಡಬೇಕಾದರೆ, ಸಂಕಷ್ಟದಲ್ಲಿರುವಂತಹ ರೈತನಿಗೆ ಯಾವುದೇ ರೀತಿಯಾದಂತಹ ಬೆಂಬಲ ಬೆಲೆ ಸಿಗುವುದಿಲ್ಲ.

ಇಷ್ಟೇ ಅಲ್ಲದೇ, ಮಧ್ಯವರ್ತಿಗಳು ಮತ್ತು ಖಾಸಗಿ ಕಂಪನಿಗಳು ನೇಮಿಸಿದ ಮಧ್ಯವರ್ತಿಗಳು ಅಥವಾ ದಲ್ಲಾಳಿಗಳೆಂದು ಕರೆಯುವವರು ಹಳ್ಳಿಗಳಿಗೆ ಹೋಗಿ ತಾವೇ ಕೂಟ ಕಟ್ಟಿಕೊಂಡು ಮುಗ್ಧ ರೈತರಿಂದ ತಾವೇ ನಿಗದಿಪಡಿಸಿದ ದರದಲ್ಲಿ ಕೃಷಿ ಉತ್ಪನ್ನಗಳನ್ನು ಖರೀದಿಸುತ್ತಾರೆ. ಇದರಿಂದಾಗಿ, ಹಳ್ಳಿಗಳಲ್ಲಿ ಪುನಃ ದಲ್ಲಾಳಿ ವೃತ್ತಿಯನ್ನು ಪ್ರಾರಂಭ ಮಾಡಿದಂತಾಗುತ್ತದೆ. ಈಗಾಗಲೇ, ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿರುವಂತಹ ಎ.ಪಿ.ಎಂ.ಸಿ.ಗಳು ಕ್ರಮೇಣ ಮುಚ್ಚುವ ಸ್ಥಿತಿ ಅಂದರೆ, defunct ಆಗುತ್ತವೆ. ನಮಗೆ ಅನುಭವ ಇರುವಂತೆ, Metro Cash and Carry vs. Petty Shop Owners ಏನಾಯಿತೆಂದರೆ, Metro Cash and Carry ಬಂದ ನಂತರ ಕೊನೆಗೆ Petty Shop Owners ಪೂರ್ಣವಾಗಿ ನಿರ್ನಾಮ ಆದರು. ಇದಲ್ಲದೇ, ರಾಜ್ಯ ಸರ್ಕಾರಕ್ಕೆ ರೆವಿನ್ಯೂ ಆಗಿ 600 ರಿಂದ 750 ಕೋಟಿ ರೂಪಾಯಿ ಆದಾಯ ಬರುತ್ತಿತ್ತು. ಯಾವಾಗ ರೈತ ಬೆಳೆದಂತಹ ಕೃಷಿ ಉತ್ಪನ್ನ ಎ.ಪಿ.ಎಂ.ಸಿ. ಮಾರುಕಟ್ಟೆ ಯಾರ್ಡ್‌ಗೆ ಬರುವುದಿಲ್ಲವೋ ಅಥವಾ ಯಾವಾಗ ವರ್ತಕ ರೈತನ ಮನೆ ಬಾಗಿಲಿಗೆ ಹೋಗಿ ತಾನು ಹೇಳಿದ ರೀತಿಯಲ್ಲಿ ಖರೀದಿ ಮಾಡುತ್ತಾನೋ ಆಗ ಅದಕ್ಕೆ ಸೆಸ್ ಹಾಕುವಂತಹ ಅಧಿಕಾರ RMC (Regulated Market Committee) ಗಳಿಗೆ ಇರುವುದಿಲ್ಲ. ಇದರಿಂದಾಗಿ, ಪ್ರತಿವರ್ಷ ಸರ್ಕಾರಕ್ಕೆ ಬರುವಂತಹ ಸುಮಾರು 750 ಕೋಟಿ ರೂಪಾಯಿ ರೆವಿನ್ಯೂ ನಷ್ಟವಾಗುತ್ತದೆ. ಅಷ್ಟೇ ಅಲ್ಲದೇ, ಈ ರಾಜ್ಯದಲ್ಲಿರುವಂತಹ ಸುಮಾರು 360 ಕೃಷಿ ಮಾರುಕಟ್ಟೆಯಲ್ಲಿ ಕೆಲಸ ಮಾಡುವಂತಹ 1 ಲಕ್ಷಕ್ಕೂ ಹೆಚ್ಚಿನ ಅಮಾಲಿಗಳು ಕೆಲಸವನ್ನು ಕಳೆದುಕೊಳ್ಳುತ್ತಾರೆ. ಜೊತೆಗೆ, ಅವರು ಕೆಲವೇ ದಿನಗಳಲ್ಲಿ ತಮ್ಮ ಕುಟುಂಬದೊಂದಿಗೆ ಬೀದಿ ಪಾಲಾಗುತ್ತಾರೆ. ಆದುದರಿಂದ, ನಮ್ಮ ಅನುಭವ ಏನಿದೆ, ಈಗ Reliance Jio vs. BSNL ಏನಾಯಿತು, ಅದೇ ರೀತಿಯಲ್ಲಿ ಈ ಎ.ಪಿ.ಎಂ.ಸಿ.ಗಳು ಕೇಂದ್ರ ಸರ್ಕಾರ ತರತಕ್ಕಂತಹ Contract

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Farming Act ಇರಬಹುದು, ಅಥವಾ The Farmers (Empowerment and Protection) Agreement of Price Assurance and Farm Services Act, 2020 ಇರಬಹುದು, ಅವುಗಳಿಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ಹಾಗಾಗಿ, ಈ ತಿದ್ದುಪಡಿಯಿಂದ ಯಾವುದೇ ರೀತಿಯಿಂದ ರೈತ ಸಮುದಾಯಕ್ಕೆ ಒಳ್ಳೆಯದಾಗುವುದಿಲ್ಲ. ಇವು ರೈತರ ಹಿತಕ್ಕೆ ಕೂಡ ಧಕ್ಕೆ ತರುತ್ತವೆ. ಆದುದರಿಂದ, ನಾನು ತಮ್ಮಲ್ಲಿ ಒತ್ತಾಯಪೂರ್ವಕವಾಗಿ ಕೇಳುವುದೇನೆಂದರೆ, ಕೇಂದ್ರ ಸರ್ಕಾರ ದೇಶಾದ್ಯಂತ ಜಾರಿಗೆ ತಂದಿರುವ The Farmers (Empowerment and Protection) Agreement of Price Assurance and Farm Services Act, ಕೃಷಿ ಕಾನೂನು ಕಾಯ್ದೆಗಳನ್ನು ವಾಪಸ್ಸು ಪಡೆಯಬೇಕೆಂದು ಈಗಾಗಲೇ ರೈತರು ಒತ್ತಾಯ ಮಾಡುತ್ತಿದ್ದಾರೆ. ಆದುದರಿಂದ, ಈ ಎ.ಪಿ.ಎಂ.ಸಿ. ಕಾಯಿದೆ ಕೂಡ farm laws ಗೆ ಸಂಬಂಧಪಟ್ಟಿರುವಂಥದ್ದಾಗಿದೆ. ಈಗಾಗಲೇ ಹಿಂದಿನ ಅಧಿವೇಶನದಲ್ಲಿ ಈ ತಿದ್ದುಪಡಿ ಕಾಯಿದೆ ಬಂದಿದ್ದು, ಆ ಸಂದರ್ಭದಲ್ಲಿ ತಿರಸ್ಕಾರ ಮಾಡಿದ್ದೇವೆ. ಹಾಗಾಗಿ ದಯಮಾಡಿ ಈ ವಿಧೇಯಕವನ್ನು ಮಂಡನೆ ಮಾಡದೇ, ಸರ್ಕಾರ ಈ ತಿದ್ದುಪಡಿ ಕಾಯಿದೆಯನ್ನು ವಾಪಸ್ಸು ಪಡೆಯಬೇಕು ಹಾಗೂ ಈ ತಿದ್ದುಪಡಿ ಕಾಯಿದೆಗೆ ನಮ್ಮ ಪಕ್ಷದ ಬೆಂಬಲವಿಲ್ಲ, ವಿರೋಧ ಮಾಡುತ್ತೇವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ(ನಿಯಂತ್ರಣ ಮತ್ತು ಅಭಿವೃದ್ಧಿ)(ತಿದ್ದುಪಡಿ) ವಿಧೇಯಕ, 2020ಕ್ಕೆ ಏನು ತಿದ್ದುಪಡಿ ತಂದಿದ್ದಾರೆ, ಇದನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತಾ, ಈ ಕಾಯಿದೆಯ ಅಡಿಯಲ್ಲಿ ರೈತರಿಗೆ ನ್ಯಾಯೋಚಿತ ಬೆಲೆ ದೊರಕಬೇಕು. ಸ್ಪರ್ಧಾತ್ಮಕ ಬೆಲೆಯಲ್ಲಿ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವ ಒಂದು ವೇದಿಕೆ ಸೃಷ್ಟಿಯಾಗಬೇಕು, ರೈತರಿಗೆ ಮತ್ತು ಗ್ರಾಹಕರಿಗೆ ಹೊರೆಯಾಗದಂತೆ ಅದನ್ನು ನಿಯಂತ್ರಣ ಮಾಡುವುದಕ್ಕೆ ಒಂದು ವೇದಿಕೆ ಸೃಷ್ಟಿಯಾಗಬೇಕೆಂದು ಎ.ಪಿ.ಎಂ.ಸಿ. ಆಕ್ಟ್ 1966 ರಲ್ಲಿ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ಬರುತ್ತದೆ.

(ಮುಂದುವರೆದಿದೆ...)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1067)09.12.2020/6.40/ವೈಎಲ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಕಾಶ್ ಕೆ. ರಾಥೋಡ್ (ಮುಂದು):-**

ತದನಂತರ ಈ ಕಾಯ್ದೆಗೆ ಹಲವಾರು ತಿದ್ದುಪಡಿಗಳನ್ನು ತರಲಾಗಿರುತ್ತದೆ. ಆಗಲೇ ಮಾನ್ಯ ಉಪ ಮುಖ್ಯಮಂತ್ರಿಗಳಾದ ಲಕ್ಷ್ಮಣ ಸವದಿಯವರು ಪ್ರಸ್ತಾಪ ಮಾಡಿದಂತೆ, 2013ನೇ ಸಾಲಿನಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರ ಅಸ್ತಿತ್ವದಲ್ಲಿದಂತಹ ಸಂದರ್ಭದಲ್ಲಿ ಕೃಷಿ ಕ್ಷೇತ್ರವನ್ನು ಒಂದು ಉದ್ಯಮವಾಗಿ ಪರಿಗಣಿಸಬೇಕೆಂದು ದೇಶದಲ್ಲಿಯೇ ಪ್ರಥಮವಾಗಿ ಕೃಷಿ ಮಾರಾಟ ಕ್ಷೇತ್ರಗಳಲ್ಲಿ ಸುಧಾರಣೆ ತರಲು ಒಂದು ಸಮಿತಿಯನ್ನು ರಚನೆ ಮಾಡುತ್ತಾರೆ. ಈ ಸಮಿತಿಗಳು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಏನು ನ್ಯೂನತೆಗಳಿವೆ, ಅದರ ಮೇಲೆ ಅಧ್ಯಯನ ಮಾಡಿ, ರೈತರು ವರ್ಷ ಇಡೀ ತಮ್ಮ ಭೂಮಿಯಲ್ಲಿ ದುಡಿದು ಉತ್ಪಾದಿಸಿದ ಉತ್ಪನ್ನಗಳನ್ನು ಎ.ಪಿ.ಎಂ.ಸಿ. ಮಾರುಕಟ್ಟೆ ಅಡಿ ನ್ಯಾಯೋಜಿತ ನೈಜ ಬೆಲೆ ದೊರಕಿಸಿಕೊಡಲು ಏನೇನು ಕ್ರಮ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಒಂದು ವರದಿಯನ್ನು ನೀಡಬೇಕೆಂದು ತಿಳಿಸಿದಾಗ, ಈ ಸಮಿತಿಗಳು ಹಲವಾರು ಕೃಷಿ ಮಾರುಕಟ್ಟೆಗಳಿಗೆ ಭೇಟಿ ನೀಡಿ, ಕುಂದು-ಕೊರತೆಗಳೇನಿವೆ ಅದರ ಮೇಲೆ ಅಧ್ಯಾಯನ ಮಾಡಿ, ರೈತರು, ವರ್ತಕರು, ದಲ್ಲಾಳಿಗಳ ಹತ್ತಿರ ಸಭೆಗಳನ್ನು ಮಾಡಿ, ರೈತರು, ರೈತ ಮುಖಂಡರ ಹತ್ತಿರ ಮತ್ತು ಮಾರುಕಟ್ಟೆ ಬಾಗಿದಾರರೊಂದಿಗೆ ರಾಜ್ಯ ಮಟ್ಟದ ಕಾರ್ಯಕ್ರಮವನ್ನು ಮಾಡಿ ತಿದ್ದುಪಡಿ ಮಾಡುತ್ತಾರೆ.

2013ನೇ ಸಾಲಿನಲ್ಲಿ ಹಲವಾರು ಶಿಫಾರಸ್ಸು ಮಾಡಿ ಸರ್ಕಾರ ಕೃಷಿ ಮಾರಾಟ ನೀತಿ, ವಿಧೇಯಕವನ್ನು ಜಾರಿಗೆ ತರುತ್ತದೆ. ಅದರಲ್ಲಿ ವಿಶೇಷವಾಗಿ ರೈತರಿಗೆ ನೈಜ ಬೆಲೆ ದೊರೆಯಬೇಕು, ಅವರಿಗೆ ನೀಡಿದ ಪರವಾನಗಿ ಏನಿದೆ, ಒಂದು ಮಾರುಕಟ್ಟೆಗೆ ಮಾತ್ರ ಆ ಪರವಾನಗಿ ನೀಡುವುದನ್ನು ವಿಸ್ತೃತ ಮಾಡಿ, ಇಡೀ ರಾಜ್ಯದಲ್ಲಿಯೇ ಏಕ ರೂಪದ ಪರವಾನಗಿಯನ್ನು ತರಬೇಕೆಂದು ಕಾನೂನು ಮಾಡುತ್ತಾರೆ. ಅದರ ಜೊತೆಗೆ e-marketing ಮೂಲಕ ಕೃಷಿಕರು ಬೆಳೆಗಳನ್ನು ಮಾರಾಟ ಮಾಡುವುದಕ್ಕೆ ಒಂದು ವೇದಿಕೆಯನ್ನು ಸೃಷ್ಟಿ ಮಾಡುತ್ತಾರೆ. ಏಕೆಂದರೆ, ಇಡೀ ದೇಶದಲ್ಲಿಯೇ ವಿಶೇಷವಾದ ವ್ಯವಸ್ಥೆಯನ್ನು ಮೊಟ್ಟಮೊದಲ ಬಾರಿಗೆ 'ದೂರದ ಮಾರುಕಟ್ಟೆಗಳಲ್ಲಿ ಸಹ ಪದಾರ್ಥಗಳನ್ನು ಮಾರಬಹುದೆಂಬ' ನೀತಿಯನ್ನು ಜಾರಿಗೆ ತರುತ್ತಾರೆ. ಟೆಂಡರ್ ಮೂಲಕ ಇರುವಂಥ ವ್ಯವಸ್ಥೆಗಳೇನಿದೆ, ಅದನ್ನು ಬದಲಾವಣೆ ಮಾಡಿ, ಈ ವ್ಯವಸ್ಥೆಯನ್ನು ಜಾರಿಗೆ ತರುತ್ತಾರೆ. ರೈತರಿಗೆ ಅನುಕೂಲವಾಗಬೇಕು ಮತ್ತು ಮಾರುಕಟ್ಟೆಗಳಲ್ಲಿ ಒಳ್ಳೆಯ ಬೆಲೆ ಸಿಗಬೇಕೆಂದು ಈ ಒಂದು ನೀತಿಯನ್ನು ಜಾರಿಗೆ ತರುತ್ತಾರೆ. ಈ ನೀತಿ ಜಾರಿಗೆ ಬಂದ ಮೇಲೆ ವಿಶೇಷವಾಗಿ ರೈತರಿಗೆ ಬಹಳಷ್ಟು ಅನುಕೂಲವಾಗಿದೆ. ಅದೇನೆಂದರೆ, ಪಾರದಕ್ಷತೆ ಮತ್ತು ದಕ್ಷತೆ ಏಕರೂಪದಲ್ಲಿ ಪರವಾನಗಿ ನೀಡಿ, ಖರೀದಿ ಮಾಡಿದ ಉತ್ಪನ್ನಗಳಿಗೆ ಸಾಗಾಟಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಕೂಲವಾಗಿರುವ online, e-permit system, ಬಳಕೆ ಚೀಟಿಯನ್ನು ನಿರ್ಬಂಧಿಸಿ ಗಣಕೀಕೃತ ಲೆಕ್ಕ ತಿರುವಳಿ ಪಟ್ಟಿ ನೀಡಿದ್ದು, ಸಂಪೂರ್ಣ ಮಾರಾಟ ಪ್ರಕ್ರಿಯೆಯನ್ನು ಗಣಕೀಕೃತ ಮಾಡುವ ಸೇವೆಯನ್ನು ರಚನೆ ಮಾಡುತ್ತಾರೆ. ವಿಶೇಷವಾಗಿ ಕೇಂದ್ರ ಸರ್ಕಾರ ಒಂದು ಸಮೀಕ್ಷೆ ಮಾಡಿ, 2014-15ನೇ ಸಾಲಿನ ತಿದ್ದುಪಡಿ ಏನಿದೆ, ಅದನ್ನು ಶ್ಲಾಘನೆ ಮಾಡಿ, ಎ.ಪಿ.ಎಂ.ಸಿ. ಮಾರುಕಟ್ಟೆ ಕಾಯ್ದೆ ಇಡೀ ದೇಶಕ್ಕೆ ಮಾದರಿಯಾಗಬೇಕೆಂದು ಎಲ್ಲಾ ರಾಜ್ಯಗಳಲ್ಲಿ ಎ.ಪಿ.ಎಂ.ಸಿ. ಮಾರುಕಟ್ಟೆ ಜಾರಿಗೆ ತರುತ್ತಾರೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕಾಂಗ್ರೆಸ್ ಸರ್ಕಾರ ಜಾರಿ ಮಾಡಿರುವಂಥ ಎ.ಪಿ.ಎಂ.ಸಿ. ಮಾರುಕಟ್ಟೆ ಇಡೀ ದೇಶಕ್ಕೆ ಮಾದರಿಯಾಗಿದೆ. ವಿಶೇಷವಾಗಿ 2011ನೇ ಸಾಲಿನಲ್ಲಿ ಮಾರುಕಟ್ಟೆ ಸಂಗ್ರಹಣೆ ಏನಿದೆ, ಅದು 313 ಕೋಟಿ ರೂಪಾಯಿಗಳಾದರೆ, 2020ನೇ ಸಾಲಿನಲ್ಲಿ 562 ಕೋಟಿ ರೂಪಾಯಿಗೆ ತಲುಪಿದೆ. ಸರಳತೆಯಿಂದ ರೈತರಿಗೆ ನೈಜ ಬೆಲೆ ಸಿಗಬೇಕೆಂದು ಸೃಷ್ಟಿ ಮಾಡಿದ್ದೇವೆ, ಅದಕ್ಕೆ ಇದು ಅಡಿಪಾಯವಾಗುತ್ತದೆ. ಕೇಂದ್ರ ಸರ್ಕಾರದ ಆರ್ಥಿಕ ಸಮೀಕ್ಷೆ ವರದಿಯಲ್ಲಿ 'ಏಕೀಕೃತ ಮಾರುಕಟ್ಟೆ ವೇದಿಕೆ ಇಡೀ ರಾಷ್ಟ್ರಕ್ಕೆ ಮಾದರಿಯಾಗಿದೆ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ಜೊತೆಗೆ ನೀತಿ ಆಯೋಗದವರು ಎ.ಪಿ.ಎಂ.ಸಿ. ಕಾಯ್ದೆ ಜಾರಿಯಿಂದ ಉತ್ಪನ್ನಗಳ ಮಾರಾಟ ಬೆಲೆಗಳಲ್ಲಿ ಸರಾಸರಿ ಶೇಕಡ 38 ರಷ್ಟು ಏರಿಕೆಯಾಗುತ್ತದೆ ಎಂದು ಹೇಳಿದ್ದು, ಇದನ್ನು ಇಡೀ ರಾಷ್ಟ್ರದಲ್ಲಿ ಎಲ್ಲಾ ಕಡೆ ಚಾಲನೆ ಮಾಡಬೇಕೆಂದು ಕೇಂದ್ರ ಸರ್ಕಾರ ನೀತಿ ಆಯೋಗದ ವತಿಯಿಂದ ಶ್ಲಾಘನೆ ನೀಡುತ್ತದೆ. ಈ ಒಂದು ವ್ಯವಸ್ಥೆಯನ್ನು ಮಾಡಬೇಕಾದರೆ, 2015ನೇ ಸಾಲಿನಲ್ಲಿ ಹುಬ್ಬಳ್ಳಿಯಲ್ಲಿ ರಾಷ್ಟ್ರ ಮಟ್ಟದಲ್ಲಿ ಕಾರ್ಯಗಾರವನ್ನು ಮಾಡಿ, ಕೇಂದ್ರ ಮತ್ತು 26 ರಾಜ್ಯ ಸರ್ಕಾರದ ಎಲ್ಲಾ ಕೃಷಿ ಸಚಿವರು ಭಾಗವಹಿಸಿ, ಏನು ಕ್ರಮ ತೆಗೆದುಕೊಂಡಿದ್ದೇವೆ ಅದು ರಾಷ್ಟ್ರಕ್ಕೆ ಮಾರಾಟ ನೀತಿ ಮಾದರಿಯಾಗಬೇಕೆಂದು ಮಾಡುತ್ತಾರೆ. ಕೇಂದ್ರ ಸರ್ಕಾರ 'ಕಾಂಗ್ರೆಸ್ ಸರ್ಕಾರ ಜಾರಿಗೆ ತಂದ ಎ.ಪಿ.ಎಂ.ಸಿ. ಕಾಯ್ದೆ ಏನಿದೆ, ಅದು ಇಡೀ ದೇಶಕ್ಕೆ ಮಾದರಿಯಾಗಿದೆ' ಎಂದು ಶ್ಲಾಘನೆ ಮಾಡುತ್ತಾರೆ. ನಾವು ಇಷ್ಟೆಲ್ಲಾ ಮಾಡಿದರೂ ಈಗ ತಂದಿರುವ ತಿದ್ದುಪಡಿಯಲ್ಲಿ ಇವೆಲ್ಲವನ್ನು ಗಾಳಿಗೆ ತೂರಿದ್ದಾರೆ. ನಾವು ಎಷ್ಟೆಲ್ಲಾ ಖರ್ಚು ಮಾಡಿ ರೈತರಿಗೆ ಅನುಕೂಲವಾಗಲಿ ಎಂದು ತಂದಿರುವ ತಿದ್ದುಪಡಿ ವ್ಯವಸ್ಥೆ ಏನಿದೆ, ಅದಕ್ಕೆ ಈಗ ತಂದಿರುವ ಸುಗ್ರೀವಾಜ್ಞೆಯಿಂದ ರೈತರಿಗೆ ದೊಡ್ಡ ಧಕ್ಕೆಯಾಗುತ್ತದೆ. 1961 ರಿಂದ 2013ನೇ ಸಾಲಿನವರೆಗೂ ತಿದ್ದುಪಡಿ ಮಾಡಿ ಏನು ವ್ಯವಸ್ಥೆ ಸೃಷ್ಟಿ ಮಾಡಲಾಗಿದೆ, ಅದೆಲ್ಲವೂ ಈ ಒಂದು ತಿದ್ದುಪಡಿಯಿಂದ ಸರ್ವನಾಶವಾಗಿ ರೈತರಿಗೆ ದೊಡ್ಡ ಧಕ್ಕೆಯಾಗಿದೆ. ಈಗಾಗಲೇ ಮಾನ್ಯ ತಿಪ್ಪೇಸ್ವಾಮಿಯವರು ಹೇಳಿದ ಹಾಗೆ ದಲ್ಲಾಳಿಗಳು ಜಾಸ್ತಿಯಾಗುತ್ತಾರೆ, ಬಹು ರಾಷ್ಟ್ರೀಯ ಕಂಪನಿಗಳು, ಕಾರ್ಪೋರೇಟ್ ಕಂಪನಿಗಳು, ದೊಡ್ಡ ವ್ಯಾಪಾರಿಗಳೇನಿದ್ದಾರೆ ಅವರೆಲ್ಲರೂ ರೈತರ ಹತ್ತಿರ ಸುಲಿಗೆ ಮಾಡಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೇರವಾಗಿ ಕೃಷಿ ಉತ್ಪನ್ನಗಳನ್ನು ಖರೀದಿ ಮಾಡಿ, ಅವರಿಗೆ ಅನುಕೂಲವಾಗುವಂಥ ವಾತಾವರಣ ಸೃಷ್ಟಿಯಾಗುತ್ತದೆ. ಅವರುಗಳಿಗೆ ಅನುಕೂಲವಾಗುವ ಬೆಲೆಗೆ ರೈತರ ಹತ್ತಿರ ಬೆಳೆಗಳನ್ನು ಖರೀದಿ ಮಾಡುತ್ತಾರೆ. ವಿಶೇಷವಾಗಿ ಕಾರ್ಪೋರೇಟ್ ಕಂಪನಿಯವರೇ ನೇರವಾಗಿ ರೈತರ ಹತ್ತಿರ ಬೆಳೆಗಳನ್ನು ಖರೀದಿ ಮಾಡಲು ಹೋಗವುದಿಲ್ಲ, ದಲ್ಲಾಳಿಗಳನ್ನು ಕಳುಹಿಸುತ್ತಾರೆ. ಎ.ಪಿ.ಎಂ.ಸಿ. ಕಾಯ್ದೆಯಲ್ಲಿ ತಂದಿರುವಂಥ ಹೊಸ ಸುಗ್ರೀವಾಜ್ಞೆ ಏನಿದೆ, ಇದರಲ್ಲಿ ದಲ್ಲಾಳಿಗಳ ಹಾವಳಿ ಜಾಸ್ತಿಯಾಗುತ್ತದೆ. ರೈತರಿಗೆ ಕಡಿಮೆ ಬೆಲೆಯಲ್ಲಿ ಉತ್ಪನ್ನವನ್ನು ಒದಗಿಸುವಂತೆ ಒತ್ತಡ ಏರುತ್ತಾರೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ಆಯನೂರು ಮಂಜುನಾಥ್‌ರವರು ಸಭಾಪತಿಯವರ ಪೀಠವನ್ನು ಅಲಂಕರಿಸಿದರು)**

ಅದಲ್ಲದೇ, ನಮ್ಮ ರಾಜ್ಯದಲ್ಲಿ 162 ಪ್ರಮುಖ ಕೃಷಿ ಉತ್ಪನ್ನ ಮಾರುಕಟ್ಟೆಗಳು ಮತ್ತು 354 ಉಪ ಮಾರುಕಟ್ಟೆಗಳು, ಅದರ ಜೊತೆಗೆ ಒಟ್ಟು 518 ಕೃಷಿ ಉತ್ಪನ್ನ ಮಾರುಕಟ್ಟೆಗಳನ್ನು ಮುಚ್ಚಬೇಕಾಗುತ್ತದೆ. ಏಕೆಂದರೆ, ಪದಾರ್ಥಗಳನ್ನು ರೈತರಿಂದ ನೇರವಾಗಿ ಖರೀದಿ ಮಾಡಬೇಕೆಂಬ ಕಾಯ್ದೆ ತಂದಿದು, ಈಗಾಗಲೇ ನಾವು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ತಂದಂತಹ ವ್ಯವಸ್ಥೆ ಏನಿತ್ತು, ಅದೆಲ್ಲವೂ ನೀರು ಪಾಲಾಗುತ್ತದೆ. ಸುಗ್ರೀವಾಜ್ಞೆ ವಿಧೇಯಕದಲ್ಲಿ MSP (Minimum Support Price) ನಿಗದಿಪಡಿಸಿರುವ ಬಗ್ಗೆ ಏನು ತಿಳಿಸಿರುವುದಿಲ್ಲ. ಇವತ್ತಿನವರೆಗೂ MSP ಸಿಗುತ್ತದೆಯೋ, ಇಲ್ಲವೋ ಎಂಬುದನ್ನು ಹೇಳಿಲ್ಲ. ಇದೆಲ್ಲದರ ಜೊತೆಗೆ ತಾವು ವಿಧೇಯಕವನ್ನು ಮಂಡಿಸಿದ್ದೀರಿ. ವಿಧೇಯಕದಲ್ಲಿ ಪ್ರಸ್ತಾವಿಕ ಶಾಸನಾತ್ಮಕವಾಗಿ ಸುಮಾರು 500 ಕೋಟಿ ರೂಪಾಯಿ ಹಣಕಾಸಿನ ಸಮಸ್ಯೆ ಉಂಟಾಗಿರುತ್ತದೆ ಎಂದು ಹೇಳಿದ್ದಾರೆ. ಪ್ರತಿ ವರ್ಷ ಎ.ಪಿ.ಎಂ.ಸಿ. ಮಾರುಕಟ್ಟೆಯಿಂದ 500 ಕೋಟಿ ರೂಪಾಯಿ ಬರುವಂಥ ಆದಾಯವೇನಿದೆ, ಅದರ ಜೊತೆಗೆ 500 ಕೋಟಿ ರೂಪಾಯಿ ನಷ್ಟವಾಗುತ್ತದೆ. ಅಂದರೆ ಒಂದು ಸಾವಿರ ಕೋಟಿ ರೂಪಾಯಿ ನಷ್ಟವಾಗುವಂಥ ಈ ವಿಧೇಯಕ ಅವಶ್ಯಕವಾಗಿದೆಯೇ?

(1068) 09.12.2020/6.50/ಎಸ್‌ಕೆ-ವಿಕೆ

**(ವೈಸ್ ಛೇರ್ಮನ್‌ವರ ಉಪಸ್ಥಿತಿ)**

**ಶ್ರೀ ಪ್ರಕಾಶ್ ಕೆ. ರಾಥೋಡ್ (ಮುಂದು):-**

ಇದು ರೈತರಿಗೆ ಅನುಕೂಲವಾಗುತ್ತದೆಯೇ? ಇದರಿಂದ ರೈತರ ಸಮಸ್ಯೆಗಳಿಗೆ ಏನಾದರೂ ಪರಿಹಾರ ಸಿಗುತ್ತದೆಯೇ? ಈ ವಿಧೇಯಕವನ್ನು ತಂದು ರೈತರನ್ನು ಸರ್ವನಾಶ ಮಾಡುವಂತಹ ಒಂದು ವ್ಯವಸ್ಥೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದರ ಜೊತೆಗೆ ಕಾರ್ಪೋರೇಟ್ ಕಂಪನಿಗಳಿಗೆ, ದಲ್ಲಾಳಿಗಳಿಗೆ ಹಾಗೂ ಶ್ರೀಮಂತರಿಗೆ ಅನುಕೂಲವಾಗುವಂತಹ ಈ ವಿಧೇಯಕವನ್ನು ತಂದು, ನಮ್ಮ ರಾಜ್ಯದಲ್ಲಿರುವ ರೈತರಿಗೆ ಬಹು ದೊಡ್ಡ ಅನ್ಯಾಯವಾಗುತ್ತದೆಂದು ನಾನು ಭಾವಿಸುತ್ತೇನೆ. ಈ ವಿಧೇಯಕವನ್ನು ಸಂಪೂರ್ಣವಾಗಿ ಹಿಂಪಡೆಯಬೇಕು. ರೈತರ ಹಿತದೃಷ್ಟಿಯಿಂದ ಈ ವಿಧೇಯಕವನ್ನು ಹಿಂಪಡೆಯಬೇಕು. ಮಾನ್ಯ ಮುಖ್ಯಮಂತ್ರಿಗಳು ಹಸಿರು ಶಾಲನ್ನು ಹಾಕಿಕೊಂಡು, ರೈತರ ಹೆಸರಿನ ಮೇಲೆ ಪ್ರಮಾಣವನ್ನು ಸ್ವೀಕಾರ ಮಾಡಿದ್ದಾರೆ. ಅದಕ್ಕೆ ಒಂದು ದೊಡ್ಡ ಧಕ್ಕೆಯನ್ನು ಕೊಟ್ಟು, ರೈತರಿಗೆ ದೊಡ್ಡ ಅನ್ಯಾಯವಾಗುತ್ತದೆಂದು ನಾನು ಭಾವಿಸುತ್ತೇನೆ. ಈ ವಿಧೇಯಕವನ್ನು ಮಾನ್ಯ ಸಚಿವರು ಹಿಂಪಡೆಯಬೇಕು. ಈ ವಿಧೇಯಕವನ್ನು ತಿದ್ದುಪಡಿ ಮಾಡಿ, ಮುಂದಿನ ಅಧಿವೇಶನದಲ್ಲಿ ತಂದರೆ ಒಳ್ಳೆಯದಾಗುತ್ತದೆಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

**ಶ್ರೀ ಪ್ರತಾಪ್ ಸಿಂಹ ನಾಯಕ್ (ವಿಧಾನಸಭಾ ಕ್ಷೇತ್ರ):-** ನನ್ನ ಅಭಿಪ್ರಾಯಗಳನ್ನು ಮಂಡಿಸುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ಮಾನ್ಯ ಸಭಾಪತಿಯವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಾನು ಈ ತಿದ್ದುಪಡಿಯ ಪರವಾಗಿ ಮಾತನಾಡುವುದಕ್ಕೆ ನಿಂತಿದ್ದೇನೆ. ನಾವು ಪ್ರಕೃತಿಯ ಜೊತೆಗೆ ಬದುಕುವಂತಹ ಸಂಸ್ಕೃತಿ. ಹಾಗಾಗಿ ಸಹಜವಾಗಿ ಪ್ರಕೃತಿಯ ಜೊತೆಗೆ ಸದಾ ಬದುಕುತ್ತಿರುವಂತಹ ನಮ್ಮ ನಿರ್ಮಲ ಮನಸ್ಸಿನಿಂದ ಎಲ್ಲರ ಬದುಕಿಗೆ ಬೆಳಕಾಗ ಬಲ್ಲಂತಹ ರೈತನ ಬಗ್ಗೆ ಕಳಕಳಿಯ ಮಾತುಗಳು ಎಲ್ಲರೂ ಮಾತನಾಡುವಾಗ ಸಹಜವಾಗಿ ಅದರ ಭಾವನೆಯನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ. ಒಂದು ಕಡೆಯಿಂದ ಕೃಷಿಕನು ಕೃಷಿ ಆಧಾರದ ಮೇಲೆ ಬದುಕುವಂತಹ ಸ್ಥಿತಿಯಿಲ್ಲ. ಕೃಷಿಯನ್ನು ಅವಲಂಬಿಸಿಕೊಂಡು ಬದುಕುವುದನ್ನು ಬಿಟ್ಟು, ಅವನು ನಗರಕ್ಕೆ ಬರುತ್ತಿದ್ದಾನೆ. ಹಾಗಾಗಿ ಕೃಷಿಯೊಂದು ಆದಾಯ ಕೊಡುವಂತಹ ಅಥವಾ ಜೀವನದ ನಿರ್ವಹಣೆಗೆ ಒಂದು ಮಾರ್ಗವಾಗಿರುವಂತಹ ಸಂಗತಿಯಲ್ಲ ಎನ್ನುವಂತಹದ್ದನ್ನು ಒಂದು ಕಡೆಯಿಂದ ಹೇಳುತ್ತಾ, ಇನ್ನೊಂದು ಕಡೆಯಿಂದ ಯಾವುದಾದರೂ ಒಂದು ಹೊಸ ಬದಲಾವಣೆಯನ್ನು ರೈತರಲ್ಲಿ ಒಂದು ವಿಶ್ವಾಸವನ್ನು ತುಂಬಿಸಿ, ರೈತ ಬೆಳೆದ ಬೆಳೆಗೆ ಅವನದೇ ಆದಂತಹ ರೀತಿಯಲ್ಲಿ ಮಾರುಕಟ್ಟೆಯಲ್ಲಿ ಅವನಿಗೆ ಸಮಾಧಾನ ಸಿಗುವಂತಹ ಒಂದು ಬೆಲೆಗೆ ಮಾರುವಂತಹ ಒಂದು ವಾತಾವರಣವನ್ನು ನಿರ್ಮಾಣ ಮಾಡುವ ದಿಕ್ಕಿನಲ್ಲಿ ಬದಲಾವಣೆ ಎಂದು ಹೇಳಿದಾಗ, ಅದು ರಾತ್ರಿ ಬೆಳಿಗ್ಗೆ ಆಗುವುದರೊಳಗೆ ಬದಲಾವಣೆ ಬಂದಿರುವುದಿಲ್ಲ. ನನಗೆ ಈ ಸದನದ ಹೊಸ ಸದಸ್ಯನಾಗಿ, ನನಗೆ ಇಲ್ಲಿ ಕಾಣುವಂತಹ ಸಂಶಯವೇನು ಎಂದು ಕೇಳಿದರೆ, ಇಲ್ಲಿ ಕುಳಿತಾಗ, ಈ ಬದಲಾವಣೆ ಸರಿ ಎಂದು ಹೇಳಿ ಕಾಣುತ್ತದೆ. ಅಲ್ಲಿ ಕುಳಿತಾಗ ಮಾತ್ರ ಆ ಬದಲಾವಣೆ ಸರಿಯಲ್ಲ ಎಂದು ಹೇಳುವಂತಹ ಭಾವನೆ ವ್ಯಕ್ತವಾಗುತ್ತದೆ. ಹಿಂದಿನ ಸರ್ಕಾರಗಳು ಅದರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಭವದ ಆಧಾರದ ಮೇಲೆ ಸಾಕಷ್ಟು ಕಮಿಟಿಗಳಲ್ಲಿ ಚರ್ಚೆಯಾಗಿದ್ದು, ರೈತನಿಗೆ ಈ ರೀತಿಯ ಒಂದು ಹೊಸತರದ ಅವಕಾಶವನ್ನು ಕಲ್ಪಿಸಿಕೊಡುವುದರಿಂದ, ಅವನು ದಾರಿಯಲ್ಲಿ ಹೋಗುವುದಕ್ಕೆ ಒಂದು ವಿಶೇಷವಾದಂತಹ ಅವಕಾಶ ಸಿಗುತ್ತದೆ ಎಂದು ಹೇಳುವಂತಹದ್ದು. ಇದನ್ನು ಪ್ರತಿ ಬಾರಿ ಮಾತಿನಲ್ಲಿ ಹೇಳುತ್ತೇವೆ. ರೈತನು ಬೆಳೆದ ಬೆಳೆಗೆ ನಾಲ್ಕು ರೂಪಾಯಿಗಳು ಸಿಗುತ್ತದೆ. ಅದು ಗ್ರಾಹಕನಿಗೆ ಸೇರುವಾಗ ನಲವತ್ತು ರೂಪಾಯಿಗಳು ಆಗುತ್ತದೆ. ಈ ಮೂವತ್ತಾರು ರೂಪಾಯಿಗಳು ಯಾರಿಗೆ ಹೋಗುತ್ತದೆ. ಇದಕ್ಕೆ ಪರಿಹಾರವೇನು ಎಂದು ಹೇಳುವಂತಹ ಮಾತುಗಳನ್ನು ಮಾತನಾಡುವಾಗ, ಬಹುಶಃ ಇವತ್ತು ಏನು ಈ ತಿದ್ದುಪಡಿಯನ್ನು ತರುತ್ತಿದ್ದಾರೋ, ಇದು ಅದಕ್ಕೆ ಉತ್ತರವಾಗಿ ಬರುತ್ತಿದೆ ಎಂದು ಹೇಳುವಂತಹದ್ದು ನನ್ನ ಭಾವನೆಯಾಗಿದೆ. ಭಯವನ್ನು ಹುಟ್ಟಿಸುವಂತಹದ್ದು ಬಹಳ ಸುಲಭ. ನಮಗೆ ನಮ್ಮ ವೈಯಕ್ತಿಕ ಅಜೆಂಡಾ ಮತ್ತು ಪಕ್ಷದ ಅಜೆಂಡಾ ಇರುತ್ತದೆ. ಅದರ ಮೇಲ್ಪಟ್ಟ ರಾಜ್ಯದ ಹಿತದೃಷ್ಟಿಯ ಅಜೆಂಡಾ ಬರುವಾಗ, ಈ ಎರಡನ್ನು ದಾಟಿ ರಾಜ್ಯದಲ್ಲಿರುವ ರೈತನ ಹಿತದೃಷ್ಟಿಯಲ್ಲಿ ಇದರ ಬಗ್ಗೆ ಸ್ವಲ್ಪ ತೆರದ ಮನಸ್ಸಿನಿಂದ ಆಲೋಚನೆ ಮಾಡಿದರೆ, ಇದರ ಪರಿಣಾಮಗಳು ಕಾಣುತ್ತದೆ ಎಂದು ಹೇಳುವಂತಹದ್ದನ್ನು ನನ್ನ ಮನಸ್ಸಿಗೆ ಕಾಣುತ್ತದೆ. ಉದಾಹರಣೆಗೆ ಹೇಳುವುದಾದರೆ, ಕೈಗಾರಿಕೆ ವಲಯ ಇರಬಹುದು ಅಥವಾ ಬೇರೆ ಬೇರೆ ವಲಯಗಳಲ್ಲಿ ಒಂದು ರೀತಿಯಲ್ಲಿ ಕ್ರಾಂತಿಕಾರಕವಾದಂತಹ ಬದಲಾವಣೆಗಳನ್ನು ತಂದಂತಹ ಸಂದರ್ಭದಲ್ಲಿಯೂ ಕೂಡ ಇದೇ ಸಂಶಯ ಪಡುವಂತಹವರು ಪಟ್ಟಿದ್ದರು. ಅದು ಉದಾರೀಕರಣ ಅಥವಾ ಜಾಗತೀಕರಣ ಇರಬಹುದು. ನಾನು ಒಮ್ಮೆ ಆಲೋಚನೆ ಮಾಡುವಂತಹದ್ದು. ಒಂದು ಕಾಲದಲ್ಲಿ ಬಹುಶಃ ಆ ಸಂದರ್ಭದಲ್ಲಿ ಆ ರೀತಿಯ ಧೈರ್ಯವನ್ನು ತೆಗೆದುಕೊಂಡು ದೇಶವನ್ನು ಉದಾರೀಕರಣದ ದೃಷ್ಟಿಯಲ್ಲಿ ತೆಗೆದುಕೊಂಡಿದ್ದರ ಪರಿಣಾಮವಾಗಿ ಇವತ್ತು ಕೈಗಾರಿಕೆ GDP (Gross Domestic Product) ಗೂ ಇರಬಹುದು ಅಥವಾ ಜನ ಜೀವನದ ಪ್ರತಿಯೊಂದು ಭಾಗದಲ್ಲಿ ಇರಬಹುದು. ಅದು ಎಂತಹ ಒಂದು ಬದಲಾವಣೆಯನ್ನು ತಂದಿತು. ಒಂದು ಕಾಲದಲ್ಲಿ Fiat and Ambassador car ನ್ನು ಮಾತ್ರ ನೋಡುತ್ತಿದ್ದಂತಹ ನಾವು, ಮಾರುತಿ ಬಂತು. ಅದರ ನಂತರ ಒಮ್ಮೆ ಉದಾರೀಕರಣಗೊಂಡು, ಈ ದೇಶದಲ್ಲಿರುವ ಕೈಗಾರಿಕೆಗಳು ಒಂದು ದೊಡ್ಡ ರೀತಿಯಲ್ಲಿ ತೆರೆದುಕೊಂಡಾಗ, ಯಾವ ರೀತಿಯ ಒಂದು ಬದಲಾವಣೆಯನ್ನು ಕಂಡಿತು ಎಂದು ಹೇಳುವಂತಹ ಯೋಚನೆಯನ್ನು ಮಾಡುವಾಗ, ಇವತ್ತು ಕೃಷಿಗೆ ಆ ರೀತಿಯ ಒಂದು ವೇಗವನ್ನು ಕೊಡಬೇಕು.

2022ನೇ ಇಸವಿಗೆ ರೈತನ ಉತ್ಪತ್ತಿ ದ್ವಿಗುಣವಾಗಬೇಕು ಎಂದು ಹೇಳುವಂತಹ ದೃಷ್ಟಿಯಲ್ಲಿ ನಾವು ನಿರೀಕ್ಷೆ ಮಾಡಲಿಲ್ಲ. ಆದರೆ 2020ರಲ್ಲಿ ಕೋವಿಡ್ ಬಂದಂತಹ ಹಿನ್ನೆಲೆಯಲ್ಲಿ ದೇಶದ ಒಟ್ಟು GDP

ಕುಸಿತಗೊಂಡಂತಹ ಸಂದರ್ಭದಲ್ಲಿ ಬಹುಶಃ ಇವತ್ತು ಏನಾದರೊಂದು ಆಧಾರವನ್ನು ಕೊಟ್ಟಿದ್ದರೆ, ಅದು ಖಂಡಿತವಾಗಿಯೂ, ಕೃಷಿ ಕ್ಷೇತ್ರ. ಕೈಗಾರಿಕೆ ಅಥವಾ ಬೇರೆ ಸೇವಾ ವಲಯ ಇದೊಂದು ರೀತಿಯಲ್ಲಿ ಅದರ ವೇಗವೇನಿದೆ? ಅದನ್ನು ಕಳೆದುಕೊಂಡಿದ್ದಂತಹ ಸಂದರ್ಭದಲ್ಲಿ ಅದು ಇಡೀ ಜಗತ್ತೇ ಕಂಡಂತಹ ಸತ್ಯ. ಅಂತಹ ಸಂದರ್ಭದಲ್ಲಿ ಕೃಷಿಕನ ಜಾಗ ಮತ್ತು ಅವನ ಶ್ರಮವೇನಿದೆ, ಅದು ದೇಶದ ಆರ್ಥಿಕತೆಯನ್ನು ಕೈಬಿಡಲಿಲ್ಲ. ಇಂತಹ ಹಿನ್ನೆಲೆಯನ್ನು ಈ ಒಂದು ರೀತಿಯಲ್ಲಿ ತೆರೆದುಕೊಳ್ಳುವುದಕ್ಕೆ ಯಾವುದು ಕೈಗಾರಿಕೆ ಕ್ರಾಂತಿ ಅಥವಾ ಉದಾರೀಕರಣ ಕೈಗಾರಿಕಾ ಕ್ಷೇತ್ರಕ್ಕೆ ಕೊಟ್ಟಿತು. ಅದೇ ರೀತಿಯ ಒಂದು ಬದಲಾವಣೆ ಕೃಷಿ ಕ್ಷೇತ್ರಕ್ಕೆ ಮತ್ತು ಯಾವತ್ತಿದ್ದರೂ ಬಹುಶಃ ನಾವೆಲ್ಲರೂ ಈ ಸ್ಥಾನಕ್ಕೆ ಬಂದು ಕುಳಿತಂತಹವರು ಮತ್ತು ಜವಾಬ್ದಾರಿಯಲ್ಲಿರುವಂತಹವರ ಜನರ ಮನಸ್ಸಿಗೆ ವಿಶ್ವಾಸವನ್ನು ತುಂಬಿಸಿ, ಇಲ್ಲ ಕೃಷಿಕನಿಗೂ ಇದು ಸಾಧ್ಯ ಎಂದು ಹೇಳುವಂತಹ ಒಂದು ವಾತಾವರಣವನ್ನು ನಿರ್ಮಾಣ ಮಾಡುವಂತಹ ವಿಶ್ವಾಸವನ್ನು ತುಂಬಿಸುವಲ್ಲಿ ಒಂದು ಬದಲಾವಣೆಯ ಹೆಜ್ಜೆಯಾಗಿ, ಈ ಕ್ರಾಂತಿಕಾರಕವಾದಂತಹ ತಿದ್ದುಪಡಿಗಳು ಮತ್ತು ಕಾನೂನುಗಳು ಬರುತ್ತಿದೆ. ಆದರೆ ಭಯವನ್ನು ಹುಟ್ಟಿಸುವಂತಹದ್ದು ಬಹಳ ಸುಲಭ. ಸರ್ವನಾಶ, ಸರ್ವನಾಶ ಎನ್ನುವಂತಹ ಪದವನ್ನು ಹೇಳುವಂತಹ ಶಬ್ಧವನ್ನು ಉಪಯೋಗಿಸುವಂತಹದ್ದು. ಅದರ ಬದಲಾಗಿ, ಅದರ ಬದಲಾವಣೆ ಏನು ಎಂದು ಹೇಳುವಂತಹದ್ದು. ಈ ಬದಲಾವಣೆಯನ್ನು ಯಾರು ಇವತ್ತು ಸರ್ವನಾಶ ಎಂದು ಹೇಳಿ ಹೇಳುತ್ತಿದ್ದಾರೋ, ಅವರೇ ಹೇಳಿರುವಂತಹದ್ದು. ಅವರಿಗೆ ಅವರ ಸರ್ಕಾರವಿದ್ದಂತಹ ಸಂದರ್ಭದಲ್ಲಿ ತರುವಂತಹ ಒಂದು ಆತ್ಮಸಾಕ್ಷಿಯೋ ಅಥವಾ ಧೈರ್ಯವೋ ಬಹುಶಃ ಅದನ್ನು ರೈತರಿಗೆ ತಲುಪಿಸುವಂತಹ ದೃಷ್ಟಿಯಲ್ಲಿ ಅವರಿಂದ ಸಾಧ್ಯವಾಗದೇ ಇದ್ದಿದ್ದನ್ನಾ, ಅವರೇ ಹೇಳಿರುವಂತಹದ್ದು. ಇವತ್ತು ಇದನ್ನು ಜಾರಿಗೆ ತರುವಂತಹ ಸಂದರ್ಭದಲ್ಲಿ, ರೈತನ ಒಟ್ಟು ಅಭಿವೃದ್ಧಿಯ ದೃಷ್ಟಿಯಲ್ಲಿ ಸರ್ಕಾರ ಏನೊಂದು ಯೋಜನೆಯನ್ನು ಕೊಡುತ್ತಿದೆ. ಈ ಯೋಜನೆಯನ್ನು ನಾನು ಸಂಪೂರ್ಣ ಮನಸ್ಸಿನಿಂದ ರೈತರ ಪರವಾಗಿ ಸ್ವಾಗತಿಸುತ್ತಾ, ರೈತರಿಗೆ ಒಂದು ವಿಶೇಷವಾದಂತಹ ರೀತಿಯಲ್ಲಿ ಬೆಳಕನ್ನು ಕೊಡುವಂತಹದ್ದು. ಇವತ್ತಿನ ಕಾಲ ಒಂದು ಬೆರಳು ಒತ್ತಿದರೆ, ಇಡೀ ಜಗತ್ತಿನ ಜ್ಞಾನವನ್ನು ಕೊಡುವಂತಹ ಸಂದರ್ಭದಲ್ಲಿ ರೈತರ ಮಕ್ಕಳು ಆ ರೀತಿಯ ಸ್ಥಿತಿಯಲ್ಲಿಲ್ಲ. ಜಗತ್ತು ಇವತ್ತು ಯಾವುದನ್ನು ಮಾಡಿದರೆ, ಒಳ್ಳೆಯದು, ಕೆಟ್ಟದ್ದು ಹೇಳವಂತಹದ್ದನ್ನು ಅರ್ಥ ಮಾಡಿಕೊಳ್ಳುವಂತಹ ಸ್ಥಿತಿಯಲ್ಲಿದ್ದಾರೆ. ಇಡೀ ದೇಶದ ಪರಿಸ್ಥಿತಿಯನ್ನು ನೋಡಿದರೆ, ಎಲ್ಲಿ ಮಧ್ಯವರ್ತಿಗಳ ಹಾವಳಿ ಎಲ್ಲಿ ಜೋರಾಗಿದೆಯೋ, ಅಲ್ಲಿ ಇದರ ಬಗ್ಗೆ ಹೆಚ್ಚು ವಿರೋಧ ವ್ಯಕ್ತವಾಗುತ್ತಿದೆ. ಅದನ್ನು ಹೊರತುಪಡಿಸಿದರೆ, ಬಹುಶಃ ಈ ಕಾನೂನಿನ ಬಗ್ಗೆ ಎಲ್ಲಾ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೈತರು ಕೂಡ ಸ್ವಾಗತಿಸುತ್ತಾರೆ. ರೈತರ ಜೀವನಕ್ಕೆ ಹೊಸದಾಗಿ ಕೊಡುವಂತಹ ಈ ಒಂದು ವಿಧೇಯಕದ ತಿದ್ದುಪಡಿಯನ್ನು ನಾನು ಸ್ವಾಗತಿಸುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**ಶ್ರೀ ಆರ್. ಬಿ. ತಿಮ್ಮಾಪೂರ (ವಿಧಾನಸಭಾ ಕ್ಷೇತ್ರ):**–ಮಾನ್ಯ ಸಭಾಪತಿಯವರೇ, ಬಹುಶಃ ಮಾನ್ಯ ಸೋಮಶೇಖರ್‌ರವರು ಇಂತಹ ಒಂದು ಕಾನೂನು ತರುವುದಕ್ಕೆ ಒಪ್ಪುತ್ತಾರೋ ಅಥವಾ ಅವರಿಂದ ಆಗುವುದಿಲ್ಲ ಎನ್ನುತ್ತಾರೆ ಎನ್ನುವಂತಹ ಭಾವನೆ ನನಗೆ ಇತ್ತು. ಏಕೆಂದರೆ, ಅವರು ಸಹಕಾರಿ ರಂಗದಲ್ಲಿದ್ದವರು. ಸಹಕಾರಿ ರಂಗದಲ್ಲಿ ಎಷ್ಟೆಷ್ಟು ಸಂಸ್ಥೆಗಳು ಲಾಭದಾಯಕದಲ್ಲಿವೆ. ಈ ಸದನದಲ್ಲಿ ರೈತ ಪ್ರತಿನಿಧಿಗಳಿದ್ದಾರೆ. ಮಾನ್ಯ ಸಚಿವರು ಸಹ ರೈತರೇ ಹಾಗೂ ಸಹಕಾರಿ ರಂಗದಲ್ಲಿದ್ದವರು. ಹಾಗಿದ್ದರೆ, ರೈತ ಪ್ರತಿನಿಧಿಗಳ ಮೇಲೆ ವಿಶ್ವಾಸವಿಲ್ಲವೇನು?

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):**– ಪ್ರಗತಿಪರ ರೈತರು.

**ಶ್ರೀ ಆರ್. ಬಿ. ತಿಮ್ಮಾಪೂರ:**–ಅವರು ಪ್ರಗತಿ ಪರ ರೈತರಲ್ಲ. ಬಹು ರಾಷ್ಟ್ರೀಯ ಕಂಪನಿಗಳ ರೈತರಾಗುತ್ತದೆ. ಅವರಿಗೆ ಆ ಕಡೆ ಒಲವು.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):**– ಇವರಿಗಿಂತ ಮೇಲಿನವರು.

(ಮುಂದು)

(1069) 09.12.2020 7.00 ಟಿಸಿಹೆಚ್–ಬಿಎನ್ಎಸ್

**(ವೈಸ್ ಚೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಆರ್.ಬಿ.ತಿಮ್ಮಾಪೂರ:**– ಮಾನ್ಯ ಸಭಾಪತಿಯವರೇ, ಅವರಿಗೆ ಮನಸ್ಸಿಲ್ಲ. ಆದರೆ ಏನು ಮಾಡುವುದಕ್ಕಾಗುವುದಿಲ್ಲ. ಶ್ರೀ ಎಸ್.ಟಿ ಸೋಮಶೇಖರ್‌ರವರು ನಮ್ಮ ಪಕ್ಷದಲ್ಲಿದ್ದಾಗ ಚೆನ್ನಾಗಿದ್ದರು. ಅವರು ನಮ್ಮಿಂದ ಏನಾದರೂ ತಪ್ಪುಗಳಾದಾಗ ಸರಿಯಾಗಿ ಹೇಳುತ್ತಿದ್ದರು. ಈಗ ಬಿ.ಜೆ.ಪಿ. ಪಕ್ಷಕ್ಕೆ ಹೋಗಿ ತಪ್ಪು ಯಾವುದು, ಸರಿಯಾವುದು ಎಂದು ಹೇಳಲಾಗದೆ ಆ ಕೆಳಹಂಗಿನ ಗೌನ್ ಆಗತಕ್ಕಂಥ ಕೆಲಸಕ್ಕೆ ಏಕೆ ಹೋದರೆಂದು ನನಗಂತೂ ಅರ್ಥವಾಗುತ್ತಿಲ್ಲ. ಮಾನ್ಯ ಸಭಾಪತಿಯವರೇ, ಈ ಎ.ಪಿ.ಎಂ.ಸಿ., ಕಾಯ್ದೆಯನ್ನು ತಂದಿರುವುದು ಏತಕ್ಕೆ? ರೈತರಿಗೆ ನ್ಯಾಯೋಚಿತ ಬೆಲೆ ಸಿಗಬೇಕು. ಗ್ರಾಹಕರಿಗೆ ಹೊರೆಯಾಗದಂತೆ ನಿಯಂತ್ರಣ ಮಾಡಬೇಕು. ಸರ್ಕಾರದಲ್ಲಿರತಕ್ಕಂಥವರು ಏನು ಮಾಡಬೇಕೆಂದರೆ, ಒಂದು ಕಡೆ ಮಾರಾಟ ಮತ್ತೊಂದು ಕಡೆ ಗ್ರಾಹಕನ ನಡುವೆ ನಿಯಂತ್ರಣವನ್ನು ಸ್ಥಾಪಿಸಬೇಕು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನತಕ್ಕಂಥ ಸದುದ್ದೇಶದಿಂದ ನಾವು ಎ.ಪಿ.ಎಂ.ಸಿ., ಕಾಯ್ದೆಯನ್ನು ತಂದಿದ್ದೆವು. ಹಾಗಾದರೆ, ನೀವು ಏನು ಮಾಡುತ್ತಿದ್ದೀರಿ? ನಾವು ಕೇಳಿದರೆ, ಎ.ಪಿ.ಎಂ.ಸಿ.,ಗಳು ಇರುತ್ತವೆ, ಅವು ಎಲ್ಲಿಗೂ ಹೋಗುವುದಿಲ್ಲ ಎಂದು ಹೇಳುತ್ತಾರೆ. ಎ.ಪಿ.ಎಂ.ಸಿ.,ಯಲ್ಲಿ ಮಾರಾಟ ಮಾಡತಕ್ಕಂಥವನು ಸೆಸ್ ಕೊಡಬೇಕು. ಹೊರಗಡೆ ಮಾರಾಟ ಮಾಡಿದರೆ ಸೆಸ್ ಕೊಡುವಂತಿಲ್ಲ. ಈ ರೀತಿ ಆದಲ್ಲಿ ಅವನೇಕೆ ಎ.ಪಿ.ಎಂ.ಸಿ.,ಯಲ್ಲಿ ಅವನ ಬೆಳೆಯನ್ನು ತಂದು ಮಾರಾಟ ಮಾಡುತ್ತಾನೆ. ಅಂದರೆ ನೀವು ಅವುಗಳನ್ನು ಮುಚ್ಚಿ ಎನ್ನುವುದನ್ನು ಬಿಟ್ಟು, ಎಲ್ಲವನ್ನೂ ತರುತ್ತಿದ್ದೀರಿ. ಎ.ಪಿ.ಎಂ.ಸಿ.,ಯನ್ನು ಮುಚ್ಚುವಂಥ ಕೆಲಸ ನಿಮ್ಮಂಥವರಿಂದ ಆಗಬಾರದು. ನಿಮ್ಮ ಮನಸ್ಸು ಒಪ್ಪುತ್ತಿದೆಯೆಂದು ನನಗೆ ಅನಿಸುತ್ತಿಲ್ಲ. ನೀವೇಕೆ ಅದನ್ನು ಮುಚ್ಚುವುದಕ್ಕೆ ಹೊರಟಿದ್ದೀರಿ? ಹಲವಾರು ಸಮಸ್ಯೆಗಳನ್ನು ಹೇಳಿದ್ದೀರಿ. ಆಯಿತು, ಇರಬೇಕು ಇವೆ. ಸರ್ಕಾರ ಅದನ್ನು ನಿಯಂತ್ರಣದಲ್ಲಿಟ್ಟು ರೈತನಿಗೆ ಸಹಾಯ ಮಾಡುವುದಕ್ಕೆ ಬರಬೇಕೇ ವಿನಃ, 'ಶೀತ ಆಗಿದೆಯೆಂದರೆ ಮೂಗು ಕುಯ್ದುಕೊಳ್ಳುವಂಥ ಕೆಲಸ ಮಾಡಿದರೆ' ಹೇಗೆ. ಇದಕ್ಕೆ ನಾವು ಏನು ಹೇಳಬೇಕು. ನಾವು ಯಾವ ಶಬ್ದಗಳಿಂದ ಹೇಳಬೇಕು. ಸರ್ಕಾರಕ್ಕೆ ಏನಾಗಿದೆ? ನೀವು ರೈತರಿಗೆ ಉಗ್ರಾಣ ಕಟ್ಟಿಕೊಡಿ. ಕೋಲ್ಡ್ ಸ್ಟೋರೇಜ್ ಕಟ್ಟಿಕೊಡಿ. ಬ್ಯಾಂಕಿಂಗ್ ವ್ಯವಸ್ಥೆ ಮಾಡಿಕೊಡಿ. Export Information Centre ಮಾಡಿ. ಅಲ್ಲಿ ಒಳಗಡೆ ಬಂದಾಗ Export Information Centre ಮಾಡಿ. ಅಲ್ಲಿ ಒಳಗಡೆ ಬಂದರೆ ಪ್ಯಾಕೇಜ್ ಯಾವ ರೀತಿ ಇರಬೇಕು, ಯಾವ ರಾಷ್ಟ್ರದಲ್ಲಿ ಏನು ಬೆಲೆ ಇದೆ ಸರ್ಟಿಫೈ ಮಾಡಿ. ಆ ರೈತ ಎ.ಪಿ.ಎಂ.ಸಿ., ಒಳಗಡೆ ಬಂದರೆ ಅವನಿಗೆ ಹಣ ಸಿಗತಕ್ಕಂಥ ವ್ಯವಸ್ಥೆ ಮಾಡಿ. ಸರ್ಕಾರ ಇದನ್ನು ಮಾಡಬೇಕೇ ವಿನಃ ಬಹು ರಾಷ್ಟ್ರೀಯ ಕಂಪನಿಗಳಿಗೆ ನೀವೇನು ಮಾರುವುದಕ್ಕೆ ಹೊರಟಿದ್ದೀರಲ್ಲಾ, ಹಾಗಾದರೆ ನೀವು ರೈತರ ಪರವಾಗಿ ಇದ್ದೀರಾ? ನೀವು ನ್ಯಾಯೋಚಿತವಾಗಿ ರೈತರಿಗೆ ಸಹಾಯ ಮಾಡಿ ಎಂದು ಹೇಳಿದರೆ ಸರ್ಕಾರ ಬಹು ರಾಷ್ಟ್ರೀಯ ಕಂಪನಿ ಕೈಕೆಳಗೆ ಕೊಡುವುದಕ್ಕೆ ಹೊರಟಿದ್ದಾರೆ. ಇದರಿಂದ ನಿಮಗೆ ಏನು ಲಾಭ ಸಿಗುತ್ತದೆ. ನೀವು ಏಕೆ ಇದನ್ನು ಮಾಡುವುದಕ್ಕೆ ಹೊರಟಿದ್ದೀರಿ? ಏನು ನಿಮ್ಮ ಉದ್ದೇಶ? The Karnataka Land Reforms (Second Amendment) Bill, 2020 ತರುತ್ತಿರುವುದರಿಂದ ಯಾರು ಅಗ್ರಿಕಲ್ಚರ್ ಮಾಡುವುದಿಲ್ಲ, ಅವರು ಭೂಮಿ ಖರೀದಿಸಬಹುದು. ಇನ್ನು ಎ.ಪಿ.ಎಂ.ಸಿ., ಬಿಲ್ ತಂದಿದ್ದೀರಿ. ಸ್ವಾಮಿ, ನಾನು ಕೂಡ ಒಬ್ಬ ಅಗ್ರಿಕಲ್ಚರಿಸ್ಟ್. ನಾನು ಕೂಡ ಟೊಮೆಟೊ ಹೊತ್ತು ಮಾರಾಟ ಮಾಡಿಕೊಂಡು ಹೋದವನು. ನಾನು ಒಮ್ಮೆ ಜಮಖಂಡಿ ಮಾರ್ಕೆಟ್‌ಗೆ ಹೋದಾಗ ಟೊಮೆಟೊಗೆ ಬೆಲೆ ಇಲ್ಲದಿದ್ದಕ್ಕೆ ಅಲ್ಲೇ ಸುರಿದು ಬರೀ ಬುಟ್ಟಿಯನ್ನು ಮಾತ್ರ ಮನೆಗೆ ತೆಗೆದುಕೊಂಡು ಹೋಗಿದ್ದೇನೆ. ನೀವು ಈ ರೀತಿಯಾಗತಕ್ಕಂಥದ್ದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ? ಆದ್ದರಿಂದ ದೇವರ ಸುದೈವದಿಂದ 1999ರಲ್ಲಿ ನಾನು ಎ.ಪಿ.ಎಂ.ಸಿ., ಸಚಿವನಾಗಿದ್ದೆನು. ಅವೊತ್ತೇ ನಾನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತರಕಾರಿಗಳಿಗೆ ಆವರ್ತ ನಿಧಿಯನ್ನು ತೆಗೆದುಕೊಂಡು ಬಂದೆವು. ಆಲೂಗಡ್ಡೆ, ಟೊಮೆಟೊ ಮತ್ತು ತರಕಾರಿಗಳಿಗೆ ಮಾನ್ಯ ಎಸ್.ಎಂ.ಕೃಷ್ಣಾರವರ ನೇತೃತ್ವದಲ್ಲಿ ನಾನೇ ಎ.ಪಿ.ಎಂ.ಸಿ., ಸಚಿವನಾಗಿದ್ದೆನು. ನನ್ನ ಅನುಭವದ ಪ್ರಕಾರ ರೈತನಾಗಿ ನಾನೇ ಕಷ್ಟ ಅನುಭವಿಸಿದ ರೀತಿಯಿಂದ ನಾನು 10 ಕೋಟಿಯಿಂದ ಆವರ್ತ ನಿಧಿಯನ್ನು ಪ್ರಾರಂಭ ಮಾಡಿದ್ದೇನೆ. ಇಡೀ ದೇಶದಲ್ಲಿಯೇ ಪ್ರಥಮವಾಗಿ ತರಕಾರಿಗೆ ಆವರ್ತ ನಿಧಿಯನ್ನು ಜಾರಿಗೆ ತಂದಿದ್ದೇನೆ. ಅದೇ ಎ.ಪಿ.ಎಂ.ಸಿ., ಅಧ್ಯಕ್ಷರನ್ನು ಕರೆದು, ನಿಮ್ಮಲ್ಲಿ ಏನಾದರೂ ಇರುವಂತಹ ಹಣ ಖರ್ಚಾಗದೆ ಉಳಿದಿದ್ದರೆ ಕೊಡ್ರಪ್ಪಾ ಎಂದರೆ, ಒಂದೇ ಒಂದು ವಾರದಲ್ಲಿ ಅವೊತ್ತು 100 ಕೋಟಿ ರೂಪಾಯಿಗಳ ಆವರ್ತ ನಿಧಿಯನ್ನು ಕೂಡಿಸಿದೆವು. ಅದು ಏತಕ್ಕೆ ಆಯಿತೆಂದರೆ, ಎ.ಪಿ.ಎಂ.ಸಿ.ಗಳು ಇದ್ದುದಕ್ಕೆ ಆಯಿತು. ರೈತರಿಗೆ ಸಹಾಯ ಮಾಡುವುದಕ್ಕೆ ನಮಗೆ ಸಾಧ್ಯವಾಯಿತು. ನೀವು ಎ.ಪಿ.ಎಂ.ಸಿ.ಗಳನ್ನು ಮುಚ್ಚಿ ಏನು ಮಾಡುತ್ತೀರಿ? ಬೆಲೆ ಏನಾದರೂ ಕಡಿಮೆಯಾದರೆ ಸರ್ಕಾರ ಖರೀದಿ ಮಾಡುತ್ತದೆಯೇ? ಬೆಲೆ ಕಡಿಮೆಯಾದಾಗ MSP (Minimum Support Price) ಇಲ್ಲದಿದ್ದರೆ ನೀವು ಮಾರಾಟ ಮಾಡಿಬಿಡುತ್ತೀರಾ? ಹೌದಪ್ಪಾ, ಆ ರೈತನಿಗೆ ತೊಂದರೆಯಾಯಿತು, ನಾವು ಇಂತಹ ತೊಂದರೆಯಾದಾಗ ರೈತರ ಪರವಾಗಿ ನಿಲ್ಲುತ್ತೇವೆಂದು ಕಾನೂನಿನಲ್ಲಿ ಹೇಳಿಬಿಡಿ. ಟೊಮೊಟೊ ಮತ್ತು ತರಕಾರಿಗಳ ಬೆಲೆ ಕಡಿಮೆಯಾದಾಗ ನಾವು ಖರೀದಿ ಮಾಡುತ್ತೇವೆ, ಯಾರೇ ಆಗಲಿ, ಯಾವುದೇ ಬಹುರಾಷ್ಟ್ರೀಯ ಕಂಪನಿಗಳು ರೈತರನ್ನು ಶೋಷಣೆ ಮಾಡುವುದಕ್ಕೆ ನಾವು ಬಿಡುವುದಿಲ್ಲ. ಈ ರೀತಿ ಇದರ ಬಗ್ಗೆ ನೀವು ಏನಾದರೂ ಹೇಳಿದ್ದೀರಾ? ಇದರಲ್ಲಿ ಏನು ಹೇಳಿದ್ದೀರಾ? ಅವರಿಗೆ ಏನು ಅನುಕೂಲ ಮಾಡುತ್ತೀರಿ ಹೇಳಿ? ಈ ಕಾಯ್ದೆ ಜಾರಿಯಾದಲ್ಲಿ ಬಹುರಾಷ್ಟ್ರೀಯ ಕಂಪನಿಗಳವರು ರೈತರನ್ನು ಶೋಷಣೆ ಮಾಡುತ್ತಾರೆ. ಸರ್ಕಾರ ನಡೆಸತಕ್ಕಂಥವರಿಗೆ ಅವರನ್ನು ತಡೆಯುವುದಕ್ಕೆ ನಿಮ್ಮಲ್ಲಿ ಏನಿದೆ? ನಿಮ್ಮ ಬಳಿ ಏನನ್ನು ಇಟ್ಟುಕೊಂಡಿದ್ದೀರಿ? ಸರ್ಕಾರ ನಾವು 1000 ಕೋಟಿ ರೂಪಾಯಿಗಳನ್ನು ತೆಗೆದಿಡುತ್ತೇನೆ. ಒಂದು ವೇಳೆ ಬಹು ರಾಷ್ಟ್ರಿಯ ಕಂಪನಿಯವರು ಅಥವಾ ದೊಡ್ಡ ಕಂಪನಿಯವರು ರೇಟ್ ಏರುಪೇರು ಮಾಡಿದರೆ ಸರ್ಕಾರ ಖರೀದಿ ಮಾಡುತ್ತದೆಂದು ಹೇಳಿ. ಇಂಥ ಸ್ಥಿತಿಗೆ ಹೋಗತಕ್ಕಂಥದ್ದು ಬಹಳ ನೋವಿನ ಸಂಗತಿ. ಇದನ್ನು ಜಾರಿಗೆ ತಂದರೆ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರುತ್ತದೆ. ಯಾರೋ ಒಂದು ಮಲ್ಟಿ ನ್ಯಾಷನಲ್ ಕಂಪನಿಯವರು ಖರೀದಿ ಮಾಡುತ್ತಾರೆ. ನನಗೆ ಏನಾದರೂ ತೊಂದರೆಯಾದರೆ ನನ್ನ ಹತ್ತಿರ 10 ಚೀಲ ಜೋಳ ಮಾರಾಟ ಮಾಡುತ್ತೇನೆ. ಮತ್ತೆ ನನಗೆ ಬೇಕಾದಾಗ ಅವನು ರೇಟ್ ಹೆಚ್ಚಿಸುತ್ತಾನೆ. ಆಗ ನಾವು ಖರೀದಿ ಮಾಡಬೇಕಾಗುತ್ತದೆ. ಆಗ ಮತ್ತೆ ಜಮೀನನ್ನು ಮಾರಾಟ ಮಾಡಬೇಕಾಗುತ್ತದೆ. ಮಾನ್ಯ ಸಭಾಪತಿಯವರೇ, ಸರ್ಕಾರ ಏನೇನು ಮಾಡಬೇಕಾಗಿತ್ತು. ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಒಂದು ಮಾತನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದ್ದರು. ಇಂತಹ ಅಡೆತಡೆಗಳು ಏನೇನಿವೆ ಅವುಗಳನ್ನೆಲ್ಲಾ ತೆಗೆದುಕೊಂಡು ಬರುವುದಕ್ಕೆ ಒಂದು ಸಮಿತಿ ರಚನೆ ಮಾಡಿದರು. ಅವೊತ್ತಿನ ದಿವಸ ಈ ಸಮಿತಿ ಮಾಡಿದ ನಂತರ ಹಲವಾರು ವಿಚಾರಗಳನ್ನು ಹೇಳಿದರು. ಆ ವಿಚಾರಗಳ ಪ್ರಕಾರ ಹಲವಾರು ಬದಲಾವಣೆಗಳಾದವು. ಬದಲಾವಣೆಗಳಾದ ನಂತರ ಬಹುಶಃ ನಮ್ಮ ಗೆಳೆಯರು ಹೇಳಿದಂತೆ, ಹುಬ್ಬಳ್ಳಿಯಲ್ಲಿ ಒಂದು ಎ.ಪಿ.ಎಂ.ಸಿ., ಮಾರುಕಟ್ಟೆಯಲ್ಲಿ ಸಚಿವರ ಸಮ್ಮೇಳನ ನಡೆಯಿತು. ಆಗ ಸಹಕಾರ ಸಚಿವರಾದ ಶ್ರೀ ಎಸ್.ಟಿ.ಸೋಮಶೇಖರ್‌ರವರು ನಮ್ಮ ಜೊತೆ ಇದ್ದರು. ಪಾಪ ಅವರಿಗೆ ಗೊತ್ತಿಲ್ಲ. 2015ರಲ್ಲಿ ನಿಮ್ಮ ಕೇಂದ್ರ ಸರ್ಕಾರದವರೇ ಹೇಳಿದರು. ಅದೇ ಅಗ್ರಿಕಲ್ಚರ್ ಮಿನಿಸ್ಟರ್‌ರವರೇ ಕರ್ನಾಟಕದಲ್ಲಿ ಅದ್ಭುತವಾದಂಥ ಎ.ಪಿ.ಎಂ.ಸಿ. ಇದೆ ಎಂದು ಹೇಳಿದ್ದರು. ಇದು ರಾಷ್ಟ್ರಕ್ಕೆ ಮಾದರಿ. ಇದನ್ನು ರಾಷ್ಟ್ರವ್ಯಾಪಿ ತರುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ಹೌದು, ನೀವು ಅಂಥದ್ದನ್ನು ಮಾಡಿ. ನೀವು ರೈತರಿಗೆ ಸಹಾಯ ಮಾಡಿ. ನಾವು ರೈತರ ಸಂತೆಗಳು ಮತ್ತು ರೈತರ ಮಾರುಟ್ಟೆಯನ್ನು ಜಾರಿಗೆ ತಂದೆವು. ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಹೇಳಿದಂತೆ, ನಾವಿದ್ದಾಗ ರೈತ ಸಂತೆಗಳನ್ನು ಜಾರಿಗೆ ತಂದಿದ್ದೇವೆ. ಅಲ್ಲಿಗೆ ರೈತ ಬರಬೇಕು. ನಾವು ಅಲ್ಲೇ ಒಂದು ಪ್ರಾಂಗಣವನ್ನು ನಿರ್ಮಾಣ ಮಾಡಿದ್ದೇವೆ. ಆ ಪ್ರಾಂಗಣದಲ್ಲಿ ಆ ರೈತ ಕಾಯಿಪಲ್ಯೆಗಳನ್ನು ತಂದು ಮಾರಾಟ ಮಾಡಬೇಕು. ಅವನೇ ನೇರವಾಗಿ ಮಾರಾಟ ಮಾಡುತ್ತಾನೆ. ಅಲ್ಲಿ ಯಾವುದೇ ಮಧ್ಯವರ್ತಿಗಳು ಇಲ್ಲ. ಅವನು ತಾನು ಏನು ಬೆಳೆದು ತಂದಿರುತ್ತಾನೆ, ಮಾರಾಟ ಮಾಡಿಕೊಂಡು ಹೋಗುತ್ತಾನೆ. ನೀವು ಇದನ್ನು ಮಾಡಬೇಕು. ಅದನ್ನು ಬಿಟ್ಟು ಸರ್ಕಾರ ಮಾಡುವಂಥ ಕೆಲಸವೇ ಇದು? ಬಹು ದೊಡ್ಡ ಕಂಪನಿಗಳು ವ್ಯಾಪಾರ ಮಾಡುವುದಕ್ಕೆ ಬಂದಿರುತ್ತಾರೆ. ಅವರೇನು ರೈತರನ್ನು ಉದ್ದಾರ ಮಾಡುವುದಕ್ಕೆ ಬಂದಿರುತ್ತಾರೆಯೇ? ರೈತ ಪ್ರತಿನಿಧಿ ಮೇಲೆ ಇಲ್ಲದಿರುವ ವಿಶ್ವಾಸ, ಬಹುರಾಷ್ಟ್ರೀಯ ಕಂಪನಿಗಳ ಮೇಲೆ ಎಂಥಾ ಪ್ರೀತಿ? ಏಕೆ ಎ.ಪಿ.ಎಂ.ಸಿ.,ಯಲ್ಲಿ ಜನಪ್ರತಿನಿಧಿಗಳು ಇಲ್ಲವೇ? ನಿಮಗೆ ಅವರ ಮೇಲೆ ನಂಬಿಕೆ ಇಲ್ಲವೇ? ಸರ್ಕಾರದವರು ಎ.ಪಿ.ಎಂ.ಸಿ.,ಯಲ್ಲಿ ಏನು ತಪ್ಪುಗಳಿವೆಯೋ ಅದನ್ನು ತಿದ್ದಲಿ. ಅದನ್ನು ಬಿಟ್ಟು ಭಾರಿ ಬಹು ರಾಷ್ಟ್ರೀಯ ಕಂಪನಿ, ಕಾಳಸಂತೆ ಧನಿಕರು. ಇವರಿಗೆ ಅವರ ಮೇಲೆ ಬಹಳ ಪ್ರೀತಿ. ಇದು ಸರ್ಕಾರ ಮಾಡುವಂಥ ಕೆಲಸವೇ? ನೀವು ರೈತರಿಗೆ ಸಹಾಯ ಮಾಡಿ. ಅದರಿಂದ ನಿಮಗೆ ಒಳ್ಳೆಯ ಹೆಸರು ಬರುತ್ತದೆ. ತಾವು ಸರ್ಕಾರಿ ರಂಗದಲ್ಲಿದ್ದೀರಿ.

ಮಾನ್ಯ ಸಭಾಪತಿಯವರೇ, ಬಹುರಾಷ್ಟ್ರೀಯ ಕಂಪನಿಗಳು ಬಂದಾಗ, ನಮ್ಮ ಮುಧೋಳ ತಾಲ್ಲೂಕಿನಲ್ಲಿ ಯಾವುದು ಎಷ್ಟು ಬೆಳೆ ಬಂತು ಎಂದು ಅವರಿಗೇನಾದರೂ ಗೊತ್ತಾಗುತ್ತದೆಯೇ? ಅವನು ಬಂದು ತೆಗೆದುಕೊಂಡು ಹೋಗುತ್ತಾನೆ. ಆದರೆ ಬೆಳೆಗಳು ಎಲ್ಲಿಂದ ಬಂತು, ಆ ಬೆಳೆಗಳಿಗೆ ರೇಟ್ ಏನಿದೆಯೆಂದು ಗೊತ್ತಾಗುತ್ತದೆಯೇ? ನೀವು ಮಾಹಿತಿ ಕೇಂದ್ರಗಳನ್ನು ತೆಗೆಯಿರಿ. ಯಾವ ತಾಲ್ಲೂಕಿನಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವ ಬೆಳೆ ಎಷ್ಟಿದೆಯೆಂದು ತೆಗೆಯಿರಿ. ಯಾವ ರಾಜ್ಯದಲ್ಲಿ ಅದಕ್ಕೆ ಬೆಲೆ ಇದೆ, ಯಾವ ರಾಷ್ಟ್ರದಲ್ಲಿ ಆ ಬೆಳೆಗೆ ರಫ್ತಿಗೆ ಅವಕಾಶವಿದೆ ಎನ್ನುವುದನ್ನು ಹೇಳಿ. ಅದನ್ನು ಬಿಟ್ಟುಕೊಂಡು, ಇವರು ಸುಧಾರಣೆ ಮಾಡುತ್ತಿಲ್ಲ. ಯಾರಿಗೋ ಕೊಡತಕ್ಕಂಥ ಕೆಲಸ ಇವತ್ತಿನ ದಿವಸ ಏನು ನಡೆಯುತ್ತಿದೆ, ಬಹುಶಃ ನಿಮ್ಮದೇನಲ್ಲ ಬಿಡಿ. ನೀವೇ ಆಗಿದ್ದರೆ, ಕೇಂದ್ರ ಸರ್ಕಾರದವರು ಹೇಳಿಲ್ಲದಿದ್ದರೆ, ಮಾನ್ಯ ಎಸ್.ಟಿ.ಸೋಮಶೇಖರ್‌ರವರು ಈ ಬಿಲ್‌ನ್ನು ತರುತ್ತಿರಲಿಲ್ಲ. ಅವರಿಗೆ ಎ.ಪಿ.ಎಂ.ಸಿ., ಜನ ಪ್ರತಿನಿಧಿಗಳ ಮೇಲೆ ವಿಶ್ವಾಸವಿದೆ. ಎ.ಪಿ.ಎಂ.ಸಿ., ಎಂದರೆ ಕೋ–ಆಪರೇಟಿವ್, ಸಹಕಾರ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಏಕೆಂದರೆ, ಡಿ.ಸಿ.ಸಿ., ಬ್ಯಾಂಕ್, ಅಪೆಕ್ಸ್ ಬ್ಯಾಂಕ್‌ಗಳು, ಹಲವಾರು ಸಂಸ್ಥೆಗಳು ದುಡಿದು ಬಂದಿವೆ. ಈ ಎಲ್ಲಾ ಸಂಸ್ಥೆಗಳಲ್ಲಿ ಏರುಪೇರಾದಾಗ ಅವುಗಳನ್ನು ಮುಚ್ಚಿ ಬೇರೆಯವರಿಗೆ ಕೊಟ್ಟಿದ್ದಾರೆಯೇ? ನಮ್ಮ ಜೊತೆಗೆ ಅವರ ಸಹಕಾರ ಇದೆ. ಅವರು ಬಿ.ಜೆ.ಪಿ.ಗೆ ಹೋಗಿದ್ದಾರೆ ಅಷ್ಟೆ. ಸಹಕಾರ ನಮ್ಮ ಜೊತೆ ಇದೆ. ಆದರೆ ಟೇಬಲ್ ಬದಲಾವಣೆಯಾಗಿದೆ ಅಷ್ಟೆ. ಅವರು ಎದುರಿಗೆ ಇದ್ದಾರೆ.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಅವರಿಗೆ ಟೇಬಲ್ ಮಾತ್ರ ಬದಲಾವಣೆ ಅಲ್ಲ, ಸಿದ್ಧಾಂತ ಎಲ್ಲಾ ಬದಲಾವಣೆಯಾಗಿದೆ. ಈಗ He is a BJP model. ಈಗ ಅವರು ಬಿ.ಜೆ.ಪಿ., ಮಾಡೆಲ್‌ನಲ್ಲೇ ಇದ್ದಾರೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಆರ್.ಅಶೋಕ್‌ರವರೇ, ಅವರೆಲ್ಲಾ, ನಮ್ಮ ದಾಯಾದಿಗಳು, ಸುಮ್ಮನೆ ಆ ಪಕ್ಷದಲ್ಲಿ ಇದ್ದಾರಷ್ಟೆ. ನೀವೇನು ಅದಕ್ಕೆ ತಲೆಕೆಡಿಸಿಕೊಳ್ಳಬೇಡಿ.

**ಡಾ॥ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಟಿ.ಸೋಮಶೇಖರ್‌ರವರು ನಿಮ್ಮ ಪಕ್ಷದಲ್ಲಿದ್ದಾಗ ಶಾಸಕರಾಗಿದ್ದರು. ನಮ್ಮ ಪಕ್ಷಕ್ಕೆ ಬಂದಾಗ ಸಚಿವರಾಗಿದ್ದಾರೆ ಅಷ್ಟೇ ವ್ಯತ್ಯಾಸ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಆ ಪ್ರೇಮ ಇನ್ನೂ ಹೊಸದಾಗಿದೆ. ಮಕ್ಕಳು ಮರಿಯಾಗಿ ಇನ್ನೂ ಏಳೆಂಟು ವರ್ಷ ಕಳೆಯಲಿ. ಅಲ್ಲಿ ಏನೇನು ತಿಳಿಯುತ್ತದೆಯೋ ಆಗ ಮಾನ್ಯ ಎಸ್.ಟಿ.ಸೋಮಶೇಖರ್‌ರವರೇ ಹೇಳುತ್ತಾರೆ, ಅಯ್ಯೋ ನಾವು ಎಂಥ ತಪ್ಪು ಮಾಡಿದೆವು. ಏಕೆಂದರೆ ಅಲ್ಲಿ ನಿಮ್ಮನ್ನು ನಂಬುವುದಿಲ್ಲ. ಅದನ್ನು ಕೇಳುವುದಕ್ಕೆ ಸಾಧ್ಯವೇ ಇಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸಚಿವರಾದ ಆರ್.ಅಶೋಕ್‌ರವರು ಏನೋ ಹೇಳುತ್ತಿದ್ದಾರೆ, ಅವರು ಮಾನಸಿಕವಾಗಿ ಇನ್ನೂ ನಮ್ಮ ಪಕ್ಷದಲ್ಲೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದ್ದಾರೆ. ಬರೀ ದೈಹಿಕವಾಗಿ ಮಾತ್ರ ಅಲ್ಲಿ ಕುಳಿತಿರತಕ್ಕಂಥದ್ದು. ಅವರು ಏನೆಂದು ನಮಗೆ ಅರ್ಥವಾಗಿದೆ. ಅವರ ಜೊತೆಯಲ್ಲಿ ನಾವು ಒಡನಾಟ ಇಟ್ಟಿಕೊಂಡಿದ್ದೇವಲ್ಲಾ. ಅವರು ದೈಹಿಕವಾಗಿ ಆಡಳಿತ ಪಕ್ಷದಲ್ಲಿ ಕುಳಿತಿರುತ್ತಾರೆ ಅಷ್ಟೆ. ಇನ್ನೂ ನಮ್ಮ ಕೃಷಿ ಸಚಿವರಾದ ಶ್ರೀ ಬಿ.ಸಿ.ಪಾಟೀಲ್‌ರವರು ಒಂದು ಮಾತನ್ನು ಹೇಳಿದರು.

(ಮುಂದು...)

(1070)9.12.2020/7.10/ಎಂ.ಎಂ-ಬಿ.ಎನ್.ಎಸ್

(ವೈಸ್‌ಚೇರ್ಮನ್‌ರವರ ಉಪಸ್ಥಿತಿ)

**ಶ್ರೀ ಎಂ. ನಾರಾಯಣಸ್ವಾಮಿ(ಮುಂದು):-**

ಅದನ್ನು ಈ ಸದನದಲ್ಲಿ ಹೇಳಬಾರದು ಅಷ್ಟೇ. ತಾವು ಏನಾಗಿದ್ದೇವೆ ಎಂದು ಹೇಳಿದರು. ಅವರು ಇನ್ನೂ ನಮ್ಮ ಹತ್ತಿರವೇ ಇದ್ದಾರೆ, ದೈಹಿಕವಾಗಿ ಅಲ್ಲಿ ಕುಳಿತಿದ್ದಾರೆ ಅಷ್ಟೇ.

**ಶ್ರೀ ಆರ್. ಅಶೋಕ್:-** ಮಾನ್ಯ ನಾರಾಯಣಸ್ವಾಮಿಯವರೇ, ಆ ಭ್ರಮೆಯಲ್ಲೇನೂ ಇರುವುದು ಬೇಡ. Permanent ಮಾಡಿದ್ದೀವಿ. ಬಿ.ಜೆ.ಪಿ. ಸಿದ್ಧಾಂತ . . . He is perfect now.

(ಗೊಂದಲ)

**ಶ್ರೀ ಎಂ. ನಾರಾಯಣಸ್ವಾಮಿ:-** ನಮಗೆ ಬಾಂಬೆಗೆ ಕರೆದುಕೊಳ್ಳುವುದಕ್ಕೆ ಅಲ್ಲ.

(ಗೊಂದಲ)

**ಶ್ರೀ ಎನ್. ರವಿಕುಮಾರ್:-** ಮಾನ್ಯ ನಾರಾಯಣಸ್ವಾಮಿಯವರೇ, . . .

**ಶ್ರೀ ಆರ್.ಬಿ. ತಿಮ್ಮಾಪೂರ:-** ನನಗೆ ಮಾತನಾಡಲು ಮತ್ತೆ ಸಮಯ ಕೊಟ್ಟರೆ ನಾನು ಬಿಡುತ್ತೇನೆ.

(ಗೊಂದಲ)

**ಶ್ರೀ ಎನ್. ರವಿಕುಮಾರ್:-** ಒಂದೇ ಮಾತು . . .

**ಶ್ರೀ ಆರ್.ಬಿ. ತಿಮ್ಮಾಪೂರ:-** ನಿಮ್ಮ ಮೇಲೆ ನಮಗೆ ಪ್ರೀತಿ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಸಿ. ಪಾಟೀಲ್:-** . . . ಮಾಡಿ ಜನಾದೇಶ ಪಡೆದು ಇಲ್ಲಿ ಬಂದು ಕುಳಿತು loyal ಆಗಿದ್ದೇವೆ. ಅಲ್ಲಿ ಬರುವ ಪ್ರಶ್ನೆಯೇ ಇಲ್ಲ. ಅಂತಹ ಕನಸು ಕಾಣುವುದಕ್ಕೆ ಹೋಗಬೇಡಿ. ಈಗ ಇದ್ದವರನ್ನು ಉಳಿಸಿಕೊಳ್ಳಿ ಸಾಕು. ಅಲ್ಲಿದ್ದಾಗ ನಮಗೆ ಕೊಡಬಾರದ ಹಿಂಸೆ ಕೊಟ್ಟಿರಿ, ಇನ್ನೂ ತೃಪ್ತಿಯಾಗಲಿಲ್ಲವೇ? ಈ ಮನೆಯಲ್ಲಿ ಮತ್ತೆ ಬೆಂಕಿ ಹಚ್ಚುವ ಕೆಲಸ ಮಾಡಬೇಡಿ.

**ವೈಸ್‌ಚೇರ್ಮನ್:-** ಮಾನ್ಯ ತಿಮ್ಮಾಪೂರರವರೇ ಮಾತನಾಡಿ.

**ಶ್ರೀ ಆರ್.ಬಿ. ತಿಮ್ಮಾಪೂರ:-** ನಾನು ಇಷ್ಟೇ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಯು.ಬಿ. ವೆಂಕಟೇಶ್:-** ಅವರನ್ನೆಲ್ಲಾ ಕರೆದುಕೊಂಡು ಹೋಗಿ ಇನ್ನೂ ಹಿಂದೆಯೇ ಕೂರಿಸುತ್ತಿದ್ದೀರಿ.

**ಶ್ರೀ ಬಿ.ಸಿ. ಪಾಟೀಲ್:-** ನೀವು ಮುಂದೆ ಬರುವುದಿಲ್ಲ ಅಲ್ಲಿಯೇ ಕೂರಬೇಕು.

**ಶ್ರೀ ಎಸ್.ಎಲ್. ಭೋಜೇಗೌಡ:-** ಅವರನ್ನು ಸರಿಯಾಗಿ ನೋಡಿಕೊಂಡರೆ ಅಲ್ಲಿರುತ್ತಾರೆ, ಇಲ್ಲದಿದ್ದರೆ ತವರು ಮನೆಗೆ ಬರುತ್ತಾರೆ.

**ಶ್ರೀ ಆರ್.ಬಿ. ತಿಮ್ಮಾಪೂರ:-** ಮಾನ್ಯ ಪಾಟೀಲರೇ, ತಾವು ಸಂತೋಷವಾಗಿರಿ. ನಮಗೆ ಪ್ರೀತಿ ಇದೆ. ನೀವು ಇಂತಹ ಕಾನೂನನ್ನು ಮಾಡುವ ಮೂಲಕ ಅದನ್ನು ಮುಗಿಸಿ ನಮ್ಮ ಬಳಿಗೆ ಬರುತ್ತೀರಿ. ದೇಶ ಹೊತ್ತಿ ಉರಿಯುತ್ತಿದೆ. ಅದರಲ್ಲಿ ನೀವು ಭಾಗಿಗಳಾಗಿದ್ದೀರಿ. 'ನಾವು ಮತ್ತೆ ಬರುವುದಿಲ್ಲ, ಬಿ.ಜೆ.ಪಿ. ಸಖ್ಯ ತೊರೆಯುವುದಿಲ್ಲ ನೀವು ನಮ್ಮ ಮೇಲೆ ನಂಬಿಕೆಯಿಡಿ, ಅದಕ್ಕೆ ಇನ್ನೊಂದು ನಾಲ್ಕು ಜನರನ್ನು ಮಂತ್ರಿ ಮಾಡಿ' ಎಂದು ನೀವು ಹೇಳಬೇಕು ಇಲ್ಲದಿದ್ದರೆ ನಾಳೆ ಅವರು ನಿಮ್ಮನ್ನು ನಂಬುವುದಿಲ್ಲ. ಕಂಪನಿಯವರೇನು ನಮ್ಮ ರೈತರ ಮನೆಗೇ ಬರುತ್ತಾರಾ? ಅವರು ಯಾರ ಮುಖಾಂತರ ಖರೀದಿ ಮಾಡುತ್ತಾರೆ? ಅವರೂ ಮಧ್ಯವರ್ತಿಗಳನ್ನೇ ಇಡುತ್ತಾರೆ. ಆ ಮಧ್ಯವರ್ತಿಗಳಿಗೆ ಏನು ಕಾನೂನನ್ನು ತಂದಿದ್ದೀರಿ? ಆ ಮಧ್ಯವರ್ತಿಗಳು ಎಲ್ಲಿಯವರು? ಪಪ್ಪಾಯ ಮಾರಿದ್ದು, ಜೋಳ, ಹತ್ತಿ ಮಾರಿದ್ದು ಕೋಟಿಗಟ್ಟಲೆ ಹಣವನ್ನು ಹೊಡೆದು ಹಾಕಿದ್ದಾರೆ. ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರದವರು ಒಯ್ದಿದ್ದಾರೆ. ಹೆಸರಿಲ್ಲ. ಎರಡು-ಮೂರು ಸಲ ನಮಗೆ ಕೊಟ್ಟ ಹಾಗೆ ಮಾಡುತ್ತಾರೆ, ಆನಂತರ ಕಿತ್ತುಕೊಂಡು ಹೋಗುತ್ತಾರೆ. ಏನು ಮಾಡುತ್ತೀರಿ? ಹೊರರಾಜ್ಯದಿಂದ ಬಂದವರಿಗೆ ಲೈಸೆನ್ಸ್ ಕೊಡುತ್ತೀರಾ? ಮಧ್ಯವರ್ತಿಗಳು ಬಂದಿದ್ದಾರೆ ಅವರನ್ನು ನೀವು ಏನು ಮಾಡುತ್ತೀರಿ? ಅವರಿಗೆ ಲೈಸೆನ್ಸ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುತ್ತೀರಾ? ಅವರು ಯಾರು? ಅವರು ಬಂದರೆ ನೀವು ಅವರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ? ಅವರ ವ್ಯಾಪಾರದ ಪದ್ಧತಿಯನ್ನು ಹೇಗೆ ತರುತ್ತೀರಿ ಎಂಬುದನ್ನು ತಾವು ಹೇಳಬೇಕು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ನಾವು ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಒಮ್ಮೆ ನಮ್ಮ ತಂದೆ ನನ್ನನ್ನು ತೊಗರಿಯನ್ನು ಮಾರಾಟ ಮಾಡುವುದಕ್ಕೆ ಕಳುಹಿಸಿದರು. ನಾನು ಎತ್ತಿನ ಗಾಡಿ ಹೊಡೆದುಕೊಂಡು ಮುಂದೆ ಬಂದೆ, ನಮ್ಮ ತಂದೆ ಹಿಂದೆ ಬಂದರು. ಆ ರಸ್ತೆಯಲ್ಲಿ ನಿಂತಿದ್ದವರು ರೇಟ್ ಕೊಡುತ್ತೇನೆ ಬನ್ನಿ ಎಂದು ಕರೆಯುತ್ತಿದ್ದರು. ಅಲ್ಲಿನ ರೇಟ್ 1000 ರೂಪಾಯಿ ಇತ್ತು, ನಾನು 1200 ರೂಪಾಯಿಗೆ ನಮ್ಮಪ್ಪ ಬರುವಷ್ಟರಲ್ಲಿ ತೊಗರಿಯನ್ನು ಮಾರಿಬಿಟ್ಟಿದ್ದೆ. ಅಪ್ಪ ಬಂದು ಎಷ್ಟು ಆಯಿತು ಎಂದರು, 75 ಕೆ.ಜಿ. ಆಯಿತು ಎಂದೆ ಒಂದು ಕ್ವಿಂಟಾಲ್ ಇತ್ತು, ಇದನ್ನು ಹೇಗೆ ಮಾರಿದೆ ಎಂದರು. ಇಷ್ಟು ಕಂಟ್ರೋಲ್ ಇದ್ದಾಗ ನಡೆಯುತ್ತಿದ್ದಂತಹ ವ್ಯವಸ್ಥೆಯನ್ನು ಬಹುರಾಷ್ಟ್ರೀಯ ಕಂಪನಿಗಳು ಬಂದರೆ ಇದನ್ನು ಹೇಗೆ ನಿಭಾಯಿಸುತ್ತೀರಿ? ಹೇಗೆ ಕಂಟ್ರೋಲ್‌ಗೆ ತರುತ್ತೀರಿ? ಸರ್ಕಾರದ ನೀತಿ ಏನು? ಇದನ್ನೆಲ್ಲಾ ನೀವು ಹೇಳಬೇಕು. ಬೆಲೆ ನಿಗದಿ ಯಾರು ಮಾಡುತ್ತಾರೆ? ಇಲ್ಲಿಯವರೆಗೆ ಕೇಂದ್ರ ಸರ್ಕಾರ ಬೆಲೆ ನಿಗದಿ ಆವರ್ತ ನಿಧಿ ಮುಖಾಂತರ ಖರೀದಿ ಮಾಡುತ್ತಿತ್ತು. ಈಗ ಆವರ್ತ ನಿಧಿಯ ಪರಿಸ್ಥಿತಿ ಏನಾಯಿತು? ನೀವು ಖರೀದಿ ಮಾಡುತ್ತೀರಾ ಇಲ್ಲವಾ ಎಂಬುದನ್ನು ಹೇಳಬೇಕಲ್ಲವೇ? ಆವರ್ತ ನಿಧಿಯಲ್ಲಿ ನೀವು ಏನೇನು ಖರೀದಿ ಮಾಡುತ್ತೀರಿ? ಈ ಕಾನೂನನ್ನು ತರುವುದಕ್ಕಿಂತ ಮುಂಚೆ ಅದಕ್ಕೆ ಎಷ್ಟು ಹಣವನ್ನು ಇಟ್ಟಿದ್ದೀರಿ? ಕಾನೂನು ತರುವುದರಿಂದ ಎರಡು ಲಕ್ಷ ಹಮಾಲಿಗಳು ಮನೆಗೆ ಹೋಗುತ್ತಾರೆ, ಕಾರಕೂನರು ಬೀದಿಪಾಲಾಗುತ್ತಾರೆ. Weigh-men ಗಳು ಜೀತದಾಳಾಗಿ ದುಡಿಯುತ್ತಾರೆ. ಇವತ್ತು ಎಲ್ಲಾ ವ್ಯವಸ್ಥೆ ಹಾಳಾಗುತ್ತಿದೆ. ಏನೇನು ವ್ಯವಸ್ಥೆ ಹಾಳಾಗುತ್ತಿದೆ ಎಂದರೆ, ನಾವು ಕೂಡ ಸಣ್ಣವರಿದ್ದಾಗ ಕೃಷಿ ಮಾಡುತ್ತಿದ್ದೆವು. ಮಿನಿ, ಉಡ, ಹಲಗೆ ಏನೇನೋ ಮಾಡುತ್ತಿದ್ದೆವು. ಕಬ್ಬು ಬೆಳೆ ಕಟ್ಟಿದ ನಂತರ ನಮ್ಮನ್ನು ಯಾರೂ ಕರೆಯುವುದಿಲ್ಲ. ಈ ಕೊರೋನಾ ಬಂದ ನಂತರ ನಟ ನಟಿಯರೆಲ್ಲಾ ಕೂಡಿದರು ಇಡೀ ವ್ಯವಸ್ಥೆ ಹಾಳಾಗಿ ಹೋಗಿದೆ. ಅದರಲ್ಲಿ ಒಂದಿಷ್ಟು ಭೂಮಿ ಇಟ್ಟುಕೊಂಡಿದ್ದೇವೆ. ಭೂ ಸುಧಾರಣೆ ಕಾಯಿದೆ ತಂದು ಹಳ್ಳಕ್ಕೆ ಕೂಡಿಸಿದಿರಿ, ಇನ್ನು ಮಾರ್ಕೆಟ್ ತಂದು ನಮ್ಮನ್ನು ಬೀದಿ ಪಾಲು ಮಾಡುತ್ತೀರಿ. ಇದ್ದಷ್ಟು ಭೂಮಿಯನ್ನು ಇಟ್ಟುಕೊಂಡು ಸಂತೃಪ್ತಿಯ ಬದುಕು ಮಾಡುವವರಿಗೆ ಕೊಳ್ಳಿ ಇಡುವಂತಹ ಕೆಲಸ ಮಾಡಬೇಡಿ. ಇದರಿಂದ ನಿಮಗೆ ಸುಖ ಸಿಗುವುದಿಲ್ಲ ಎಂಬ ಮಾತನ್ನು ನಾನಿಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಂಪನಿಗಳು ವ್ಯಾಪಾರಕ್ಕೆ ಬರುತ್ತವಾ ಅಥವಾ ನಿಮ್ಮ ಸೇವಕರಾಗಿ ಬರುತ್ತಾರಾ? ಅಥವಾ ರೈತರಿಗೆ ಪ್ರಾಫಿಟ್ ಕೊಡುವುದಕ್ಕೆ ಬರುತ್ತಾರಾ? ವ್ಯಾಪಾರಸ್ಥರು ವ್ಯಾಪಾರಸ್ಥರೇ. ಹಿಂದೆ ನಮಗೆ ಹಣದ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೊಂದರೆಯಾದಾಗ ಜೋಳವನ್ನು ಮಾರುಕಟ್ಟೆಗೆ ತರುತ್ತಿದ್ದೆವು. ಮಾರಾಟ ಮಾಡಲು ಬಂದಾಗ ರೇಟ್ ಇಲ್ಲದಿದ್ದರೂ ಕೂಡಾ ಅವತ್ತು ಏನು ರೇಟ್ ಇರುತ್ತಿತ್ತು ಅದೇ ರೇಟ್‌ಗೆ ಮಾರುತ್ತಿದ್ದೆವು. ಅದಕ್ಕೆ ಅವರಿಗೆ ನೀವು ಒಂದು ಗೋಡೌನ್ ತಯಾರು ಮಾಡಿ ಅಲ್ಲಿ ಸ್ಟಾಕ್ ಇಡಲು ಹೇಳಿ ಅವರಿಗೆ ಶೇ.75 ರಿಂದ ಶೇ.80ರಷ್ಟು ಹಣ ಕೊಡುತ್ತೇವೆ ಎಂದು ರೈತರಿಗೆ confidence create ಮಾಡಿ. ಅದು ಸರ್ಕಾರ ಮಾಡುವಂತಹ ಕೆಲಸ. ಸರ್ಕಾರಗಳು confidence create ಮಾಡುವಂತಹ ಕೆಲಸ ಮಾಡಬೇಕು. ರಾಷ್ಟ್ರದಲ್ಲಿ ಈ ರಾಜ್ಯದಲ್ಲಿ ಯಾವುದೇ ಮಾಹಿತಿ ಇಲ್ಲ. ಅವನ ಹಣೆಬರಹವನ್ನು ದೇವರೇ ಬಲ್ಲ. ರೈತ ಸಂತೆಗಳನ್ನು ಬಲಿಷ್ಠ ಮಾಡಿ. ಅವರಿಗೆ ತರಕಾರಿ ತರುವುದಕ್ಕೆ ಬಸ್ಸಿನ ಹಿಂದಿನ ಬಾಜು ಮೀಸಲಾಗಿಡಿ. ರೈತ ಪುಕ್ಕಟೆ ತಂದುಕೊಟ್ಟರೆ ಅವನಿಗೆ ಲಾಭ, ತೆಗೆದುಕೊಳ್ಳುವವನಿಗೂ ಲಾಭವಾಗುತ್ತದೆ. ನಾನು ನೋಡಿದ್ದೇನೆ, ಹೈದರಾಬಾದ್-ಕರ್ನಾಟಕದಲ್ಲಿ Mini Cement Plants ಅನ್ನು ಪ್ರಾರಂಭ ಮಾಡಿದರು. ಎಲ್ಲಾ ಹೈದರಾಬಾದ್ ಕಡೆಯಿಂದ 20 Mini Cement Plants ಬಂದವು. ಲೋನ್ ತೆಗೆದುಕೊಂಡು 02 ಕೋಟಿ, 5 ಕೋಟಿ ಅಲ್ಲಿ ಹೋಗಿ ಡಬ್ಬ ಇಟ್ಟರು, 5 ಕೋಟಿ 10 ಕೋಟಿ ಸಾಲ ತೆಗೆದುಕೊಂಡವರು ಹೈದರಾಬಾದ್ ಬಾಂಬೆಯಲ್ಲಿ ದೊಡ್ಡ ದೊಡ್ಡ ಮಹಲನ್ನು ಕಟ್ಟಿಕೊಂಡಿದ್ದಾರೆ. ಇಂತಹವರು ಬಂದು ರೈತರನ್ನು ಬಿಡುತ್ತಾರೆಯೇ? ಬ್ಯಾಂಕನ್ನೇ ಲೂಟಿ ಮಾಡಿದ್ದನ್ನು ಪ್ರತಿ ದಿವಸವೂ ದಿನಪತ್ರಿಕೆಯಲ್ಲಿ ನೋಡುತ್ತೇವೆ. ಯಾವ ರೈತನಿಂದಲೂ ಬ್ಯಾಂಕುಗಳು ಹಾಳಾಗಿಲ್ಲ. ರೈತನಿಂದ ಬ್ಯಾಂಕುಗಳು ಹಾಳಾಗಿವೆಯೇ? ಏನು ನೀವು ಬಹುರಾಷ್ಟ್ರೀಯ ಕಂಪನಿಗಳನ್ನು ಅಪ್ಪಿಕೊಳ್ಳುವುದಕ್ಕೆ ಹೋಗುತ್ತಿದ್ದೀರಿ, ಅವರಿಂದ ದೇಶದ ಬ್ಯಾಂಕುಗಳು ಅಧೋಗತಿಗೆ ಹೋಗುತ್ತದೆ; ವ್ಯವಸ್ಥೆ ಅಧೋಗತಿಗೆ ಹೋಗುತ್ತದೆ. ದಯಮಾಡಿ ಅವರನ್ನು ಅಪ್ಪಿಕೊಳ್ಳಬೇಡಿ, ಇದರಿಂದ ನಿಮಗೆ ಸುಖ ಸಿಗುವುದಕ್ಕೆ ಸಾಧ್ಯವೇ ಇಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಸರ್ಕಾರಕ್ಕೆ ಸಹಾಯ ಮಾಡುವ ಯೋಗ್ಯತೆ ಇಲ್ಲವೆಂದರೆ ನಿಮಗೆ ಜನರು ಏನನ್ನುತ್ತಾರೆ? ಯೋಗ್ಯತೆ ಇಲ್ಲದವರಿಗೆ ಏನನ್ನುತ್ತಾರೆ? ನಿಮಗೆ ಯೋಗ್ಯತೆ ಇಲ್ಲದಿರುವುದರಿಂದ ಅಲ್ಲಿ ಬೇರೆಯವರಿಗೆ ಕೊಡುವುದಕ್ಕೆ ಹೊರಟಿದ್ದೀರಿ.

**ಶ್ರೀಮತಿ ಭಾರತಿ ಶೆಟ್ಟಿ:-** ಯೋಗ್ಯತೆ ನಿಮಗಿಲ್ಲ ಅದಕ್ಕೆ ಅಲ್ಲಿ ಕುಳಿತಿದ್ದೀರಿ. ಯೋಗ್ಯತೆ ಇರುವುದಕ್ಕೆ ನಾವಿಲ್ಲಿ ಕುಳಿತಿದ್ದೇವೆ.

**ಶ್ರೀ ಆರ್.ಬಿ. ತಿಮ್ಮಾಪೂರ:-** ಬಿಡಮ್ಮ ತಾಯಿ, ನೀವು ಚುನಾವಣೆಯಲ್ಲಿ ಹೇಗೆ ಗೆದ್ದಿದ್ದೀರಿ, ನಮ್ಮ ಪೈಲ್ವಾನ್‌ಗಳನ್ನೆಲ್ಲಾ ಅಲ್ಲಿ ಹೇಗೆ ಇಟ್ಟುಕೊಂಡು ಕುಳಿತಿದ್ದೀರಿ ಎಂಬುದು ನಮಗೆಲ್ಲಾ ಗೊತ್ತಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಭಾರತಿ ಶೆಟ್ಟಿ:-** ಅಲ್ಲಿ ಏಕೆ ಕುಳಿತಿದ್ದೀರಿ ಎಂಬ ಬಗ್ಗೆ ನಿಮ್ಮ ಆತ್ಮಸಾಕ್ಷಿ ಏನು ಹೇಳುತ್ತದೆ ಎಂದು ನಿಮಗೆ ನೀವೇ ಪ್ರಶ್ನೆ ಮಾಡಿಕೊಳ್ಳಿ.

**ಶ್ರೀ ಎಂ. ನಾರಾಯಣಸ್ವಾಮಿ:-** ಅದಿದ್ದರೆ ನೀವು ಇವತ್ತು ಇಲ್ಲಿಗೆ ಬರುತ್ತಿರಲಿಲ್ಲ.

**ಶ್ರೀ ಆರ್.ಬಿ. ತಿಮ್ಮಾಪೂರ:-** ನಮ್ಮ ಕಾಂಗ್ರೆಸ್‌ನಿಂದ ಖರೀದಿ ಮಾಡಿಯೋ ಪ್ರೀತಿ ಮಾಡಿಯೋ ಹೇಗೋ ಮಾಡಿದ್ದೀರಲ್ಲಾ ಅವರನ್ನು ಕಾಯ್ದುಕೊಂಡು ಕುಳಿತಿರಿ. ಇಂತಹ ಹೀನಕೃತ್ಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಗಬಾರದು.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ತಿಮ್ಮಾಪೂರರವರೇ, ಈ ಕಡೆ ಕುಳಿತವರು elected representative ಹೌದೋ ಅಲ್ಲವೋ ಎಂದು ಗುರುತು ಇದೆಯೋ ನೋಡಿ. ತಾವು ಚುನಾಯಿತ ಪ್ರತಿನಿಧಿಗಳು ಎಂದು ಅವರಿಗೆ ಗುರುತು ಇದೆಯೋ ಇಲ್ಲವೋ, ನಮ್ಮ ಬಗ್ಗೆ ಅವರೇನು ಭಾವಿಸಿದ್ದಾರೋ?

**ಶ್ರೀಮತಿ ಭಾರತಿ ಶೆಟ್ಟಿ:-** . . . . ಯೋಗ್ಯತೆ ಇಲ್ಲ ಎಂದರೆ?

**ಶ್ರೀ ಎಂ. ನಾರಾಯಣಸ್ವಾಮಿ:-** ನೀವು ಅಲ್ಲಿ ಕುಳಿತುಕೊಳ್ಳುವುದಕ್ಕೆ ಯಾವತ್ತೂ ನೀವು ಜನರ mandate ಪಡೆದು ಬಂದಿಲ್ಲ. ಹಿಂಬಾಗಿಲಿನಿಂದಲೇ ಬಂದಿರತಕ್ಕಂತಹದ್ದು. ಇದನ್ನು ಅರ್ಥ ಮಾಡಿಕೊಳ್ಳಿ. ನೇರವಾಗಿ ಅಧಿಕಾರಕ್ಕೆ ಯಾವತ್ತೂ ಬಂದಿಲ್ಲ.

**ಡಾ: ವೈ.ಎ. ನಾರಾಯಣಸ್ವಾಮಿ:-** ನಿಮಗಿಂತ ಜಾಸ್ತಿ ವೋಟ್ ನಮಗೆ ಬಂದಿದೆ.

(ಗೊಂದಲ)

**ಶ್ರೀ ಎಂ. ನಾರಾಯಣಸ್ವಾಮಿ:-** ನಾವು ಗೆದ್ದಿದ್ದೇವೆ.

(ಗೊಂದಲ)

**ಶ್ರೀ ಎಂ. ನಾರಾಯಣಸ್ವಾಮಿ:-** ನೀವು ಯಾವತ್ತೂ ಬಂದಿಲ್ಲ.

**ಶ್ರೀ ಆರ್.ಬಿ. ತಿಮ್ಮಾಪೂರ:-** ಮಾನ್ಯ ನಾರಾಯಣಸ್ವಾಮಿಯವರೇ, Treasury Bench ನಲ್ಲಿ ಕುಳಿತಿರುವ ನಮ್ಮವರ ಪುಣ್ಯ 11 . . . ಅವರನ್ನು ಸ್ಮರಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ಡಾ: ವೈ.ಎ. ನಾರಾಯಣಸ್ವಾಮಿ:–** ಬಿ.ಜೆ.ಪಿ. ಗೆ mandate ಇದೆ. ನಿಮಗೆ 74 ಸ್ಥಾನ ಸಿಕ್ಕಾಗ ನಮಗೆ 104 ಸ್ಥಾನಗಳು ಸಿಕ್ಕಿವೆ.

**ಶ್ರೀ ಆರ್.ಬಿ. ತಿಮ್ಮಾಪೂರ:–** ನನ್ನಷ್ಟಕ್ಕೆ ನಾನಿದ್ದೇನೆ . . .

**ಶ್ರೀ ಎಂ. ನಾರಾಯಣಸ್ವಾಮಿ:–** ನಾವು 150 ಸ್ಥಾನಗಳನ್ನು ಗೆದ್ದಿರುವ ಇತಿಹಾಸವಿದೆ. 224ರಲ್ಲಿ 154 ಸ್ಥಾನಗಳು . . . (ಗೊಂದಲ)

(ಮುಂದು)

(1071) 09–12–2020/ 07–20/ ಕೆಹೆಚ್–ಜಿಆರ್

**(ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರು ಅನೈತಿಕ ಸರ್ಕಾರ ಮಾಡಿರುವುದು. The people of Karnataka State have given the mandate to B.J.P.,

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಇವರು ಏನು ಅಧಿಕಾರಕ್ಕೆ ಬಂದಿದ್ದಾರೆ. ಇವರು Operation Kamala ಮಾಡಿ ಅಧಿಕಾರಕ್ಕೆ ಬಂದಿರುವುದು. ಇವರು ಯಾವತ್ತೂ ಕೂಡ ಅಧಿಕಾರಕ್ಕೆ ಬಂದಿರುವುದಿಲ್ಲ. ಇವರಿಗೆ ಜನ ವೋಟ್ ಅನ್ನೇ ಹಾಕಿರುವುದಿಲ್ಲ. Mandate ಬದಲಾವಣೆ ಮಾಡಿಕೊಂಡು ಬಂದಿದ್ದಾರೆ. ಇವರು ಯಾವತ್ತೂ ಒಂದು ಬಾರಿಯೂ ಸರ್ಕಾರ ನಡೆಸಿರುವುದಿಲ್ಲ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದಲ್ಲಿ ಕುಳಿತಿರುವಂತಹ ಮಾನ್ಯ ಸದಸ್ಯರನ್ನು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಹೇಳಿ.

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಆರ್.ಬಿ.ತಿಮ್ಮಾಪೂರರವರು ಎ.ಪಿ.ಎಂ.ಸಿ., ಮಾಜಿ ಮಂತ್ರಿಗಳಾಗಿ ಒಳ್ಳೆಯ ವಿಚಾರಗಳ ಬಗ್ಗೆ

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮಾತನಾಡುತ್ತಿದ್ದಾರೆ. ನಾನು ಶಾಂತವಾಗಿ ಕೇಳುತ್ತಿದ್ದೇನೆ. ಆದರೆ ಇದುವರೆಗೂ ಅವರು ಹೇಳಿರುವ ಅಂಶದಲ್ಲಿ ಯಾವುದೇ ತಪ್ಪು ಇಲ್ಲ. ಆದರೆ ಕೊನೆಯಲ್ಲಿ ಒಂದೇ ಒಂದು ಪದವನ್ನು ಹೇಳಿರುವುದಕ್ಕೆ ನಾನು ಆಕ್ಷೇಪಣೆ ಮಾಡುತ್ತಿದ್ದೇನೆ ಅಷ್ಟೇ. ಉಳಿದೆಲ್ಲಾ ವಿಚಾರಗಳನ್ನು ನಾನು ಒಪ್ಪುತ್ತೇನೆ. ಎ.ಪಿ.ಎಂ.ಸಿ., ಮಾಜಿ ಮಂತ್ರಿಗಳಾಗಿ ಅವರಿಗೆ ಏನೆಲ್ಲಾ ಅನುಭವಗಳು ಇದೆಯೋ ಅದನ್ನು ಹೇಳುತ್ತಿದ್ದಾರೆ. ಎ.ಪಿ.ಎಂ.ಸಿ., ಯಿಂದ ಒಳ್ಳೆಯದಾಗಿದೆ ಮತ್ತು ಕೆಟ್ಟದಾಗಿದೆ. ಅದರ ಬಗ್ಗೆ ನನಗೆ ಮಾಹಿತಿ ಇದೆ. ಮಾನ್ಯ ಸದಸ್ಯರೆಲ್ಲಾ ಇದರ ಬಗ್ಗೆ ಮಾತನಾಡುತ್ತಿದ್ದಾರೆ. ಒಳ್ಳೆಯ ಅಂಶಗಳನ್ನು ಸ್ವೀಕಾರ ಮಾಡುತ್ತೇನೆ. ಆದರೆ ಯೋಗ್ಯತೆ ಇಲ್ಲ ಎಂದು ಹೇಳಿದ್ದಾರೆಯಲ್ಲವೇ, ಅದು ಸರಿಯಿಲ್ಲ. ತಾವು ಹೇಳಿದ ಎಲ್ಲಾ ವಿಚಾರಗಳನ್ನು ನಾನು ಸ್ವೀಕಾರ ಮಾಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಆರ್.ಬಿ.ತಿಮ್ಮಾಪೂರರವರು ಹೇಳಿದ ವಿಷಯ ಏನೇಂದರೆ, ಸರ್ಕಾರಕ್ಕೆ ನಾವು ಸಹ ಪಾಲುದಾರರು. ರೈತರಿಗೆ ನಾವೆಲ್ಲಾ ಸೇರಿ ನ್ಯಾಯ ಕೊಡಬೇಕಾಗಿತ್ತು ಎಂದು ಬಹಳ ನೋವಿನಿಂದ ಹೇಳಿದ್ದಾರೆ. ಆದರೆ ನಾವೆಲ್ಲಾ ಸೇರಿ ನ್ಯಾಯ ಕೊಡುವುದಕ್ಕೆ ಯೋಗ್ಯತೆ ಇಲ್ಲ ಎಂದು ನಮ್ಮನ್ನೂ ಸೇರಿಸಿ ಹೇಳಿದ್ದಾರೆ. ಅದರಲ್ಲಿ ತಪ್ಪೇನಿಲ್ಲ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಹಳ ಸಂತೋಷ. ಮಾನ್ಯ ಸಚಿವರಾದ ಎಸ್.ಟಿ.ಸೋಮಶೇಖರ್‌ರವರು ಬಹಳ ನೊಂದುಕೊಂಡಂತೆ ಕಾಣುತ್ತದೆ. ಈಗ ಯೋಗ್ಯತೆ ಬಗ್ಗೆ ಮಾತನಾಡುವುದಕ್ಕೆ ಹೋಗುವುದು ಬೇಡ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಆರ್.ಬಿ.ತಿಮ್ಮಾಪೂರರವರು ನಾವೆಲ್ಲಾ ಸೇರಿ ರೈತರಿಗೆ ನ್ಯಾಯ ಕೊಡಬೇಕಾಗಿತ್ತು. ಆದರೆ ನ್ಯಾಯ ಕೊಡುವುದಕ್ಕೆ ಆಗಲಿಲ್ಲವೆಂದು ಹೇಳುತ್ತಿದ್ದಾರೆ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಎಸ್.ಟಿ. ಸೋಮಶೇಖರ್‌ರವರಿಗೆ ಹೇಳಿದ್ದು, ಬೇರೆ ಯಾರ ಬಗ್ಗೆಯೂ ಹೇಳಲಿಲ್ಲ. Sri S.T.Somashekar is the best Minister. ಅವರು ಹಲವಾರು ಕಾರ್ಯಕ್ರಮಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಂದಿದ್ದಾರೆ. ತಾವು ಸರ್ಕಾರದಲ್ಲಿ ಎಲ್ಲರ ಜೊತೆಗೆ ಸಹಕಾರದಿಂದ ಇದ್ದೀರಿ. ತಾವು ಒಬ್ಬ ಅದ್ಭುತ ವ್ಯಕ್ತಿ. ಆದರೆ, ತಮ್ಮ ಸರ್ಕಾರ . . .

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸದಸ್ಯರಾದ ಆರ್.ಬಿ.ತಿಮ್ಮಾಪೂರರವರೇ, ನಾನು individual ಅಲ್ಲ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ಇಷ್ಟೆಲ್ಲಾ ಮಾಡಿದರೂ ಯೋಗ್ಯತೆ ಇದೆ ಎಂದರೆ ಇದೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಚಿವರೇ, ನಾವು ಕೂಡ ಸರ್ಕಾರದ ಒಂದು ಭಾಗ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನನಗೆ ಯೋಗ್ಯತೆ ಇದೆ. ನನ್ನ ಸರ್ಕಾರಕ್ಕೆ ಯೋಗ್ಯತೆ ಇದೆ ಎಂದು defend ಮಾಡಿಕೊಂಡರೆ ನನಗೆ ಖುಷಿ. ಹೌದು, ತಮಗೆ ಯೋಗ್ಯತೆ ಇದೆ. ನಾನು ಯೋಗ್ಯತೆ ಇಲ್ಲ ಎಂದು ಹೇಳುವುದಿಲ್ಲ. ನಾನು ಏಕೆ ಯೋಗ್ಯತೆ ಇಲ್ಲ ಎಂದು ಹೇಳಲಿ. ಯೋಗ್ಯತೆ ಇದೆ ಎಂದರೆ ಇದೆ. ಇಲ್ಲ ಎಂದರೆ ಇಲ್ಲ. ಯಾರಿಗೆ ಯೋಗ್ಯತೆ ಇಲ್ಲ ಎನ್ನುವುದನ್ನು ಹೇಳಿದ್ದೇನೆಯೇ ವಿನಃ ಬೇರೆ ಏನು ಇಲ್ಲ. ನಾನು ಸಣ್ಣ ಮಗು ಇದ್ದಾಗ ಅಂದರೆ 7 ರಿಂದ 8 ವರ್ಷ ವಯಸ್ಸು ಇರಬಹುದು. ಮಾನ್ಯ ಸಚಿವರಾದ ಲಕ್ಷಣ್ ಸವದಿಯವರಿಗೆ ಗೊತ್ತಿರುವ ಹಾಗೆ ನಮ್ಮ ಮೂಡಲಗಿಯಲ್ಲಿ ಎಮ್ಮೆ, ಎತ್ತು ಮತ್ತು ದನಗಳ ವ್ಯಾಪಾರ ತುಂಬಾ ಆಗುತ್ತದೆ. ಆ ವ್ಯಾಪಾರದಲ್ಲಿ ನಮ್ಮ ಅಪ್ಪನ ಜೊತೆ ಎಮ್ಮೆ ತೆಗೆದುಕೊಳ್ಳಲು ಬಂದ ಮಧ್ಯವರ್ತಿ ಹೇಳಿದ. ಸ್ವಾಮಿ, ಬುತ್ತಿ ಹೊತ್ತಿ, ಇದು ಅನ್ನ ಬುದ್ಧಿ . . .

**ಶ್ರೀ ಸುನೀಲ್ ವಲ್ಯಾಪೂರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, . . .

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಯೋಗ್ಯತೆ ಎನ್ನುವ ಪದ ಅಸಂಸದೀಯ ಪದವೇ.

**ಶ್ರೀ ಸುನೀಲ್ ವಲ್ಯಾಪೂರ್:–** ಮಾನ್ಯ ಸಭಾಪತಿಯವರೇ, ಯೋಗ್ಯತೆ ಎಂದು ತಾವು ಹೇಳಿರುವುದು ತಪ್ಪು. ಈ ಪದವನ್ನು ಕಡತದಿಂದ ತೆಗೆಯಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದನ್ನು ಮುಗಿಸಿಬಿಡುತ್ತೇನೆ.

**ಶ್ರೀ ಸುನೀಲ್ ವಲ್ಯಾಪೂರ್:–** ಮಾನ್ಯ ಸಭಾಪತಿಯವರೇ, ನನ್ನ ಒಂದು ವಿನಂತಿಯೇನೆಂದರೆ, ಯೋಗ್ಯತೆ ಎಂಬ ಪದವನ್ನು ಕಡತದಿಂದ ತೆಗೆಯಬೇಕು. ನಾವು ಯೋಗ್ಯತೆ ಬಗ್ಗೆ ಮಾತನಾಡಬೇಕಾದರೆ ನಮಗೂ ಬಹಳಷ್ಟು ಇದೆ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನಾನು ಸಚಿವರಲ್ಲಿ ಮತ್ತು ಶಾಸಕರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಯೋಗ್ಯತೆ ಇದೆ ಎಂದರೆ ಇದೆ ಎಂದು ನಾನೇ ಹೇಳುತ್ತಿದ್ದೇನೆ.

**ಶ್ರೀ ಸುನೀಲ್ ವಲ್ಯಾಪೂರ್:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರುಗಳಲ್ಲಿ ಗೌರವದಿಂದ ವಿನಂತಿ ಮಾಡುವುದೇನೆಂದರೆ, ಯೋಗ್ಯತೆ ಎಂಬ ಪದವನ್ನು ಕಡತದಿಂದ ತೆಗೆಯಬೇಕು.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಸುನೀಲ್ ವಲ್ಯಾಪೂರರವರೇ, ಯೋಗ್ಯತೆ ಇದೆ ಎಂದರೆ ಇದೆ ಎಂದು ನಾನೇ ಹೇಳುತ್ತಿದ್ದೇನೆ.

**ಶ್ರೀ ಸುನೀಲ್ ವಲ್ಯಾಪೂರ್:–** ಮಾನ್ಯ ಸಭಾಪತಿಯವರೇ, ಆಯಿತು. ಧನ್ಯವಾದಗಳು.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ, ಅವರು ತಮಗೆ ಯೋಗ್ಯತೆ ಎಂಬ ಪದವನ್ನು ಬಳಸಿಲ್ಲ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಸುನೀಲ್ ವಲ್ಯಾಪೂರರವರೇ, ತಮಗೆ ಯೋಗ್ಯತೆ ಇದೆ ಎಂದರೆ ಇದೆ. ಸ್ವಾಮಿ, ಒಂದು ದಿವಸ ನಮ್ಮ ಊರಿನಲ್ಲಿ ಎಮ್ಮೆ ಮಾರುವುದಕ್ಕೆ ಹೋಗಿದ್ದೆ. ನಾನು ಆಗ ಸಣ್ಣ ಹುಡುಗ. ಅಪ್ಪ ಮತ್ತು ನಾನು ಎಮ್ಮೆಯನ್ನು ಹೊಡೆದುಕೊಂಡು ಹೋಗಿದ್ದೆವು. ಅಲ್ಲಿಗೆ ಒಬ್ಬ ದಲ್ಲಾಳಿ ಬಂದ. ಈ ರೀತಿ ಹೆಗಲಿನ ಮೇಲೆ ಹಾಕಿಕೊಂಡಿದ್ದ. ಸ್ವಾಮಿ, 10 ವರ್ಷಗಳಾದರೂ ಸಹ ಇದಕ್ಕೆ ಹೆಚ್ಚಿನ ಬೆಲೆ ಬರುವುದಿಲ್ಲ. ಇದರ ಬಗ್ಗೆ ವಿಚಾರ ಮಾಡಿ. ನೋಡಿ, ನಾನು ಅನ್ನ ಮುಟ್ಟಿ ಹೇಳುತ್ತಿದ್ದೇನೆ ಎಂದು ಹೇಳಿದ. ಆಗ ನಾನು ನಮ್ಮ ಅಪ್ಪನಿಗೆ ಅವನು ಬುತ್ತಿ ಕಟ್ಟಿಕೊಂಡು ಬಂದಿದ್ದಾನೆ. ಅವನು ಅನ್ನ ಮುಟ್ಟಿ ಹೇಳುತ್ತಿದ್ದಾನೆ. ಆತ ಹೇಳುವುದು ನಿಜ ಇದೆ ನೋಡಿ ಎಂದು ನಮ್ಮ ಅಪ್ಪನಿಗೆ ಹೇಳಿದೆ. ಹೇ, ತಮ್ಮ ನೀನು ಇನ್ನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸಣ್ಣವನಾಗಿದ್ದೀಯ. ಅವರು ಯಾವತ್ತೂ ಬುತ್ತಿ, ರೊಟ್ಟಿ ಇಟ್ಟುಕೊಂಡು ಆಣೆ ಮಾಡುವವರು ಅಲ್ಲ. ಅವನು ಕಾಲುಮರೆ ಇಟ್ಟುಕೊಂಡಿದ್ದಾನೆ ನೋಡು ಎಂದು ಹೇಳಿದ. ಕಾಲುಮರೆ ಎಂದರೆ ತಮಗೆ ಗೊತ್ತಿದೆಯೇ, ಚಪ್ಪಲಿ ಎಂದು ಹೇಳುತ್ತಾರೆ. ಅದಕ್ಕೆ ಸ್ವಾಮಿ, ನಾನು ಅವನನ್ನು ನಂಬಿ ಮೋಸ ಹೋಗಿದ್ದೀನಿ. ಹಾಗೆಯೇ, ತಾವು ರೈತರಿಗೆ ಮೋಸ ಮಾಡುವುದಕ್ಕೆ ಹೊರಟಿದ್ದೀರಿ. ರೈತನಿಗೆ ಮೋಸ ಮಾಡುವುದಕ್ಕೆ ಆಗುವುದಿಲ್ಲ. ಈಗ ರೈತ ಸಿಡಿದೆದ್ದಿದ್ದಾನೆ. ದೆಹಲಿಗೆ ಹೋಗಿ ನೋಡಿ, ಸುಮಾರು ಎರಡರೆಡು ಎಕರೆಯಷ್ಟು ಜಾಗದಷ್ಟು highway ಬಂದ್ ಮಾಡಿದ್ದೀರಿ. ಅಲ್ಲಿಗೆ ಮಾಧ್ಯಮದವರಿಗೆ ಹೋಗುವುದಕ್ಕೆ ಬಿಡುವುದಿಲ್ಲ. ರೈತನ ಪರಿಸ್ಥಿತಿ ಹೇಳತೀರದು. ಅವನ ಕಿಚ್ಚು ತಮ್ಮನ್ನು ಸುಡುತ್ತಿದೆ. ತಾವೆಲ್ಲರೂ ಇನ್ನಾದರೂ ಎಚ್ಚೆತ್ತುಕೊಳ್ಳಿ. ಇಂತಹ ಕರಾಳ ಕಾನೂನು ರೈತರಿಗೆ ಒಳ್ಳೆಯದು ಅಲ್ಲ. ಇದರಿಂದ ತಾವೇನೂ ಅನುಭವಿಸುತ್ತೀರೋ, ಅದು ಖುಷಿ. ಕೇಂದ್ರ ಸರ್ಕಾರದಿಂದ ಏನಾದರೂ ಬಂದರೆ, ಕೇಂದ್ರ ಸರ್ಕಾರದಿಂದ ಇದು ಬಂದಿದೆ. ಇದು ಅದ್ಭುತ. ಅದು ಏನೇ ಇದ್ದರೂ ಅದ್ಭುತನೇ. ಜಿ.ಎಸ್.ಟಿ., ಹಣ ಹಾಕಿದರೂ ಕೂಡ ಅದ್ಭುತ ಸರ್ಕಾರ ನಮ್ಮದು ಎಂದು ಹೇಳುತ್ತಾರೆ. ಪೆಟ್ರೋಲ್ ಬೆಲೆ ಏರಿಕೆಯಾದರೂ ಕೂಡ ಅದ್ಭುತ ಸರ್ಕಾರ ನಮ್ಮದು ಎಂದು ಹೇಳುತ್ತಾರೆ. ನಮಗೆ ಒಳ್ಳೆಯ ಬೆಲೆ ಬಂದಿದೆ ಎಂದರೆ, ನಮ್ಮದು ಅದ್ಭುತ ಸರ್ಕಾರ ಎಂದು ಹೇಳುತ್ತಾರೆ. ಸ್ವಾಮಿ, ತಾವು ಏನು ಬೇಕಾದರೂ ಅಂದುಕೊಳ್ಳಿ. ಇದನ್ನು ಅನುಭವಿಸುವವರಿಗೆ ಗೊತ್ತಿದೆ. ದಯಮಾಡಿ, ಮಾನ್ಯ ಸಚಿವರೇ, ನಾವು ಕಳೆದುಕೊಳ್ಳುತ್ತೇವೆ ಬಿಡಿ ಸರ್. ಅದನ್ನು ಕಳೆದುಕೊಳ್ಳೋಣ. ನಾವೇನೂ ಸ್ವಾತಂತ್ರಕ್ಕಾಗಿ ಬಂದವರು. ಜನರಿಗೆ ಸಹಾಯ ಮಾಡುವುದಕ್ಕೆ ಬಂದವರು. (ಗೊಂದಲ) ತಮ್ಮ ಅದ್ಭುತವಾದ ಸೇವೆ ರಾಷ್ಟ್ರಕ್ಕೆ ಮತ್ತು ರಾಜ್ಯಕ್ಕೆ ಆಗಲಿ.

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸದಸ್ಯರೇ, ಆ ಕಾಂಗ್ರೆಸ್ ಬೇರೆ. ಈ ಕಾಂಗ್ರೆಸ್ ಬೇರೆ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಜನರ mandate ಬದಲಾವಣೆ ಮಾಡುವುದಕ್ಕೆ ಆಗುತ್ತದೆಯೇ? ತಾವು ಅಡ್ಡ ದಾರಿ ಹಿಡಿಯುತ್ತೀರಿ. ಆದರೆ, ನಾವು ಅಡ್ಡ ದಾರಿ ಹಿಡಿಯುವುದಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸದಸ್ಯರಾದ ತಿಮ್ಮಾಪೂರರವರೇ, ಮಾನ್ಯ ದೇವೇಗೌಡರವರನ್ನು ಜೈಲಿಗೆ ಅಟ್ಟಿದ್ದು ಈ ಕಾಂಗ್ರೆಸ್‌ನವರೇ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಲಹರ್ ಸಿಂಗ್ ಸಿರೋಯಾರವರೇ, ನಾವು ಕರ್ನಾಟಕವನ್ನು ಮಾರಾಟ ಮಾಡುವುದಕ್ಕೆ ಬಿಡುವುದಿಲ್ಲ. ತಾವು ಗುಜರಾತ್‌ನಿಂದ ಮಹಾರಾಷ್ಟ್ರಕ್ಕೆ ಬಂದಿದ್ದೀರಿ. ಇಲ್ಲಿ ನಾವು ನಿಮ್ಮನ್ನೂ ಬಿಟ್ಟು ಕೊಡುವುದಿಲ್ಲ.

**ಶ್ರೀ ಪ್ರಾಣೇಶ್ ಎಂ.ಕೆ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 70 ವರ್ಷಗಳಿಂದ ಇದೇ ಸುಳ್ಳನ್ನು ಹೇಳಿ ಜನರನ್ನು ನಂಬಿಸಿದ್ದೀರಿ. ಆದರೆ, ಜನ ಇವತ್ತು ಇದು ಈ ಕಾಂಗ್ರೆಸ್ ಸರ್ಕಾರ, ಆ ಕಾಂಗ್ರೆಸ್ ಸರ್ಕಾರ ಅಲ್ಲ ಎಂದು ಹೇಳಿ. ಈ ಕಾಂಗ್ರೆಸ್ ಬಗ್ಗೆ ತಾವೇ ಯೋಚನೆ ಮಾಡಿ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನೀವೇ ಇದು ಅದ್ಭುತ ಸರ್ಕಾರ ಎಂದು ಹೇಳಬೇಕು. ಸುಗ್ರಿವಾಜ್ಞೆಯನ್ನು ತರುವುದಕ್ಕೆ . . .

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸದಸ್ಯರೇ, ತಾವು 25 ಜನ ಎಂ.ಪಿ.,ಗಳನ್ನು ಇಟ್ಟುಕೊಂಡಿದ್ದೀರಿ. ಯ್ಯಾರಿಗೂ ಸಹ ಮಾತನಾಡುವುದಕ್ಕೆ ಧೈರ್ಯ ಇಲ್ಲ. ಅದು ತಮಗೆ ಅದ್ಭುತ. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಏನು ಬರಬೇಕಾಗಿತ್ತೋ, ಅದನ್ನು ಕೊಡುವುದಕ್ಕೆ ಆಗುತ್ತಿಲ್ಲ ಮತ್ತು ಕೇಳುವುದಕ್ಕೆ ಧೈರ್ಯ ಇಲ್ಲ. ಇವತ್ತು ಕೇಳುವುದಕ್ಕೆ ಧೈರ್ಯ ಇಲ್ಲದೆ ಕುಳಿತುಕೊಂಡಿದ್ದಾರೆ. (ಗೊಂದಲ) ಇದರ ಬಗ್ಗೆ ಇವತ್ತು ಮಾತನಾಡಿ ನೋಡೋಣ. ಸುಮ್ಮನೆ ಬಾಯಿ ಮುಚ್ಚಿಕೊಂಡು ಕುಳಿತುಕೊಂಡಿದ್ದೀರಿ. ತಮ್ಮ ಕೈಯಲ್ಲಿ ಧ್ವನಿ ಏರಿಸುವುದಕ್ಕೂ ಆಗುತ್ತಿಲ್ಲ. ಇವತ್ತು ತಮ್ಮ ವಾಕ್ ಸ್ವಾತಂತ್ರವನ್ನು ಕಳೆದುಕೊಂಡಿದ್ದೀರಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, 25 ಜನ ಎಂ.ಪಿಗಳು ಬಂದಿರುವುದು, ತಮಗೆ ಎಷ್ಟು ತೊಂದರೆಯಾಗಿದೆ? ಯಾವಾಗಲೂ ತಾವು ಅದನ್ನೇ ಹೇಳುತ್ತೀರಿ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯಕ್ಕೆ ಬರಬೇಕಾದ ಪಾಲು ಏನು ಬರಬೇಕಾಗಿದೆಯೋ, ಅದು ಬರುತ್ತಿಲ್ಲ. ಅದನ್ನು ತಾವು ಕೇಳಿ. ತಮ್ಮ ಕೈಯಲ್ಲಿ ಏಕೆ ಕೇಳುವುದಕ್ಕೆ ಆಗುತ್ತಿಲ್ಲ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸದಸ್ಯರೇ, ತಮ್ಮ ನೋವು ನನಗೆ ಅರ್ಥವಾಗುತ್ತದೆ.

**ಶ್ರೀ ಪ್ರಾಣೇಶ್ ಎಂ.ಕೆ:-** ಮಾನ್ಯ ಸದಸ್ಯರುಗಳೇ ತಮ್ಮ ಆತ್ಮಸಾಕ್ಷಿಯನ್ನು ಪ್ರಶ್ನೆ ಮಾಡಿಕೊಳ್ಳಿ. ಇದರ ಬಗ್ಗೆ ನಾವೇನು ಮಾತನಾಡುವುದಿಲ್ಲ. ತಾವು ಆತ್ಮಸಾಕ್ಷಿಯನ್ನು ಪ್ರಶ್ನೆ ಮಾಡಿಕೊಂಡು, ಇದರ ಬಗ್ಗೆ ಮಾತನಾಡುವುದಕ್ಕೆ ನೈತಿಕತೆ ತಮಗೆ ಇದೆಯೇ ಎಂಬುದನ್ನು ತಾವೇ ಯೋಚನೆ ಮಾಡಿದರೆ ಒಳ್ಳೆಯದು. (ಗೊಂದಲ) ತಮಗೆ ಜನ ಕೊಟ್ಟಿರುವ mandate. ರಾಜಕಾರಣ ಎಂದರೆ mandate ಮೇಲೆ ರಾಜಕಾರಣದ ವ್ಯವಸ್ಥೆಗಳು ನಡೆಯುವಂತಹದ್ದು. ಇಡೀ ದೇಶದ ಜನ ನಿಮ್ಮನ್ನು ತಿರಸ್ಕಾರ ಮಾಡಿ, ತದನಂತರ ಭಾರತೀಯ ಜನತಾ ಪಕ್ಷಕ್ಕೆ ಅಧಿಕಾರವನ್ನು ಕೊಟ್ಟಿದ್ದಾರೆ. (ಗೊಂದಲ) ಕಾಂಗ್ರೆಸ್‌ನವರು ಸುಳ್ಳು ಹೇಳಿ. ಅಧಿಕಾರವನ್ನು ತೆಗೆದುಕೊಂಡು, ಅವರಿಗೆ ಅಧಿಕಾರವನ್ನು ಕೊಟ್ಟ ಮೇಲೆ . . .

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಪ್ರತಿಯೊಬ್ಬರ ಹಕ್ಕು ಇದೆ.

**ಶ್ರೀ ಪ್ರಾಣೇಶ್ ಎಂ.ಕೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ, ಮುಂದಿನ ಚುನಾವಣೆಯಲ್ಲಿ ನೋಡೋಣ. ಜನರಿಗೂ ಯಾವುದೂ ಸರಿ, ಯಾವುದೂ ತಪ್ಪು ಎಂದು ಗೊತ್ತಿದೆ. ಸ್ವಲ್ಪ ತಾಳ್ಮೆಯಿಂದ ಇರಿ, ತಮಗೆ ತಾಳ್ಮೆ ಎನ್ನುವುದೇ ಇಲ್ಲ. ತಾವು ಈ ರೀತಿ ಮಾತನಾಡಿ ಕೂಗಾಡಿದರೆ ಹೇಗೆ? ನಿಮ್ಮ ಆತ್ಮಸಾಕ್ಷಿಯನ್ನೇ ನೀವೇ ಪ್ರಶ್ನೆ ಮಾಡಿಕೊಳ್ಳಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಆಡಳಿತ ಯಾವ ರೀತಿ . . . ಇದು ಎಲ್ಲಿಯ ರಾಜ್ಯಭಾರ. ಅಗೋಚರವಾದಂತಹ . . .

(ಮುಂದು)

**(1072) 7:30 ಎಸ್‌ಪಿಆರ್/ಜಿಆರ್ 09/12/2020** **(ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ.ಯವರು mandate ಪ್ರಕಾರ ಇರುವುದು. ಆದರೆ ಅವರು ಆಪರೇಷನ್ ಕಮಲ ಮಾಡಿ ಸರ್ಕಾರ ರಚಿಸಿದ್ದಾರೆ. ಆದರೂ ಸಹ ಅವರು ಮ್ಯಾಂಡೇಟ್ ಬಗ್ಗೆ ಮಾತನಾಡುತ್ತಾರೆ. ಹೀಗಿದ್ದಾಗ ಅವರು ಆಪರೇಷನ್ ಕಮಲ ಏಕೆ ಮಾಡಿದರು? ಮ್ಯಾಂಡೇಟ್ ಬಗ್ಗೆ ಮಾತನಾಡುವುದಕ್ಕೆ ಅವರಿಗೆ ನೈತಿಕತೆ ಇಲ್ಲ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ.ಯವರಿಗೆ ಶೇಕಡಾ 36.7 ರಷ್ಟು ಮತಗಳು ಬಂದಿದೆ. ಆದರೆ ಅವರಿಗೆ mandate ಹೇಗೆ ಸಿಕ್ಕಿತು?

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ವಿಧೇಯಕದ ಮೇಲೆ ಚರ್ಚೆಯನ್ನು ಮಾಡಿಸಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಸುಮ್ಮನೆ ಇರುವವರನ್ನು ಇವರುಗಳು ಪ್ರಚೋದಿಸುತ್ತಾರೆ.

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ವಿಧೇಯಕದ ಬಗ್ಗೆ ಸದನದಲ್ಲಿ ಚರ್ಚೆಯಾಗಲಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ರಾತ್ರಿ 11-00 ಗಂಟೆಯವರೆಗೂ ಸಹ ನಾವು ಮಾತನಾಡುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿವಯರೇ, ಶ್ರೀ ತಿಮ್ಮಾಪೂರರವರು ಮಾತನಾಡುವುದನ್ನು ಮುಂದುವರೆಸಲಿ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ. mandate ಬಗ್ಗೆ ಚುನಾವಣೆ ಆಯುಕ್ತರಿಂದ ವರದಿಯನ್ನು ತರಿಸಿಕೊಳ್ಳಲಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಈ ರೀತಿಯಾಗಿ ಪ್ರಚೋದಿಸಿದರೆ, ನಾವು ಏನು ಮಾಡಬೇಕು, ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ಯಾರ ಮಾತನ್ನೂ ಸಹ ಕೇಳುವುದಿಲ್ಲ. ಮಾನ್ಯ ತಿಮ್ಮಾಪೂರರವರು ಮಾತನಾಡುವುದನ್ನು ಮುಂದುವರೆಸಲಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರಿಗೆ mandate ಬಗ್ಗೆ ಮಾತನಾಡಲು ಯಾವ ನೈತಿಕತೆ ಇದೆ?

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಕಳೆದ 70 ವರ್ಷದಲ್ಲಿ ಬಂದಿದ್ದನ್ನು ಈ 7 ವರ್ಷಗಳಲ್ಲಿ ಮಾರಿದರು. ವಿಮಾನ ನಿಲ್ದಾಣ, ಸರ್ಕಾರಿ ಸ್ವಾಮ್ಯದ ಮತ್ತು ಯಾವುದನ್ನೇ ತೆಗೆದುಕೊಂಡರೂ ಅದನ್ನು ಖಾಸಗೀಕರಣಗೊಳಿಸಿದರು, ಇನ್ನು ಏನೂ ಉಳಿಯುವುದಿಲ್ಲ. ನಾಳೆಯ ದಿನ ಇಡೀ ದೇಶವನ್ನೇ ಮಾರಾಟ ಮಾಡಿ ಬಿಡುತ್ತಾರೆ. ಇಂತಹದಕ್ಕೆ mandate ಬೇಕೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಕರಾಳ ಶಾಸನದ ವಿರುದ್ಧ ಹಲವಾರು ರಾಜ್ಯದ ಬಹಳಷ್ಟು ರೈತರು ಹೋರಾಟ ಮಾಡುತ್ತಿದ್ದಾರೆ, ಹೀಗಾಗಿ ಇದರಲ್ಲಿ ಯಾವುದಾದರೂ ತಪ್ಪು ಇರಬಹುದು. ರಾಷ್ಟ್ರ ರಾಜಧಾನಿಯಲ್ಲಿ ದೇಶದ ಪ್ರಧಾನ ಮಂತ್ರಿಗಳು ಹೋರಾಟಗಾರರನ್ನು ಕರೆದು ಮಾತನಾಡುವ ಸ್ಥಿತಿಯಲ್ಲಿದ್ದಾರೆ. ಹೀಗಾಗಿ ಅವರುಗಳು ಪ್ರಧಾನ ಮಂತ್ರಿಗಳೊಂದಿಗೆ ಮಾತನಾಡಲಿ. ಅಲ್ಲಿ ಯಾವ ರೀತಿಯಾದ ತೀರ್ಪು ಬರುತ್ತದೆ ನೋಡೋಣ. ನಂತರ ನಮ್ಮ ರಾಜ್ಯ ಸರ್ಕಾರವು ತಿದ್ದುಪಡಿ ಮಾಡಲು ಹೋಗುತ್ತಾರೆ. ಪ್ರಾಯಶಃ ಆ ವಿಧೇಯಕವನ್ನು ಹಿಂಪಡೆಯುವ ವಾತಾವರಣವು ನಿರ್ಮಾಣವಾಗಿದೆ. ಕೇಂದ್ರ ಸರ್ಕಾರವು ಸದರಿ ವಿಧೇಯಕವನ್ನು ಹಿಂಪಡೆದರೆ, ನಮ್ಮ ಈ ವಿಧೇಯಕಕ್ಕೆ ಯಾವುದೇ ಬೆಲೆ ಇರುವುದಿಲ್ಲ. ಹೀಗಾಗಿ ಈ ವಿಚಾರವನ್ನು ಸದನ ಸಮಿತಿಗೆ ವಹಿಸಿ; ಅಲ್ಲಿ ಚರ್ಚೆಯನ್ನು ಮಾಡೋಣ. ಆ ನಂತರದಲ್ಲಿ ಪುನಃ ವಿಧೇಯಕದ ಮಂಡನೆಯಾಗಲಿ. ಒಂದು ವೇಳೆ, ಇದು ರೈತರ ಪರವಾಗಿದ್ದರೆ ಅದಕ್ಕೆ ನಾವು ಒಪ್ಪಿಗೆ ನೀಡುತ್ತೇವೆ. ಇಂತಹ ರೈತ ವಿರೋಧಿ ವಿಧೇಯಕವನ್ನು ನಾನು ವಿರೋಧಿಸುತ್ತೇನೆ ಹಾಗೂ ಇದು ರಾಜ್ಯಕ್ಕೆ ಒಳ್ಳೆಯದಲ್ಲ ಎಂದು ಹೇಳುತ್ತೇನೆ. ರೈತರಿಗೆ ಕರಾಳ ಶಾಸನ ಬರೆಯುವ ಕೆಲಸ ನಮ್ಮ ಪಕ್ಷದಿಂದ ಪಕ್ಷಾಂತರಗೊಂಡ ಮಾನ್ಯ ಎಸ್.ಟಿ.ಸೋಮಶೇಖರ್‌ರವರಿಂದ ಆಗಬಾರದು.

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಈ ಮಸೂದೆಯ ಮೇಲೆ ಬಹಳಷ್ಟು ಚರ್ಚೆಯು ನಡೆಯುತ್ತಿದೆ. ರೈತರು, Corporate Sector, middlemen, ದಳ್ಳಾಳಿಗಳ ಬಗ್ಗೆ ಹಾಗೂ ಕಳೆದ 70 ವರ್ಷಗಳಿಂದ ಕಾಂಗ್ರೆಸ್ ಪಕ್ಷದವರು ಏನು ಮಾಡಿದರು ಎನ್ನುವುದರ ಬಗ್ಗೆ ಬಹಳ ಸವಿಸ್ತಾರವಾಗಿ ಚರ್ಚೆ ನಡೆಯುತ್ತಿದೆ. ಬಹಳ ಸಂತೋಷದ ವಿಚಾರ. ನಮ್ಮ ಹಳೆಯ ಸ್ನೇಹಿತರು ಹಾಗೂ ಹಾಲಿ ಸಚಿವರಾಗಿರುವ ಶ್ರೀ ಎಸ್.ಟಿ.ಸೋಮಶೇಖರ್‌ರವರು ಮಾಡುತ್ತಿರುವ ಚರ್ಚೆಯನ್ನು ಕೇವಲ ಎ.ಪಿ.ಎಂ.ಸಿ. ಕಾಯ್ದೆಗೆ ಮಾತ್ರವೇ ಸ್ಥಿಮಿತಗೊಳಿಸಿ ಎಂದು ಹೇಳಿದರು. ಇದೂ ಸಹ ಬಹಳ ಸಂತೋಷದ ವಿಚಾರ. ರಾಷ್ಟ್ರವ್ಯಾಪಿ ರೈತರಿಗೆ ಒಳ್ಳೆಯದಾಗಲೀ ಎನ್ನುವ ಕಾರಣಕ್ಕಾಗಿ ವಿಧೇಯಕವನ್ನು ತಂದಿರುವುದಾಗಿ ಪ್ರಧಾನ ಮಂತ್ರಿಗಳು ಹೇಳಿದರು. ರೈತರ ಉತ್ಪಾದನೆ ಅಥವಾ ಅವರ ಲಾಭವನ್ನು ದ್ವಿಗುಣಗೊಳಿಸುವುದಾಗಿ 2014 ನೇ ವರ್ಷದಲ್ಲಿ ಪ್ರಧಾನ ಮಂತ್ರಿಗಳು ಭಾಷಣ ಮಾಡುವಾಗ ಘೋಷಣೆ ಮಾಡಿದರು. ನಂತರದಲ್ಲಿ ನಡೆದ ಎಲ್ಲಾ ಕಾರ್ಯಕ್ರಮಗಳು ಐತಿಹಾಸಿಕ ಕಾರ್ಯಕ್ರಮಗಳಾಗಿವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

'ಅಚ್ಛೇ ದಿನ್' ಇದರಿಂದ ಮೊದಲುಗೊಂಡು ಈಗ ಮಂಡಿಸಿರುವ ಕಾನೂನಿನವರೆಗೆ ಎಲ್ಲವೂ ಒಳ್ಳೆಯ ಕಾರ್ಯಕ್ರಮಗಳಾಗಿವೆ. ಇಲ್ಲಿನ ಬಹಳಷ್ಟು ಸದಸ್ಯರಿಗೆ ಮಾತನಾಡಲು ಕಷ್ಟವಾಗುತ್ತದೆ. ಕಳೆದ 70 ವರ್ಷದಿಂದ ನಮ್ಮ ಪಕ್ಷವು ಏನೂ ಮಾಡಿಲ್ಲವೆಂದು ಹೇಳುತ್ತಿದ್ದಾರೆ; ಅವರು ನಾವು ಹೇಳುವುದನ್ನು ಒಪ್ಪಿಕೊಳ್ಳಲು ತಯಾರಿಲ್ಲ. ಆದರೆ, ಬೇಗನೇ ಚರ್ಚೆಯನ್ನು ಮುಗಿಸಿ ಎಂದು ಹೇಳುತ್ತಿದ್ದಾರೆ. ಅವರ ಪಕ್ಷವು ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದ್ದರೆ, ಚುನಾವಣೆಯ ಸಂದರ್ಭದಲ್ಲಿ ಸಾರ್ವಜನಿಕವಾಗಿ ಅದರ ಬಗ್ಗೆ ಚರ್ಚೆಯನ್ನು ಮಾಡಲಿ. ನಾವುಗಳು ಪಾಕಿಸ್ತಾನ, ಚೈನಾ ಮತ್ತು ಖಾಲಿಸ್ಥಾನ ದೇಶಗಳನ್ನು ಬೆಂಬಲಿಸುವವರು ಹಾಗೂ ದೇಶದ್ರೋಹಿಗಳು ಎಂದು ಹೇಳುತ್ತಾರೆ. ಆದರೆ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಸಿದ್ಧರಿಲ್ಲ. ಕಳೆದ 70 ವರ್ಷಗಳಿಂದ ನಾವು ಏನು ಮಾಡಿದ್ದೇವೆ ಎನ್ನುವುದನ್ನು ಹೇಳುವುದು ಬೇಡವೇ? ಚರ್ಚೆಗೆ ನಾವು ಸಿದ್ಧರಿದ್ದೇವೆ ಹೀಗಾಗಿ ಇದರ ಬಗ್ಗೆ ಚರ್ಚೆಯಾಗಲೀ. ನಂತರದಲ್ಲಿ ಜನ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ. ನಮ್ಮ ಪಕ್ಷವನ್ನು ಜನರು ತಿರಸ್ಕಾರ ಮಾಡಿದ್ದಾರೆ ಎಂದು ಹೇಳುವುದು ಬೇಡ. ಚುನಾವಣೆಯಲ್ಲಿ ನಮ್ಮ ಪಕ್ಷವು ಶೇಕಡಾ 19 ರಷ್ಟು ಹಾಗೂ ಆಡಳಿತ ಪಕ್ಷದವರು ಶೇಕಡಾ 37 ರಷ್ಟು ಮತಗಳನ್ನು ಪಡೆದಿವೆ. ಆದರೆ, 'ಹಿಂದಿ ಬೆಲ್ಟ್' ಎನ್ನುವ ಪ್ರದೇಶಗಳಲ್ಲಿ ಮಾತ್ರವೇ ಆಡಳಿತ ಪಕ್ಷದ ಪ್ರಭಾವವಿದೆ ವಿನಃ ಬೇರೆ ಪ್ರದೇಶಗಳಲ್ಲಿ ಇನ್ನೂ ಪ್ರಭಾವ ಬೀರಿಲ್ಲ. ಆಡಳಿತ ಪಕ್ಷದವರು ಕರ್ನಾಟಕ ರಾಜ್ಯವನ್ನು ಖರೀದಿ ಮಾಡಿದ್ದಾರೆ, ಇದು ಬಹಳ ಸಂತೋಷದ ಸಂಗತಿಯಾಗಿದೆ. ಆಡಳಿತ ಪಕ್ಷವು ವ್ಯಾಪಾರಸ್ಥರ ಪಕ್ಷವಾಗಿದ್ದು, ವ್ಯಾಪಾರವನ್ನು ಮಾಡಿದ್ದಾರೆ ಅಷ್ಟೇ. **(ಗೊಂದಲ)** ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಜನಮನ್ನಣೆ ದೊರೆತಿಲ್ಲ. ಯಾರಿಗೂ ಸಹ ಬಹಮತ ದೊರೆತಿಲ್ಲ. ಜನರು ಸಮ್ಮಿಶ್ರ ಸರ್ಕಾರಕ್ಕೆ ಬಹುಮತ ನೀಡಿದ್ದಾರೆ.

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಮ್ಮ ಇಷ್ಟ ಬಂದ ಹಾಗೆ ಹೇಳುವುದಕ್ಕಾಗುತ್ತದೆಯೇ? ನಿಮ್ಮ ಪಕ್ಷವು ಸಮ್ಮಿಶ್ರ ಸರ್ಕಾರವನ್ನು ರಚನೆ ಮಾಡಿರಲಿಲ್ಲವೇ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಉತ್ತರವನ್ನು ಕೊಡುತ್ತೇನೆ. ಮಾನ್ಯ ಸದಸ್ಯರು ಮಾತನಾಡಲಿ.

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿ ಬಿ.ಜೆ.ಪಿ.ಪರ mandate ಬಂದಿತ್ತು. ವಿರೋಧ ಪಕ್ಷದವರು ಅನೈತಿಕ ಸಂಬಂಧ ಮಾಡಿ ಸಮ್ಮಿಶ್ರ ಸರ್ಕಾರವನ್ನು ಮಾಡಿದೆ. ಅವರು ಅದನ್ನು ಒಪ್ಪಿಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಮಾಡಿದ್ದು ಅನೈತಿಕ ಸಂಬಂಧವಲ್ಲವೇ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುಮತ ಎಂದರೆ ಈ ರಾಜ್ಯದಲ್ಲಿ ಸರ್ವ ಬಹುಮತ 114 ಸೀಟುಗಳು ಬರಬೇಕಾಗಿತ್ತು. ಆದರೆ, ಅವರಿಗೆ ಎಷ್ಟು ಸೀಟುಗಳು ದೊರೆತಿವೆ? ಅದಕ್ಕೆ ಇಂಗ್ಲೀಷ್‌ನಲ್ಲಿ 'illegitimate alliance' ಎಂದು ಹೇಳುತ್ತಾರೆ. ಅದರ ಬಗ್ಗೆ ಮಾತನಾಡುವುದು ಬೇಡ. ವಿಧೇಯಕ ಬಗ್ಗೆ ಚರ್ಚೆಯು ನಡೆಯುತ್ತಿದೆ, ಇದನ್ನು ಸರ್ಕಾರವು ಕೇಳಬೇಕು. ಬಿ.ಜೆ.ಪಿ.ಯ ನಾಯಕರಾದ ಸಾಮ್ರಾಟ್ ಸುಪ್ರೀಂ ಲೀಡರ್ ಶ್ರೀ ನರೇಂದ್ರ ಮೋದಿರವರು 'one nation, one ration, one education, one election, one market, ಒಂದು ಕೂಳು' ಎಂದು ಹೇಳಿದರು. ಬಹಳ ಜೋರಾಗಿ ಇಂತಹ ಒಳ್ಳೆಯ ಘೋಷಣೆಗಳನ್ನು ಮಾಡಿಕೊಂಡು ಬಂದರು. ಇದು ಎಲ್ಲಿಯೂ ಸಹ ಯಶಸ್ವಿಯಾಗಲಿಲ್ಲ. ಪ್ರಸ್ತುತ ವಿಧೇಯಕವು ಕೇವಲ ರೈತರು, ಮಾರುಕಟ್ಟೆ ಇವುಗಳಿಗೆ ಮಾತ್ರವೇ ಸಂಬಂಧಪಟ್ಟಿಲ್ಲ. ಅದರಲ್ಲಿನ hidden agenda ವನ್ನು ನೋಡಿ. ಇದರ ಬಗ್ಗೆ ಯಾರೂ ಸಹ ಯೋಚನೆ ಮಾಡುತ್ತಿಲ್ಲ. ಈ ದೇಶದಲ್ಲಿ ಕಾಂಗ್ರೆಸ್ ಪಕ್ಷವು ಎ.ಪಿ.ಎಂ.ಸಿ. ವ್ಯವಸ್ಥೆಯನ್ನು ಜಾರಿಗೆ ತಂದಿದ್ದಾರೆ ಅಂತಲ್ಲ. ಬ್ರಿಟಿಷರ ಕಾಲದಿಂದ ಅಂದರೆ 1933 ನೇ ಇಸವಿಯಿಂದ ಈ ವ್ಯವಸ್ಥೆಯು ನಮ್ಮ ದೇಶದಲ್ಲಿ ಜಾರಿಯಲ್ಲಿದ್ದು, ಇದಕ್ಕೆ 93 ವರ್ಷಗಳ ಇತಿಹಾಸವಿದೆ. ಇದು unparliamentary ಅಲ್ಲ. It is a fact. ಇದು ಇತಿಹಾಸವಾಗಿದೆ. ಇಂತಹ ವ್ಯವಸ್ಥೆಯಲ್ಲಿ ನಾವು ಹಲವಾರು ಬದಲಾವಣೆಗಳನ್ನು ಮಾಡಿಕೊಂಡು ಬರುತ್ತಿದ್ದೇವೆ. ಆದರೆ, ಈಗ ಇದ್ದಕ್ಕಿದ್ದ ಹಾಗೆ ಎ.ಪಿ.ಎಂ.ಸಿ.ಯ ಅವಶ್ಯಕತೆಯಿಲ್ಲ, ರೈತರು ತಮ್ಮ ಉತ್ಪಾದನೆಯನ್ನು ಎಲ್ಲಿ ಬೇಕಾದರೂ ಸಹ ಮಾರಾಟ ಮಾಡಬಹುದು; ಎ.ಪಿ.ಎಂ.ಸಿ.ಗಳಿಂದ ರೈತರಿಗೆ ಲಾಭ ಬರುತ್ತಿರಲಿಲ್ಲ ಎಂಬುದಾಗಿ ಬಹಳ ಚೆನ್ನಾಗಿ ಹೇಳಿದ್ದಾರೆ. ಕೃಷಿ ಮತ್ತು ಮಾರುಕಟ್ಟೆ ಇವುಗಳು ಸಹವರ್ತಿ ಪಟ್ಟಿ (Concurrent List) ಯಲ್ಲಿಲ್ಲ. ಇವುಗಳು ರಾಜ್ಯ ಪಟ್ಟಿಯಲ್ಲಿವೆ. ಇದರಿಂದ ತಾಪತ್ರಯ ಏನೆಂದರೆ, ಇಡೀ ವಿಶ್ವದಲ್ಲಿಯೇ ಭಾರತ ದೇಶ 5ನೇ ದೊಡ್ಡ ಆರ್ಥಿಕ ಶಕ್ತಿಯಾಗಿದೆ. ನಮ್ಮ ದೇಶ ಪ್ರಪಂಚದಲ್ಲಿಯೇ ಅತಿ ದೊಡ್ಡದಾದ ಮಾರುಕಟ್ಟೆ. ಇಷ್ಟೆಲ್ಲಾ ವಿಶೇಷತೆಗಳಿದ್ದರೂ ಸಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ವ್ಯಾಪಾರಸ್ಥರು ಮಾರುಕಟ್ಟೆಯ ಮೇಲೆ ಪ್ರಭಾವವನ್ನು ಬೀರುತ್ತಾರೆ. ಮಾನ್ಯ ತಿಮ್ಮಾಪೂರರವರು ಪ್ರಸ್ತಾಪಿಸಿದಂತೆ, ಭಾರತ–ಚೀನಾ ಗಡಿಯಲ್ಲಿ 20 ಸೈನಿಕರು ಹತರಾಗಿದ್ದಾರೆ ಹಾಗೂ ಚೈನಾ ದೇಶವು ನಮ್ಮ ದೇಶದ 1,200 ಕಿಲೋಮೀಟರ್‌ಗಳಷ್ಟು ಅತಿಕ್ರಮಿಸಿದೆ. ಆದರೂ ಸಹ ನಮ್ಮ ದೇಶದ ವ್ಯಾಪಾರಸ್ಥರು ಈ ಅವಧಿಯಲ್ಲಿ ಚೈನಾದೊಂದಿಗೆ 84,000 ಸಾವಿರ ಕೋಟಿ ರೂಪಾಯಿಗಳಷ್ಟು ವ್ಯಾಪಾರ ಮಾಡಿದ್ದಾರೆ. ಇಷ್ಟೆಲ್ಲಾ ಘಟನೆಗಳು ಘಟಿಸಿದರೂ ಸಹ ನಾವು ಇವರುಗಳನ್ನೆಲ್ಲಾ ಒಪ್ಪಿಕೊಳ್ಳಬೇಕು. ಏಕೆಂದರೆ ಇವರುಗಳು ದೇಶಭಕ್ತರು ಹಾಗೂ ಸ್ವದೇಶಿಗಳಾಗಿದ್ದಾರೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರೊಬ್ಬರು ತಮ್ಮ ಸ್ಥಾನದಲ್ಲಿ ಕುಳಿತುಕೊಂಡೇ ‘thank you’** ಎಂದರು.)

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನೋಡಿ, 20 ಜನ ಸೈನಿಕರು ಹತರಾಗಿದ್ದಾರೆ ಎಂದು ಹೇಳಿದರೆ, ಆಡಳಿತ ಪಕ್ಷದವರು ‘thank you’ ಎನ್ನುತ್ತಿದ್ದಾರೆ. ಇಂಥವರಿಗೆ ಏನು ಮಾಡುವುದು?

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಯಾವ ರೀತಿಯಾದ ಪ್ರತ್ಯುತ್ತರವನ್ನು ಕೊಟ್ಟಿದ್ದಾರೆ ಎನ್ನುವುದನ್ನು ಮಾನ್ಯ ಸದಸ್ಯರು ಹೇಳಬೇಕು. ಏಕೆಂದರೆ, ಮಾನ್ಯ ಸದಸ್ಯರು ರಾಜ್ಯಸಭಾ ಸದಸ್ಯರಾಗಿದ್ದರು ಹೀಗಾಗಿ ಅವರ ಬಗ್ಗೆ ನಮಗೆ ಗೌರವವಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ನಮ್ಮ ದೇಶವು ಚೈನಾ ದೇಶಕ್ಕೆ ಹೇಗೆ ಪ್ರತ್ಯುತ್ತರವನ್ನು ನೀಡಿದೆ ಎನ್ನುವುದರ ಬಗ್ಗೆಯೂ ಸಹ ಮಾನ್ಯ ಸದಸ್ಯರು ಸದನದ ಗಮನಕ್ಕೆ ತರಬೇಕು. ಅವರು ಕೇವಲ ಅರ್ಧ ಸತ್ಯವನ್ನು ಹೇಳಿ ನಿಲ್ಲಿಸಬಾರದು; ಪೂರ್ಣ ಸತ್ಯವನ್ನು ಹೇಳಬೇಕು. ಚೈನಾ ದೇಶಕ್ಕೆ ನಮ್ಮ ದೇಶವು ಹೇಗೆ ಉತ್ತರ ಕೊಟ್ಟಿದೆ ಎನ್ನುವುದನ್ನು ಸದಸ್ಯರು ಹೇಳಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ನಾನು ಈ ವಿಚಾರದಲ್ಲಿ ಉತ್ತರಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(ಮುಂದು)

(1073)09-12-2020(07-40)ಬಿಎಸ್‌ಡಿ-ಎಂಡಿ

**ಶ್ರೀ ಎನ್. ರವಿಕುಮಾರ್:-** ಚೈನಾದ ಸೈನಿಕರನ್ನು ಭಾರತದೊಳಗೆ ಬಿಟ್ಟುಕೊಳ್ಳಬೇಕಾಗಿತ್ತೇ?

**ಶ್ರೀ ಬಿ.ಕೆ. ಹರಿಪ್ರಸಾದ್:-** ಅದಕ್ಕೆ ಉತ್ತರ ಕೊಡುತ್ತೇನೆ.

**ಶ್ರೀ ಎನ್. ರವಿಕುಮಾರ್:-** ಭಾರತವು ಹೇಗೆ ಪ್ರತ್ಯುತ್ತರ ಕೊಡಬೇಕಾಗಿತ್ತೋ, ಹಾಗೆ ನೇರವಾಗಿ ಕೊಟ್ಟಿದೆ. ಅದನ್ನು ದೇಶವೇ ಒಪ್ಪಿಕೊಂಡಿದೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು yield ಆಗುವುದಿಲ್ಲ, ಅವರು ಪ್ರಶ್ನೆ ಕೇಳಿದ್ದಾರೆ, ನಾನು ಉತ್ತರ ಕೊಡುತ್ತೇನೆ. ಇದು ನನ್ನ statement ಅಲ್ಲ. 1200 sq km ಒಳಗೆ ಬಂದಿದ್ದಾರೆ ಎಂದು ನಾನು ಹೇಳಿಲ್ಲ. ನಾಗಪುರದಲ್ಲಿ ಒಂದು University ಇದೆ. ಆ University Chancellor ವಿಜಯದಶಮಿ ದಿನ ಭಾಷಣದಲ್ಲಿ ಹೇಳಿದ್ದಾರೆ. ಅದನ್ನು ನೋಡಿದರೆ ಗೊತ್ತಾಗುತ್ತದೆ. ಏಕೆಂದರೆ ಅವರು ಆ University ಯಿಂದ ಬಂದಿದ್ದಾರೆ. ಆದ್ದರಿಂದ ಚೈನಾದಿಂದ ಯಾರು ಬಂದಿದ್ದಾರೆ, ಹೋಗಿದ್ದಾರೆ ಎಂಬ ಪ್ರಶ್ನೆ ಅಲ್ಲ. ದೇಶಭಕ್ತಿ, ರಾಷ್ಟ್ರಪ್ರೇಮದ ಬಗ್ಗೆ ನಮಗೆ ತಿಳಿಸಿಕೊಡುವುದು ಬೇಕಾಗಿಲ್ಲ. ಅದರ ಮೇಲೆ ಚರ್ಚೆಯಾದರೆ ನಾವು ಚರ್ಚೆ ಮಾಡುತ್ತೇವೆ. ಆದ್ದರಿಂದ ಈ ಕಾನೂನು ಏಕೆ ಬಂದಿದೆ? ಈ Bill ಬಂದಿದೆ. ಈ ದೇಶದಲ್ಲಿ ಅವರದ್ದೇ ಆದ APMC ಕಾನೂನು ಇತ್ತು. ಅವರದ್ದೇ ಆದ Tax System ಇತ್ತು. ಈ ಒಂದು 5ನೇ ದೊಡ್ಡ ಆರ್ಥಿಕ ಶಕ್ತಿ ಎಂದು ಹೇಳಿದೆ, ದೊಡ್ಡ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡಲು ಪ್ರತಿ ರಾಜ್ಯಕ್ಕೆ ಹೋಗಿ ವ್ಯವಹಾರ ಮಾಡಲು ಆಗುವುದಿಲ್ಲ. ಅದಕ್ಕೆ ಕೇಂದ್ರೀಕೃತವಾಗಬೇಕೆಂದು ಬ್ರಿಟಿಷ್ ಸರ್ಕಾರ ಎಂದು ಹೇಳಿದರೆ ತಪ್ಪಾಗುತ್ತದೆ, ಆಗಿನ ಕಾಲದ Company ಸರ್ಕಾರ ಎಂದು ಹೇಳುತ್ತಿದ್ದರು, ಆ Company ಸರ್ಕಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ಇವರು ಕಾನೂನು ಮಾಡಿದ್ದಾರೆ. ಅವರು ಯಾವ ರೀತಿ ಕಾನೂನು ಮಾಡಿದ್ದಾರೆ, APMC ಯಲ್ಲಿ ಮಾತ್ರವಲ್ಲದೇ ರೈತರು ತಾವು ಬೆಳೆದಿದ್ದನ್ನು ಆಗಲೂ ಸಹ ಬೇರೆ ಕಡೆ ಮಾರಾಟ ಮಾಡುತ್ತಿದ್ದರು, ಬರೀ APMC ಯಲ್ಲಿಯೇ ಮಾರಬೇಕೆಂದು ಇರಲಿಲ್ಲ. ಇಷ್ಟೊಂದು ಭಾಷಣ ಮಾಡಿದ್ದಾರೆ, ಇದು ಕೇವಲ ಕಾಂಗ್ರೆಸ್, ಬಿಜೆಪಿ ಅಥವಾ ಜನತಾದಳಕ್ಕೆ ಸೇರಿದ್ದಲ್ಲ. ಈ 3 ಕಾನೂನುಗಳು ದೇಶದ 80

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾಗದಷ್ಟು ಜನರ ಮೇಲೆ ಪರಿಣಾಮ ಬೀರುತ್ತದೆ. ಶೇಕಡ 70 ಭಾಗದಷ್ಟು ರೈತಾಪಿ ಜನರಿದ್ದಾರೆ. ಹೀಗಿರುವಾಗ ಇದರ ಮೇಲೆ ಚರ್ಚೆಯಾಗಬಾರದು ಎಂದರೆ ಹೇಗೆ? ಆದ್ದರಿಂದ ೦ಕಿ೦ಅ ೦ಭಿಣ ನ ಮೊದಲನೆಯ ಕಾನೂನು ಇದೆ ನೋಡಿ, ಇದರಲ್ಲಿ ಸುಗ್ರೀವಾಜ್ಞೆ ಬಂತು. ಮೇ 14 ರಂದು ಸುಗ್ರೀವಾಜ್ಞೆ ಮೂಲಕ ತಿದ್ದುಪಡಿ ಮಾಡಿದರು. ಇದಕ್ಕೆ ಆದಷ್ಟು ಬೇಗ ರಾಜ್ಯಪಾಲರ ಇದು ಸಹಮತ ಸಿಗುತ್ತದೆ. ಕೇಂದ್ರ ಸರ್ಕಾರದ ಕೃಷಿ ಉತ್ಪಾದನೆ ಮತ್ತು ಜಾನುವಾರು ಮಾರುಕಟ್ಟೆ, ಪ್ರಚಾರ ಮತ್ತು ಸೌಲಭ್ಯ ಕಾಯ್ದೆ 2017 ಅನ್ನು ರಾಜ್ಯವು ಅಂಗೀಕರಿಸಬೇಕೆಂದು ಕೇಂದ್ರದಿಂದ ಪತ್ರಗಳು ಬಂದಿದೆ. ಅಂದರೆ ರಾಜ್ಯದಲ್ಲಿ ಯಾರಿಗೂ ಸಹ... ಇದು Federal Structure ಇರುವ Cooperative Federalism ರಾಜ್ಯವಾಗಿದೆ. ಇದರಲ್ಲಿ ಕೇಂದ್ರದವರು ರಾಜ್ಯದ ಮೇಲೆ ಒತ್ತಡ ಹಾಕುವುದನ್ನು ಯಾರೂ ಒಪ್ಪುವುದಿಲ್ಲ. ಈ ಒಂದು Corporate Sector ಎಂದು ಇದೆ, ಇವರು ಇಡೀ ರಾಷ್ಟ್ರದಲ್ಲಿ ಅವರ ವ್ಯಾಪಾರ ವೃದ್ಧಿ ಮಾಡಿಕೊಳ್ಳಲು ಮತ್ತು ಮಾರುಕಟ್ಟೆಯನ್ನು ಕಬ್ಜಾ ಮಾಡಲು ಈ ಕಾನೂನನ್ನು ತಂದಿದ್ದಾರೆ ಎಂದರೆ ತಪ್ಪಾಗಲಾರದು. ಈ ಕಾನೂನು ಮೂಲಕ ಮೊಟ್ಟಮೊದಲನೆಯದಾಗಿ ಮಾನ್ಯ ರಮೇಶ್ ರವರು ಹೇಳಿದಂತೆ section 8 or section 117 ಅನ್ನು scrap ಮಾಡಿದಾಗ ರೈತರು ಎಲ್ಲಿ ಹೋಗಬೇಕು? ಅವರು ಹೇಳಬಹುದು. ಈ ದೇಶದಲ್ಲಿ ಶೇಕಡ 86 ಭಾಗದಷ್ಟು ಜನ ಸಣ್ಣ ಹಿಡುವಳಿದಾರರಿದ್ದಾರೆ. ಕೋಲಾರದಲ್ಲಿ ಟಮೊಟೊ ಬೆಳೆಯುವವರು ದೆಹಲಿಗೆ ತೆಗೆದುಕೊಂಡು ಹೋಗುತ್ತಾನೆಯೇ? Transportation facility ಬೇಕು. ಅವರು Multinational Companies ಅಥವಾ Corporate Sector ಬಂದರೆ ಒಳ್ಳೆಯ ಬೆಲೆ ಕೊಟ್ಟು ತೆಗೆದುಕೊಂಡು ಹೋಗುತ್ತಾರೆ ಎಂದು ಹೇಳುತ್ತಾರೆ. ಈ Bill ನಲ್ಲಿ ಅಥವಾ ಪ್ರಧಾನ ಮಂತ್ರಿಗಳ ಭಾಷಣದಲ್ಲಿ curtail ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಎಲ್ಲಾದರೂ ಹೇಳಿದ್ದಾರೆಯೇ? Essential Commodities Act repeal ಮಾಡಿದ್ದಾರೆ. ಅದನ್ನು ಏಕೆ ಮಾಡಿದ್ದಾರೆ ಎಂದರೆ Black Marketing ಇರುತ್ತದೆ, ಅಂದರೆ ಕಾಳಸಂತೆಕೋರರ ವಿರುದ್ಧ Essential Commodities Act ಇತ್ತು. ಅದನ್ನು repeal ಮಾಡಿದ್ದಾರೆ. ಅದನ್ನು ಮಾಡಿದಾಗ ಅವರ godown ಗಳಲ್ಲಿ ಎಷ್ಟು ಬೇಕಾದರೂ ಸಂಗ್ರಹ ಮಾಡಿಕೊಂಡು ಕಾಳಸಂತೆ ಮಾಡಬಹುದು. ಒಳ್ಳೆಯ ಬೆಲೆ ಬಂದಾಗ ಮಾರಾಟ ಮಾಡುವ ಕೆಲಸವೂ ಆಗುತ್ತದೆ. ಇದರಿಂದ ರೈತರಿಗೆ ಲಾಭವಾಗುತ್ತದೆಯೇ? ಅದಲ್ಲದೇ ಆ company ಬಂದು ಇದಾಯಿತು, ಈ company ಬಂದು ಅದಾಯಿತು ಎಂದು ಬಹಳಷ್ಟು ಜನ ಹೇಳುತ್ತಾರೆ. ನಾನು ಬಹಳ ದೂರ ಹೋಗುವುದಿಲ್ಲ. Air India ವಿರುದ್ಧ King Fisher, Jet Airways Company ಗಳು ಬಂತು. Jet Airways ನಿಂದ ರೂ.10

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾವಿರ ಕೋಟಿ ನಾಮ, King Fisher ನಿಂದ ರೂ.9 ಸಾವಿರ ಕೋಟಿ ನಾಮ, Vodafone, Idea ಇವೆಲ್ಲವುಗಳಿಂದ ರೂ.75 ಸಾವಿರ ಕೋಟಿ, ರೂ.50 ಸಾವಿರ ಕೋಟಿ ನಾಮ ಆಗಿದೆ. ಇವರ ಜೊತೆ ಎಲ್ಲಿ fight ಮಾಡುತ್ತಾರೆ? Supreme Court ನಲ್ಲಿ 2G ಗೆ ಏನಾಯಿತು ಎಂದು ನೋಡಲಿ. ಈ ಕತೆ ಏನಾಯಿತು ಎಂದು ಹೇಳುತ್ತೇನೆ. ಗುಜರಾತ್‌ನಲ್ಲಿ Pepsi Company ಯವರು ಅಲ್ಲಿರುವ ರೈತರ ಮೇಲೆ ಇಂತಹ ಬೆಳೆಯನ್ನೇ ಬೆಳೆಯಬೇಕು ಎಂದು ಹೇಳಿದಾಗ ಅವರು court ಗೆ ಹೋಗುವುದಕ್ಕೆ ಆಗುತ್ತಿಲ್ಲ. ಆ Multinational Company ಗುತ್ತಿಗೆದಾರರ ಜೊತೆ ಒಪ್ಪಂದ ಮಾಡಿಕೊಂಡಾಗ ಈ ಬಡ ರೈತರು court ನಲ್ಲಿ ಹೋಗಿ fight ಮಾಡುವುದಕ್ಕೆ ಆಗುತ್ತದೆಯೇ? ಒಬ್ಬೊಬ್ಬ Lawyer ಗಳು ರೂ.30 ಕೋಟಿ, 50 ಕೋಟಿ 100 ಕೋಟಿ...... ಕರ್ನಾಟಕ ರಾಜ್ಯದಲ್ಲಿ ಹೋಗುವುದು–ಬರುವುದು ಖರೀದಿ ನಡೆಯಿತಲ್ಲ, ಆ Lawyer ಗಳಿಗೆ ಎಷ್ಟೆಷ್ಟು ಕೊಟ್ಟಿದ್ದಾರೆ ಎಂದು ನನಗೂ ಗೊತ್ತು. ಅದರಲ್ಲಿ ಕೆಲವರು ನನ್ನ ಸ್ನೇಹಿತರು ಇದ್ದಾರೆ. ಆದ್ದರಿಂದ ಇರುವ MLA ಗಳು, MP ಗಳು, Lawyer ಗಳನ್ನು hire ಮಾಡಬಹುದು. ಸಣ್ಣ ರೈತ ಎಲ್ಲಿ hire ಮಾಡುತ್ತಾನೆ? ಕಾನೂನು ಮಾಡಿರುವುದು ರೈತರಿಗಲ್ಲ! ದೊಡ್ಡ ದೊಡ್ಡ ಬಂಡವಾಳಶಾಹಿಗಳಿಗೆ ಎನ್ನುವುದರಲ್ಲಿ ಯಾರಿಗೂ ಸಂದೇಶ ಹೇಳಬೇಕಾಗಿಲ್ಲ. ಈ MSP (Minimum Support Price) ವಿಚಾರದಲ್ಲಿ touch ಮಾಡಿಲ್ಲ ಎಂದು ಹೇಳುತ್ತಾರೆ. ಎಲ್ಲಿಯೂ ಸಹ MSP ಯನ್ನು ಮುಟ್ಟಿಲ್ಲ ಎಂದು ಹೇಳುವುದಕ್ಕೆ ದಾಖಲೆಗಳಿಲ್ಲ. ಕನಿಷ್ಠ ಬೆಂಬಲ ಬೆಲೆ ಕೊಡಬೇಕು. ಇದರ ಬಗ್ಗೆ ಅವರ ಭಾಷಣದಲ್ಲಿ, ದಾಖಲೆಗಳಲ್ಲಿ ಎಲ್ಲಿಯೂ ಇಲ್ಲ. ಈ *Section 12 of the ordinance of the Central Government may for carrying out the provisions of the ordinance give such instructions, directions, orders or issue guidance as it may deem necessary to any Authority or Officer subordinate to the Central Government, any State Government or any Authority or Officer subordinate to the State Government. The wide ambit of Bill can severely limit the autonomy of the States...* ಗುಲ್ಬರ್ಗದಲ್ಲಿ ತೊಗರಿ ಬೇಳೆಯನ್ನು ಬೆಳೆಯುತ್ತಾರೆ, ನಾಳೆ ತೊಗರಿ ಬೇಳೆಯನ್ನು ಬೆಳೆಯಬೇಡಿ ಎಂದರೆ ರೈತರು ಏನು ಮಾಡಬೇಕು? Regional level ನಲ್ಲಿ ಯಾವ ರೀತಿಯ system ಇರುತ್ತದೆಯೋ, ಆ system ಮೇಲೆ ಹೋಗುತ್ತಾರೆ. ಅದನ್ನು ಸಹ ಮುಗಿಸಿದ್ದಾರೆ. ಸಣ್ಣ ಉದಾಹರಣೆ ಕೊಡಬೇಕೆಂದರೆ ಈರೋಡಿಗೆ ಮಾನ್ಯ ಸೋಮಶೇಖರೇ ಹೋಗಿ ನೋಡಿ, ಅಲ್ಲಿ ಪ್ರತಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬುಧವಾರ footpath ಮೇಲೆ ಒಳ ಉಡುಪಿನ ಸಂತೆ ನಡೆಯುತ್ತದೆ. ಇಡೀ ದೇಶದಲ್ಲಿ ಅಲ್ಲಿಗೆ ಬಂದು ಲುಂಗಿ, ಪಂಚೆ, banian ಗಳನ್ನು ತೆಗೆದುಕೊಳ್ಳುವುದಕ್ಕೆ ಬರುತ್ತಾರೆ. ಅಲ್ಲಿ footpath ಮೇಲೆ ನಡೆಯುವ ಒಂದು ದಿವಸದ turnover ರೂ.20 ಕೋಟಿಗಳಾಗಿದೆ. ಅದು ನೇರವಾಗಿ ನೇಕಾರರಿಗೆ ಹೋಗುತ್ತದೆ. ಅದಕ್ಕೆ ಇಲ್ಲಿ cess ಹಾಕಿ stamp ಹಾಕಿಬಿಟ್ಟರೆ ಅದನ್ನು ಎಲ್ಲಿ Mall ಗಳಲ್ಲಿ purchase ಮಾಡುವುದು? ಆದ್ದರಿಂದ ಕೇವಲ ಇದಕ್ಕೆ ಮಾತ್ರ ಸೀಮಿತವಾಗಿಲ್ಲ. ಈ ಮಸೂದೆಯಿಂದ Black Marketing ಜಾಸ್ತಿಯಾಗುತ್ತದೆ. ರೈತರಿಗೆ ಬೇಕಾದ ಬೆಲೆ ಸಿಗುವುದಿಲ್ಲ. ಎಷ್ಟು ಬೇಕಾದರೂ stock ಮಾಡಬಹುದು. ಸ್ಥಳೀಯ ಅಥವಾ ಪ್ರಾದೇಶಿಕವಾಗಿ ಬೆಳೆಯುವ ಬೆಳೆಗಳು ಇರುವುದಿಲ್ಲ. ಎಲ್ಲಿ ಯಾವ ಬೆಳೆಗೆ ಜಾಸ್ತಿ ಬೆಲೆ ಬರುತ್ತದೆ ಎನ್ನುವುದನ್ನು ಮಾಡುತ್ತಾರೆ. ಪಂಜಾಬ್ ಮತ್ತು ಹರಿಯಾಣಗಳಲ್ಲಿ ಕೇವಲ ಈ ಒಂದೇ ವಿಚಾರ ಅಲ್ಲ. ಇಡೀ ಪ್ರಪಂಚದಲ್ಲಿ ಇದರ ಬಗ್ಗೆ ಪ್ರತಿಭಟನೆ ಆಗುತ್ತದೆ. ಯಾರು ಮಾಡುತ್ತಿದ್ದಾರೆ? ಅಲ್ಲೂ ಕಾಂಗ್ರೆಸ್‌ನವರು ಮಾಡುತ್ತಿದ್ದಾರೆಯೇ? ಇದು ಬೆಲೆ ತಗ್ಗಿಸುವ ಕೆಲಸ.

(ಮುಂದು)

(1074)/09.12.2020/7.50/ಹೆಚ್‌ವಿಃಎಂ.ಡಿ

**ಶ್ರೀಮತಿ ಭಾರತಿ ಶೆಟ್ಟಿಃ–** ಸನ್ಮಾನ್ಯ ಸಭಾಪತಿಯವರೇ, ಪಂಜಾಬ್‌ನಲ್ಲಿ ಒಬ್ಬ ದಲ್ಲಾಳಿ ಇದ್ದಾನೆ. ಒಂದು ಕೆ.ಜಿ. ಗೋಧಿ ಹೊರಗೆ ಹೋಗಬೇಕಾದರೆ, 'ಸುಖ್‌ವೀರ್ ಟ್ರೇಡರ್' ಎಂದು ಸೀಲ್ ಹಾಕಿದ ನಂತರವೇ ಆ ಗೋಧಿ ಹೊರಗಡೆ ಹೋಗುತ್ತದೆ. ಅವನು ಶೇಕಡಾ 2.5ರಷ್ಟು ಕಮೀಶನ್ ತೆಗೆದುಕೊಳ್ಳುತ್ತಾನೆ. ಒಂದು ವರ್ಷಕ್ಕೆ ಸುಮಾರು 5 ಸಾವಿರ ಕೋಟಿ ರೂಪಾಯಿಗಳಷ್ಟು ಆದಾಯವನ್ನು ಸುಖ್‌ವೀರ್ ಸಿಂಗ್ ಪಡೆಯುತ್ತಿದ್ದಾನೆ. ಇದು ಒಬ್ಬ ದಲ್ಲಾಳಿಯ ಆದಾಯವಾಗಿದೆ. ಈ ಕಾನೂನನ್ನು ತರುವ ಮೂಲಕ ನಮ್ಮ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ಅವರ ಬೇರಿಗೇ ಕತ್ತರಿ ಹಾಕಿ, ಕತ್ತರಿಸಿದ್ದಾರೆ. ಅದಕ್ಕೆ ಅವರಿಗೆ ಹೊಟ್ಟೆ ಉರಿಯುತ್ತಿದೆ. ಅದಕ್ಕಾಗಿಯೇ ಮುಷ್ಕರ ಧರಣಿ ಮಾಡುತ್ತಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್ಃ–** ಸನ್ಮಾನ್ಯ ಸಭಾಪತಿಯವರೇ, ಬೇರು ಇದ್ದರೆ ಕತ್ತರಿಸಬಹುದು. ಪಂಜಾಬ್ ರಾಜ್ಯದ ಬಗ್ಗೆ ನನ್ನ ಸಹೋದರಿ ಪ್ರಸ್ತಾಪ ಮಾಡಿದ್ದಾರೆ. ನಮ್ಮಲ್ಲಿರುವ ಎರಡು ಫುಟ್‌ಬಾಲ್ ಮೈದಾನ ಸೇರಿದರೆ ಅಲ್ಲಿ ಒಂದು ಎ.ಪಿ.ಎಂ.ಸಿ. ಮಾರುಕಟ್ಟೆಯಾಗುತ್ತದೆ. ಅವುಗಳ ವಿಸ್ತಾರ ಅಷ್ಟು ದೊಡ್ಡದಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲಿ ಈ ತರಹ ನಡೆಯುವುದಿಲ್ಲ. ಅಲ್ಲಿ ಬೆಳೆಯುವಂತಹ ಬಾಸುವತಿ ಅಕ್ಕಿಯನ್ನು ರಫ್ತು ಮಾಡಲಾಗುತ್ತದೆ. ಹರಿಯಾಣ ಮತ್ತು ಪಂಜಾಬ್ ರಾಜ್ಯಗಳಿಂದ ಬರುವಂತಹ ಗೋಧಿಯನ್ನು FCI (Food Corporation of India) ಯಲ್ಲಿ ತುಂಬಲಾಗುತ್ತದೆ. ಸುಮಾರು 40 ವರ್ಷಗಳಿಂದ ಅಕಾಲಿದಳದವರು ಇವರ ಜೊತೆಗೆ ಪಾರ್ಟ್‌ನರ್‌ಗಳಾಗಿದ್ದರು. ಅವರು ಯಾಕೆ ಇವರನ್ನು ಬಿಟ್ಟರು?

**ಶ್ರೀಮತಿ ಭಾರತಿ ಶೆಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಕೇವಲ ಎರಡು ವರ್ಷಗಳು ಮಾತ್ರ ನಮ್ಮ ಜೊತೆಗಿದ್ದರು. ಮಹಾರಾಷ್ಟ್ರದಲ್ಲಿ ಏನಾಯಿತು ಎನ್ನುವುದರ ಬಗ್ಗೆ ಅವರು ಬೆಳಕು ಚೆಲ್ಲಬೇಕಾಗಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಸಮಾಧಾನವಾಗುವುದಾದರೆ, ಎರಡು ವರ್ಷಗಳೆಂದೇ ಇಟ್ಟುಕೊಳ್ಳೋಣ. ಮಾನ್ಯ ಮಂತ್ರಿಗಳು ಬೇಗ ಮಾತು ಮುಗಿಸಿ ಎಂದು ಹೇಳಿರುವುದಕ್ಕಾಗಿ ನನ್ನ ಮಾತುಗಳನ್ನು ಬೇಗ ಮುಗಿಸುತ್ತಿದ್ದೇನೆ. ಸಮಯ ಇದೆಯೆಂದರೆ, ಎಲ್ಲರ ಕುಂಡಲಿಯನ್ನು ಹೇಳಿಬಿಡುತ್ತೇನೆ. ತೊಂದರೆಯೇನೂ ಇಲ್ಲ.

**ಶ್ರೀ ಆಯನೂರು ಮಂಜುನಾಥ್:–** ಸನ್ಮಾನ್ಯ ಸಭಾಪತಿಯವರೇ, ಕುಂಡಲಿ ತೆಗೆಯುತ್ತಾರಂತೆ, ಎಲ್ಲಿಂದಲೋ ಹೊಸ ಜ್ಯೋತಿಷ್ಯರು ಬಂದಿದ್ದಾರೆ.

**Sri B.K.HARIPRASAD**:- I am not yielding.

**ಶ್ರೀ ಆಯನೂರು ಮಂಜುನಾಥ್:–** ಸನ್ಮಾನ್ಯ ಸಭಾಪತಿಯವರೇ, ನಾವು ಅವರ ಜಾತಕವನ್ನು ಬಿಚ್ಚಿಡುತ್ತೇವೆ. ಇವರುಗಳ ನಕ್ಷತ್ರ ಎಲ್ಲಿವೆ ಎನ್ನುವುದನ್ನು ನೋಡಿಕೊಳ್ಳಲಿ. ಇವರ ಚಂದ್ರ–ಸೂರ್ಯರೇ ಕಳೆದು ಹೋಗಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಸನ್ಮಾನ್ಯ ಸಭಾಪತಿಯವರೇ, ನನ್ನ ಟ್ರೈನಿಂಗ್ ಆಗಿರುವುದು ಬೆಂಗಳೂರು ಯೂನಿವರ್ಸಿಟಿಯಲ್ಲಿ, ನನ್ನ ಟ್ರೈನಿಂಗ್ ಯಾವುದೋ ಕಸದ ತೊಟ್ಟಿಯಲ್ಲಿ ಆಗಿಲ್ಲ. 'ರಾಷ್ಟ್ರೀಯ ಸುಲಭ್ ಶೌಚಾಲಯ' ಎನ್ನುವ ಒಂದು ಯೂನಿವರ್ಸಿಟಿ ಇದೆ. ಅದರಲ್ಲಿ ನನ್ನ ಟ್ರೈನಿಂಗ್ ಆಗಿಲ್ಲ. ಆದ್ದರಿಂದ ಅವರು ಇದನ್ನೆಲ್ಲ ನನಗೆ ಹೇಳುವುದು ಬೇಡ. ನಾನು ಗೋಸುಂಬೆ ಅಲ್ಲ, ಅಧಿಕಾರ ಹುಡುಕಿಕೊಂಡು ದಿನಕ್ಕೊಂದು ಪಕ್ಷಕ್ಕೆ ಹೋಗಿಲ್ಲ. ಒಂದೇ ಪಾರ್ಟಿ ಒಂದೇ ಸಿದ್ಧಾಂತದಲ್ಲಿ ಇದ್ದೇನೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ್:-** ಸನ್ಮಾನ್ಯ ಸಭಾಪತಿಯವರೇ, ನಾವು ಯಾವುದೋ ಫುಟ್‌ಪಾತ್ ಮೇಲೆ ಬೆಳೆದಿಲ್ಲ. ಹೋರಾಟದ ಮೂಲಕ ಬೆಳೆದಿದ್ದೇವೆ. ಯಾರದೋ ಚಮಚಗಿರಿ ಮಾಡಿಕೊಂಡು ಬೆಳೆದಿಲ್ಲ. ಯಾರದೋ ಚೇಲಾಗಳಲ್ಲ ನಾವು ಹೋರಾಟದ ಮೂಲಕ ಬೆಳೆದವರು. ಆಕಾಶಕ್ಕೆ ಉಗುಳಿದರೆ ವಾಪಸ್ಸು ನಮ್ಮ ಮೇಲೇ ಬೀಳುತ್ತದೆ ಅದೇ ರೀತಿಯಲ್ಲಿ ಅವರಿಗೆ ಉತ್ತರ ವಾಪಸ್ಸು ಬರುತ್ತದೆ.

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಧೈರ್ಯವಿದ್ದರೆ ಹೇಳಲಿ.

(ಗೊಂದಲ)

**ಶ್ರೀ ಆಯನೂರು ಮಂಜುನಾಥ್:-** ಸನ್ಮಾನ್ಯ ಸಭಾಪತಿಯವರೇ, ಧೈರ್ಯಕ್ಕೇನು ಕಡಿಮೆಯಿಲ್ಲ. ನಾನು ಹೇಡಿಯಲ್ಲ. ಧೈರ್ಯವನ್ನು ಅವರಿಂದ ಕಲಿಯಬೇಕಾಗಿಲ್ಲ. ಹೆದರಿಕೊಳ್ಳುವುದಕ್ಕೆ ಅವರೇನು ಹುಲಿಯೇ? ಅವರು ಬಾರೀ ಶೂರರೇ?

(ಗೊಂದಲ)

**ಶ್ರೀ ನಸೀರ್ ಅಹ್ಮದ್:-** ಸನ್ಮಾನ್ಯ ಸಭಾಪತಿಯವರೇ, ಆ ರೀತಿ ಧೈರ್ಯ ಇರುವವರು ನಾಲ್ಕು ಪಕ್ಷಗಳನ್ನು ಬದಲಾಯಿಸುವುದಿಲ್ಲ. ಬೇರೆಬೇರೆ ಪಕ್ಷಗಳಿಗೆ ಹೋಗುವುದಿಲ್ಲ.

(ಗೊಂದಲ)

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಅವರಲ್ಲಿರುವಂತೆ, ತಿವಾರಿ ಕಾಂಗ್ರೆಸ್, ಆ ಕಾಂಗ್ರೆಸ್, ಈ ಕಾಂಗ್ರೆಸ್ ಎನ್ನುವುದು ನಮ್ಮಲ್ಲಿ ಇಲ್ಲ.

(ಗೊಂದಲ)

**ಡಾ||ವೈ.ಎ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಈ ಸದನಕ್ಕೊಂದು ಘನತೆ ಗೌರವವಿದೆ. ಈ ರೀತಿ ಮಾತನಾಡುವುದು ಸರಿಯಲ್ಲ.

(ಗೊಂದಲ)

**Sri B.K.HARIPRASAD**:- I am not yielding.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಸಭಾಪತಿಯವರು:–** ಯಾರು ಭಾಷಣ ಮಾಡುತ್ತಿದ್ದಾರೆ ಅವರ ಮಾತುಗಳನ್ನು ಬಿಟ್ಟು ಬೇರೆಯವರು ಮಾತನಾಡಿರುವುದು ರೆಕಾರ್ಡ್ ಆಗುವುದಿಲ್ಲ. ಮಾನ್ಯ ಹರಿಪ್ರಸಾದ್‌ರವರೇ ತಾವು ತಮ್ಮ ಮಾತುಗಳನ್ನು ಮುಂದುವರಿಸಿ.

(ಗೊಂದಲ)

**ಶ್ರೀ ಎಸ್.ವ್ಹಿ.ಸಂಕನೂರ:–** ಸನ್ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾಗಿರುವ ಮಾನ್ಯ ಹರಿಪ್ರಸಾದ್‌ರವರು ನಾನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಟ್ರೈನಿಂಗ್ ಪಡೆದಿರುವುದು ಎನ್ನುವ ಮಾತುಗಳನ್ನು ಹೇಳಿದ್ದಾರೆ. ಇದರಿಂದ ಉಳಿದ ವಿಶ್ವವಿದ್ಯಾನಿಲಯಗಳಿಗೆ ಅವಮಾನ ಮಾಡಿದಂತಾಗಿದೆ. ಬೇಕಾದರೆ ಅವರು ರೆಕಾರ್ಡ್ ತೆಗೆಸಿ ನೋಡಲಿ, 'ನನ್ನ ಟ್ರೈನಿಂಗ್ ಆಗಿರುವುದು ಬೆಂಗಳೂರು ಯೂನಿರ್ವಸಿಟಿಯಲ್ಲಿ, 'ರಾಷ್ಟ್ರೀಯ ಸುಲಭ್ ಶೌಚಾಲಯ ವಿಶ್ವವಿದ್ಯಾನಿಲಯದಲ್ಲಿ ನನ್ನ ಟ್ರೈನಿಂಗ್ ಆಗಿಲ್ಲ.' ಎನ್ನುವ ಮಾತುಗಳನ್ನು ಹೇಳಿದ್ದಾರೆ. ಹಿರಿಯರು ಈ ರೀತಿ ಮಾತನಾಡಿದರೆ ಹೇಗೆ?

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:–** ಸನ್ಮಾನ್ಯ ಸಭಾಪತಿಯವರೇ, 'ಕುಂಬಳಕಾಯಿ ಕಳ್ಳ' ಎಂದರೆ ಅವರು ಹೆಗಲು ಮುಟ್ಟಿ ನೋಡಿಕೊಳ್ಳಬಾರದು.

(ಗೊಂದಲ)

**ಡಾ||ವೈ.ಎ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಅವರು ಹೇಳಿರುವುದು ತಪ್ಪಿದೆ. ಎಲ್ಲ ವಿಶ್ವವಿದ್ಯಾನಿಲಯಗಳಿಗೆ ಅವರು ಅವಮಾನ ಮಾಡುತ್ತಿದ್ದಾರೆ. 'ರಾಷ್ಟ್ರೀಯ ಸುಲಭ್ ಶೌಚಾಲಯ' ಎನ್ನುವ ವಿಶ್ವವಿದ್ಯಾಲಯ' ಎಲ್ಲಿದೆ? ಯಾವ ಊರಿನಲ್ಲಿದೆ ಎನ್ನುವುದನ್ನು ಅವರು ಹೇಳಬೇಕಾಗುತ್ತದೆ. ಅವರೊಬ್ಬರೇ ಬುದ್ಧಿವಂತರಲ್ಲ, ಎಲ್ಲರೂ ಓದಿಕೊಂಡು ಬಂದಿದ್ದೇವೆ. ನಮಗೂ ಎಲ್ಲ ವಿಚಾರಗಳು ಗೊತ್ತಿವೆ.

**ಸಭಾಪತಿಯವರು:–** ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

**Dr.Y.A.NARAYANASWAMY:-** You take back your words. It is not there.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri B.K.HARIPRASAD**:- It is there.

**ಶ್ರೀ ಎನ್.ರವಿಕುಮಾರ್:–** ಸನ್ಮಾನ್ಯ ಸಭಾಪತಿಯವರೇ ರಾಷ್ಟ್ರೀಯ ಸುಲಭ ಶೌಚಾಲಯ ಎನ್ನುವ ವಿಶ್ವವಿದ್ಯಾಲಯ ಪ್ರಪಂಚದಲ್ಲಿ ಎಲ್ಲಿದೆ? ಏನೆಂದು ಅವರು ಮಾತನಾಡುತ್ತಿದ್ದಾರೆ?

(ಗೊಂದಲ)

**ಶ್ರೀ ಸುನೀಲ್ ವಲ್ಯಾಪೂರ್(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಅವರು ಬೇರೆ ವಿಶ್ವವಿದ್ಯಾನಿಲಯಗಳ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದಾರೆ. ಅದನ್ನು ತಾವು ಕಡತದಿಂದ ತೆಗೆದು ಹಾಕಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ.

(ಗೊಂದಲ)

**ಶ್ರೀ ಎನ್.ರವಿಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಅವರು ಬಾಯಿಗೆ ಬಂದ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ನಮಗೂ ಅವರ ಬಗ್ಗೆ ಮಾತನಾಡುವುದಕ್ಕೆ ಬರುತ್ತದೆ.

(ಗೊಂದಲ)

**ಶ್ರೀ ಎಂ.ಕೆ.ಪ್ರಾಣೇಶ್:–** ಸನ್ಮಾನ್ಯ ಸಭಾಪತಿಯವರೇ, ಸಂಸ್ಕಾರವಿಲ್ಲದೆ ಮಾತನಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಸುನೀಲ್ ವಲ್ಯಾಪೂರ್:–** ಸನ್ಮಾನ್ಯ ಸಭಾಪತಿಯವರೇ, ಸುಸಂಸ್ಕೃತರು ಮಾತನಾಡುವ ರೀತಿಯಲ್ಲ ಇದು. ಅವರು ಹೇಳಿರುವ ವಾಕ್ಯವನ್ನು ಕಡತದಿಂದ ತೆಗೆದು ಹಾಕಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

(ಗೊಂದಲ)

**ಶ್ರೀ ಪ್ರಕಾಶ್ ಕೆ.ರಾಥೋಡ್(ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ದಯವಿಟ್ಟು ಸದನವನ್ನು ನಾಳೆ ಬೆಳಗ್ಗೆಯವರೆಗೆ ಮುಂದೂಡಿ ನಾಳೆ ಅವರು ಯಾವಯಾವ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಅವರುಗಳ ಬಗ್ಗೆ ಚರ್ಚೆ ಮಾಡೋಣ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ದಯಮಾಡಿ ಅವರು ಹೇಳಿದಂತಹ 'ರಾಷ್ಟ್ರೀಯ ಸುಲಭ್ ಶೌಚಾಲಯ ವಿಶ್ವವಿದ್ಯಾನಿಲಯ' ಎನ್ನುವ ಪದವನ್ನು ಕಡತದಿಂದ ತೆಗೆದು ಹಾಕಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಅವರು ಮಾತನಾಡುವುದಕ್ಕೂ ಒಂದು ಮಿತಿ ಇರಬೇಕಾಗುತ್ತದೆ. ಹಿರಿಯ ಸದಸ್ಯರಾಗಿರುವ ಮಾನ್ಯ ಬಿ.ಕೆ. ಹರಿಪ್ರಸಾದ್‌ರವರು ಇಂತಹ ಶಬ್ದ ಬಳಕೆ ಮಾಡುವುದು ಅವರಿಗೆ ಸರಿ ಅನಿಸುತ್ತದೆಯೇ? ಇದು ಯಾರಿಗೂ ಗೌರವ ತರುವಂತಹದ್ದಲ್ಲ. ಅವರಿಗೂ ಗೌರವ ತರುವುದಿಲ್ಲ. ವಯಸ್ಸಿಗೆ ತಕ್ಕಂತಹ ಮಾತುಗಳನ್ನಾಡಿದರೆ ಅವರ ಗೌರವ ಹೆಚ್ಚಾಗುತ್ತದೆ. ಅವರು ಹೇಳಿರುವ ಪದಗಳನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು ಅಥವಾ ತಾವು ಕಡತದಿಂದ ಆ ಪದಗಳನ್ನು ತೆಗೆದು ಹಾಕಬೇಕೆನ್ನುವುದು ನಮ್ಮ ಒತ್ತಾಯವಾಗಿದೆ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, 'ರಾಷ್ಟ್ರೀಯ ಸುಲಭ್ ಶೌಚಾಲಯ ವಿಶ್ವವಿದ್ಯಾನಿಲಯ' ಎನ್ನುವುದು ಇಲ್ಲವೆಂದು ಹೇಳಿದ ಮೇಲೆ ಯಾಕೆ ಸುಮ್ಮನೆ ಚರ್ಚೆ ಮಾಡಬೇಕೆನ್ನುವುದು ನನ್ನ ಪ್ರಶ್ನೆಯಾಗಿದೆ.

(ಗೊಂದಲ)

**ಶ್ರೀ ಎಂ.ಕೆ.ಪ್ರಾಣೇಶ್:-** ಸನ್ಮಾನ್ಯ ಸಭಾಪತಿಯವರೇ, ಆ ಹೆಸರಿನ ಯಾವುದೇ ವಿಶ್ವವಿದ್ಯಾನಿಲಯ ಇಲ್ಲವೆಂದು ಹೇಳಿದ ಮೇಲೆ ಇದು ಎಲ್ಲಿಂದ ಬಂತು? ಇದರ ಅರ್ಥವೇನು?

(ಗೊಂದಲ)

(ಮುಂದುವರಿದಿದೆ)

(1075) 9.12.2020 8.00 ಪಿಕೆ:ಎಕೆ

(ಗೊಂದಲ)

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಅವರೇನು ವಿಷಯಗಳನ್ನು ಪ್ರಸ್ತಾಪಿಸಿದ್ದಾರೋ ಅದರ ಬಗ್ಗೆ ಚರ್ಚೆ ಮಾಡೋಣ. ನಾವು ಯಾವುದಕ್ಕೂ ಭಯ ಬೀಳುತ್ತಿಲ್ಲ. ಅವರು ಯಾವ ಯಾವ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೋ ಅದಕ್ಕೆ ಉತ್ತರ ಕೊಡುತ್ತೇವೆ.

(ಗೊಂದಲ)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಅವರೇನು "ಸುಲಭ ಶೌಚಾಲಯ" ಎಂದು ಹೇಳಿದ್ದಾರೋ ಆ ಪದವನ್ನು ಕಡತದಿಂದ ತೆಗೆಯಬೇಕು.

(ಗೊಂದಲ)

**ಶ್ರೀ ಪ್ರಕಾಶ್ ಕೆ.ರಾಥೋಡ್:-**ಮಾನ್ಯ ಸಭಾಪತಿಯವರೇ, 20 ಜನ ಏನು ಎದ್ದು ನಿಂತಿದ್ದಾರೋ ಇವರೆಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಿ. ನಾವು ಅದಕ್ಕೆ ಉತ್ತರ ಕೊಡಲು ತಯಾರಾಗಿದ್ದೇವೆ. ಅವರು ಏನೇ ಕೇಳಿದರು ನಾವು ಉತ್ತರ ಕೊಡುತ್ತೇವೆ. ಎಲ್ಲರಿಗೂ ಒಂದೊಂದು ಗಂಟೆ ಮಾತನಾಡುವುದಕ್ಕೆ ಅವಕಾಶ ಕೊಡಿ. ನಾವು ಉತ್ತರ ಕೊಡುವುದಕ್ಕೆ ತಯಾರಾಗಿದ್ದೇವೆ.

(ಗೊಂದಲ)

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-**ಮಾನ್ಯ ಸಭಾಪತಿಯವರೇ, ಮಾನ್ಯ ಹರಿಪ್ರಸಾದ್ ಹಿರಿಯರು ಹಾಗೂ ಅನುಭವಿಗಳು ಎಂದು ನಾನು ಅಂದುಕೊಂಡಿದ್ದೇನೆ. ಜನ ಏನು ಅಂದುಕೊಳ್ಳುತ್ತಾರೋ ಗೊತ್ತಿಲ್ಲ. ನನಗೆ ಮಾನ್ಯ ಸದಸ್ಯರ ಮೇಲೆ ಗೌರವ ಇತ್ತು. ಮಾನ್ಯ ಸದಸ್ಯರನ್ನು ನೋಡಿದಾಗಲೆಲ್ಲ ಇವರು ಸಂಸದೀಯ ಪಟು ಎನ್ನುವ ಭಾವನೆ ಉದ್ಭವವಾಗುತ್ತಿತ್ತು. ರಾಜ್ಯಸಭೆಯಲ್ಲಿ ಡಿಬೇಟ್ ಮಾಡುತ್ತಿದ್ದುದನ್ನು ನಾನು ನೋಡುತ್ತಿದ್ದೆ. ಆದರೆ ಇವತ್ತೇನು ನಿಮ್ಮಿಂದ ಶಬ್ದ ಬಂತೋ ಅದು ನಿಮ್ಮ ಯೋಗ್ಯತೆಗೆ, ನಿಮ್ಮ ಅಂತಸ್ತಿಗೆ, ನೀವು ನಡೆದು ಬಂದ ದಾರಿಗೆ ಶೋಭೆ ತರುವಂಥದ್ದಲ್ಲ ಎಂದು ಚಿಕ್ಕವನಾದ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿ ಮಾತನಾಡುವಾಗ ಬೇರೆಯವರಿಗೂ ಸಂತೋಷವಾಗಬೇಕು. ವಿರೋಧ ಪಕ್ಷದಲ್ಲಿದ್ದರೂ ಚೆನ್ನಾಗಿ ಮಾತನಾಡುತ್ತಾರೆ, ತಿಳುವಳಿಕೆ ನೀಡುವ ಹಾಗೆ ಮಾತನಾಡುತ್ತಾರೆ ಎನ್ನುವ ಭಾವನೆ ನಮ್ಮಲ್ಲಿ ಉದ್ಭವವಾಗಬೇಕು. ನೀವು ರಾಜ್ಯಸಭೆಯಲ್ಲಿದ್ದಾಗ ಚೆನ್ನಾಗಿದ್ದೀರಿ. ಇಲ್ಲಿ ನಿಮಗೆ ಯಾವ ಸಂಸ್ಕಾರ ಸಿಕ್ಕಿತೋ, ಯಾವ ಪೀಡೆ ನಿಮಗೆ ತಗುಲಿತೋ, ಯಾವ ಭೂತ ನಿಮ್ಮಲ್ಲಿ ಹೊಕ್ಕಿತೋ ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ತಾವು ಮಂತ್ರಿಗಳು, ನಂತರ ಜವಾಬು ಕೊಡಿ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಇಲ್ಲಿ ಜವಾಬು ಕೊಡುವ ಪ್ರಶ್ನೆಯಿಲ್ಲ. ನೀವೇನು ಮಾತನಾಡುವಾಗ ಶಬ್ದ ಬಳಸಿದಿರೋ ಅದು ನಮಗೆ ಅರ್ಥವಾಗಿದೆ. ನಾನು ಅದೇರೀತಿ ಮಾತನಾಡುವುದಕ್ಕೆ ಹೋದರೆ ನಿಮಗಿಂತ ಕನಿಷ್ಠ ಆಗಿಬಿಡುತ್ತೇನೆ. ನಾನೂ ಕೂಡ ಹಳ್ಳಿಯಿಂದ ಬಂದಿದ್ದೇನೆ. ನನಗೂ ಅನೇಕ ಭಾಷೆಗಳು ಗೊತ್ತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಈ ಮಸೂದೆ ಬಗ್ಗೆ ಚರ್ಚೆ ಮಾಡುವಾಗ ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ಉಪಯೋಗಿಸಿದ ಪದಗಳು ಸರಿಯಾಗಿರಲಿಲ್ಲ. ಅವರು ಈಗ ಸದನದಲ್ಲಿ ಇಲ್ಲ. ಅವರು, ತಮಗೆ ಮಾತ್ರ ಬಾಯಿ ಹೊಡೆಯುವ ಅಭ್ಯಾಸ ಇದೆ, ನಮಗೇನೂ ಗೊತ್ತಿಲ್ಲ ಎಂದು ತಿಳಿದುಕೊಂಡಿದ್ದಾರೆ. ಹೋದ ಅಧಿವೇಶನದಲ್ಲೂ ಅವರು, ಕಸದ ತೊಟ್ಟಿ, ಅದು-ಇದು ಎಂದು ಮಾತನಾಡಿದರು. ಆಗ ಇವರಿಗೆ, ಸಂಸದೀಯ ಪದಗಳು ಯಾವುದು, ಅಸಂಸದೀಯ ಪದಗಳು ಯಾವುದು ಎನ್ನುವುದು ಗೊತ್ತಾಗಲಿಲ್ಲವೇ? ಈಗ ಮಾನ್ಯ ಸವದಿಯವರು ಉಪಮುಖ್ಯಮಂತ್ರಿಗಳಾಗಿದ್ದಾರೆ, ಅದು ಬೇರೆ ಪ್ರಶ್ನೆ. ನಿಮಗೆ ಸಂತೋಷ ಪಡಿಸುವುದಕ್ಕಂತೂ ನಾನು ಬಂದಿಲ್ಲ. ದಯವಿಟ್ಟು ತಿಳಿದುಕೊಂಡು ಬಿಡಿ. ನಾನು ಎಷ್ಟೇ ಕೆಟ್ಟ ಪದಗಳನ್ನು ಉಪಯೋಗಿಸಿದರೂ, ಆ ಪದಗಳನ್ನು ವಾಪಸ್ಸು ತೆಗೆದುಕೊಳ್ಳುವವನಲ್ಲ. ನಮ್ಮನ್ನು ಕೆಣಕಿದರೆ ನಾವು ಸೂಕ್ತ ರೀತಿಯಲ್ಲೇ ಮಾತನಾಡಬೇಕಾಗುತ್ತದೆ ಎಂದು ನಿಮ್ಮ ಸದಸ್ಯರನ್ನು ಹೇಳಿ. ಚುನಾವಣೆಯಲ್ಲಿ ಸೋತಿದ್ದೇವೆ ಎಂದು ಸರ್ಕಾರದ ಎಲ್ಲಾ ಮಾತುಗಳನ್ನು ಕೇಳಿಕೊಂಡು ಸುಮ್ಮನೆ ಕುಳಿತುಕೊಳ್ಳುವ ಜನ ನಾವಲ್ಲ.

(ಗೊಂದಲ)

**ಶ್ರೀ ಎಸ್.ವ್ಹಿ.ಸಂಕನೂರ:-** ಹಿರಿಯ ಸದಸ್ಯರು ಆ ರೀತಿ ಪದಗಳನ್ನು ಬಳಸುವುದು ಅವರಿಗೆ ಶೋಭೆ ತರುವಂಥದ್ದಲ್ಲ.

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:-** ತಮ್ಮ ಪಕ್ಷದವರು ಏನೇನು ಭಾಷೆ ಬಳಸಿದರು, ಏನೇನು ಪದಗಳನ್ನು ಉಪಯೋಗಿಸಿದರೋ ಅವು ಸಭ್ಯ ನಾಗರಿಕರು ಬಳಸುವಂಥದ್ದಲ್ಲ. ದೊಡ್ಡ ದೊಡ್ಡ ಸ್ಥಾನಗಳಲ್ಲಿರುವವರು ಇಂತಹ ಶಬ್ದಗಳನ್ನು ಬಳಸಿದ್ದಾರೆ. ಆಗ ನಿಮಗೇನು ಅನಿಸಲಿಲ್ಲವೇ?

(ಗೊಂದಲ)

**ಶ್ರೀ ಸುನೀಲ್ ವಲ್ಯಾಪುರ್:-** ನೀವು ಹೇಳಿದ್ದೆಲ್ಲವನ್ನೂ ನಾವು ಕುಳಿತು ಕೇಳುವುದಿಲ್ಲ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಬಿ.ಕೆ.ಹರಿಪ್ರಸಾದ್:–** ಕೇಳಬೇಡಿ. ನೀವುಗಳು ಎಷ್ಟು ಹೊತ್ತು ನಿಂತು ಮಾತನಾಡುತ್ತೀರೋ ನಾನೂ ನೋಡುತ್ತೇನೆ. ನನಗೆ ಅನಿಸಿದ್ದನ್ನು ನಾನು ಹೇಳುತ್ತೇನೆ. ನಿಮ್ಮನ್ನು ಮೆಚ್ಚಿಸುವುದಕ್ಕೆ ನಾನು ಇಲ್ಲಿ ಬಂದಿಲ್ಲ. ನೀವೇನು ಮಾಡಿದ್ದೀರಿ ಎಂದು ಜನ ನೋಡಿದ್ದಾರೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಳಸಿದ ಮಾತುಗಳ ಬಗ್ಗೆ ಆಕ್ಷೇಪ ಮಾಡಿದ್ದೇವೆ. **"ಸುಲಭ ಶೌಚಾಲಯ"** ಎಂಬ ಪದವನ್ನು ವ್ಯಂಗ್ಯವಾಗಿ ಏನು ಮಾತನಾಡಿದ್ದಾರೋ ಅದನ್ನು ಕಡತದಿಂದ ತೆಗೆಸಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಹಾಗೆಲ್ಲಾ ತೆಗೆಯುವುದಕ್ಕೆ ಆಗುವುದಿಲ್ಲ. ಆ ಪದದಲ್ಲಿ ಅಂಥದ್ದೇನಿದೆ? ನನಗೆ ಅರ್ಥವಾಗುತ್ತಿಲ್ಲ. ನನಗೆ ಅರ್ಥ ಮಾಡಿಸಿ.

(ಗೊಂದಲ)

**ಶ್ರೀ ಸುನೀಲ್ ವಲ್ಯಾಪುರ್:–**ಮಾನ್ಯ ಸಭಾಪತಿಯವರೇ, ನಿಮ್ಮ ಪೀಠಕ್ಕೆ ನಾವು ಗೌರವ ಕೊಡುತ್ತೇವೆ. ದಯವಿಟ್ಟು "ಸುಲಭ ಶೌಚಾಲಯ" ಎಂದು ಬಳಸಿದ ಪದಗಳನ್ನು ಕಡತದಿಂದ ತೆಗೆಸಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

**Sri PRAKASH K. RATHOD:** Mr. Chairman Sir, is it unparliamentary?

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಏನೋ ಒಂದು ಹೇಳಿ ಬಚಾವ್ ಆಗುವುದು ಸರಿಯಲ್ಲ. ಮಾನ್ಯ ಸದಸ್ಯರು, ವ್ಯಂಗ್ಯ ಮಾಡುವಂತಹ, ಹಾಸ್ಯ ಮಾಡುವಂತಹ ಪೂದರಿಯಲ್ಲೇನು ಪದಗಳನ್ನು ಬಳಸಿದರೋ ಅವುಗಳನ್ನು ಕಡತದಿಂದ ತೆಗೆದು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ **ಎಂ.ನಾರಾಯಣಸ್ವಾಮಿ:–** ಸುಲಭ ಶೌಚಾಲಯವನ್ನು ಸುಲಭ ಶೌಚಾಲಯವೆಂದೇ ಹೇಳಬೇಕಾಗುತ್ತದೆ. ಅದರಲ್ಲಿ ತಪ್ಪೇನಿದೆ? ಅದಕ್ಕೆ ಬೇರೆ ಪದ ಏನಿದೆ?

(ಗೊಂದಲ)

ಶ್ರೀ **ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, they have no interest in transaction of business. They have no interest at all. (ಗೊಂದಲ) ಅವರ ಉದ್ದೇಶ ಏನಿದ್ದರೂ ಜಗಳ ಮಾಡುವುದು ಎಂದು ಕಾಣಿಸುತ್ತದೆ. I think they have no interest in transaction of business.

(ಗೊಂದಲ)

ಶ್ರೀ **ಬಿ.ಕೆ.ಹರಿಪ್ರಸಾದ್:–** ಮಹಾತ್ಮ ಗಾಂಧಿಯನ್ನು ಕೊಂದಿದ್ದಂಥವರು, ಅವರ ಚಸ್ಮಾ ಬಳಸಿಕೊಂಡು "ಸ್ವಚ್ಛ ಭಾರತ" ಎಂಬ ಜಾಹೀರಾತಿಗೆ ಉಪಯೋಗಿಸಿರುವುದು ಸರಿಯೇ? ಸುಲಭ ಶೌಚಾಲಯ ಎಂದು ಬಳಸುವುದು ಅವಮಾನ ಎಂದು ಹೇಳುವ ಅವಶ್ಯಕತೆ ಇಲ್ಲ. ಮಹಾತ್ಮ ಗಾಂಧಿ ಫೋಟೋ ಹಾಕಿ, ಅವರ ಕನ್ನಡದ ಚಿತ್ರ ಬಳಸಿ, "ಸ್ವಚ್ಛ ಭಾರತ್" ಎಂದು ಬಡ್ಕೊಳ್ಳುತ್ತಿದ್ದಾರೆ. ಆದರೆ ಒಂದೂ ಕೂಡ ಸ್ವಚ್ಛವಾಗಿಲ್ಲ. ನಾವ್ಯಾರು ಅದಕ್ಕೆ objection ಮಾಡಲಿಲ್ಲ.

(ಗೊಂದಲ)

ಶ್ರೀ **ಸುನೀಲ್ ವಲ್ಯಾಪುರೆ:–** "ಸುಲಭ ಶೌಚಾಲಯ" ಎಂಬ ಪದ ಬಳಸಿದ್ದು ತಪ್ಪು. ಅದನ್ನು ಕಡತದಿಂದ ತೆಗೆದು ಹಾಕಿಸಿ.

(ಗೊಂದಲ)

ಶ್ರೀ **ಎಸ್.ಆರ್.ಪಾಟೀಲ್:–** ಬೆಳಿಗ್ಗೆ ಎದ್ದ ಕೂಡ ನಾವೆಲ್ಲರೂ ಶೌಚಾಲಯಕ್ಕೆ ಹೋಗುತ್ತೇವೆ ಅಲ್ಲವೇ?

(ಗೊಂದಲ)

ಶ್ರೀ **ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಇಪ್ಪತ್ತು ನಿಮಿಷದಿಂದ ಹೀಗೆಯೇ ಮಾಡುತ್ತಿದ್ದಾರೆ. ಜನ ಎಲ್ಲಾ ನೋಡುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**Sri S.R. PATIL:** What is unparliamentary here? I cannot understand.

**ಶ್ರೀ ಎಂ.ನಾರಾಯಣಸ್ವಾಮಿ:–** ಸುಲಭ ಶೌಚಾಲಯ ಎನ್ನುವುದಕ್ಕೆ ಬೇರೆ ಪದ ಬಳಸುವುದಕ್ಕೆ ಆಗುತ್ತದೆಯೇ? ಆದ್ದರಿಂದ ಅದೇ ಪದವನ್ನು ಬಳಸಿದ್ದೇವೆ.

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಕಾನೂನು ಸಚಿವರು ಸುಗ್ರೀವಾಜ್ಞೆ ತಂದಾಗ ಒಂದು ಹೇಳಿಕೆ ಕೊಟ್ಟಿರು. ಈ ಒಂದು ಕಾನೂನು ಜಾರಿಗೆ ಬಂದಮೇಲೆ ದೇಶದ ಎಲ್ಲಾ ಕಡೆ ರೈತರು ಮಧ್ಯವರ್ತಿಗಳ ಶೋಷಣೆಯಿಂದ ಮುಕ್ತರಾಗುತ್ತಾರೆ, ರೈತರು ಎಲ್ಲೂ ಶೋಷಣೆಗೆ ಒಳಪಡುವುದಿಲ್ಲ ಎಂದು ಹೇಳಿದ್ದರು. ರೈತರು ಎಪಿಎಂಸಿ ಬಿಟ್ಟು ಬೇರೆ ಎಲ್ಲಿ ಬೇಕಾದರೂ ಮಾರಬಹುದು ಎಂದು ಹೇಳಿದರು.

(ಮುಂದು . . .)

(1076) 9–12–2020 8.10 ಡಿಎಸ್–ಎಕೆ

**ಶ್ರೀ ಬಿ.ಕೆ.ಹರಿಪ್ರಸಾದ್(ಮುಂದು):–**

ಈಗಾಗಲೇ ನಾನು ಹೇಳಿದಂತೆ ಸಣ್ಣ ಹಿಡುವಳಿದಾರರಿದ್ದಾರೆ. ಅವರು ಎಲ್ಲಿ ಹೋಗಿ ಮಾರಾಟ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಹಳ್ಳಿಯಲ್ಲಿ ಒಂದು ಎಕರೆ, ಎರಡು ಎಕರೆ ಇರತಕ್ಕಂಥವರು ಟ್ರಕ್ ಮಾಡಿಕೊಂಡು ತೆಗೆದುಕೊಂಡು ಹೋಗುವುದಿಲ್ಲ. ಎತ್ತಿನ ಗಾಡಿಯಲ್ಲಿ ತೆಗೆದುಕೊಂಡು ಹೋಗಿ ಹತ್ತಿರದಲ್ಲಿರುವಂತಹ ಮಾರ್ಕೆಟ್‌ಗೆ ಹಾಕುತ್ತಾರೆ. ಆ ಮಾರ್ಕೆಟ್‌ನ್ನು ಸಂಪೂರ್ಣವಾಗಿ ನಿರ್ನಾಮ ಮಾಡಿ ಕಂಪನಿಗಳಿಗೆ ಸಹಾಯ ಮಾಡುವುದಕ್ಕೆ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆ. ಒಂದು ವಿಚಾರವನ್ನು ಹೇಳುತ್ತೇನೆ, "...The union of the three ordinances appears to be a precursor to implementing the Shanta Kumar Committee recommendations to dilute and dismantle Food Corporation of India, MSP and Public Distribution System" ಎಂದು ಮಾಡಿದ್ದರು.

**ಸಭಾಪತಿಯವರು:–** ತಮಗೆ ಇನ್ನು ಎಷ್ಟು ಸಮಯ ಬೇಕು?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ತಾವು ಎಷ್ಟು ಸಮಯ ಕೊಡುತ್ತೀರೋ ಅಷ್ಟು ಸಮಯ ಮಾತನಾಡುತ್ತೇನೆ. ಈಗ ಅವರು ಗಲಾಟೆ ಮಾಡಿ ನನಗೆ 20 ನಿಮಿಷ ನಿಲ್ಲಿಸಿದರು. ಮಾನ್ಯ ಸೋಮಶೇಖರ್‌ರವರು ನನ್ನ ಹಳೆಯ ಸ್ನೇಹಿತರು. ಕುಳಿತುಕೊಳ್ಳಿ ಎಂದರೆ ಕುಳಿತುಕೊಂಡು ಬಿಡುತ್ತೇನೆ, ನಾನು ಮಾತನಾಡುವುದಿಲ್ಲ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಈಗ 8 ಗಂಟೆಯಾಗಿದೆ, ನಾಳೆ ಮುಂದುವರೆಯಿಸಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಈಗ 8 ಗಂಟೆಯಾಗಿದೆ, ದಿನಾ ನೀವು 9–10 ಗಂಟೆ ಸದನವನ್ನು ಮುಂದೂಡಿದರೆ ಹೇಗೆ? ಈಗ ಸದನವನ್ನು ಮುಂದೂಡಿ, ನಾಳೆ ಅವರು ಮಾತನಾಡಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಇನ್ನು ಮೂರು ನಿಮಿಷ ಅವಕಾಶ ಕೊಡಿ. ಶ್ರೀ ಶಾಂತಕುಮಾರ್ ರವರು he is one of the finest gentlemen in their party. ಹುಡುಕಿದರು ಅಂತಹ ಒಳ್ಳೆಯ ಮನುಷ್ಯ ಸಿಗುವುದಿಲ್ಲ. ಅವರಿಗೆ ಈ ರೀತಿ ಕಮಿಟಿ ಮಾಡಿ ತೀರ್ಮಾನ ಬಂದಿದೆ. Food Corporation of India ದ ಬಜೆಟ್ ಎಷ್ಟು ಗೊತ್ತಿದೆಯೇ? ದೇಶದ ತುಂಬಾ Central Warehousing Corporation godowns ಇದೆ. ಅದನ್ನು ತೆಗೆದುಬಿಟ್ಟು ಯಾರಿಗೆ ಕೊಡುತ್ತಾರೆ? ಅದಕ್ಕೆ ನಾನು ಆ ರೀತಿಯ ಉದಾಹರಣೆಗಳನ್ನು ಕೊಟ್ಟಿರುವಂಥದ್ದು. Jet Airlines, King Fisher Airlines ಮುಗಿಸುತ್ತೇನೆ ಎಂದು ಹೇಳಿ ಬಿಎಸ್‌ಎನ್‌ಎಲ್ ಮುಗಿದು ಹೋಯಿತು. ಈ ಕಂಪನಿಗಳು ಬಂದಾಗ Food Corporation of India ಎಷ್ಟು ವರ್ಷಗಳಿಂದ ಈ ದೇಶದಲ್ಲಿ ಇದೆ, ಬಹಳಷ್ಟು ರೈತರು ಅದರಿಂದ ಬದುಕಿದ್ದಾರೆ. ಅದರಿಂದ ಫುಡ್ ಸೆಕ್ಯುರಿಟಿ ಇದೆ. ಇದನ್ನು ಮುಗಿಸುವುದಕ್ಕೆ ಸಂಪೂರ್ಣವಾಗಿ ಈ ಕಾನೂನನ್ನು ತಂದಿದ್ದಾರೆ. ಇದೊಂದು ಕರಾಳವಾದ ಕಾನೂನು. ನಮ್ಮ ಸ್ನೇಹಿತರು ಅಲ್ಲಿ ಹೋಗಿ ಮಂತ್ರಿಯಾಗಿ ಇಂತಹ ಕಾನೂನಿಗೆ ಸಮರ್ಥನೆ ಮಾಡಿಕೊಂಡು ನಿಲ್ಲುತ್ತಾರೆಂದರೆ, ಅವರು ಹೇಳಿದ ಹಾಗೆ ನನಗೂ ಕೂಡ ಆಶ್ಚರ್ಯವಾಗುತ್ತಿದೆ. ಏಕೆಂದರೆ, ಅವರು ಸಹಕಾರಿ ಕ್ಷೇತ್ರದಲ್ಲಿದ್ದಂಥವರು. ನಮ್ಮ ದೇಶದಲ್ಲಿ ಎಲ್ಲಿ ಹೋದರೂ ಕೂಡ ಅವರು No.1. ಸೋಮಶೇಖರ್ ಎನ್ನುವವರು ಇದ್ದಾರೆ ಎಂದು ಜನ ಹೇಳುತ್ತಿದ್ದರು. ನಿಮಗೆ ಅವರು ಹೇಗೆ ಗೊತ್ತು ಎಂದು ಕೇಳಿದರೆ, ಸಹಕಾರಿ ಕ್ಷೇತ್ರದಲ್ಲಿ ಅವರಿಗೆ ಬಹಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಳ್ಳೆಯ ಹೆಸರು ಇದೆ ಎಂದು ಹೇಳುತ್ತಿದ್ದರು. ಈಗ ಅವರನ್ನು ಬಿಜೆಪಿ ಯವರು ಕರೆದುಕೊಂಡು ಹೋಗಿಬಿಟ್ಟಿದ್ದಾರೆ, ಏನು ಮಾಡುವುದಕ್ಕಾಗುವುದಿಲ್ಲವೆಂದು ನಾನು ಹೇಳಿದೆ. ಅವರು ಅಷ್ಟು ಜನಪ್ರಿಯವಾಗಿರುವಂತಹ ಮನುಷ್ಯ. ಅವರು ಈ ಕಾನೂನು ತರುತ್ತಾರೆಂದು ನಾವು ಯಾರು ನಿರೀಕ್ಷೆ ಮಾಡಿರಲಿಲ್ಲ. ಆದ್ದರಿಂದ ನಮ್ಮ ಪಕ್ಷದವರು ಕರಾಳ ಕಾನೂನಿಗೆ ವಿರೋಧ ಮಾಡುತ್ತೇವೆ. ಇದನ್ನು ಇನ್ನೂ ಹೆಚ್ಚಿನ ಚರ್ಚೆ ಮಾಡುವುದಕೋಸ್ಕರ ಮಾನ್ಯ ತಿಮ್ಮಾಪುರ ರವರು ಹೇಳಿದರು, ಸೆಲೆಕ್ಟ್ ಕಮಿಟಿ ಅಥವಾ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕೊಟ್ಟು ಸ್ವಲ್ಪ ಚರ್ಚೆಯಾಗಲಿ. ಚರ್ಚೆಯಾದ ನಂತರ ರೈತರಿಗೆ ಏನು ಒಳ್ಳೆಯದು ಬೇಕು ಎಂಬುದು ಗೊತ್ತಾಗುತ್ತದೆ. ಏಕೆಂದರೆ ಇಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಆ ಚರ್ಚೆ ಮಾಡುವುದಕ್ಕೆ ನನಗೆ ಅಭ್ಯಾಸವೂ ಇಲ್ಲ. ಪಂಜಾಬ್, ಪಾಕಿಸ್ತಾನ, ಚೈನಾ ಎಂದು ಹೇಳಿ ಅವರೆಲ್ಲಾ ಎಕ್ಸ್‌ಪರ್ಟ್ಸ್ ಇದ್ದಾರೆ, ನಾನು ಅಷ್ಟು ಎಕ್ಸ್‌ಪರ್ಟ್ ಅಲ್ಲ. ಆದ್ದರಿಂದ ಅದರ ಬಗ್ಗೆ ಎಕ್ಸ್‌ಪರ್ಟ್‌ಗಳನ್ನು ಕರೆದು ಸೆಲೆಕ್ಟ್ ಕಮಿಟಿಯಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಈಗ ಎಂ.ಎಸ್.ಸ್ವಾಮಿನಾಥನ್ ಅವರು he is a legendary figure. ಅವರು ಕೃಷಿ ಕ್ಷೇತ್ರದಲ್ಲಿ ಭೀಷ್ಮಚಾರಿಗಳಾಗಿದ್ದಾರೆ. I agree. ಅವರೆಲ್ಲರ ಹತ್ತಿರ ಮಾತನಾಡಿ ನಿರ್ದಿಷ್ಟವಾದ ಕಾನೂನನ್ನು ಕರ್ನಾಟಕ ರಾಜ್ಯಕ್ಕೆ ತರಬೇಕು. ಏಕೆಂದರೆ, ಇದು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟಿರುವಂತಹ ವಿಷಯ. ಕೇಂದ್ರ ಸರ್ಕಾರದವರು ನಮ್ಮ ಮೇಲೆ ದಬ್ಬಾಳಿಕೆ ಮಾಡುವುದಕ್ಕಾಗುವುದಿಲ್ಲ. ಇದನ್ನು ಆದಷ್ಟು ಸೆಲೆಕ್ಟ್ ಕಮಿಟಿಗೆ ಕೊಡಿ. ಇಲ್ಲದಿದ್ದರೆ ಈ ಒಂದು ಕರಾಳ ಕಾನೂನಿಗೆ, ರೈತರ ವಿರೋಧಿ ಕಾನೂನಿಗೆ ಮತ್ತು ಬಡವರ ವಿರೋಧಿ ಕಾನೂನಿಗೆ ನಮ್ಮ ವಿರೋಧವಿದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ, ನಮಸ್ಕಾರ ಜೈಹಿಂದ್.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ತಿದ್ದುಪಡಿ ವಿಧೇಯಕವನ್ನು ತರುವಂತಹ ಉದ್ದೇಶವೇನಿತ್ತು ಎಂದು ನನಗಂತೂ ಅರ್ಥವಾಗುತ್ತಿಲ್ಲ. ಇದರಲ್ಲಿ ವಿಶೇಷವಾಗಿ ಮಾನ್ಯ ಸಚಿವರಾದ ಎಸ್.ಟಿ.ಸೋಮಶೇಖರ್‌ರವರ ಬಗ್ಗೆ ನನಗೆ ಅಪಾರವಾದಂತಹ ಗೌರವವಿದೆ. ಅವರು ಸಹಕಾರಿ ಕ್ಷೇತ್ರದಿಂದ ಬಂದಿದ್ದಾರೆ, ನಾನು ಸಹಕಾರಿ ಕ್ಷೇತ್ರದಿಂದ ಬಂದಿದ್ದೇನೆ. ಸಹಕಾರಿ ಕ್ಷೇತ್ರದಲ್ಲಿ ಏನಾದರೂ ನಿರ್ಣಯ ಕೈಗೊಳ್ಳುವುದಿದ್ದರೆ ಮಾನ್ಯ ಸೋಮಶೇಖರ್‌ರವರು ರಾಜ್ಯದ ಎಲ್ಲಾ ಸಹಕಾರಿ ಕ್ಷೇತ್ರದಲ್ಲಿದ್ದಂಥವರನ್ನು ಸಭೆಗೆ ಕರೆಯುತ್ತಿದ್ದರು. ಉಪ ಮುಖ್ಯಮಂತ್ರಿಗಳು ಕೂಡ ಅನೇಕ ಸಂದರ್ಭಗಳಲ್ಲಿ ಅವರು ನಾವು ಜೊತೆಯಾಗಿ ಬರುತ್ತಿದ್ದೆವು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ,....

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ವೈ.ಎ.ನಾರಾಯಣ ಸ್ವಾಮಿಯವರನ್ನು ಸಭಾಪತಿ ಮಾಡಿ ಕೂರಿಸಿಬಿಡಿ, ಆಗಲಾದರೂ ಸುಮ್ಮನೆ ಕುಳಿತುಕೊಳ್ಳುತ್ತಾರೆಯೇ ನೋಡೋಣ.

**ಶ್ರೀ ಲಕ್ಷ್ಮಣ್ ಎಸ್.ಸವದಿ:–** ಮಾನ್ಯ ಸಭಾಪತಿಯವರೇ, ಇವರು ನಿಮ್ಮ ಅನುಯಾಯಿಗಳೇ?

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ನಿಮ್ಮಲ್ಲಿ ಈಗ ಸ್ಪರ್ಧೆ ನಡೆಯುತ್ತಿದೆ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸೋಮಶೇಖರ್‌ರವರು ಅತ್ಯುತ್ತಮವಾದಂತಹ ಸಹಕಾರಿ ಸಚಿವರು. ಅದರಲ್ಲಿ ಎರಡು ಮಾತಿಲ್ಲ. ಏಕೆಂದರೆ, ನಾನು ಸಚಿವನಾಗಿದ್ದಾಗ ಅವರು ಶಾಸಕರಾಗಿದ್ದರು. ಬಹಳ ವರ್ಷಗಳಿಂದ ಅವರ ಹತ್ತಿರ ನಿಕಟವಾದ ಸಂಬಂಧವಿದೆ. ಬಹುತೇಕವಾಗಿ ನಮ್ಮಿಬ್ಬರ wave length ಒಂದೇ ಇದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಆದರೆ, ಈ ತಿದ್ದುಪಡಿ ಮಸೂದೆಗೆ ಇವರು ಹೇಗೆ ಒಪ್ಪಿದರು? ನನಗೆ ತಿಳಿದ ಮಟ್ಟಿಗೆ ಅವರು ಮನಸಾರೆ ಒಪ್ಪಿಲ್ಲ ಎಂದು ನಾನು ಪ್ರಾಂಜಲ ಮನಸ್ಸಿನಿಂದ ಈ ಸದನದಲ್ಲಿ ವ್ಯಕ್ತ ಮಾಡುವುದಕ್ಕೆ ಬಯಸುತ್ತಿದ್ದೇನೆ. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ನಮ್ಮ ಅನೇಕ ಸದಸ್ಯರು ಬಹಳಷ್ಟು ವಿಚಾರಗಳನ್ನು ಇಲ್ಲಿ ವ್ಯಕ್ತ ಮಾಡಿದ್ದಾರೆ. ಬಹುತೇಕವಾಗಿ ಏನು ಮಾತನಾಡುವುದಕ್ಕೆ ಉಳಿಸಿಲ್ಲವೆಂದು ನಾನು ಭಾವಿಸಿದ್ದೇನೆ. ನಾನು ಅದನ್ನೇ ಪುನಾರವರ್ತನೆ ಮಾಡುವುದಕ್ಕೆ ಸರಿ ಕಾಣುವುದಿಲ್ಲ. ಈಗಾಗಲೇ ಆ ಭಾಗದ ಸದಸ್ಯರು ಮಾನ್ಯ ಮುಖ್ಯಮಂತ್ರಿಗಳಿಂದ ಊಟದ ಆಮಂತ್ರಣವಿದೆ ಬೇಗ ಹೋಗಬೇಕೆಂದು ನನಗೆ ಮನವಿ ಮಾಡಿಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳನ್ನು ಕಾಯುಸುವುದು, ಅವರಿಗೆ ಊಟಕ್ಕೆ ತಡ ಮಾಡಿ ಕಳುಹಿಸುವುದು ಆ ವ್ಯವಧಾನಕ್ಕೆ ನಾನು ಹೋಗುವುದಿಲ್ಲ. ಆದರೂ ನಾನು ಸಂಕ್ಷಿಪ್ತವಾಗಿ ಮಾತನಾಡುತ್ತೇನೆ. ಬಹುತೇಕವಾಗಿ ನಮ್ಮ ಎಲ್ಲಾ ಸದಸ್ಯರು ಮಾತನಾಡಿರುವಂತಹ ವಿಚಾರಗಳಲ್ಲಿ ಒಬ್ಬರೂ ಕೂಡ ಈ ಕಾಯ್ದೆಯ ಪರವಾಗಿ ಮಾತನಾಡಿಲ್ಲ. ಒಳ್ಳೆಯ ಶಬ್ಧಗಳನ್ನು ಮಾತನಾಡಿಲ್ಲ. ರೈತರಿಗೆ ಮಾರಕವಾಗಿರುವಂತಹ ಮಸೂದೆ ಎಂದು ಹೇಳಿದ್ದಾರೆ. ನನಗನಿಸುವುದೇನೆಂದರೆ, ಬಹುತೇಕವಾಗಿ ಈ ಮಸೂದೆ ತರುವ ಉದ್ದೇಶ ಎಪಿಎಂಸಿ ಸಂಸ್ಥೆಗಳೇನಿವೆ ಆ ಸಂಸ್ಥೆಗಳನ್ನು once for all ಮುಗಿಸಬೇಕೆನ್ನುವ ಹುನ್ನಾರ ಇದೆ ಎನ್ನುವುದು ನನ್ನ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯಕ್ತಿಗತ ಅಭಿಪ್ರಾಯ. ಏಕೆಂದರೆ, ನಾನು ಒಬ್ಬ ಕೃಷಿಕ. ಎಪಿಎಂಸಿ ಮಾರುಕಟ್ಟೆಗೆ ನಾನು ಪದಾರ್ಥಗಳನ್ನು ತೆಗೆದುಕೊಂಡು ಹೋಗಿರುವಂತಹ ಅನುಭವವಿದೆ. ಈ ಎಪಿಎಂಸಿ ಹಾಗೆ ಬಂದಿಲ್ಲ. ಅದಕ್ಕೆ ಶತಮಾನದ ಇತಿಹಾಸವಿದೆ. 1928 ರಲ್ಲಿ ರಾಯಲ್ ಕಮಿಷನ್ ನೇಮಿಸಿದ್ದರು. ಅವರು ಒಕ್ಕಲುತನ ಹುಟ್ಟುವಳಿಗಳಾಗಲಿ, ತೋಟಗಾರಿಕೆ ಹುಟ್ಟುವಳಿಗಳಾಗಲಿ ಇವುಗಳಿಗೆ ಮಾರುಕಟ್ಟೆ ಕಲ್ಪಿಸಬೇಕು, ಅದರ ಜೊತೆಗೆ ಮಾರ್ಕೆಟ್ ಮೇಲೆ ನಿಯಂತ್ರಣ, ಉಸ್ತುವಾರಿ ಮಾಡಬೇಕೆನ್ನುವ ಉದ್ದೇಶದಿಂದ ರಾಯಲ್ ಕಮಿಷನ್ ನೇಮಿಸಿದ ಪ್ರಯುಕ್ತ 1933 ರಲ್ಲಿ ಈ ಕೃಷಿ ಉತ್ಪನ್ನ ಮಾರುಕಟ್ಟೆಗಳು ಪ್ರಾರಂಭವಾಯಿತು. 1928 ರಲ್ಲಿ ರಾಯಲ್ ಕಮಿಷನ್ ಬಹಳ ಅತ್ಯುತ್ತಮವಾದಂತಹ ಸಲಹೆಗಳನ್ನು ಕೊಟ್ಟಿದೆ. ಅವೆಲ್ಲಾ ಅನುಸರಿಸಿ 1933 ರಲ್ಲಿ ಮೊದಲು ಬಾಂಬೆ ಪ್ರಾಂತ್ಯ, 1938 ರಲ್ಲಿ ಮೈಸೂರು ಪ್ರಾಂತ್ಯ, ಇವೆಲ್ಲಾ ಕ್ರೋಢಿಕರಣ ಮಾಡಿ 1956 ರಲ್ಲಿ ಕರ್ನಾಟಕ ಏಕೀಕರಣ ಆಯಿತು. ಆಗ The Karnataka Agricultural Produce Marketing Act, 1966 ಜಾರಿಗೆ ತಂದರು. ಇವೆಲ್ಲವನ್ನು ಕ್ರೋಢಿಕರಣ ಮಾಡಿ ರಾಯಲ್ ಕಮೀಷನ್ ಶಿಫಾರಸ್ಸು, ಅನೇಕ ತಜ್ಞರ ಅಭಿಪ್ರಾಯ ಪಡೆದು ನಮ್ಮ ರೈತರು ಶೋಷಣೆಗೆ ಒಳಗಾಗಬಾರದು, ಮಧ್ಯವರ್ತಿಗಳ ಕೈಯಲ್ಲಿ ಸಿಕ್ಕಿಹಾಕಿಕೊಂಡು ನಮ್ಮ ರೈತರು ಹಾಳಾಗಬಾರದು. ಅವರಿಗೆ ಯೋಗ್ಯ ಬೆಲೆ ಸಿಗಬೇಕೆಂದು ಈ ಮಾರುಕಟ್ಟೆ ಅಸ್ತಿತ್ವಕ್ಕೆ ಬಂದಿದೆ. ರೈತರಿಂದಲೇ ಆಯ್ಕೆಯಾಗಿರುವಂತಹ ಚುನಾಯಿತ ಪ್ರತಿನಿಧಿಗಳು ಎಪಿಎಂಸಿ ಯಲ್ಲಿ ಆಡಳಿತ ನಡೆಸುತ್ತಾರೆ. ಇದು ಎಲ್ಲರಿಗೂ ಗೊತ್ತಿರುವಂತಹ ವಿಚಾರ.

(ಮುಂದು)

(1077) 9.12.2020 8.20 ಬಿಕೆಪಿ(ಪಿಕೆ):ವಿಕೆ

**ಶ್ರೀ ಎಸ್.ಆರ್.ಪಾಟೀಲ್**(ಮುಂದುವರೆದಿದೆ)

ವರ್ತಕರ ಪರವಾಗಿ ಕೂಡ ಒಬ್ಬ ಪ್ರತಿನಿಧಿ ಇರುತ್ತಾರೆ. ಈ ವ್ಯವಸ್ಥೆ ಬಹಳ ಚೆನ್ನಾಗಿದೆ. ವರ್ತಕರ ಪ್ರತಿನಿಧಿ ಎಪಿಎಂಸಿ ಅಧ್ಯಕ್ಷನಾಗುವುದಿಲ್ಲ. ರೈತರಿಂದ ಆಯ್ಕೆಯಾಗಿರುವಂತಹ ನಿರ್ದೇಶಕರು ಯಾರಿರುತ್ತಾರೋ ಅವರು ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗಿರುತ್ತಾರೆ. ವರ್ತಕರ ಹಿತದೃಷ್ಟಿಯನ್ನು ಕಾಯುವ ಸಲುವಾಗಿ ಅವರ ಒಬ್ಬ ಪ್ರತಿನಿಧಿ ಕೂಡ ಅಲ್ಲಿರುತ್ತಾರೆ. But that representative, that Director is not allowed to become a Chairman of that APMC. ರೈತರ ಹಿತಾಸಕ್ತಿಯನ್ನು ಕಾಪಾಡಬೇಕು ಎನ್ನುವ ಉದ್ದೇಶದಿಂದ ಈ ವ್ಯವಸ್ಥೆ ಬಂತು. ಮತ್ತೆ, ಖರೀದಿದಾರರು ಯಾರಿರುತ್ತಾರೋ ಅವರು ಲೈಸೆನ್ಸ್ ಪಡೆಯಬೇಕು. ದಲ್ಲಾಳಿಗಳೂ ಕೂಡ ಲೈಸೆನ್ಸ್ ತೆಗೆದುಕೊಂಡಿರಬೇಕು. ತೂಕದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೋಸವಾಗದ ಹಾಗೆ ವ್ಯವಸ್ಥೆ ಮಾಡಿದ್ದಾರೆ. ಯಶವಂತಪುರದಲ್ಲಿ ಬೆಳಿಗ್ಗೆ 5 ಗಂಟೆಗೆ ಮಾನ್ಯ ಮಂತ್ರಿಗಳು ಭೇಟಿ ಕೊಟ್ಟಿರುತ್ತಾರೆ, ನಾನೂ ಹೋಗಿ ನೋಡಿದ್ದೇನೆ. ರೈತರಿಗೆ ನ್ಯಾಯಯುತವಾದ ರೀತಿಯಲ್ಲಿ ಬೆಲೆ ಸಿಗಬೇಕು ಎನ್ನುವುದರ ವ್ಯವಸ್ಥೆ ಕೂಡ ಇದೆ. 1986ನೇ ಇಸವಿಯಲ್ಲಿ ಈ ಕಾಯಿದೆಗೆ ತಿದ್ದುಪಡಿ ಮಾಡಿದರು. ಆಗ ಸೆಕ್ಷನ್ 8 ಎಂದು ಮಾಡಿದರು. ಇದರ ಉದ್ದೇಶವೇನು? ಎಪಿಎಂಸಿ ಯಾರ್ಡನ್ನು ಹೊರತುಪಡಿಸಿ ಹೊರಗಡೆ ವ್ಯಾಪಾರ ಮಾಡಬಾರದು ಎನ್ನುವುದು ಇದರ ಉದ್ದೇಶವಾಗಿತ್ತು. ಎಪಿಎಂಸಿಯ ಪ್ರಾಂಗಣದಲ್ಲೇ ಮಾರಾಟ ಆಗಬೇಕು, ಹರಾಜು ಪಾರದರ್ಶಕವಾಗಿರಬೇಕು. It should be transparent. ಆ ನಿಟ್ಟಿನಲ್ಲೂ ಕಠಿಣವಾದ ಕಾನೂನು ಮಾಡಿದ್ದಾರೆ. ತೂಕದಲ್ಲಿ ಮೋಸ ಆಗುವ ಹಾಗಿಲ್ಲ, ವರ್ತಕರಿಂದ ರೈತರ ಕೃಷಿ ಉತ್ಪನ್ನಗಳಿಗಾಗಲಿ, ತೋಟಗಾರಿಕೆ ಉತ್ಪನ್ನಗಳಿಗಾಗಲಿ ಅನ್ಯಾಯವಾಗಬಾರದು, ಶೋಷಣೆ ಆಗಬಾರದು ಎನ್ನುವ ದೃಷ್ಟಿಯಿಂದ ಸೆಕ್ಷೆನ್ 8 ಅನ್ನು ಮಾಡಿದರು. ಅದು ಎಪಿಎಂಸಿ ಯ ಹೃದಯ ಭಾಗ ಇದ್ದಹಾಗೆ. It is as good as heart of the APMC. ಸೆಕ್ಷೆನ್ 8, ಇದರಿಂದ ಇವರಿಗೇನು ತೊಂದರೆಯಾಗಿತ್ತು. ಇದರ ಪ್ರಕಾರ, ರೈತರಿಂದ ಕಮಿಷನ್ ತೆಗೆದುಕೊಳ್ಳುವ ಹಾಗಿಲ್ಲ, ಮಾರುಕಟ್ಟೆ ಶುಲ್ಕ ತೆಗದುಕೊಳ್ಳುವ ಹಾಗಿಲ್ಲ. ಖರೀದಿದಾರರಿಂದ ವಸೂಲಿ ಮಾಡಬೇಕೆಂದು ನಿಯಮ ಇದೆ. ಇಷ್ಟೆಲ್ಲಾ ಅನುಕೂಲತೆ ಇದ್ದರೂ ಸೆಕ್ಷೆನನ್ನು ಏಕೆ ತೆಗೆದರು? ಏಕೆ ತಿದ್ದುಪಡಿ ಮಾಡಿದರು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. You are working under the pressure of somebody else. ಎಲ್ಲಿಂದ ಒತ್ತಡ ಬಂದಿದೆಯೋ, ಹೇಗೆ ಬಂದಿದೆಯೋ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಬಹುತರ ಇದು ನಮ್ಮ ಕ್ಯಾಬಿನೆಟ್‌ನ ನಿರ್ಣಯ ಕೂಡ ಆಗಿರುವುದಿಲ್ಲ. ಮೇಲಿನಿಂದ ಆದೇಶ ಬಂದಿದೆ, ಅನಿವಾರ್ಯವಾಗಿ you are compelled to take this decision. ಮಾನ್ಯ ಸೋಮಶೇಖರ್‌ರವರು ಹೃದಯ ಮುಟ್ಟಿಕೊಂಡು, ಈ ಆ್ಯಕ್ಟ್‌ನ ಪರವಾಗಿದ್ದೇನೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಔಪಚಾರಿಕವಾಗಿ ಆ ಕಡೆ ಕುಳಿತಿದ್ದಾರೆ, ಮಂತ್ರಿಯಾಗಿದ್ದಾರೆ. ಆ ಹಿನ್ನೆಲೆಯಲ್ಲಿ ಹೇಳಬಹುದು ಅಷ್ಟೆ. ಆದರೆ ಈ ಕಾನೂನು ತರುವುದಕ್ಕೆ ಅವರಿಗಂತೂ ಎಳ್ಳಷ್ಟು ಮನಸ್ಸಿಲ್ಲ ಎಂದು ಭಾವಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಬಹಳ ಮಂದಿ ಕೃಷಿ ಕುಟುಂಬದಿಂದ ಬಂದಿದ್ದೀರಿ. ಈ ತಿದ್ದುಪಡಿಯನ್ನು ಏಕೆ ತಂದಿರಿ? ಇಷ್ಟೊಂದು ಅನುಕೂಲಕರವಾದ ವಾತಾವರಣ ಇತ್ತು, ಉತ್ತಮ ಫಲಿತಾಂಶ ಕೊಡುತ್ತಿತ್ತು. 2014ರಲ್ಲಿ ನಮ್ಮ ಸರ್ಕಾರ ಇದ್ದಾಗ, ವಿಸ್ತೃತಗೊಳಿಸಿದೆವು. ರೈತರು ತಾವು ಮಾರಾಟ ಮಾಡುವುದಕ್ಕೆ ಹೋದಾಗ ಆ್ಯಕ್ಷನ್ ಆಗುತ್ತದೆ. ಆಗ ರೈತರಿಗೆ ಆ ಬೆಲೆ ಒಪ್ಪಿಗೆ ಆಗದೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದ್ದರೆ, ತಾನೇನು ಆವಕಗಳನ್ನು ಕೊಂಡು ಹೋಗಿರುತ್ತಾನೋ, ಕೃಷಿ ಉತ್ಪನ್ನಗಳನ್ನು ತೆಗೆದುಕೊಂಡು ಹೋಗಿರುತ್ತಾನೋ ಅವುಗಳನ್ನು ಕೊಡದೇ ಇರಬಹುದು. ರೈತರ ಮೇಲೆ ಒತ್ತಡ ಹಾಕಿ ಬೆಳೆಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಎಪಿಎಂಸಿ ಯಲ್ಲಿ ದೊಡ್ಡ ಗೋಡೌನ್‌ಗಳಿರುತ್ತವೆ. ಬೇಡಿಕೆ ಮತ್ತು ಪೂರೈಕೆ ಬಗ್ಗೆ ಮಾನ್ಯ ಸದಸ್ಯರಿಗೆ ಗೊತ್ತಿರುತ್ತದೆ. ಈಗ ಬಹಳಷ್ಟು ಆವಕ ಬಂದಿದೆ. ಮಾನ್ಯ ಸಭಾಪತಿಯವರೇ, ಬಹಳಷ್ಟು ಬೇಡಿಕೆ ಬಂದಾಗ ಡಿಮ್ಯಾಂಡ್ ಕಡಿಮೆ ಆಗುತ್ತದೆ. ಆಗ ರೈತ ತಾನು ತಂದ ಬೆಳೆಯನ್ನು ಗೋಡೌನ್‌ನಲ್ಲಿ pledge ಮಾಡುತ್ತಾನೆ, ಸಾಲ ತೆಗದುಕೊಂಡು ಬರುತ್ತಾನೆ. ಮತ್ತೆ ಯಾವಾಗ ತಾನು ಬೆಳೆದ ಬೆಳೆಗೆ ದರ ಹೆಚ್ಚಾಗುತ್ತದೆಯೋ ಆಗ ಆ ಬೆಳೆಯನ್ನು ಮಾರುತ್ತಾನೆ. ಈಗ ರೈತರು ಎಲ್ಲಿ ಹೋಗುತ್ತಾರೆ? ಎಪಿಎಂಸಿ ಗೆ ಹೋಗುವ ಹಾಗಿಲ್ಲ. ಆದರೆ ನೀವು, Multinational Companies ನಿಮ್ಮ ಮನೆ ಬಾಗಿಲಿಗೆ ಬರುತ್ತದೆ ಎಂದು ರೈತರಿಗೆ ಹೇಳಬಹುದು. ಉತ್ತರ ಕರ್ನಾಟಕದಲ್ಲಿ ಎಪಿಎಂಸಿ ಗಳು ಬಲಿಷ್ಠವಾಗಿವೆ. ಸೆಕ್ಷನ್ 8ನ್ನು ತೆಗೆದು ಹಾಕಿದರೆ ಎಪಿಎಂಸಿಯ ಮಹತ್ವವೇ ಉಳಿಯುವುದಿಲ್ಲ. ರಾಜ್ಯದಲ್ಲಿ ಒಟ್ಟು 162 ಎಪಿಎಂಸಿ, 352 ಸಬ್‌ಯಾರ್ಡ್, ಸಬ್ ಮಾರ್ಕೆಟ್‌ಗಳಿವೆ. ಒಟ್ಟು 514 ಸಂಸ್ಥೆಗಳಿವೆ. 30 ಸಾವಿರ ಟ್ರೇಡರ್ಸ್‌ಗಳಿದ್ದಾರೆ. 15 ಸಾವಿರ ಕಮಿಷನ್ ಏಜೆಂಟ್‌ಗಳಿದ್ದಾರೆ. ವಾರ್ಷಿಕ 40 ಸಾವಿರ ಕೋಟಿ ವಹಿವಾಟು ಆಗುತ್ತದೆ. ಕೆಲವು ಜನ ರೈತರು ಸಾರಿಗೆ ವೆಚ್ಚ ಭರಿಸುವುದಕ್ಕೆ ಆಗುವುದಿಲ್ಲ ಎಂದು ಅಲ್ಲೇ ಮಾರುತ್ತಾರೆ. ಆದರೆ, ಬಹುತರವಾಗಿ ನಮ್ಮ ರೈತ ಸಮುದಾಯದವರಲ್ಲಿ 100ಕ್ಕೆ 70 ರಷ್ಟು ರೈತರು ಎಪಿಎಂಸಿ ಯನ್ನು ಅವಲಂಬಿಸಿದ್ದಾರೆ. ಪ್ರತಿಶತ 70 ರಷ್ಟು ರೈತರು ಎಪಿಎಂಸಿ ಯನ್ನು ಅವಲಂಬಿಸಿದಾಗ, ಈ ಎಪಿಎಂಸಿ ವ್ಯವಸ್ಥೆ ನಿಂತು ಹೋದರೆ ರೈತರ ಗತಿ ಏನು? ಎಪಿಎಂಸಿ ಯಿಂದ ವರ್ಷಕ್ಕೆ ರೂ. 600 ಕೋಟಿ ಆದಾಯ ಇತ್ತು. ಎಪಿಎಂಸಿ ಬಂದ್ ಆದರೆ ಆ ಹಣ ಕೂಡ ಹೋಗುತ್ತದೆ. ಮಾನ್ಯ ತಿಮ್ಮಾಪುರರವರು ಹೇಳಿದ ಹಾಗೆ, ಸುಮಾರು 2 ಲಕ್ಷ ಜನ ಹಮಾಲಿಗಳು ಎಪಿಎಂಸಿ ಯನ್ನು ಅವಲಂಬಿಸಿದ್ದಾರೆ. ಇದು ಬಂದ್ ಆದಮೇಲೆ ಅವರ ಹೆಂಡತಿ-ಮಕ್ಕಳ ಗತಿ ಏನು? 2 ಲಕ್ಷ ಜನರಿಗೆ ಹೇಗೆ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಿ ಕೊಡುತ್ತೀರಿ? ಈ ಕಾಯಿದೆ ಬಂದ ಮೇಲೆ ಎಲ್ಲರೂ ಮಲ್ಟಿ ನ್ಯಾಷನಲ್ ಕಂಪನಿಗೆ ಮಾರಾಟ ಮಾಡಲು ಬೆನ್ನು ಹತ್ತಿ ಹೋದರೆ ಅದರಿಂದ ಮುಂದೆ ಹೇಗೆ ಎಕ್ಸ್‌ಪ್ಲಾಯ್ಟೇಷನ್ ಆಗುತ್ತದೆ ಎನ್ನುವುದನ್ನು ಹೇಳುತ್ತೇನೆ. 2 ಲಕ್ಷ ಹಮಾಲಿಗಳ ಕತೆ ಏನು? ಎಪಿಎಂಸಿ ಬಳಿ ಸುಮಾರು 50 ಸಾವಿರ ಕೋಟಿಗಿಂತ ಹೆಚ್ಚು ಮೌಲ್ಯದ ಆಸ್ತಿ ಇವೆ. ಒಂದೊಂದು ಎಪಿಎಂಸಿ ಗಳು 20 ಎಕರೆಯಿಂದ 200 ಎಕರೆ ವಿಸ್ತಾರ ಹೊಂದಿರುವಂತಹ ಯಾರ್ಡ್‌ಗಳಿವೆ. ಇಷ್ಟೆಲ್ಲಾ enrichment ಇದೆ, ಆಸ್ತಿ ಇದೆ, ಇಷ್ಟೆಲ್ಲಾ ವಹಿವಾಟು ನಡೆಯುತ್ತಿದೆ. ಪ್ರತಿಶತ 70 ರಷ್ಟು ರೈತರು ಎಪಿಎಂಸಿ ಯನ್ನೇನು ಅವಲಂಬಿಸಿದ್ದಾರೋ ಈ ಕಾನೂನು ಬಂದಮೇಲೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರ ಪರಿಸ್ಥಿತಿ ಏನಾಗುತ್ತದೆ ಎಂದು ನೀವು ಯೋಚಿಸಿದ್ದೀರಾ? ಎಪಿಎಂಸಿ ಅಧಿಕಾರಿ, ಸಿಬ್ಬಂದಿ ವೇತನ, ನಿವೃತ್ತಿ ವೇತನ ಇವೆಲ್ಲವನ್ನೂ ರಾಜ್ಯ ಸರ್ಕಾರದಿಂದ ಪಾವತಿ ಮಾಡಬೇಕು ಎಂದು ಹೇಳಲಾಗಿದೆ, ಅಲ್ಲವೇ?

**ಶ್ರೀ ಸಿ.ಎಂ.ಲಿಂಗಪ್ಪ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಹಕಾರ ಮಂತ್ರಿಗಳಲ್ಲಿ ಕೇಳಬಯಸುತ್ತೇನೆ. ಇಷ್ಟೊಂದು ಬೆಲೆ ಬಾಳುವಂತಹ ಆಸ್ತಿಯನ್ನು ಏನು ಮಾಡುವುದು? ಯಾರಿಗೆ ಕೊಡುತ್ತೀರಿ? ಅದನ್ನು ಉಪಯೋಗ ಮಾಡದೇ ಹೋದರೆ ಅವು ನಿಷ್ಪ್ರಯೋಜಕವಾಗುತ್ತವೆ. ಮಾನ್ಯ ಲಕ್ಷ್ಮಣ ಸವದಿಯವರು ಇದರ ಬಗ್ಗೆ ಯೋಚನೆ ಮಾಡಬೇಕು. ಮಾನ್ಯ ಕಾರಜೋಳರವರೂ ಕೂಡ ಯೋಚನೆ ಮಾಡಬೇಕು. ಅಷ್ಟೊಂದು ಆಸ್ತಿಯನ್ನು ಏನು ಮಾಡುತ್ತೀರಿ? ಬಹುಶಃ ನಾನು ಈ ಮಾತುಗಳನ್ನಾಡಿ ನಿಮಗೆ ಸಮಸ್ಯೆ ತಂದಿಟ್ಟೆ ಎಂದೆನಿಸುತ್ತಿದೆ. ಇದಕ್ಕೆ ಉತ್ತರ ಕೊಡಲು ಬಹುಶಃ ನಿಮಗೆ ಕಷ್ಟವಾಗಬಹುದು.

**ಶ್ರೀ ಎಸ್.ಆರ್.ಪಾಟೀಲ್:-** ಅವರಿಗೆ ಏನೂ ಸಮಸ್ಯೆ ಆಗುವುದಿಲ್ಲ ಬಿಡಿ. ಮಾನ್ಯ ಸಭಾಪತಿಯವರೇ, ಈಗಿರುವಂತಹ ಒಳ್ಳೆಯ ವ್ಯವಸ್ಥೆಯನ್ನು ನಾಶ ಮಾಡುವುದು ಸರಿಯೇ? ಎಪಿಎಂಸಿ ಸಂಸ್ಥೆಗಳನ್ನು ನಾಶ ಮಾಡುವುದರಿಂದ ರೈತರ ಬದುಕನ್ನೇ ನಾಶ ಮಾಡಿದ ಹಾಗಾಗುತ್ತದೆ. ರೈತ ಕಷ್ಟಪಟ್ಟು, ಹಗಲು-ರಾತ್ರಿ ಎಂದು ನೋಡದೆ, ನಿದ್ರೆ-ನೀರಡಿಕೆಯನ್ನು ಲೆಕ್ಕಿಸದೆ, ಮಳೆ-ಚಳಿ-ಗಾಳಿ-ಬಿಸಿಲಿಗೆ ಬೆಂದು, ಮಣ್ಣಲ್ಲಿ ಮಣ್ಣಾಗಿ ತಾನು, ತನ್ನ ಹೆಂಡತಿ, ಮಕ್ಕಳೂ ಸಹಿತ ದುಡಿಯುತ್ತಾರೋ ಅದಕ್ಕೆ ಯೋಗ್ಯ ಬೆಲೆ ಸಿಗಬೇಕು ಎನ್ನುವ ಹಿನ್ನೆಲೆಯಲ್ಲಿ ಈ ಎಪಿಎಂಸಿ ಹುಟ್ಟಿದವು.

(ಮುಂದು . . .)

**(1078) 09.12.2020 08.30 ಎಸ್‌ವಿ-ವಿಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ಇದು ಮಧ್ಯವರ್ತಿಗಳ ಪಾಲಾಗಬಾರದು. ರೈತರು ಶ್ರಮ ವಹಿಸಿ ಬೆಳೆದಂತಹ ಉತ್ಪನ್ನಗಳಿಗೆ ಯೋಗ್ಯ ಬೆಲೆ ಸಿಗಲಿ ಎನ್ನುವ ಸದುದ್ದೇಶದಿಂದ ಶತಮಾನಗಳ ಹಿಂದೆಯೇ ಇದರ ಬಗ್ಗೆ ಯೋಚಿಸಿ ಮಾಡಿದ್ದಾರೆ. ಶತಮಾನಗಳ ನಂತರ ನೀವು ಎ.ಪಿ.ಎಂ.ಸಿ. ಗೆ ಕೀಲಿ ಹಾಕುವಂತಹ ವಿಚಾರವನ್ನು ಮಾಡುತ್ತಿದ್ದೀರಿ. ನಿಮ್ಮ ಮನಸ್ಸಾದರೂ ಹೇಗೆ ಒಪ್ಪುತ್ತದೆ ಮಾನ್ಯ ಸೋಮಶೇಖರ್ ಅವರೇ? ನಿಮ್ಮ ಮನಸ್ಸು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಪ್ಪುವುದಿಲ್ಲವೆಂಬುದು ನನಗೆ ಗೊತ್ತಿದೆ. ಆದರೆ ಅದು ನಿಮಗೆ ಅನಿವಾರ್ಯವಾಗಿದೆ. You are compelled, you have no other alternative. You have to go only with the direction given by your Central Leaders. ಬಹಳ ಜನರೊಂದಿಗೆ ನಾನು ಖಾಸಗಿಯಾಗಿ ಮಾತನಾಡಿದಾಗ ಹೇಳಿರುವುದನ್ನು ಇಲ್ಲಿ ಹೇಳುವುದಕ್ಕಾಗುವುದಿಲ್ಲ. It is a privileged communication. ಏನೋ ಒಂದು ನಂಬಿಕೆಯ ಮೇಲೆ, ಸ್ನೇಹದಿಂದ ಹೇಳಿರುತ್ತಾರೆ. ಈ ಎ.ಪಿ.ಎಂ.ಸಿ.ಯಲ್ಲಿ ಸಾಕಷ್ಟು ಸಿಬ್ಬಂದಿ ಇದ್ದಾರೆ. ಅಧಿಕಾರಿಗಳಿದ್ದಾರೆ. ಅವರ ವೇತನ, ನಿವೃತ್ತಿ ಭತ್ಯೆಗಳನ್ನು ಸರ್ಕಾರದಿಂದ ಭರಿಸುತ್ತೇವೆಂದು ನೀವು ಹೇಳಿದ್ದೀರಿ. ಅದೇ ಪ್ರಕಾರ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ಅಧಿಕಾರಿ/ಸಿಬ್ಬಂದಿಗಳ ವೇತನ, ಪಿಂಚಣಿದಾರರ ನಿವೃತ್ತಿ ವೇತನವನ್ನು ಸರ್ಕಾರದಿಂದಲೇ ಕೊಡಬೇಕು. It is a connected matter. ಇವೆಲ್ಲವೂ ನಿಂತುಹೋದವೆಂದರೆ, ಆ ಸಿಬ್ಬಂದಿಯ ಗತಿ ಏನು? ರೈತರ ಗತಿ ಏನು? ಈ ದೇಶದಲ್ಲಿರುವ ಬಹುರಾಷ್ಟ್ರೀಯ ಕಂಪನಿಗಳ ಲಕ್ಷ್ಯ ಕೃಷಿ ಪ್ರಧಾನವಾದ, ಅತ್ಯಂತ ಫಲವತ್ತಾದ ಭಾರತದೇಶದ ಮಣ್ಣಿನ ಮೇಲಿದೆ. ಅಷ್ಟೇ ಅಲ್ಲದೆ, ಅಪಾರವಾದ ಆಹಾರಧಾನ್ಯಗಳನ್ನು ಬೆಳೆಯುವುದರ ಮೇಲೆ ಲಕ್ಷ್ಯವಿಟ್ಟಿದ್ದಾರೆ. ಅವರಿಗೆ ಬೇರೆ ಬೇರೆ ಕಡೆಗಳಲ್ಲಿ ಲಕ್ಷ್ಯವಿದ್ದು, ಅವುಗಳನ್ನು ಈಡೇರಿಸಿಕೊಳ್ಳುತ್ತಿದ್ದಾರೆ. ಬೇರೆ ಬೇರೆ ಕಡೆ ಎಂದರೆ ಹೇಗೆ? ಎಲ್.ಐ.ಸಿ.ಯನ್ನು ತೆಗೆದುಕೊಳ್ಳಲು ಹೊಂಚು ಹಾಕಿದ್ದಾರೆ. ರೈಲ್ವೆಯನ್ನು ಖಾಸಗೀಕರಣಗೊಳಿಸಿ ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಾರೆ. ಬಿ.ಎಸ್.ಎನ್.ಎಲ್.ನ ಸ್ಥಿತಿಯಂತೂ ಮುಗಿಸಿಯೇ ಬಿಟ್ಟಿದ್ದಾರೆ. ತೈಲಕಂಪನಿಗಳಿಗೆ ಕೈ ಹಾಕಿದ್ದಾರೆ. ಅದನ್ನೂ ತೆಗೆದುಕೊಳ್ಳುತ್ತಾರೆ. ಕಲ್ಲಿದ್ದಲು ಗಣಿಗಳು ಖಾಸಗಿಯವರ ಪಾಲಾಗಿವೆ. ವಿಮಾನ ನಿಲ್ದಾಣಗಳು ಹೋಗಿವೆ.

ಇದೀಗ ನಮ್ಮ ಸ್ನೇಹಿತರು ಬಹಳ ಚೆನ್ನಾಗಿ ಹೇಳಿದರು. ನಾನು ಬಾಗಲಕೋಟೆ ಜಿಲ್ಲಾ ಸಹಕಾರಿ ಬ್ಯಾಂಕ್‌ನ ಸಂಸ್ಥಾಪಕ ಅಧ್ಯಕ್ಷನಾಗಿದ್ದು, ಇಲ್ಲಿಯವರೆಗೆ ನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದೇನೆ. ರೈತರು ಒಂದೇ ಒಂದು ರೂಪಾಯಿಯನ್ನು ಸಹಿತ ಬ್ಯಾಂಕ್‌ಗೆ ಮೋಸ ಮಾಡುವುದಿಲ್ಲ. ನೀರವ್ ಮೋದಿ – ರೂ.20,000 ಕೋಟಿ, ಮೆಹುಲ್ ಚೋಕ್ಸಿ – ರೂ.30,000 ಕೋಟಿ, ಯುಬಿ ಕಂಪನಿಯ ಮಲ್ಯ – ರೂ.9,000 ಕೋಟಿ ಹೀಗೆ ಹೇಳುತ್ತಾ ಹೋದರೆ ಎಷ್ಟು ಲಕ್ಷ ಲಕ್ಷ ಕೋಟಿಗಳು ಮೋಸ ಮಾಡಿ ರಾಷ್ಟ್ರೀಕೃತ ಬ್ಯಾಂಕ್‌ಗಳನ್ನು ದಿವಾಳಿ ಎಬ್ಬಿಸಿದ್ದಾರೆ. ಇಂದು ರಿಸರ್ವ್ ಬ್ಯಾಂಕ್‌ನ norms ಅನ್ನು ಮೀರಿ NPA (Non-performing Asset) ಹೆಚ್ಚಾಗಿದೆ. NPA ಹೆಚ್ಚಾಗಿದೆಯೆಂದು ಬ್ಯಾಂಕ್‌ಗಳ ಚಿಟಚಿಟಂಚಿಟಚಿಣುಂಟಿ ಮಾಡುತ್ತಿದ್ದಾರೆ. That is because of this Multinational Company

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

people. ಇದರಲ್ಲಿ ಏನೂ provision ಇಲ್ಲ. ಈಗ ಬಹುರಾಷ್ಟ್ರೀಯ ಕಂಪನಿಗಳ ಧಣಿಗಳು ರೈತರಿಗೆ ಮೋಸ ಮಾಡಿದರೆಂದರೆ, ನಾನು ನ್ಯಾಯಾಲಯಕ್ಕೆ ಹೋಗುವಂತಿಲ್ಲ. ಅವರು ಕೊಡದಿದ್ದರೆ ನಾನು Sub-Divisional Magistrate or Assistant Commissioner ಅನ್ನು ಭೇಟಿಯಾಗಬೇಕು. ಇಲ್ಲವಾದರೆ District Magistrate or Deputy Commissioner ಅವರನ್ನು ನಾನು ಭೇಟಿಯಾಗಬೇಕು. ಇದು ನ್ಯಾಯಾಲಯದ ವ್ಯಾಪ್ತಿಯಲ್ಲಿ ಇಲ್ಲ. ಬಹುರಾಷ್ಟ್ರೀಯ ಕಂಪನಿಗಳು ಜಿಲ್ಲಾಧಿಕಾರಿಗಳನನ್ನು ಖರೀದಿ ಮಾಡುವ ಸಾಮರ್ಥ್ಯ ಇರುವವರು. ಈ ರೀತಿಯ ದೊಡ್ಡ ದೊಡ್ಡ ಕಂಪನಿಗಳು ದೇಶವನ್ನೇ ಖರೀದಿ ಮಾಡಲು ಹೊರಟಿವೆ. ಶ್ರೀ ರಘುರಾಮನ್ ಅವರು ಮಾತನಾಡಿದಂತಹ ಮಾತುಗಳನ್ನು ನಾನು ಇಲ್ಲಿ ಉಲ್ಲೇಖ ಮಾಡಲು ಹೋಗುವುದಿಲ್ಲ. ಮಾಡಿದರೆ ಪುನಃ ನಮ್ಮ ನಿಮ್ಮ ನಡುವೆ ಚರ್ಚೆ, ವಿತಂಡ ವಾದ ಪ್ರಾರಂಭವಾಗುತ್ತದೆ. ರೈತರ ಸಾಲವನ್ನು ಸರ್ಕಾರ ಮನ್ನಾ ಮಾಡಲಿಲ್ಲ. ಡಾ.ಮನಮೋಹನ್ ಸಿಂಗ್ ಅವರು ರೂ.72,000 ಕೋಟಿಗಳನ್ನು ಮನ್ನಾ ಮಾಡಿದರು. ಈಗಿನ ಕೇಂದ್ರ ಸರ್ಕಾರ ಒಂದು ರೂಪಾಯಿಯನ್ನೂ ಮನ್ನಾ ಮಾಡಲಿಲ್ಲ. ಆದರೆ ಬಹುರಾಷ್ಟ್ರೀಯ ಕಂಪನಿಗಳ ಸಾಲವನ್ನು ಮನ್ನಾ ಮಾಡಿದ್ದಾರೆ. ಬಹುರಾಷ್ಟ್ರೀಯ ಕಂಪನಿಗಳ ಧಣಿಗಳಿಗೆ ಅನುಕೂಲವನ್ನು ಮಾಡಿಕೊಡುವ ಸಲುವಾಗಿ ಭೂಮಿ ಮೇಲೆ ಕಣ್ಣು ಬಿತ್ತು. ಅಲ್ಲಿ contract farming ಗೆ allow ಮಾಡಿದರು. ನಾವು 50 million metric tonne ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದೆವು. ಈಗ 285 million metric tonne ವರೆಗೆ ಹೋಗಿದ್ದೇವೆ. ನಾವು ಸ್ವಾವಲಂಬಿಗಳಾಗಿದ್ದೇವೆ. ಇಷ್ಟು ಅಪಾರ ಪ್ರಮಾಣದ ಆಹಾರ ಧಾನ್ಯಗಳ ಮೇಲೆ ಬಹುರಾಷ್ಟ್ರೀಯ ಕಂಪನಿಗಳ ಕಣ್ಣು ಬಿದ್ದಿದೆ.

ಮಾನ್ಯ ಹರಿಪ್ರಸಾದ್ ಅವರು ಹೇಳಿದಂತೆ Essential Commodity Act scrap ಆಗಿ ಹೋಗಿದೆ. ದೊಡ್ಡ ದೊಡ್ಡ ಖರೀದಿದಾರರು ಖರೀದಿಸಿ ತಮ್ಮ godown ಗಳಲ್ಲಿ ಸಂಗ್ರಹಿಸಿ artificial scarcity create ಮಾಡಿ ಬೆಲೆ ಹೆಚ್ಚು ಮಾಡಿ ಮಾರಾಟ ಮಾಡಬಾರದು ಎನ್ನುವ ಉದ್ದೇಶದಿಂದ Essential Commodity Act ಅನ್ನು ತರಲಾಯಿತು. ಆಹಾರ ಧಾನ್ಯಗಳನ್ನು Essential Commodity Act ನಿಂದ ಹೊರಹಾಕಲಾಗಿದೆ. Multinational Companies lakhs of tonne food grains, agricultural produce ಅನ್ನು ಖರೀದಿ ಮಾಡುತ್ತಾರೆ. Perishable goods ಇದ್ದರೆ ಅವರ ಬಳಿ Cold Storage ಇರುತ್ತವೆ. Godown ಸಂಗ್ರಹಿಸಿ, artificial scarcity

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಂಟಾದಾಗ ಗ್ರಾಹಕರಿಗೆ ಅದರ ಹೊಡೆತ ಬೀಳುತ್ತದೆ. ಬೆಳೆಯುವವರು ಶೇ.2 ಇದ್ದರೆ, ಕೊಳ್ಳುವವರು ಶೇ.98 ಇರುತ್ತಾರೆ. ಅವರ ಗತಿಯೇನು?

ಇಂದು ಮಾನ್ಯ ಮರಿತಿಬ್ಬೇಗೌಡರು ಮಾತನಾಡುತ್ತಾ ಬ್ರಿಟಿಷ್ ಎಂದು ಉಲ್ಲೇಖ ಮಾಡಿದರು. ಅವರು 'ಕಂಪನಿ ಸರ್ಕಾರ' ಎಂದು ಹೇಳಬೇಕಿತ್ತು. ಈ ಭಾರತ ದೇಶಕ್ಕೆ ಈಸ್ಟ್ ಇಂಡಿಯಾ ಕಂಪನಿ ಎಂಬ ಹೆಸರಿನಲ್ಲಿ ಒಂದು ಕಂಪನಿ ಬಂದಿತು. ಅವರು ವ್ಯಾಪಾರ ಮಾಡುವ ಉದ್ದೇಶದಿಂದ ಬಂದಿದ್ದರು. ಮುಂದೆ ಅವರು ಇಡೀ ಭಾರತ ದೇಶವನ್ನಷ್ಟೇ ಅಲ್ಲ, ಪ್ರಪಂಚವನ್ನೇ ಕಬಳಿಸಿದರು. ಬ್ರಿಟಿಷರ ಸಾಮ್ರಾಜ್ಯವನ್ನು 'ಸೂರ್ಯ ಮುಳುಗದ ಸಾಮ್ರಾಜ್ಯ' ಎಂದು ಕರೆಯಲಾಗುತ್ತದೆ. ಭಾರತ ದೇಶಕ್ಕೆ ಸಾಂಬಾರು ಪದಾರ್ಥಗಳನ್ನು ಮಾರಲು ಬಂದ ಈಸ್ಟ್ ಇಂಡಿಯಾ ಕಂಪನಿಯವರು ಇಡೀ ಭಾರತ ದೇಶವನ್ನೇ ಅತಿಕ್ರಮಿಸಿ ಮಾಲೀಕರಾದರು. ಬ್ರಿಟಿಷ್ ಸರ್ಕಾರ ಎಂದರೆ, ಅದು ಕಂಪನಿ ಸರ್ಕಾರ.

ಈ Multinational Companies ದೊಡ್ಡ ಮಧ್ಯವರ್ತಿಗಳು. ನಮ್ಮ ಎ.ಪಿ.ಎಂ.ಸಿ.ಗಳಲ್ಲಿ ತೂಕದಲ್ಲಿ ಅವ್ಯವಹಾರವಾಗಬಾರದು, ಪಾರದರ್ಶಕವಾಗಿ ಹರಾಜು ಹಾಕಬೇಕು ಎನ್ನುವ ಕೆಲವು restriction ಗಳು ಇದ್ದವು. 2014ರಲ್ಲಿ ನಮ್ಮ ಸರ್ಕಾರವಿದ್ದಾಗ ನಾವು ಪರಿಚಯಿಸಿದ Electronic System ಅನ್ನು ಕೇಂದ್ರ ಸರ್ಕಾರದವರು ಮೆಚ್ಚಿದ್ದರು. ನಿಜವಾಗಿಯೂ ನೀವು Agricultural Marketing Minister ಆಗಿರುವುದಕ್ಕೆ you should be very proud. ನನಗೆ ಒಮ್ಮೆ ಮಂತ್ರಿಯಾಗುವ ಅವಕಾಶ ಬಂದಾಗ ನನ್ನ ಒಳ್ಳೆಯ ಸ್ನೇಹಿತರಾಗಿದ್ದ ನಿವೃತ್ತ ಮುಖ್ಯ ಕಾರ್ಯದರ್ಶಿ ಶ್ರೀ ಅರವಿಂದ ಜಾಧವ್ ಅವರು ನನಗೆ Agricultural Marketing Minister ಆಗುವಂತೆ ಹೇಳಿದ್ದರು. ಅವರು ಬೇರೇನಾದರೂ ಹೇಳುತ್ತಾರೆಂದು ನಾನು ಭಾವಿಸಿದ್ದೆನು. ಮುಖ್ಯಮಂತ್ರಿಯವರ ಬಳಿ ಮನವಿ ಮಾಡಿಕೊಂಡು if you become an Agricultural Marketing Minister you can help the farmers ಎಂದು ಹೇಳಿದ್ದರು.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಮ್ಮಲ್ಲಿ ನನ್ನದೊಂದು ವಿನಂತಿ. ತಮ್ಮನ್ನೂ ಒಳಗೊಂಡಂತೆ ಇತರ ಎಲ್ಲಾ ಸದಸ್ಯರು ಎಲ್ಲಾ ವಿಷಯಗಳ ಕುರಿತು ಮಾತನಾಡಿದ್ದಾರೆ. ಮಾನ್ಯ ಸಭಾಪತಿಯವರು ಕೂಡ ಕರಾವಳಿ ಪ್ರದೇಶದಿಂದ ಬಂದಿರುವವರು. ಇಲ್ಲಿರುವ ಅನೇಕ ಜನ ಶಾಸಕರು ವಿಶೇಷವಾಗಿ ಕೆಳಮನೆಯ ಶೇ.50ಕ್ಕೂ ಹೆಚ್ಚು ಶಾಸಕರು ಅಡಿಕೆ ಬೆಳೆಗಾರರಾಗಿದ್ದಾರೆ. ನಾನು ಕೂಡ ಅಡಿಕೆ ಬೆಳೆಗಾರ. ದಯಮಾಡಿ ಮಾನ್ಯ ಸಚಿವರು ಗಮನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹರಿಸಬೇಕು. ಸುಮಾರು 12 ಜಿಲ್ಲೆಗಳಲ್ಲಿ ಅಡಿಕೆ ಬೆಳೆಗಾರರು ಇದ್ದಾರೆ. ನಮಗೆ ಇರುವ ಕೋ–ಆಪರೇಟಿವ್ ಸಂಸ್ಥೆ ಎಂದರೆ ಎ.ಪಿ.ಎಂ.ಸಿ. ನಾವು ಸಾವಿರಾರು ಮೂಟೆಗಳನ್ನು ಈಗಾಗಲೇ ಅಲ್ಲಿ ಇಟ್ಟಿದ್ದೇವೆ. ನಮಗೆ ಕೋ–ಆಪರೇಟಿವ್ ಸಂಸ್ಥೆಯಿಂದ ಶೇ.50 ಭಾಗ ಹಣವನ್ನು ತಕ್ಷಣ ಸ್ಥಳದಲ್ಲಿಯೇ ಕೊಟ್ಟುಬಿಡುತ್ತಾರೆ.

**(...ಮುಂದು)**

(1079) 09.12.2020 8.40 ಕೆಜಿ–ಬಿಎನ್‌ಎಸ್ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಎಲ್.ಭೋಜೇಗೌಡ (ಮುಂದು):–**

ಆಮೇಲೆ ಲೆಕ್ಕಾಚಾರ ಮಾಡುವಾಗ ಬೆಲೆ ಬಂದಾಗ ಬಿಟ್ಟರೆ, ಅವರು ಲೆಕ್ಕಚಾರ ಮಾಡಿ ಕೊಡುತ್ತಾರೆ. ನಮಗೆ ಇದರಲ್ಲಿ insecurity ಕಾಣುತ್ತಿದೆ. ಅದಕ್ಕೆ ದಯಮಾಡಿ ತಾವು ಇದನ್ನು cover ಮಾಡಲೇಬೇಕು. ಇದನ್ನು ಹೇಳಲೇಬೇಕು. ಅಡಿಕೆ ಬೆಳೆಯುವ ಲಕ್ಷಾಂತರ ಮಂದಿ ರೈತರು ಇದ್ದಾರೆ. ಜೊತೆಗೆ ಅವರನ್ನು ಅವಲಂಬಿಸಿರುವವರು ಲಕ್ಷಾಂತರ ಮಂದಿ ಇದ್ದಾರೆ. ಅಡಿಕೆಗೆ ಕಳೆದ 20 ವರ್ಷಗಳಿಂದ ಬೆಲೆ ಕಡಿಮೆಯಾಗಿಲ್ಲ. ಇವತ್ತು ಒಂದು ಕ್ವಿಂಟಾಲ್ ಅಡಿಕೆಗೆ ರೂ.42,000/– ಗಳು ಇದೆ. ಪೇಶಾವರಕ್ಕೆ ಒಂದು ಕ್ವಿಂಟಾಲ್ ರೂ.20,000/– ಗಳು ಇದೆ.

ಮಾನ್ಯ ಸಭಾಪತಿಯವರೇ, ಸದನದಲ್ಲಿ ಅಡಿಕೆ ಬೆಳೆಗಾರರ ಬಗ್ಗೆ ನಾಳೆ ಬೆಳಿಗ್ಗೆ ಯಾರು ಮಾತನಾಡಲಿಲ್ಲ ಎನ್ನುವುದು ಬೇಡ. ಆ ಬೆಳೆಗಾರರಿಗೂ ಸಹ ಇದು ಗೊತ್ತಿರಲಿ. ಅಡಿಕೆ ಬೆಳೆಗಾರರು ಸಾಕಷ್ಟು ಜನ ಇದ್ದೇವೆ. ಇದರ ಬಗ್ಗೆ ಯಾರಾದರೂ ಮಾತನಾಡುತ್ತಾರೆನೋ ಎಂದರೆ, ಯಾರು ಸಹ ಮಾತನಾಡಲಿಲ್ಲ. ಈಗ ಅಡಿಕೆ ಬೆಳೆಗಾರರ ಪರಿಸ್ಥಿತಿ ಬಹಳ ಉತ್ತಮವಾಗಿದೆ. ಈ ಉತ್ತಮವಾಗಿರುವಂತಹ ಪರಿಸ್ಥಿತಿಯಲ್ಲಿ ಯಾರಾದರೂ ಅಡಿಕೆಯನ್ನು stock ಮಾಡಿ ಅದನ್ನು ಏನಾದರೂ ಮತ್ತೆ reserve ಮಾಡಿದರೆ ಎಲ್ಲಾ ಅಧೋಗತಿಯಾಗುತ್ತದೆ. ಅದಕ್ಕೆ ಅದರ ಬಗ್ಗೆ ದಯವಿಟ್ಟು ಹೇಳಲೇಬೇಕು. ಮತ್ತೆ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಸಹ ಹೇಳಬೇಕು. ಈ ವಿಚಾರದಲ್ಲಿ ಅಡಿಕೆ ಬೆಳೆಗಾರರಿಗೆ security ಕೊಡಬೇಕು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಸರ್ಕಾರದ ಸ್ವಾಮ್ಯದಲ್ಲಿರುವ ಸಂಸ್ಥೆಗಳನ್ನು ಮಾರಾಟ ಮಾಡುವುದಕ್ಕೆ ಸರ್ಕಾರ ನಡೆಸುತ್ತಾರೆಂದು ನನಗೆ ಅನಿಸುತ್ತದೆ. ಈಗ ಬಿ.ಎಸ್.ಎನ್.ಎಲ್., ಮತ್ತು ಇತರೆ ಅನೇಕ ಕಂಪನಿಗಳ ಬಗ್ಗೆ ಉದಾಹರಣೆ ಕೊಟ್ಟಿದ್ದೇನೆ. Oil

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

company, ಮತ್ತು ಗಣಿ ಕಂಪನಿಗಳು ಸರ್ಕಾರದ ಸ್ವಾಮ್ಯದಲ್ಲಿ ಇರುವಂತಹ ಅತಿ ಪ್ರತಿಷ್ಠಿತವಾದಂತಹ ಸಂಸ್ಥೆಗಳನ್ನು ಬಹು ರಾಷ್ಟ್ರೀಯ ಕಂಪನಿಗಳಿಗೆ ಮಾರಾಟ ಮಾಡಲೆಂದೇ ಸರ್ಕಾರವನ್ನು ನಡೆಸುತ್ತಾರೇನೋ ಎಂಬ ಭಾವನೆ ನನಗೆ ಬರುತ್ತಿದೆ. ಏಕೆ ಬಹು ರಾಷ್ಟ್ರೀಯ ಕಂಪನಿಗಳ ಬಗ್ಗೆ ನನ್ನದೇ ಆದಂತಹ reservation ಇದೆ ಎಂದರೆ, ಬ್ರಿಟಿಷರು ಈ ದೇಶಕ್ಕೆ ಬಂದ ಕೊಡಲೇ ಅವರು ಟೀ ಕಂಪನಿಯನ್ನು ಪ್ರಾರಂಭ ಮಾಡಿದರು. ಇದನ್ನು ಎಲ್ಲಾ ಮಾನ್ಯ ಸದಸ್ಯರುಗಳು ಬಹಳ ಗಮನವಿಟ್ಟು ಕೇಳಿ. ಅವರು ಟೀ ಸೊಪ್ಪನ್ನು ಬೆಳೆದರು. ಅದನ್ನು popular ಮಾಡಬೇಕಾದರೆ, ಒಂದು ಟಾಂಗಾ ಗಾಡಿಯಲ್ಲಿ ಒಂದು ಪಾತ್ರೆ, ನೀರು, ಸಕ್ಕರೆ, ಟೀಸೊಪ್ಪು ಮತ್ತು ಹಾಲನ್ನು ತೆಗೆದುಕೊಂಡು ಮನೆಗಳ ಮುಂದೆ ಬೆಳಗ್ಗೆ 7 ಗಂಟೆಗೆ ಬಂದು, ಆ ಮನೆಯಲ್ಲಿ ಎಷ್ಟು ಜನರು ಇದ್ದಾರೆಂದು ಕೇಳಿ ಎಷ್ಟು ಜನರಿದ್ದರೆ ಅಷ್ಟು ಜನರಿಗೆ ಟೀ ಮಾಡಿಕೊಡುವುದು ಮಾಡಿದರು. ಮತ್ತೆ ಸಂಜೆ 4 ಗಂಟೆಗೆ ಅದೇರೀತಿ ಮನೆಗಳ ಮುಂದೆ ಹೋಗಿ ಟೀ ಮಾಡಿಕೊಟ್ಟು ಬರುವುದು. ಈ ರೀತಿ ಎಲ್ಲರ ಮನೆಗಳ ಬಳಿಗೆ ಹೋಗಿ ಮಾಡಿಕೊಡುತ್ತಿದ್ದರು. ಅದಕ್ಕೆ ಶುಲ್ಕ ಇಲ್ಲ. ಅದನ್ನು ಉಚಿತವಾಗಿ ಮಾಡಿಕೊಡುತ್ತಿದ್ದರು. ಈ ರೀತಿ ನಮ್ಮ ದೇಶದಲ್ಲಿ ಟೀ ಕಂಪನಿಗಳು ಬೆಳೆಯುವುದಕ್ಕೆ ವ್ಯವಸ್ಥೆ ಮಾಡಿದ್ದರು. ಅವರ ಉದ್ದೇಶ ಟೀ ಸೊಪ್ಪನ್ನು popular ಮಾಡುವುದಾಗಿತ್ತು. ಅವರ tactics ಯಾವ ರೀತಿ ಇತ್ತು ಎಂಬುದನ್ನು ನೋಡಿ, ಇದೇ ರೀತಿ ಅನೇಕ ದಿವಸಗಳವರೆಗೆ ಮಾಡಿದರು. ಕೊನೆಗೆ ಒಂದು ದಿವಸ ಇದ್ದಕ್ಕಿದಂತೆ ಮನೆಗಳ ಬಳಿಗೆ ಹೋಗಿ ಟೀ ಮಾಡಿಕೊಡುವುದನ್ನು ನಿಲ್ಲಿಸಿಬಿಟ್ಟರು. ಅಷ್ಟೊತ್ತಿಗೆ ಜನರಿಗೆ ಬೆಳಗ್ಗೆ ಮತ್ತು ಸಂಜೆ ಟೀ ಕುಡಿಯುವುದು addiction ಆಗಿತ್ತು. ಕಂಪನಿಯವರು ಟೀ ಮಾಡಿಕೊಡುವುದಕ್ಕೆ ಬರದಿದ್ದಕ್ಕೆ ಜನರು ಒದ್ದಾಡಿದರು. ಕೆಲವು ಮಂದಿ toilet ಗೆ ಹೋಗಬೇಕೆಂದರೆ, ಟೀ ಕುಡಿದು ಹೋಗುತ್ತಾರೆ. ಆ ರೀತಿಯ ಅಭ್ಯಾಸವನ್ನು ಇಟ್ಟುಕೊಂಡಿರುತ್ತಾರೆ. ನಂತರ ಟೀ ಕಂಪನಿಯವರಿಗೆ ಏಕೆ ಟೀ ಮಾಡಿಕೊಡುವುದನ್ನು ನಿಲ್ಲಿಸಿದ್ದೀರಿ ಎಂದು ಕೇಳಿದಾಗ, ಕಂಪನಿಯವರು ಜನರಿಗೆ ಟೀಗೆ ಬೇಕಾದ ಎಲ್ಲಾ ಸಮಾಗ್ರಿಗಳು ಅಂಗಡಿಯಲ್ಲಿ ಸಿಗುತ್ತವೆ, ಅವುಗಳನ್ನು ಬಳಸಿಕೊಂಡು ಟೀ ಮಾಡಿಕೊಂಡು ಕುಡಿಯುರಿ ಎಂದು ಹೇಳಿದರು. ಆ ರೀತಿ ಆದಾಗ ನಾವು ಅದಕ್ಕೆ addiction ಆಗಿಬಿಡುತ್ತೇವೆ. ಆಗ ಅವರಿಗೆ ದೊಡ್ಡ ಪ್ರಮಾಣದಲ್ಲಿ ವ್ಯಾಪಾರ ನಡೆಯುತ್ತದೆ.

ಮಾನ್ಯ ಸಭಾಪತಿಯವರೇ, Multi National Company ಗಳವರು ಏನು ಮಾಡುತ್ತಾರೆಂದರೆ, ಈಗ ರೈತ ದ್ರಾಕ್ಷಿ ಬೆಳೆಯನ್ನು ಬೆಳೆದಿರುತ್ತಾನೆ. ಆ ಹಣ್ಣು ಒಂದು ಕೆ.ಜಿ. ಮಾರುಕಟ್ಟೆಯಲ್ಲಿ 10 ರೂಪಾಯಿ ಇದ್ದರೆ, ಇವರು ಅದೇ ಹಣ್ಣಿಗೆ ಒಂದು ಕೆ.ಜಿ.ಗೆ 15 ರೂಪಾಯಿಗಳನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುತ್ತಾರೆ. ಅವರು ಪ್ರಾರಂಭದಲ್ಲಿ ಹಿಂದುಮುಂದು ನೋಡುವುದೇ ಇಲ್ಲ. ಮಾನ್ಯ ಸಭಾನಾಯಕರು ಇದನ್ನು ಗಂಭೀರವಾಗಿ ಕೇಳಬೇಕು. ಇದು ಬಹಳ ಮುಖ್ಯವಾಗಿದೆ. ನಮ್ಮ ದೇಶದ ಮತ್ತು ನಮ್ಮ ರೈತರ ಸ್ಥಿತಿಗತಿ ಏನಾಗುತ್ತದೆ ಎಂಬುದರ ಬಗ್ಗೆ ಹೇಳುತ್ತಿದ್ದೇನೆ. ಮಾನ್ಯ ಸಭಾನಾಯಕರು ನಮ್ಮ ಎದುರುಗಡೆಯೇ ಇರಬೇಕು. ಈ Multi National Company ಗೆ ಮತ್ತೊಬ್ಬ ಖರೀದಿದಾರರು ಬಂದರೆ, ಪೈಪೋಟಿ ಆಗುತ್ತದೆ ಎಂದು ಇವರು ಹೇಳುತ್ತಾರೆ ಅಲ್ಲವೇ; Multi National Company ಯವರು ಏನು ಮಾಡುತ್ತಾರೆಂದರೆ, ತಮ್ಮ ಪರವಾಗಿ representative ಗಳನ್ನು ಕಳುಹಿಸುತ್ತಾರೆ. ನಾವು ದ್ರಾಕ್ಷಿ, ಜೋಳ, ರಾಗಿ, ಹತ್ತಿ ಬೆಳೆಗಳನ್ನು ಬೆಳೆದಿರುತ್ತೇವೆ. ಅವರು market rate ಗಿಂತ ಸ್ವಲ್ಪ ಹೆಚ್ಚು ಬೆಲೆಯನ್ನು ಕೊಡುತ್ತಾರೆ. ಆಗ ನಾವು ಅದರ ಬಗ್ಗೆ tempt ಆಗುತ್ತೇವೆ. ಆಗ ನಾವು transportation cost ಉಳಿಯುತ್ತದೆ ಎಂದು ನಮ್ಮ ಫಾರ್ಮ್ ಲ್ಯಾಂಡ್‌ನಿಂದಲೇ ಮಾರಾಟ ಮಾಡುತ್ತೇವೆ. ಎ.ಪಿ.ಎಂ.ಸಿ., ಸಮೀಪ ಯಾರು ಸಹ ಹೋಗುವುದಿಲ್ಲ. ಎ.ಪಿ.ಎಂ.ಸಿ.,ಗೆ ಬೀಗ ಹಾಕಿಬಿಡುತ್ತಾರೆ. Multi National Company ಗಳವರು intellectual people. ಅವರು ಬಹಳ ಜಾಣರು. ಅವರು ನಮ್ಮ ರೀತಿ social service ಮಾಡುವುದಕ್ಕೆ ಇದ್ದಾರೆಯೇ? ನಮ್ಮ ದೇಶಕ್ಕೆ East India Company ಯವರು ವ್ಯಾಪಾರ ಮಾಡುತ್ತೇವೆಂದು ಬಂದು ನಮ್ಮ ನಮ್ಮ ನಮ್ಮಲ್ಲಿಯೇ ಜಗಳ ತಂದಿಟ್ಟು ನಮ್ಮ ದೇಶವನ್ನೇ ಕಬಳಿಸಿದರು. Multi National Company ಗಳನ್ನು ಎ.ಪಿ.ಎಂ.ಸಿ.,ಗೆ ತಂದಿದ್ದೇವೆಂದು ಹೇಳುತ್ತಾರೆ ಅಲ್ಲವೇ; ನಾವು ಎ.ಪಿ.ಎಂ.ಸಿ.,ಯನ್ನು ಮುಟ್ಟಿಲ್ಲವೆಂದು ಹೇಳುತ್ತಾರೆ, amendment to Sections 8 and 117 of the APMC Act ಎಂದು ಹೇಳುತ್ತಾರೆ. ಆದರೆ, Multi National Company ಗಳನ್ನು allow ಮಾಡಿದರೆ, ಇವರು ಹೆಗ್ಗಣಗಳು ಇದ್ದಂತೆ. ಈಗ ಉದಾರಣೆಗೆ ನಾನು ಒಬ್ಬ ರೈತ. Multi National Company ಗಳವರು ನಮ್ಮ ಮನೆ ಬಾಗಿಲಿಗೆ ಬಂದು ಒಂದು ಕೆಜಿ ರೂ.50 ರೂಪಾಯಿ ಇರುವುದಕ್ಕೆ 70 ರೂಪಾಯಿ ಬೆಲೆಯನ್ನು ಕೊಡುತ್ತಾರೆ. ಆಗ ರೈತರು tempt ಆಗುತ್ತಾರೆ. ಇದೇ ರೀತಿ 3 ರಿಂದ 4 ವರ್ಷಗಳ ಕಾಲ ಮಾಡುತ್ತಾರೆ. ಎ.ಪಿ.ಎಂ.ಸಿ.,ಗೆ ಬೀಗ ಹಾಕಿದ ಮೇಲೆ ರೈತರು ಎಲ್ಲಿಗೂ ಹೋಗುವುದಕ್ಕೆ ಸಾಧ್ಯವಿಲ್ಲ. ಟೀ ಕಂಪನಿಯವರು ಯಾವ ರೀತಿ ಮಾಡಿದರೋ, ಆ ರೀತಿ ಇವರು ಮಾಡುತ್ತಾರೆ. ಆಗ ರೈತರು ಎಲ್ಲಿ ಇವರು ಬರಲೇ ಇಲ್ಲವಲ್ಲ, ಬೆಳೆದು ನಿಂತ ಬೆಳೆ ಇದೆ, ಇವರು ಬರಲಿಲ್ಲವೆಂದರೆ ನಷ್ಟವಾಗುತ್ತದೆಂದು ಒದ್ದಾಡಬೇಕಾಗುತ್ತದೆ. ಆಮೇಲೆ ಅವರು ಒಂದು fine

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

morning ಬರುತ್ತಾರೆ. ಅವರು ಬಂದು ಒಂದು ಕೆ.ಜಿ. ದ್ರಾಕ್ಷಿ ಹಣ್ಣಿಗೆ ರೂ.50 ರೂಪಾಯಿ ಬೆಲೆ ಇದ್ದರೆ, ಆಗ ಅವರು ರೂ.20 ರೂಪಾಯಿಗಳು ಕೊಡುತ್ತೇವೆಂದು ಹೇಳುತ್ತಾರೆ. ಆ ಸಂದರ್ಭದಲ್ಲಿ ರೈತರು ಕೊಡಲಿಲ್ಲವೆಂದರೆ, ದ್ರಾಕ್ಷಿ ಕೊಳೆತು ಹಾಳಾಗಿ ಹೋಗುತ್ತದೆ. ಆಗ ನಾವು ಅವರಿಗೆ ಮೊದಲು ಅಷ್ಟು ಬೆಲೆ ಕೊಟ್ಟಿದ್ದೀರಿ, ಈಗೆ ಏಕೆ ಕಡಿಮೆ ಎಂದು ಕೇಳಿದರೆ, ಆಗ ಬೆಲೆ ಇತ್ತು ಕೊಟ್ಟಿದ್ದೇವೆ, ಈಗ ಬೆಲೆ ಇಲ್ಲ, ಅದಕ್ಕೆ ಎಂದು ಹೇಳುತ್ತಾರೆ. ಏಕೆಂದರೆ, ಒಕ್ಕಲುತನ ಇಲ್ಲವೆಂದರೆ, ನಡೆಯುವುದಿಲ್ಲ. ಈ ತಿದ್ದುಪಡಿಯಿಂದ ಎ.ಪಿ.ಎಂ.ಸಿ., ಗಳಿಗೆ ಬೀಗ ಹಾಕಿಸಿಬಿಡುತ್ತಾರೆ. ಆಗ ಎ.ಪಿ.ಎಂ.ಸಿ.. ಗಳು ಇರುವುದಿಲ್ಲ. ಆಗ Multi National Company ಗಳು ಮಾತ್ರ purchaser ಆಗಿರುತ್ತಾರೆ. ರೈತರಿಗೆ ಇದು ಎಂತಹ ದುರಂತ ನೋಡಿ. ಮುಂದಿನ ದಿವಸಗಳಲ್ಲಿ ನಮ್ಮ ರಾಜಕೀಯ ಪಕ್ಷಗಳು ಇರುವುದಿಲ್ಲ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಪಟ್ಟಂತೆ ಒಂದು ವಿಷಯವನ್ನು ಹೇಳುತ್ತೇನೆ. ಇತ್ತೀಚೆಗೆ ಒಂದು Jio SIM ಬಂತು. ಅದನ್ನು ಮೊದಲು ಮೂರು ತಿಂಗಳ ಕಾಲ ಉಚಿತವಾಗಿ ಕೊಟ್ಟರು. ಮತ್ತೆ broad band ಎಲ್ಲ ಉಚಿತ ಎಂದು ಹೇಳಿದ್ದರು. ಮೂರು ತಿಂಗಳು ಕಳೆದ ನಂತರ charge ಮಾಡುವುದಕ್ಕೆ ಪ್ರಾರಂಭ ಮಾಡಿದರು. ಆಗ ಬಿ.ಎಸ್.ಎನ್.ಎಲ್., ನಿಂದ ಎಲ್ಲ subscribers Jio ಗೆ shift ಆಗಿಬಿಟ್ಟರು. ಈಗ ಬಿ.ಎಸ್.ಎನ್.ಎಲ್., ಮುಗಿದು ಹೋಯಿತು. ಈಗ Jio ರವರು ಸ್ವಲ್ಪ ಸ್ವಲ್ಪ ಬೆಲೆಗಳನ್ನು ಹೆಚ್ಚಿಗೆ ಮಾಡಿಕೊಂಡು ಹೋಗುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇವತ್ತಿನ ಪ್ರಚಲಿತ ಘಟನೆಗಳನ್ನು ಹೇಳಿದ್ದಾರೆ. ನಾನು 300 ವರ್ಷಗಳ ಹಿಂದಿನ East India Company ಯ ಕಥೆಯನ್ನು ಹೇಳಿದ್ದೇನೆ. Jio SIM free ಎಂದು ಹೇಳಿದರು. ಅವರು ಹೇಳಿದ್ದೆ ತಡ ಎಲ್ಲ ಕಡೆಯೂ Jio SIM ಗಳನ್ನು ತೆಗೆದುಕೊಂಡು ಬಿಟ್ಟರು. ಬೆಂಗಳೂರಿನಲ್ಲಿ ಭಿಕ್ಷುಕರು ಸಹ Jio SIM ಗಳನ್ನು ತೆಗೆದುಕೊಂಡಿದ್ದಾರೆ. ಏಕೆಂದರೆ, beggary is banned. ಭಿಕ್ಷಾಟನೆ offense ಎಂದು ಹೇಳಿದ್ದಾರೆ. ಒಂದು ಏರಿಯಾಕ್ಕೆ ಪೊಲೀಸರು ಬಂದರೆ, ಇನ್ನೊಂದು ಏರಿಯಾದಲ್ಲಿ ಭಿಕ್ಷೆ ಬೇಡುವವರಿಗೆ ಫೋನ್ ಮಾಡಿ ತಿಳಿಸುತ್ತಾರೆ. ಇವು ನಮ್ಮ ರೈತರ ಜ್ವಲಂತ ಸಮಸ್ಯೆಗಳು. ಇವು ಮುಂದೆ ಏನಾಗುತ್ತವೆ ಎಂದು ಹೇಳುತ್ತಿದ್ದೇನೆ. ನಾನು East India Company ಯಿಂದ ಹಿಡಿದು Jio SIM ವರೆಗೂ ಹೇಳುತ್ತಿದ್ದೇನೆ. ಇಲ್ಲಿ ಏನಾಗುತ್ತದೆ ಎಂದರೆ, ಸುಮಾರು ಅಂದರೆ 2/3 ವರ್ಷಗಳ ಕಾಲ ನಮ್ಮ ಕೃಷಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ಪನ್ನಗಳಿಗೆ ಹೆಚ್ಚು ಬೆಲೆ ಕೊಡುತ್ತಾರೆ. ಆಗ ರೈತರು ಅವರ ಕಡೆಗೆ ಹೋಗುತ್ತಾರೆ. ಒಬ್ಬರು ಸಹ ಎ.ಪಿ.ಎಂ.ಸಿ., ಕಡೆಗೆ ಬರುವುದಿಲ್ಲ. ಆಗ ಎ.ಪಿ.ಎಂ.ಸಿ.,ಗೆ ಬೀಗ ಹಾಕುತ್ತಾರೆ. ಆಗ ಎ.ಪಿ.ಎಂ.ಸಿ.,ಯಲ್ಲಿ ನೌಕರಿ ಮಾಡುವವರ ಪರಿಸ್ಥಿತಿ ಸಹ ಚಿಂತಾಜನಕವಾಗುತ್ತದೆ. ಎ.ಪಿ.ಎಂ.ಸಿ.,ಗಳ ಕೋಟಿಗಟ್ಟಲೇ ಆಸ್ತಿಯೂ ಸಹ ದಿವಾಳಿಯಾಗುತ್ತದೆ. Multi National Company ಗಳಿಗೆ private market ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. They can create a market. Market ಅನ್ನು ಅವರೇ create ಮಾಡುತ್ತಾರೆ. ಅವರು ಇಲ್ಲಿ ಕಡಿಮೆ ಬೆಲೆಗೆ ತಂದು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಾರೆ. East India Company ಯವರು ಭಾರತದಲ್ಲಿ ಅತಿಕ್ರಮಣ ಮಾಡಿ ಮಾಲೀಕರಾದರು. ಅದೇ ರೀತಿ ಮುಂದಿನ ದಿವಸಗಳಲ್ಲಿ ನಮ್ಮ ರಾಜಕೀಯ ಪಕ್ಷಗಳು ಇರುವುದಿಲ್ಲವೆಂದು ಇದರಿಂದ ನನಗೆ ಅನಿಸುತ್ತದೆ. ಅವರುಗಳು ನಮ್ಮ ಭೂಮಿಯನ್ನು ಕಬಳಿಸಿದರು. ಈಗ ನಾವು ಬೆಳೆದಂತಹ ಮಾಲುಗಳನ್ನು ಕಬಳಿಸುವುದಕ್ಕೆ ಪ್ರಾರಂಭ ಮಾಡಿದ್ದಾರೆ.

**(ಮುಂದು. . .)**

(1080)09-12-2020(8-50)ಎಂವಿ-ಬಿಎನ್ಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ಎಲ್ಲಾ ಸರ್ಕಾರಿ ಸ್ವಾಯತ್ತದಲ್ಲಿರುವಂತಹ ಪ್ರತಿಷ್ಠಿತ ಸಂಸ್ಥೆಗಳನ್ನು ಖರೀದಿ ಮಾಡಿದ್ದಾರೆ. ಇನ್ನು ಖರೀದಿ ಮಾಡುವುದು ಏನೂ ಉಳಿದಿಲ್ಲ. ಆಮೇಲೆ political power ಅನ್ನು ತೆಗೆದುಕೊಂಡು, ಹೇಗೆ ಈಸ್ಟ್ ಇಂಡಿಯಾ ಕಂಪನಿ ಈ ದೇಶದ ಮಾಲೀಕರಾಗಿದ್ದರು ಹಾಗೆ ಬಹುರಾಷ್ಟ್ರೀಯ ಕಂಪನಿಯವರು ಈ ದೇಶದ ಮಾಲೀಕರಾಗುತ್ತಾರೆ. ಇವತ್ತು ಏನು ಅವರ ಪರವಾಗಿ ಬಾಲ ಬಡೆಯುತ್ತಾರೆ ಮತ್ತು ಶ್ರೀ ಆದಾನಿ ಮತ್ತು ಶ್ರೀ ಮುಕೇಶ್ ಅಂಬಾನಿ ಅಂತಹ ದೊಡ್ಡ ದೊಡ್ಡ bigwigs ಏನಿದ್ದಾರೆ, ಅವರ ಪರವಾಗಿ ಇವರು ಹೇಳುತ್ತಾರೆ ಅವರು ಬ್ಯಾಟಿಂಗ್ ಮಾಡುತ್ತಿದ್ದಾರೆ. ಈ ಎಲ್ಲಾ ಸಂಸ್ಥೆಗಳನ್ನು ಅವರ ಕೈಗೆ ತೆಗೆದುಕೊಂಡು, ಮುಂದೆ ಅವರು ದಿಲ್ಲಿ ಸಿಂಹಾಸನದ ಮೇಲೆ ಕುಳಿತರೂ ಸಹ ಆಶ್ಚರ್ಯವಿಲ್ಲ. ಮುಂದಿನ ದಿನಗಳಲ್ಲಿ ಇದು ಎಲ್ಲಿಗೆ ಹೋಗುತ್ತದೆ ಎಂದರೆ, ಆಗ ರಾಜಕೀಯ ಪಕ್ಷಗಳು ಇರುವುದೇ ಇಲ್ಲ. ಅವರು ಎಲ್ಲವನ್ನು ಸಹ ತೆಗೆದುಕೊಂಡು ಬಿಟ್ಟಿರುತ್ತಾರೆ. ಈಸ್ಟ್ ಇಂಡಿಯಾ ಕಂಪನಿಯವರು ಹೇಗೆ ಮಾಡಿದರು ಹಾಗೆ ಬಹುರಾಷ್ಟ್ರೀಯ ಕಂಪನಿಯವರು ಈ ದೇಶದ ಮೇಲೆ ಹಿಡಿತ ಸಾಧಿಸುತ್ತಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರು political power ಅನ್ನು ಸಹ ಸಾಧಿಸುತ್ತಾರೆಂದು ನನಗೆ ಸಂಶಯ ಬರುವುದರಲ್ಲಿ ಏನು ಆಶ್ಚರ್ಯವಿಲ್ಲ. ಇವತ್ತು ಯಾರಿಗೋ ಸ್ವಲ್ಪ ಸಹಾಯ ಮಾಡೋಣ ಮತ್ತು ಬಹುರಾಷ್ಟ್ರೀಯ ಕಂಪನಿಯಿಂದ ಚುನಾವಣೆ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಇಂತಹ ವಿಧೇಯಕಗಳನ್ನು ಜಾರಿಗೆ ತಂದರೆ ಇದು ಎಲ್ಲಿಗೆ ಹೋಗಿ ಮುಟ್ಟುತ್ತದೆ ಎಂದರೆ, ದೆಹಲಿಯ ಕೆಂಪುಕೋಟೆಯ ಮೇಲೆ ಧ್ವಜ ಹಾರಿಸುವ ಹಂತಕ್ಕೆ ಹೋದರು ಸಹ ಆಶ್ಚರ್ಯವಿಲ್ಲ. ಆದುದರಿಂದ ಸನ್ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುತ್ತೇನೆ. ಇದು ಇಡೀ ರೈತ ಸಮುದಾಯವನ್ನು ಮುಗಿಸುವಂತಹ ಒಂದು ವಿಧೇಯಕ. ಪಾಪ ರೈತರು ಶಾಪ ಹಾಕಿದರೆ ಸರ್ಕಾರ ಮತ್ತು ಈ ವಿಧೇಯಕ ತಂದವರಿಗೆ ಖಂಡಿತವಾಗಿ ರೈತರ ಶಾಪ ತಟ್ಟುತ್ತದೆ. ಈ ಮಾತನ್ನು ಬಹಳ ನೋವಿನಿಂದ ಮತ್ತು ರೈತನಾಗಿ ಹೇಳುತ್ತಿದ್ದೇನೆ. ದಯಮಾಡಿ ಮೇಲಿನವರಿಗೆ ಈ ವಿಧೇಯಕದ ಬಗ್ಗೆ ಹೇಗೆ convince ಮಾಡುತ್ತೀರೋ ಮಾಡಿ. Please convince them. ಕನಿಷ್ಠ ಪಕ್ಷ ನಮ್ಮ ರಾಜ್ಯವಾದರೂ ಉಳಿಯಲಿ. ನಮ್ಮ ರಾಜ್ಯದ ರೈತರ ರಕ್ಷಣೆಯಾಗಲಿ. ನಮ್ಮ ರಾಜ್ಯದ ರೈತರು exploitation ನಿಂದ ತಪ್ಪಿಸಿಕೊಳ್ಳಲಿ. ನನಗೆ ಅನಿಸಿರುವ ಮಟ್ಟಿಗೆ ಎಂದರೆ, ಈಗ ಇಂದೇ ಒಂದು profession ಅಂದರೆ ಅದು agricultural profession, honest profession. ನಾನು ಕೃಷಿ ಒಂದರಲ್ಲೇ ಪ್ರಾಮಾಣಿಕತೆ ಇದೆ ಎಂದು ಭಾವಿಸಿದ್ದೇನೆ. ಈ ದೇಶಕ್ಕೆ ಅನ್ನ ಹಾಕುವ ಧಣಿಗಳ ಭವಿಷ್ಯತ್ತಿನ ಪ್ರಶ್ನೆ ಇದೆ. ನಮ್ಮ ರಾಜ್ಯದ ಅನ್ನದಾತರ ಪ್ರಶ್ನೆ ಇರುವುದರಿಂದ, it is a black Bill. ನಾನು ಇದನ್ನು ಮರಣ ಶಾಸನ ಎಂದು ಭಾವಿಸುತ್ತೇನೆ. ನಮ್ಮ ರೈತರು ಕಷ್ಟಪಟ್ಟು ವರ್ಷವಿಡಿ 12 ತಿಂಗಳು ಮಳೆ, ಚಳಿ, ಬಿಸಿಲು, ಗಾಳಿ ಎನ್ನದೆ ಮತ್ತು ಅವರ ಹೆಂಡತಿ, ಮಕ್ಕಳು ಮತ್ತು ಎಲ್ಲರೂ ಕೂಡಿ ಮಣ್ಣಲ್ಲಿ ಮಣ್ಣಾಗಿ ದುಡಿಮೆ ಮಾಡಿದಂತಹ ಉತ್ಪಾದನೆಗಳನ್ನು ಈ ಬಹುರಾಷ್ಟ್ರೀಯ ಕಂಪನಿಗಳು ಇದನ್ನು ಕಬಳಿಸುವಂತಹ ಕಂಪನಿಗಳು. ಇವುಗಳು ಶ್ರೀ ಆದಾನಿ ಮತ್ತು ಶ್ರೀ ಮುಕೇಶ್ ಅಂಬಾನಿಯವರ ಪಾಲಾಗಿ ಇಡೀ ರೈತ ಸಮುದಾಯ ಸರ್ವನಾಶವಾಗುವಂತಹ ಮಟ್ಟಕ್ಕೆ ಹೋಗಬಾರದು ಎಂದು ಹೇಳಿ, ಈ ವಿಧೇಯಕವನ್ನು withdraw ಮಾಡಿಕೊಳ್ಳಲಿ ಎಂದು ಮಾನ್ಯ ಸಭಾಪತಿಯವರ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ. ಆಯಿತು ಈ ವಿಧೇಯಕವನ್ನು withdraw ಮಾಡುವುದಕ್ಕೆ ಬಹಳ pressure ಇದ್ದರೆ, ಇದನ್ನು ಒಂದು select Committee ಗೆ refer ಮಾಡಲಿ. ಏಕೆಂದರೆ, ಇದರ ಬಗ್ಗೆ ಇನ್ನಷ್ಟು ಚಿಂತನ ಮಂಥನವಾಗಲಿ. ನಾನು ವಿರೋಧ ಪಕ್ಷದ ನಾಯಕನಾಗಿ ಈ ವಿಧೇಯಕಕ್ಕೆ ವಿರುದ್ಧವಾಗಿ ಏನೋ ಮಾತನಾಡಬೇಕೆಂದು ಮಾತನಾಡುವುದಿಲ್ಲ. ಒಬ್ಬ ಕೃಷಿಕನಾಗಿ ಮತ್ತು ಕೃಷಿ

ಕುಟುಂಬದಿಂದ ಬಂದಂತಹ ಪಕ್ಕ ರೈತನಾಗಿ ಹೇಳುತ್ತಿದ್ದೇನೆ. ಇದು ನೂರಕ್ಕೆ ನೂರರಷ್ಟು ನಮ್ಮ ರೈತರನ್ನು ಸಂಪೂರ್ಣವಾಗಿ ನಾಶ ಮಾಡುವಂತಹ ವಿಧೇಯಕ. ಮುಂದೆ ಅವರ ಭವಿಷ್ಯ ಕರಾಳವಾದಂತಹ ಭವಿಷ್ಯವಾಗುತ್ತದೆ. ಅಷ್ಟೆ ಅಲ್ಲದೆ ಇಡೀ ನಮ್ಮ ರಾಜ್ಯದ ರೈತರ ಶವಪೆಟ್ಟಿಗೆಗೆ ಒಂದು ಕೊನೆ ಮೊಳೆ ಹೊಡೆಯುವಂತಹ ಕೆಟ್ಟ ಕೆಲಸಕ್ಕೆ ಕೈ ಹಾಕಬಾರದು ಎಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಏಕೆಂದರೆ, he happened to be my close and good friend. I am his well- wisher and he is also my well-wisher. No doubt. I will tell straight away. But, political ideology ಬಂದಾಗ, ಚುನಾವಣೆ ಬಂದಾಗ ಅವರ ಚೆಡ್ಡಿ ಅವರ ಹಿಂಬಾಲ, ನಮ್ಮ ಚೆಡ್ಡಿ ನಮ್ಮ ಹಿಂಬಾಲ. ಆದರೆ ಅದು ಬೇರೆ. ದಯಮಾಡಿ ಸಚಿವರೆ, ಶ್ರೀ ಅರವಿಂದ ಜಾಧವ್ ಅವರು (interruption) ನೀವು ಮಾರ್ಕೆಟಿಂಗ್ ಮಿನಿಸ್ಟರ್ ಆಗಿ ಎಂದು ಹೇಳಿದರು. ಆದರೆ, ರೈತರಿಗೆ ಸೇವೆ ಮಾಡುವಂತಹ ಸದಾವಕಾಶ ಮತ್ತು ಸುವರ್ಣಾವಕಾಶ ಮಾನ್ಯ ಸಚಿವರಿಗೆ ದೊರೆತಿದೆ. ದಯಮಾಡಿ ಅವರು ಅದನ್ನು ಸದುಪಯೋಗಪಡಿಸಿಕೊಂಡು ಈ ವಿಧೇಯಕವನ್ನು withdraw ಮಾಡಿಕೊಳ್ಳಲಿ. ಇಲ್ಲವೆ ಇದನ್ನು ಒಂದು select Committee ಗೆ refer ಮಾಡಲಿ. Let us put together. ಅಲ್ಲಿ ನಾವು, ನೀವು ಮತ್ತು ಎಲ್ಲಾ ರಾಜಕೀಯ ಪಕ್ಷದ ಸದಸ್ಯರು select Committee ಯಲ್ಲಿ ಇರುತ್ತಾರೆ. ಈ ವಿಧೇಯಕದ ಬಗ್ಗೆ ಚಿಂತನೆ ಮಾಡೋಣ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದನ್ನು ರಾತ್ರಿ ಮನೆಗೆ ಹೋಗಿ ಯೋಚನೆ ಮಾಡಲು ಬಿಡಿ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಇವತ್ತು ಭಾರತ ದೇಶದ ಬಜೆಟ್ ಮೂವತ್ತು ಲಕ್ಷ ನಲವತ್ತು ಮೂರು ಸಾವಿರ ಕೋಟಿ ರೂಪಾಯಿ. ಕೇವಲ Reliance ನ valuation ಇವತ್ತು ಹದಿನೈದು ಲಕ್ಷ ಕೋಟಿ. ಅವರು ಎಷ್ಟು ಹತ್ತಿರ ಬಂದಿದ್ದಾರೆ ನೋಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇವರು ರಿಲಾಯನ್ಸ್ ಕಂಪನಿಯವರ ಪರವಾಗಿ ಇದ್ದಾರೆ ಮತ್ತೆ ಅವರು ಹೇಳಿದಂತೆ ಇವರು ಕೇಳುತ್ತಿದ್ದಾರೆ. ಮತ್ತೆ ರಿಲಾಯನ್ಸ್ ಕಂಪನಿ ಬೆಳೆದುಕೊಂಡು ಹೋಗುತ್ತದೆ. ಇದರಿಂದ ಶ್ರೀ ಆದಾನಿ ಮತ್ತು ಶ್ರೀ ಮುಕೇಶ್ ಅಂಬಾನಿ ಬೆಳೆದುಕೊಂಡು ಹೋಗುತ್ತಾರೆ. ಅವರು ಇವರ ಬುಡಕ್ಕೆ ನೀರು ಬಿಡುತ್ತಾರೆ. ಅದು ಬಹಳ ದಿವಸ ಹೋಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದನ್ನು ಮುಂದಿನ ಜನಾಂಗ ನೋಡುವುದಿಲ್ಲ. ಈಗಲೇ ಅದು ನಮ್ಮ ಕಣ್ಣೆದುರಿಗೆ ಆಗುತ್ತದೆ. ದಯಮಾಡಿ ಮಾನ್ಯ ಸಚಿವರ ಕೈಯಿಂದ ಇಂತಹ ಕೆಟ್ಟ ಕೆಲಸ ಆಗಬಾರದು. Especially, I am requesting the Minister. ವ್ಯಕ್ತಿಗತವಾಗಿ ಬಹಳಷ್ಟು ಸಂದರ್ಭಗಳಲ್ಲಿ ಮತ್ತು ಸಭೆಗಳಲ್ಲಿ ಹೇಳಿದ್ದೇನೆ. ದಯಮಾಡಿ ರೈತರನ್ನು ಕೊಲ್ಲುವಂತಹ ಹುಚ್ಚು ಸಾಹಸಕ್ಕೆ ಹೋಗುವುದು ಬೇಡ. ದಯಮಾಡಿ ಈ ವಿಧೇಯಕವನ್ನು withdraw ಮಾಡಲಿ, otherwise, you refer it to the select Committee. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಬಹುತರವಾಗಿ ಈ ಸರ್ಕಾರಕ್ಕೆ ಹೃದಯ ಮತ್ತು ಪಂಚೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ಬಾಯಿ ಮತ್ತು ಚರ್ಮ ಇದೆ ಎಂದು ತಿಳಿದುಕೊಂಡಿದ್ದೇನೆ. ಆದರೆ, ಪಂಚೇಂದ್ರಿಯಗಳು ಇಲ್ಲವೆಂದರೆ, ಅವರು ಏನು ಮಾಡುತ್ತಾರೆ ಮಾಡಿಕೊಳ್ಳಲಿ. ಅವರಿಗೆ ಆ ಭಗವಂತ ಶಿಕ್ಷೆಯನ್ನು ಕೊಟ್ಟೇ ಕೊಡುತ್ತಾನೆ. ಅವರ ಶಾಪ ಇವರಿಗೆ ತಟ್ಟೇ ತಟ್ಟುತ್ತದೆ.

**ಶ್ರೀ ಗೋವಿಂದ ಎಂ. ಕಾರಜೋಳ (ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ):–** ಮಾನ್ಯ ಸಭಾಪತಿಯವರೇ, ನಾನು ಏನು ಮಾತನಾಡುವಂಥದ್ದು ಇರಲಿಲ್ಲ ಮತ್ತೆ ಅವರ್ಯಾರಿಗೂ disturb ಮಾಡಬಾರದು ಎಂದು ಸುಮ್ಮನೆ ಕುಳಿತಿದ್ದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ Essential Commodities Act ಬಗ್ಗೆ ಪ್ರಸ್ತಾಪ ಮಾಡಿದರು. ದೇಶದಲ್ಲಿ Essential Commodities Act ಏಕೆ ಬಂತು ಎಂದು ಹೇಳುತ್ತೇನೆ. 1955 ರಿಂದ 1966 ರವರೆಗೆ ದೇಶದಲ್ಲಿ ಆಹಾರ ಧಾನ್ಯದ ಕೊರತೆ ಬಹಳ ಇತ್ತು. ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ಕೇಳಿಸಿಕೊಳ್ಳಬೇಕು. ಏಕೆಂದರೆ, ಆಗ ಮಾನ್ಯ ವಿರೋಧ ಪಕ್ಷದ ನಾಯಕರು ಸಹ levy ಕೊಟ್ಟಿದ್ದಾರೆ. ತಹಶೀಲ್ದಾರರು ಅವರು ಮನೆಗೆ ಬಂದು ಅವರ ಬಳಿಯಿಂದ levy ತೆಗೆದುಕೊಂಡು ಹೋಗಿರುವುದನ್ನು ನೆನಪು ಮಾಡುತ್ತೇನೆ. ಆಹಾರ ಧಾನ್ಯ shortage ಆದುದರಿಂದ ಕೆಲವು ವ್ಯಾಪಾರಿಗಳು ತಮ್ಮ ಗೋಡೌನ್‌ನಲ್ಲಿ ಸಂಗ್ರಹ ಮಾಡಿಕೊಂಡು, artificial shortage create ಮಾಡಿ, ಜನರಿಗೆ ತೊಂದರೆ ಕೊಡುತ್ತಿದ್ದರು. ಆ ಕಾರಣಕ್ಕಾಗಿ ಅದನ್ನು ನಿಯಂತ್ರಣ ಮಾಡುವ ಸಲುವಾಗಿ Essential Commodities Act ಬಂತು. ಈ Essential Commodities Act ಅಡಿಯಲ್ಲಿ ಕೇವಲ food grains ಅಷ್ಟನ್ನು ಮಾತ್ರ ತರಲಿಲ್ಲ. ಅವತ್ತು ದೇಶದಲ್ಲಿ ಸಕ್ಕರೆ ಮತ್ತು ಸಿಮೆಂಟ್ ಕಾರ್ಖಾನೆಗಳು ಕಡಿಮೆ ಇದ್ದವು. Essential Commodities Act ಅಡಿಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿಮೆಂಟ್ ಮತ್ತು ಸಕ್ಕರೆಯನ್ನು ತಂದರು ಮತ್ತು ರೈತರ ಮನೆಯಲ್ಲಿ ಎಕರೆ ಮೇಲೆ levy collection ಮಾಡುವುದನ್ನು ಪ್ರಾರಂಭ ಮಾಡಿದರು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು levy ಕೊಟ್ಟಿದ್ದೇವೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಅವರಿಗೆ ನೆನಪು ಮಾಡುತ್ತಿದ್ದೇನೆ. ಪ್ರತಿ ಹಳ್ಳಿಯಲ್ಲಿ ರೈತರ ಮನೆಗೆ ಹೋಗಿ, ತಹಶೀಲ್ದಾರ್‌ರವರು ಜಬರ್ದಸ್ತಾಗಿ levy ವಸೂಲಿ ಮಾಡಿಕೊಂಡು ಹೋಗುತ್ತಿದ್ದರು. ಏಕೆಂದರೆ, ಜಮೀನು ಇರಲಾರದಂತಹ ಬಡವರಿಗೆ ಕಾಳು ಕಡ್ಡಿಗಳನ್ನು ಕೊಡುವ ಸಲುವಾಗಿ ಅದನ್ನು ತೆಗೆದುಕೊಂಡು ಹೋಗುತ್ತಿದ್ದರು. ಈಗ ಹೇಗೆ ರೇಷನ್ ಅಂಗಡಿಗಳಲ್ಲಿ ಅಕ್ಕಿ ಕೊಡುತ್ತೇವೆ ಆ ರೀತಿ ಕೊಡುವ ಸಲುವಾಗಿ. ಆಗ ಸಕ್ಕರೆಯನ್ನು ತಿಂಗಳಿಗೊಮ್ಮೆ ಕೊಡುತ್ತಿದ್ದರು. ಅಂದರೆ ಅದು ಅರ್ಧ ಕೀಲೋ ಬರುತ್ತಿರಲಿಲ್ಲ. ಕೇವಲ 250 ಗ್ರಾಂ ಕೊಡುತ್ತಿದ್ದರು. ಅದನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನೆನಪು ಮಾಡುತ್ತಿದ್ದೇನೆ. ಅವತ್ತಿನ ದಿವಸ ದೇಶದಲ್ಲಿ ಸಕ್ಕರೆಯ ಕಾರ್ಖಾನೆಗಳು ಇರಲಿಲ್ಲ. ಆಗ ದೇಶದಲ್ಲಿ ಆಹಾರ ಒಂದೇ ಕಡಿಮೆ ಇರಲಿಲ್ಲ, ಎಲ್ಲವೂ ಸಹ ಕಡಿಮೆ ಇತ್ತು. ಏಕೆಂದರೆ, ಆಗ ದೇಶ ಇನ್ನು ಅಭಿವೃದ್ಧಿಯಾಗಿರಲಿಲ್ಲ. ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ಲಾಲ್ ಬಹದ್ದೂರ್ ಶಾಸ್ತ್ರಿಯವರು ಈ ರಾಷ್ಟ್ರದ ಪ್ರಧಾನ ಮಂತ್ರಿಗಳಾದ ಮೇಲೆ ಸೋಮವಾರ ಉಪವಾಸ ಮಾಡಿಸಿದರು. ನಾನು ಮತ್ತು ವಿರೋಧ ಪಕ್ಷದ ನಾಯಕರು ಹೈಸ್ಕೂಲ್‌ಗೆ ಹೋಗುವಾಗ ಸೋಮವಾರ ಉಪವಾಸ ಮಾಡಿದ್ದೇವೆ. ಅದನ್ನು ನೆನಪು ಮಾಡುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನಗೆ ಅದರ ನೆನಪು ಇದೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ದೇಶದಲ್ಲಿ ಆಹಾರ ಧಾನ್ಯದ ಕೊರತೆಯಿಂದ ಈ ರೀತಿಯಾಗಿದ್ದು. ಅನಧಿಕೃತವಾಗಿ ಸಂಗ್ರಹ ಮಾಡಿ ಜನರಿಗೆ ತೊಂದರೆ ಆಗಬಾರದು ಎಂದು, ಆಗ ಯಾರು ವ್ಯಾಪಾರಸ್ಥರು ಇದ್ದರು ಅವರನ್ನು ಈ ಕಾಯ್ದೆ ಅಡಿಯಲ್ಲಿ ತೆಗೆದುಕೊಂಡು ಬಂದರು. ಇವತ್ತು ದೇಶದಲ್ಲಿ ಹಸಿರು ಕ್ರಾಂತಿ ಆದಮೇಲೆ, ಡಾ॥ಬಾಬು ಜಗಜೀವನ ರಾಮ್ ರವರಿಗೆ ಹಸಿರು ಕ್ರಾಂತಿಯ ಹರಿಕಾರತ್ವ ಬಂದು. ದೇಶದಲ್ಲಿ ನೀರಾವರಿ ಪ್ರದೇಶ ಹೆಚ್ಚಾಯಿತು. ಆಹಾರ ಧಾನ್ಯಗಳನ್ನು ಬೆಳೆಯುವುದು ಹೆಚ್ಚಾಯಿತು. ದೇಶ ಅಭಿವೃದ್ಧಿಯ ಕಡೆಗೆ ಹೊರಟ ಮೇಲೆ, ಈ Act ನ ಅವಶ್ಯಕತೆ ಇಲ್ಲ ಎನ್ನುವ ಕಾರಣಕ್ಕಾಗಿ, ಇವತ್ತು food grains, sugar, cement surplus ಇದೆ. ಆ ಕಾರಣಕ್ಕಾಗಿ ಆ Act ನ ಜರೂರತು ಇಲ್ಲವೆಂದು repel ಆಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 10. ಪ್ರಕಟಣೆ

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ:09.12.2020ರಂದು "ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ" ವನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

**(ಮುಂದು...)**

(1081)-09.12.2020-09.00-LL-GR

**(ಸಭಾಪತಿಯವರ ಉಪಸ್ಥಿತಿ)**

## 11. ಕರ್ನಾಟಕ ಕೃಷಿ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2020ರ ಮೇಲೆ ಮುಂದುವರೆದ ಚರ್ಚೆ

**ಶ್ರೀ ಎಸ್.ಟಿ. ಸೋಮಶೇಖರ್(ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಎಲ್ಲಾ ಗೌರವಾನ್ವಿತ ಆತ್ಮೀಯರು ವಿಧೇಯಕದ ಮೇಲೆ ಈಗಾಗಲೇ ಸುಮಾರು 5 ಗಂಟೆ ಮಾತನಾಡಿದ್ದಾರೆ. ಅವರು 5 ಗಂಟೆಗಳ ಕಾಲ ಮಾತನಾಡಿರುವುದನ್ನು ಅತ್ಯಂತ ಗೌರವಯುತವಾಗಿ ಸ್ವೀಕಾರ ಮಾಡಿದ್ದೇನೆ. ಮಾಜಿ ಮಂತ್ರಿಗಳು ಹಾಗೂ ಮುಂದೆ ಮಾರ್ಕೆಟಿಂಗ್ ಮಂತ್ರಿಯಾಗಬೇಕೆಂದು ಕನಸು ಕಾಣುತ್ತಿರುವ ಶ್ರೀ ಎಸ್.ಆರ್. ಪಾಟೀಲ್‌ರವರು ಅನೇಕ ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ಲಾಕ್‌ಡೌನ್ ಸಂದರ್ಭದಲ್ಲಿ ... **(ಗೊಂದಲ)** ನಾನು ಸಚಿವನಾಗಿ ಈ ಖಾತೆ ವಹಿಸಿಕೊಂಡ ತಕ್ಷಣ ಪ್ರತಿಯೊಂದು ಎ.ಪಿ.ಎಂ.ಸಿ., ಗೆ ಭೇಟಿ ನೀಡತಕ್ಕಂತಹ ಕೆಲಸಕ್ಕೆ ನಾನು ಚಾಲನೆ ಮಾಡಿದೆನು. ನಂತರ ಲಾಕ್‌ಡೌನ್ ಸಂದರ್ಭ ಬಂತು. ಆ ಸಂದರ್ಭದಲ್ಲಿ ನಾನು, ಕೃಷಿ ಸಚಿವರು, ಆಹಾರ ಸಚಿವರು, ತೋಟಗಾರಿಕೆ ಸಚಿವರು ಹಾಗೂ ಇತರರು ಸೇರಿದಂತೆ 5 ಜನ ಸಚಿವರು ಮೊದಲನೆ ಬಾರಿಗೆ ದಾಸನಪುರ ಎ.ಪಿ.ಎಂ.ಸಿ., ಗೆ ಬೆಳಗಿನ ಜಾವ 6-00 ಗಂಟೆಗೆ ಭೇಟಿ ನೀಡಿದೆವು. ಅಲ್ಲಿ ಪ್ರತಿಯೊಬ್ಬ ರೈತ ಅಂದರೆ, ಅದು ಹಣ್ಣು-ತರಕಾರಿ ಇರಬಹುದು, ಆಲೂಗಡ್ಡೆ ಇರಬಹುದು, tomato ಇರಬಹುದು ಅಥವಾ ಬೇರೆ ಬೇರೆ ರೀತಿಯ ಸೊಪ್ಪು ಮಾರತಕ್ಕಂತಹವರು ಇರಬಹುದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರತಿಯೊಬ್ಬರನ್ನು ನಾವು 5 ಜನ ಮಂತ್ರಿಗಳೂ ಸೇರಿ ಒಬ್ಬೊಬ್ಬರೇ ರೈತರ ಜೊತೆ ಸಮಾಲೋಚನೆ ಮಾಡಿದೆವು. ಪ್ರಸ್ತುತ ಇರುವಂತಹ ಎ.ಪಿ.ಎಂ.ಸಿ., ಕಾಯಿದೆಯಲ್ಲಿ ಏನೇನು ತೊಂದರೆ ಇದೆ ಎಂಬ ಬಗ್ಗೆ ರೈತರಿಂದ, ದಲ್ಲಾಳಿಗಳಿಂದ ಮತ್ತು ವರ್ತಕರಿಂದ ವಿಸ್ತಾರವಾಗಿ 3-4 ದಿನ ನಿಯಮಿತವಾಗಿ ಬೆಂಗಳೂರಿನ ಎ.ಪಿ.ಎಂ.ಸಿ., ಗೆ ತೆರಳಿ ಸಮಾಲೋಚನೆ ಮಾಡಿರುತ್ತೇವೆ.

ರೈತರು ಮಧ್ಯರಾತ್ರಿ 2-00 ಗಂಟೆಗೆ ತಮ್ಮ ಕೃಷಿ ಉತ್ಪನ್ನಗಳನ್ನು ಎ.ಪಿ.ಎಂ.ಸಿ.,ಗೆ ತರುತ್ತಾರೆ. ಉದಾಹರಣೆಗೆ, ಆಲೂಗಡ್ಡೆ ಮತ್ತು ಈರುಳ್ಳಿಯನ್ನು ಮಧ್ಯರಾತ್ರಿ ತರುತ್ತಾರೆ. ಬೆಳಗಿನ ಜಾವ 6-30 ರಿಂದ 7-00 ಗಂಟೆಗೆ ಮಧ್ಯವರ್ತಿಗಳು ಅದನ್ನು ಹರಾಜು ಮಾಡುತ್ತಾರೆ. ಆದರೆ, ರೈತರು ಸದರಿ ಉತ್ಪನ್ನಗಳನ್ನು ಎ.ಪಿ.ಎಂ.ಸಿ.,ಗೆ ತಂದು ಲಾಟು ಹಾಕಿರುತ್ತಾರೆ. ನಂತರ ಅದನ್ನು ಹರಾಜು ಮಾಡುತ್ತಾರೆ. ಆ ಹರಾಜು ಪ್ರಕ್ರಿಯೆಯನ್ನು ನಾವು 5 ಜನ ಮಂತ್ರಿಗಳು ಸಹ ಖುದ್ದಾಗಿ ವೀಕ್ಷಣೆ ಮಾಡಿರುತ್ತೇವೆ. ಆ ಹರಾಜಿನಲ್ಲಿ ಒಂದು ಸಾರಿ, ಎರಡು ಸಾರಿ, ಪುನಃ ಎರಡು ಸಾರಿ ಮತ್ತು ಮೂರು ಸಾರಿ ಎಂದು ಹರಾಜು ಮಾಡಿ, ನಂತರ ಒಂದು ಚೀಟಿ ಬರೆದು ಆ ರೈತನಿಗೆ ಕೊಡುತ್ತಾರೆ. ತದನಂತರ, ಆ ಉತ್ಪನ್ನಗಳಲ್ಲಿ 3-4 ವಿಧಗಳಾಗಿ ವಿಂಗಡಿಸುತ್ತಾರೆ. ಅಂದರೆ, ಒಳ್ಳೆಯದು, ಅದಕ್ಕಿಂತಲೂ ಇನ್ನೂ ಒಳ್ಳೆಯದು ಮತ್ತು ಖರಾಬು ಎಂದು ವಿಂಗಡಿಸುತ್ತಾರೆ. ರೈತ ಆ ಹರಾಜಿನಲ್ಲಿ ಬಂದಂತಹ ಹಣಕ್ಕೆ ತನ್ನ ಉತ್ಪನ್ನಗಳನ್ನು ಮಾರಾಟ ಮಾಡಲೇಬೇಕು. ಏಕೆಂದರೆ, ಆತ ತನ್ನ ಉತ್ಪನ್ನಗಳನ್ನು ಎ.ಪಿ.ಎಂ.ಸಿ.,ಗೆ ತಂದು ಹಾಕಿಬಿಟ್ಟಿರುತ್ತಾನೆ. ಅಲ್ಲದೇ, ಆ ಸಂದರ್ಭದಲ್ಲಿ tomato ಕೇವಲ 2 ರೂಪಾಯಿಗೆ ತೆಗೆದುಕೊಳ್ಳುವವರು ಇರಲಿಲ್ಲ. ಇದರ ಜೊತೆಗೆ, ಮಧ್ಯವರ್ತಿಗಳು ಆ ರೈತನಿಗೆ ಲಾಕ್‌ಡೌನ್ ಸಂದರ್ಭದ ಬಗ್ಗೆ ಭಯಪಡಿಸುವಂಥದ್ದು ಮತ್ತು 2 ರೂಪಾಯಿ ಬೆಲೆಗೆ ಹರಾಜಿನಲ್ಲಿ ತೆಗೆದುಕೊಳ್ಳುವಂಥದ್ದು ಮಾಡಿ ಅವರಿಂದ ಉತ್ಪನ್ನಗಳನ್ನು ಖರೀದಿ ಮಾಡುತ್ತಾರೆ. ನಂತರ ಅದನ್ನು ಚಿಲ್ಲರೆ ಮಾರಾಟಗಾರರಿಗೆ 10 ರಿಂದ 12 ರೂಪಾಯಿಗೆ ಮಾರಾಟ ಮಾಡುತ್ತಾರೆ. ಅದನ್ನು ಮಾರಾಟಗಾರರು 15 ರಿಂದ 18 ರೂಪಾಯಿಗೆ ಮಾರಾಟ ಮಾಡುತ್ತಾರೆ. ನಾವು ಯಾವಾಗ ಎ.ಪಿ.ಎಂ.ಸಿ.,ಯಲ್ಲಿಯೇ ರೈತ ತನ್ನ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಬೇಕೆಂಬ ಷರತ್ತನ್ನು ಹೊರತುಪಡಿಸಿ, ಮಾನ್ಯ ಮುಖ್ಯಮಂತ್ರಿಗಳಿಗೆ ಈ ಬಗ್ಗೆ ತಿಳಿಸಿ, ಪೊಲೀಸ್ ಅಧಿಕಾರಿಗಳು, ಜಿಲ್ಲಾ ಎ.ಪಿ.ಎಂ.ಸಿ.,ಗಳ ಅಧಿಕಾರಿಗಳು ಮತ್ತು ಮಂತ್ರಿಗಳ ಜೊತೆ ಒಂದು ಸಭೆಯನ್ನು ನಡೆಸಿರುತ್ತೇವೆ, ಆ ಸಂದರ್ಭದಲ್ಲಿ ಈ ಕಾನೂನನ್ನು ತಂದಿರಲಿಲ್ಲ. ಆಗ ಲಾಕ್‌ಡೌನ್ ಸಂದರ್ಭ ಇದ್ದುದರಿಂದ, ರೈತ ತನ್ನ ಕೃಷಿ ಉತ್ಪನ್ನಗಳನ್ನು ಎ.ಪಿ.ಎಂ.ಸಿ.,ಯಲ್ಲಿ ಅಥವಾ ಎಲ್ಲಿ ಬೇಕಾದರೂ ಮಾರಾಟ ಮಾಡಬಹುದೆಂದು ಹೇಳಿದೆವು. ನಂತರ ನಾವು ಎ.ಪಿ.ಎಂ.ಸಿ., ಗೆ ಭೇಟಿ ಮಾಡಿದಂತಹ ಸಂದರ್ಭದಲ್ಲಿ ಅದೇ ಉತ್ಪನ್ನಗಳು ಕೆ.ಜಿ.ಗೆ 12 ರೂಪಾಯಿಗೆ ಹೋಗುವಂಥದ್ದು ಆಯಿತು. ಅದು ಈರುಳ್ಳಿ ಇರಬಹುದು ಅಥವಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಂಬೆಹಣ್ಣು ಇರಬಹುದು ಎಲ್ಲವನ್ನೂ ಕೂಡ... ಕೊನೆಗೆ ದ್ರಾಕ್ಷಿ ಬಗ್ಗೆ ಹೇಳುವುದಾದರೆ, ಲಾಕ್‌ಡೌನ್ ಸಂದರ್ಭದಲ್ಲಿ ದ್ರಾಕ್ಷಿ ಬೆಳೆಗಾರರು ತಮ್ಮ ಫಸಲನ್ನು ಮಾರಾಟ ಮಾಡುವ ಪರಿಸ್ಥಿತಿ ಇರಲಿಲ್ಲ. ಆಗ ನಾವು ಇಡೀ ಬೆಂಗಳೂರಿನ 28 ಕ್ಷೇತ್ರಗಳಿಗೆ ಫುಟ್‌ಪಾತ್ ಮೇಲೆ ತಳ್ಳುಗಾಡಿಯಲ್ಲಿ ಹಣ್ಣುಗಳನ್ನು ಮಾರುವವರ ಮುಖಾಂತರ ಮಾರಾಟ ಮಾಡುವಂಥದ್ದಕ್ಕೆ ವ್ಯವಸ್ಥೆಯನ್ನು ಮಾಡಿದ್ದೇವೆ. ಒಂದು ವಾರ ಅಥವಾ 10 ದಿವಸದಲ್ಲಿಯೇ ಯಾವುದೇ ರೈತನೂ ಕೂಡ ನಾವು ಬೆಳೆದಂತಹ ಬೆಳೆ ಅಥವಾ ತರಕಾರಿ ಅನ್ಯಾಯವಾಗುತ್ತಿದೆಯೆಂದು ಹೇಳಲಿಲ್ಲ. ಅದಕ್ಕೆ ಏನೆಲ್ಲಾ ವ್ಯವಸ್ಥೆ ಬೇಕೋ ಅದನ್ನು ಮಾಡಿದ್ದೇವೆ. ಇದಕ್ಕೆ ಮೊದಲು ಹೊರಗಡೆಯಿಂದ ಬರುವಂಥಹ ಕೃಷಿ ಉತ್ಪನ್ನಗಳಿಗೆ ಚೆಕ್‌ಪೋಸ್ಟ್‌ನಲ್ಲಿ ಅಧಿಕಾರಿಗಳು ಮತ್ತು ಎ.ಪಿ.ಎಂ.ಸಿ., ವಿಜಿಲೆನ್ಸ್‌ನವರು ಕಿರುಕುಳ ಕೊಡುತ್ತಿದ್ದರು ಅದನ್ನೆಲ್ಲವನ್ನೂ ಸಂಪೂರ್ಣ ನಿವಾರಣೆ ಮಾಡಿ ರೈತರಿಗೆ ಮುಕ್ತ ಅವಕಾಶ ಕಲ್ಪಿಸುವುದಕ್ಕೆ ಅನುಕೂಲ ಮಾಡಿರುತ್ತೇವೆ.

ಅಷ್ಟೇ ಅಲ್ಲದೇ, ಸುಮಾರು 27 ಜಿಲ್ಲೆಯಲ್ಲಿರತಕ್ಕಂತಹ ಎ.ಪಿ.ಎಂ.ಸಿ.,ಗಳಲ್ಲಿ ಸಭೆ ಕೂಡ ಮಾಡಿದ್ದೇನೆ. ಹುಬ್ಬಳ್ಳಿ-ಧಾರವಾಡ ಎ.ಪಿ.ಎಂ.ಸಿ.,ಯಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರ ನೇತೃತ್ವದಲ್ಲಿ ಸಭೆ ಮಾಡಿದ್ದೇನೆ. ಗದಗ್ ಇರಬಹುದು, ರಾಮನಗರ ಇರಬಹುದು, ಮೈಸೂರು ಇರಬಹುದು, ಬ್ಯಾಡಗಿ ಇರಬಹುದು, ರಾಣಿಬೆನ್ನೂರು ಇರಬಹುದು ಈ ರೀತಿ 27 ಜಿಲ್ಲೆಯ ಎ.ಪಿ.ಎಂ.ಸಿ.,ಗೆ ಭೇಟಿ ನೀಡಿ ಸಭೆ ಮಾಡಿರುತ್ತೇನೆ. ಕೊನೆಯದಾಗಿ, ಶಿವಮೊಗ್ಗ ಜಿಲ್ಲೆಯಲ್ಲಿ ಅಡಕೆ ಬೆಳೆಗಾರರ ನೇತೃತ್ವದಲ್ಲಿ ಸಭೆ ಮಾಡಿರುತ್ತೇನೆ. ಆ ಸಭೆಯಲ್ಲಿ ಮಾನ್ಯ ಕೆ.ಎಸ್.ಈಶ್ವರಪ್ಪನವರು ಸಹ ಭಾಗವಹಿಸಿದ್ದರು. ರೈತರಿಗೆ ಏನೆಲ್ಲಾ ತೊಂದರೆಯಾಗಿದೆ ಮತ್ತು ಏನೆಲ್ಲಾ ತೊಂದರೆಗಳನ್ನು ಸರಿಪಡಿಸಬಹುದು; ರೈತರಿಗೆ ಏನು ಅನ್ಯಾಯವಾಗುತ್ತಿದೆ; ವರ್ತಕರು ರೈತರಿಗೆ ಏನು ತೊಂದರೆ ಕೊಡುತ್ತಿದ್ದಾರೆಂಬ ಬಗ್ಗೆ ಸಂಕ್ಷಿಪ್ತವಾಗಿ ಅಧ್ಯಯನ ಮಾಡಿದ ನಂತರ ಈ ಕಾನೂನನ್ನು ತರುವಂತಹ ಚಿಂತನೆ ಮೊದಲನೇ ಬಾರಿಗೆ ನನ್ನಲ್ಲಿ ಮೂಡಿತು. ಇದಕ್ಕೆ ಕೇಂದ್ರ ಸರ್ಕಾರದ ಒತ್ತಡವಾಗಲೀ ಅಥವಾ ಇತರರ ಒತ್ತಡ ನಮ್ಮ ಮೇಲೆ ಆಗಿರುವುದಿಲ್ಲ. ಲಾಕ್‌ಡೌನ್ ಸಂದರ್ಭದಲ್ಲಿ ಪ್ರತಿಯೊಂದು ಎ.ಪಿ.ಎಂ.ಸಿ.,ಗೆ ಭೇಟಿ ನೀಡಿ ನಾನು ವಿಚಾರಿಸಿರುತ್ತೇನೆ. ಅಲ್ಲದೇ, ಆ ಸಂದರ್ಭದಲ್ಲಿ ಸೊಪ್ಪು ಮಾರುವಂತಹ ಒಬ್ಬ ಮಹಿಳೆಯನ್ನು, "ಏನಮ್ಮಾ, ನೀವು ಸೊಪ್ಪು ಬೆಳೆದು, ಅಲ್ಲಿಂದ ಇಲ್ಲಿಗೆ ತಂದು ಮಾರುತ್ತೀಯಲ್ಲಾ; ನಿನಗೆ ಏನು ಲಾಭ ಸಿಗುತ್ತದೆ ಹಾಗೂ ಲಾಕ್‌ಡೌನ್ ಮೊದಲು ಎಷ್ಟು ಲಾಭ ಸಿಗುತ್ತಿತ್ತು, ಈಗ ಎಷ್ಟು ಲಾಭ ಸಿಗುತ್ತಿದೆ" ಎಂಬ ಬಗ್ಗೆ ಸಮಲೋಚನೆ ಮಾಡಿರುತ್ತೇನೆ.

ಕೇಂದ್ರ ಸರ್ಕಾರ ಕೇವಲ ಈ ಕಾಯಿದೆ ಬಗ್ಗೆ ನೆನಪು ಮಾಡಿರುತ್ತದೆಯಷ್ಟೇ. ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದ ಸಂದರ್ಭದಲ್ಲಿ ಅವರು ಎಲ್ಲಾ ರೈತ ಬಾಂಧವರ ಸಮ್ಮುಖದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಸಭೆಯನ್ನು ಮಾಡಿ, ಈ ಕಾನೂನನ್ನು ತಂದರೆ ಅನುಕೂಲ ಏನು, ಅನಾನುಕೂಲ ಏನು ಎಂಬ ಬಗ್ಗೆ ಚರ್ಚಿಸಲಾಗಿರುತ್ತದೆ. ಮೊದಲನೆ ಬಾರಿಗೆ ಅಧಿಕಾರಿಗಳ ಸಭೆ, ನಂತರ ರೈತರೊಂದಿಗೆ ಸಭೆ ಮಾಡಿ, ರೈತರಿಗೆ ಅನುಕೂಲವಾಗುವಂಥದ್ದಕ್ಕೆ ಕಾಯಿದೆ ತಿದ್ದುಪಡಿ ಮಾಡಲಾಗಿರುತ್ತದೆ. ಸುಮಾರು 30 ವರ್ಷಗಳ ಹಿಂದೆಯೇ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು, "ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ಎ.ಪಿ.ಎಂ.ಸಿ., ಯಲ್ಲಿಯೇ ಮಾರಾಟ ಮಾಡಬೇಕೆಂಬ ನಿರ್ದಿಷ್ಟ ಕಾನೂನನ್ನು ಏತಕ್ಕೆ ತರುತ್ತೀರಿ? ಅವರು ಹೊರಗಡೆ ಮಾರಾಟ ಮಾಡಿದರೆ ಏನಾಗುತ್ತದೆ ಮತ್ತು ಅವರು ಹೊರಗಡೆ ಮಾರಾಟ ಮಾಡುವುದಕ್ಕೆ ಮುಕ್ತ ಅವಕಾಶ ಕಲ್ಪಿಸಿಕೊಡುವುದಕ್ಕೆ ಕಾಯಿದೆ ತಿದ್ದುಪಡಿ ಮಾಡಬೇಕು ಎಂದು" ಆಗಲೇ ಗಲಾಟೆ ಮತ್ತು ಮುಷ್ಕರದ ಮುಖಾಂತರ ಹೋರಾಟ ಮಾಡಿದ್ದರು. ಅದೇ ರೀತಿ ಕೇಂದ್ರ ಸರ್ಕಾರದವರು ಕೂಡ ರೈತರಿಗೋಸ್ಕರ ಈ ಎ.ಪಿ.ಎಂ.ಸಿ., ಕಾಯಿದೆಯಲ್ಲಿ ಏನು ಬದಲಾವಣೆ ಮಾಡಬೇಕೆಂದು ಚರ್ಚಿಸಿ ಕಾಯಿದೆಗೆ ತಿದ್ದುಪಡಿ ತಂದಿರುತ್ತಾರೆ. ಅದರ ಬದಲಾಗಿ, ಎ.ಪಿ.ಎಂ.ಸಿ., ಮುಚ್ಚಬೇಕೆಂದು ಇಲ್ಲ. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ 8,850 ಎಕರೆ ಪ್ರದೇಶದಲ್ಲಿ ಎ.ಪಿ.ಎಂ.ಸಿ., ಇದೆ. ಅದರಲ್ಲಿ ಬಡಾವಣೆ ನಿರ್ಮಾಣ ಮಾಡಿದ್ದೇವೆ; ಅಂಗಡಿಗಳನ್ನು ನಿರ್ಮಾಣ ಮಾಡಿ, ಅವುಗಳನ್ನು ವರ್ತಕರಿಗೆ ಹಂಚಿಕೆ ಮಾಡಿರುತ್ತೇವೆ. ಇನ್ನೂ 3 ಸಾವಿರ ಎಕರೆ ಜಮೀನು ಎ.ಪಿ.ಎಂ.ಸಿ., ಯಲ್ಲಿದೆ. ಇವೊತ್ತಿನ ದಿವಸ ನಾವು ಒಂದೇ ಒಂದು ಗುಂಟೆ ಜಮೀನನ್ನು ಎ.ಪಿ.ಎಂ.ಸಿ.,ಗಾಗಿ ಖರೀದಿ ಮಾಡುವುದಕ್ಕೆ ಆಗುತ್ತಿಲ್ಲ. ಈ ಹಿಂದೆ ಇದ್ದಂತಹ ಯಾರೋ ರಾಜಕಾರಣಿಗಳು, ಪುಣ್ಯಾತ್ಮರು ಈ ಸಹಕಾರ ಕ್ಷೇತ್ರದಲ್ಲಿ ಬೆಳೆದಂತಹವರು, ದೂರದೃಷ್ಟಿ ಇಟ್ಟುಕೊಂಡು ನೂರಾರು ಎಕರೆ ಜಮೀನನ್ನು ಎ.ಪಿ.ಎಂ.ಸಿ.,ಗೆ ಕೊಟ್ಟಿದ್ದಾರೆ ಮತ್ತು ಅದನ್ನು ಬೃಹದಾಕಾರವಾಗಿ ಬೆಳೆಸಿದ್ದಾರೆ. ಇತ್ತೀಚೆಗೆ ನಾನು ಮಂಗಳೂರಿಗೆ ಭೇಟಿ ನೀಡಿದ್ದೆನು. ಅಲ್ಲಿ ಸುಮಾರು 80 ಎಕರೆ ಜಮೀನನಲ್ಲಿ ಬೃಹದಾಕಾರವಾಗಿ ಎ.ಪಿ.ಎಂ.ಸಿ., ಇದೆ. ಆ ಎ.ಪಿ.ಎಂ.ಸಿ.,ಯಲ್ಲಿ ಹೆಚ್ಚು ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೆ ಆಗುತ್ತಿಲ್ಲ. ಅಲ್ಲಿ ಬೇರೆ ಬೇರೆ ರೀತಿಯ ರಾಜಕೀಯ ಇದೆ. ಅದರಿಂದ ಹೊರಗಡೆಯಿಂದ ಬಂದಂತಹ ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೆ ಅವಕಾಶ ಆಗುತ್ತಿಲ್ಲ. ಹುಬ್ಬಳ್ಳಿ-ಧಾರವಾಡ ಎ.ಪಿ.ಎಂ.ಸಿ., ನೂರಾರು ಎಕರೆ ವಿಸ್ತೀರ್ಣಕ್ಕೂ ಜಾಸ್ತಿ ಇದೆ. ತುಮಕೂರಿನ ಎ.ಪಿ.ಎಂ.ಸಿ., ನೂರಾರು ಎಕರೆ ವಿಸ್ತೀರ್ಣದಲ್ಲಿ ಇದೆ.

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಹುಬ್ಬಳ್ಳಿ-ಧಾರವಾಡ ಎ.ಪಿ.ಎಂ.ಸಿ., ಇಡೀ ಏಷ್ಯಾ ಖಂಡದಲ್ಲಿಯೇ ಮೊದಲನೇ ಸ್ಥಾನದಲ್ಲಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಹೌದು ಇದೆ. ಮಾನ್ಯ ಸಿ.ಎಂ. ಲಿಂಗಪ್ಪನವರು ಹೇಳಿದ ರೀತಿಯಲ್ಲಿ ಎ.ಪಿ.ಎಂ.ಸಿ.,ಯನ್ನು ಮುಚ್ಚುವಂಥದ್ದು ಇಲ್ಲ. ಏಕೆಂದರೆ, ಪುಣ್ಯಾತ್ಮರು ಎ.ಪಿ.ಎಂ.ಸಿ.,ಯನ್ನು ಬೃಹದಾಕಾರವಾಗಿ ಬೆಳೆಸಿದ್ದಾರೆ. ಆ ಎ.ಪಿ.ಎಂ.ಸಿ.,ಗಳಲ್ಲಿ ಅನೇಕ ಕಟ್ಟಡಗಳಿವೆ, ಕಛೇರಿಗಳು ಇವೆ, ಅಲ್ಲಿ ಸಾಕಷ್ಟು ಸಂಖ್ಯೆಯ ನೌಕರರಿದ್ದಾರೆ, ಸಣ್ಣ-ಸಣ್ಣ ಸಂತೆಗಳು ಸಹ ಇರುತ್ತವೆ. ಈ ಹಿಂದೆ 1.50 ರೂಪಾಯಿ ಇದ್ದಂತಹ ಸೆಸ್ ಅನ್ನು, 1 ರೂಪಾಯಿ ಮಾಡುವಂತಹ ಉದ್ದೇಶ ರೈತರಿಗೆ ಅನುಕೂಲವಾಗುವಂಥದ್ದಾಗಿರುತ್ತದೆ. ಆದರೆ, ಶಿವಮೊಗ್ಗ ಜಿಲ್ಲೆ, ಹುಬ್ಬಳ್ಳಿ ಜಿಲ್ಲೆ ಹಾಗೂ ಹೆಚ್ಚು ಅಡಕೆ ಬೆಳೆಯುವ ಇತರ ಜಿಲ್ಲೆಯ ರೈತರು/ಅಡಕೆ ಮಾರಾಟಗಾರರು "1 ರೂಪಾಯಿ ಸೆಸ್ ಹಾಕಿದರೆ ನಮ್ಮ ಅಡಕೆ ಮಾರಾಟಗಾರರಿಗೆ ತೊಂದರೆಯಾಗುತ್ತದೆ. ಹಾಗಾಗಿ, ಆ ಸೆಸ್ ಅನ್ನು ಕಡಿಮೆ ಮಾಡಬೇಕೆಂದು" ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು. ಆ ರೈತರಿಗೋಸ್ಕರ 1 ರೂಪಾಯಿ ಇದ್ದಂತಹ ಸೆಸ್ ಅನ್ನು 35 ಪೈಸೆಗೆ ಇಳಿಸಿದರು. ಈಗ ಕೇವಲ 35 ಪೈಸೆಯಿಂದ ಕರ್ನಾಟಕ ರಾಜ್ಯದಲ್ಲಿರುವ 162 ಎ.ಪಿ.ಎಂ.ಸಿ.,ಗಳಲ್ಲಿ ಸುಮಾರು 120 ಕೋಟಿ ರೂಪಾಯಿ ಸೆಸ್ ವಸೂಲಾಗುತ್ತದೆ. ಆ 120 ಕೋಟಿ ರೂಪಾಯಿಯಲ್ಲಿ 60 ಕೋಟಿ ರೂಪಾಯಿ ಎ.ಪಿ.ಎಂ.ಸಿ., ನೌಕರರ ವೇತನಕ್ಕೆ ಖರ್ಚಾಗುತ್ತದೆ. ಇನ್ನು 18 ಕೋಟಿ ರೂಪಾಯಿ ಎ.ಪಿ.ಎಂ.ಸಿ.,ಗಳ ಸ್ವಚ್ಛತೆ ಹಾಗೂ ಇತರೆ ನಿರ್ವಹಣಾ ಕಾರ್ಯಗಳಿಗೆ ಖರ್ಚಾಗುತ್ತದೆ. 120 ಕೋಟಿ ರೂಪಾಯಿಯಲ್ಲಿ 78 ಕೋಟಿ ರೂಪಾಯಿ ಹಣ ಖರ್ಚಾಗುತ್ತದೆ. ಬೆಂಗಳೂರನ್ನು ಹೊರತುಪಡಿಸಿ, ಉಳಿದ ಎಲ್ಲಾ ಎ.ಪಿ.ಎಂ.ಸಿ.,ಗಳಲ್ಲಿ ರೈತರಿಂದ ಆಯ್ಕೆಯಾದಂತಹ ಒಂದು ಬೋರ್ಡ್ ಇದೆ. ಆ ಬೋರ್ಡ್‌ಗೆ ಎಲ್ಲಾ ರೀತಿಯ ಅಧಿಕಾರ ಇರುತ್ತದೆ. ಈಗ ಎ.ಪಿ.ಎಂ.ಸಿ., ಕಾಯಿದೆಯಲ್ಲಿ ಸೆಕ್ಷನ್ 117 ಕ್ಕೆ ಏನು ತಿದ್ದುಪಡಿ ತಂದಿದ್ದೇವೆ, ಅದರಲ್ಲಿ ಕೇಸ್ ಹಾಕುವಂಥದ್ದು ಹಾಗೂ ದಂಡ ಹಾಕುವಂಥದ್ದನ್ನು ಹೊರತುಪಡಿಸಿ, ಈ ಹಿಂದೆ ಇದ್ದಂತಹ ಎಲ್ಲಾ ಅಧಿಕಾರಗಳು ಆ ಎ.ಪಿ.ಎಂ.ಸಿ., ಬೋರ್ಡ್‌ಗೆ ಇದೆ. ಆ ಎ.ಪಿ.ಎಂ.ಸಿ., ಬೋರ್ಡ್‌ಗಳಿಗೆ ಇದ್ದಂತಹ ಅಧಿಕಾರದಲ್ಲಿ, ಕೇಂದ್ರ ಸರ್ಕಾರ ಇರಬಹುದು ಅಥವಾ ರಾಜ್ಯ ಸರ್ಕಾರ ಆಗಿರಬಹುದು ಅವರನ್ನು ಪವರ್‌ಲೆಸ್ ಮಾಡಿರುವುದಿಲ್ಲ. ಆ ಬೋರ್ಡ್‌ಗೆ ಮೊದಲಿನಿಂದಲೂ ಏನೆಲ್ಲಾ ಅಧಿಕಾರ ಇದೆ, ಅದರ ಜೊತೆಗೆ ಎ.ಪಿ.ಎಂ.ಸಿ., ಗಳನ್ನು ಇನ್ನೂ ಅಭಿವೃದ್ಧಿ ಮಾಡುವುದಕ್ಕೆ ನಬಾರ್ಡ್‌ನಿಂದ ಸುಮಾರು 200 ಕೋಟಿ ವಿಶೇಷವಾದ ಅನುದಾನವನ್ನು ಪಡೆದು, ಎಲ್ಲಾ ಎ.ಪಿ.ಎಂ.ಸಿ.,ಗಳಿಗೆ ನೀಡುವುದಕ್ಕೆ ಚಾಲನೆ ಮಾಡಿದ್ದೇವೆ.

(ಮುಂದುವರೆದಿದೆ...)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1082)09.12.2020/9.10/ವೈಎಲ್-ಜಿಆರ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಟಿ.ಸೋಮಶೇಖರ್** (ಮುಂದು):-

ಕೊಪ್ಪದಲ್ಲಿರುವ ಎ.ಪಿ.ಎಂ.ಸಿ., ಮಾರುಕಟ್ಟೆಗೆ 120 ಕೋಟಿ ರೂಪಾಯಿ ಮತ್ತು ರಾಣಿಬೆನ್ನೂರಿನ ಎ.ಪಿ.ಎಂ.ಸಿ., ಮಾರುಕಟ್ಟೆಗೆ 120 ಕೋಟಿ ರೂಪಾಯಿ ಭರಿಸಲಾಗಿದೆ. ಇಷ್ಟು ಬೃಹದಾಕಾರವಾಗಿ ಬೆಳೆದಂಥ ಎ.ಪಿ.ಎಂ.ಸಿ., ಸಂಸ್ಥೆಗಳನ್ನು ಹಾಳು ಮಾಡುವುದಕ್ಕೆ ಯಾರು ಒಪ್ಪುವುದಿಲ್ಲ. ರೈತ ಚಳುವಳಿಯ ಹಿನ್ನೆಲೆಯಿಂದ ಬಂದಂತಹ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರಾಗಲಿ ಹಾಗೂ ರೈತರ ಬಗ್ಗೆ ಚಿಂತನೆ ಮಾಡುವಂಥ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರಾಗಲಿ ಯಾವತ್ತು ಸಹ ನೆಗೆಟಿವ್ ಆಗಿ ಯೋಚನೆಯನ್ನು ಮಾಡಿಲ್ಲ. ಈಗಾಗಲೇ ಮಾನ್ಯ ಎಸ್.ಆರ್.ಪಾಟೀಲ್‌ರವರು ನನಗೆ ತಪ್ಪು ಆತ್ಮವನ್ನಿಟ್ಟುಕೊಂಡು ಮಾತನಾಡಿ ಎಂದು ಹೇಳಿದರು. ಆದರೆ, ನಾನು ಜಾಸ್ತಿ ಮಾತನಾಡಲು ಹೋಗುವುದಿಲ್ಲ. ಈ ಕಾನೂನನ್ನು ಜಾರಿಗೆ ತಂದಂತಹ ಸಂದರ್ಭದಲ್ಲಿ ಅವರದೇ ಆದ ಕಾಂಗ್ರೆಸ್ ಪಕ್ಷದ ಶಾಸಕಾಂಗ ಸಭೆಯಲ್ಲಿ 'ರೈತರ ಪರವಾಗಿ ತಂದಿರುವಂಥ ಕಾಯ್ದೆಯನ್ನು ವಿರೋಧ ಮಾಡಿದರೆ, ರೈತರ ವಿರೋಧವನ್ನು ಕಟ್ಟಿಕೊಳ್ಳಬೇಕಾಗುತ್ತದೆ' ಎಂದು ಮಾತನಾಡಿರುವ ಕುರಿತು ನನ್ನ ಬಳಿ ಮಾಹಿತಿ ಇದ್ದು, ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಕೊನೆಯಲ್ಲಿ ಹೈಕಮಾಂಡ್ ಆದೇಶ ವಿರೋಧ ಮಾಡಬೇಕೆಂದು ಮನವೊಲಿಸುವಂಥ ಕೆಲಸ ಮಾಡಿದ್ದಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕೆಲವು ಸಲ ಹೈಕಮಾಂಡ್ ಆದೇಶವಾಗುತ್ತದೆ. ತಪ್ಪೇನಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಹೈಕಮಾಂಡ್ ಆದೇಶ ಬಂದಿರುವುದಿಲ್ಲ. It's a created story.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಸಿ.ಎಲ್.ಪಿ., ಸಭೆಯಲ್ಲಿ ಯಾರು ಮಾತನಾಡಿದರು ಎಂಬುದನ್ನು ಹೇಳಲಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, we have got our own consciousness. ನಾವು ನಮ್ಮ conscious ಗೆ ಅನುಗುಣವಾಗಿ ನಡೆಯುತ್ತೇವೆ. ತಪ್ಪಿದ್ದರೆ ನಾವು ಮನವೊಲಿಸುತ್ತೇವೆ. ಹೈಕಮಾಂಡ್‌ಗೆ convince ಮಾಡುತ್ತೇವೆ, 'no, we don't agree' ಎಂದು ಹೇಳುತ್ತೇವೆ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, there is no any such discussion. ಸಿ.ಎಲ್.ಪಿ., ಸಭೆಯಲ್ಲಿ ಚರ್ಚೆ ಆಗಿಲ್ಲ. ಯಾವುದೇ ನಿರ್ದೇಶನ ನಮ್ಮ ಗಮನಕ್ಕೆ ಬಂದಿಲ್ಲ. ಮಾನ್ಯ ಸಚಿವರ ಮಾಹಿತಿ ಸರಿಯಿಲ್ಲ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ವಿಧೇಯಕಕ್ಕೆ ಅನುಮೋದನೆ ಬೇಡವೇ?

**(ಗೊಂದಲ)**

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಆ ರೀತಿ ಏನಿಲ್ಲ. ಅವರೆಲ್ಲರ ಸಹಕಾರದಿಂದ ಈ ವಿಧೇಯಕಕ್ಕೆ ಅನುಮೋದನೆ ದೊರೆಯುತ್ತದೆ. ಅವರೆಲ್ಲರೂ ಕುಳಿತುಕೊಳ್ಳಲಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ನಾವು ಮತ್ತೆ 5 ಗಂಟೆಗಳ ಕಾಲ ಚರ್ಚೆ ಮಾಡಬೇಕೇ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ನಾನು ಜಾಸ್ತಿ ಮಾತನಾಡಿಯೇ ಇಲ್ಲ.

**(ಗೊಂದಲ)**

ಒಂದು ಪಕ್ಷ ಮಾತನಾಡಿದ್ದರೆ ಒಪ್ಪಿಕೊಳ್ಳಲಿ ಅಥವಾ ಮಾತನಾಡಿಲ್ಲವೆಂದರೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನನಗೆ ಬಂದ ಮಾಹಿತಿಯೇ ಸುಳ್ಳು ಎಂದುಕೊಳ್ಳುತ್ತೇನೆ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪುರ:–** ಮಾನ್ಯ ಸಭಾಪತಿಯವರೇ, ಸಿ.ಎಲ್.ಪಿ. ಯಲ್ಲಿ ಮಾತನಾಡಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನನಗೆ ಈ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ.

**(ಗೊಂದಲ)**

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಪಾಟೀಲ್‌ರವರು ಕುಳಿತುಕೊಳ್ಳಲಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದರೆ ನೇರವಾಗಿ ಹೌದು ಎಂದು ಒಪ್ಪಿಕೊಳ್ಳುತ್ತೇನೆ. ನನಗೆ ಯಾವುದೇ ಭಯವಿಲ್ಲ. ನನಗೆ ಈ ವಿಚಾರವೇ ತಿಳಿದಿಲ್ಲ. ಸಾರ್ವಜನಿಕ ಬದುಕಿಗೆ ಏನೇನು ಅವಶ್ಯಕತೆ ಇದೆ, ಅದೆಲ್ಲವನ್ನೂ ಮಾಡಿದ್ದೇವೆ. ಮಾತನಾಡಿದರೆ ಒಪ್ಪಿಕೊಳ್ಳಲು ಯಾವುದೇ ಮುಲಾಜು ಇಲ್ಲ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಪಾಟೀಲ್‌ರವರೇ, ನನಗೆ ಬಂದಂತಹ ಮಾಹಿತಿಯೇ ಸುಳ್ಳು ಎಂದುಕೊಳ್ಳುತ್ತೇನೆ ಬಿಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರಮೇಶ ಗೌಡ(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ತಿಮ್ಮಾಪುರರವರು ಹೇಳಿದ ಹಾಗೆ 'ಯೋಗ್ಯತೆ ಉಂಟು ಎಂದರೆ, ಉಂಟು. ಇಲ್ಲವೆಂದರೆ, ಇಲ್ಲ'.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಜೆಡಿಎಸ್ ಗೆ ಸಂಬಂಧಿಸಿದ ವಿಚಾರವಲ್ಲ. ಅದು ಬೇರೆ ವಿಚಾರ ಬಿಡಿ. ಈಗ ಎಲ್ಲರ ಮನಸ್ಸಿನಲ್ಲಿ ಬಹುರಾಷ್ಟ್ರೀಯ ಕಂಪನಿಗೆ ಮಾತ್ರ allegation ಗೆ ಕಾರಣವಾಗಿದೆ. ಕಳೆದ 6 ವರ್ಷಗಳಿಂದ 62 ಬಹುರಾಷ್ಟ್ರೀಯ ಕಂಪನಿಗಳಿಗೆ ಪರವಾನಗಿಯನ್ನು ನೀಡಲಾಗಿದೆ. ಈಗ ಏನು ಪರವಾನಗಿ ನೀಡಿಲ್ಲ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಹೌದು. ಪರವಾನಗಿ ನೀಡಿರುವುದನ್ನು regularise ಮಾಡುವುದಕ್ಕೆ ಈ ಕಾಯ್ದೆಯಲ್ಲಿ ಇರುವುದನ್ನು ತೆಗೆಯುತ್ತಿದ್ದಾರೆ. ನೀವು specific ಆದ section ಅನ್ನು ತರುತ್ತಿಲ್ಲ. ನೀವು round ಹೊಡೆಯುತ್ತಿದ್ದೀರಿ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಎಲ್ಲಾ ಸರ್ಕಾರವು 62 ಬಹುರಾಷ್ಟ್ರೀಯ ಕಂಪನಿಗಳಿಗೆ ಪರವಾನಗಿ ನೀಡಿದ್ದಾರೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ಪಾಲಿಸಿ ಆಧಾರದ ಮೇಲೆ ಪರವಾನಗಿ ನೀಡಿದ್ದಾರೆ, ಇಲ್ಲವೆಂದು ಹೇಳುತ್ತಿಲ್ಲ. ಆದರೆ, ಎ.ಪಿ.ಎಂ.ಸಿ., ಕಾಯ್ದೆಯಲ್ಲಿ ತಿದ್ದುಪಡಿ ಮಾಡುವುದರಿಂದ ರೈತರಿಗೆ ಅನ್ಯಾಯವಾಗುತ್ತದೆ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪುರ:–** ಮಾನ್ಯ ಸಭಾಪತಿಯವರೇ, ಹಾಗಾದರೆ ವಿಧೇಯಕವನ್ನು ಏತಕ್ಕೆ ತಂದಿದ್ದಾರೆ. ಈ ಹಿಂದೆ ಇರುವುದನ್ನೇ ಮುಂದುವರೆಸಲಿ. ಅವರ ಮನಸ್ಸಿನಲ್ಲಿ ಏನಿದೆ ಎನ್ನುವುದನ್ನು ಹೇಳಲಿ. ಈಗಾಗಲೇ ಅವರ ಉದ್ದೇಶ ಏನೆಂಬುದು ನಮಗೆ ಗೊತ್ತಾಗಿದೆ. ಈ ದೇಶವನ್ನು ಸಂಪೂರ್ಣವಾಗಿ ಮಾರಾಟ ಮಾಡುವುದಕ್ಕೆ ಹೊರಟ್ಟಿದ್ದಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದರಿಂದ ಇನ್ನು ಅವರ ಬುಡಕ್ಕೆ ನೀರು ಬರುತ್ತದೆ.

**ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ತಿಮ್ಮಾಪುರರವರ ಉದ್ದೇಶ ಏನೆಂಬುದು ನಮಗೆ ಗೊತ್ತಾಗಿದೆ. ನಿಮ್ಮ ಬುಡಕ್ಕೂ ನೀರು ಬರುತ್ತದೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಯಾರ ಬುಡಕ್ಕೆ ನೀರು ಬರುತ್ತದೆ ಎಂಬುದು ಸಧ್ಯದಲ್ಲಿಯೇ ಗೊತ್ತಾಗುತ್ತದೆ. ನನ್ನ ಬುಡಕ್ಕೆ ನೀರು ಬರುವುದಾದರೆ, ಅದನ್ನು ನಾನು ಸ್ವಾಗತಿಸುತ್ತೇನೆ. ಬಹಳ ಸಂತೋಷ. ಆದರೆ, ಅವರೆಲ್ಲರೂ ಬಹುರಾಷ್ಟ್ರೀಯ ಕಂಪನಿಗಳಿಗೆ ಪರವಾನಗಿಯನ್ನು ನೀಡಿದ್ದಾರೆ.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ರಮೇಶ್‌ರವರೆ ಕುಳಿತುಕೊಳ್ಳಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನಗೆ ಒಂದು ಸ್ಪಷ್ಟೀಕರಣವನ್ನು ನೀಡಬೇಕು.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ನನ್ನ ಮಾತು ಮುಗಿದ ಮೇಲೆ ಸ್ಪಷ್ಟೀಕರಣವನ್ನು ನೀಡುತ್ತೇನೆ.

**ಡಾ॥ ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾತನಾಡಲು ಅವಕಾಶ ಮಾಡಿಕೊಡಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಎಲ್ಲಾ ಬಹುರಾಷ್ಟ್ರೀಯ ಕಂಪನಿಗಳಿಗೆ ಸಂಬಂಧಿಸಿದಂತೆ ಹೇಳುತ್ತಿದ್ದೇನೆ. ಎ.ಪಿ.ಎಂ.ಸಿ., ಮಾರುಕಟ್ಟೆಗೆ ಭೇಟಿ ನೀಡಿದಂಥ ಸಂದರ್ಭದಲ್ಲಿ ಯಾವುದೇ ಒಬ್ಬ ರೈತ ಸಹ ಬಹುರಾಷ್ಟ್ರೀಯ ಕಂಪನಿಯಿಂದ ನಮಗೆ ಅನ್ಯಾಯವಾಗಿದೆ ಎನ್ನುವಂತಹ ದೂರನ್ನು ನೀಡಿಲ್ಲ. ಈ ವಿಧೇಯಕವನ್ನು Ordinance ಮಾಡಿದೆವು. ಕಳೆದ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಈ ವಿಧೇಯಕಕ್ಕೆ ಅನುಮೋದನೆ ದೊರೆತ್ತಿದ್ದು, ಈ ಸದನದಲ್ಲಿ ಕಲಂ 79ಎ ಮತ್ತು 79ಬಿ ಮೇಲೆ ಮಾತುಕತೆ ನಡೆಯುತ್ತಲೇ ಇದ್ದ ಪ್ರಯುಕ್ತ ಮಧ್ಯರಾತ್ರಿ 1.00 ಗಂಟೆಯಾಗಿತ್ತು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ವಿಧೇಯಕವನ್ನು ಸಬ್ಮಿಟ್ ಮಾಡಲು ಆಗಲಿಲ್ಲ. ಈ Ordinance ಮಾಡಿದ ಮೇಲೆಯೂ ಸಹ ಎಲ್ಲಾ ಜಿಲ್ಲೆಯ ಎ.ಪಿ.ಎಂ.ಸಿ., ಮಾರುಕಟ್ಟೆಗಳಿಗೂ ಪ್ರವಾಸ ಹೊಂಗಿದ್ದು, ಯಾರು ಸಹ ಎ.ಪಿ.ಎಂ.ಸಿ., ಕಾಯ್ದೆಯಿಂದ ರೈತರಿಗೆ ಅನ್ಯಾಯವಾಗಲಿ ಅಥವಾ ತೊಂದರೆಯಾಗಲಿ ಆಗುತ್ತಿದೆ ಎಂದು ನನ್ನಗಾಗಲಿ, ಇಲಾಖೆಗಾಗಲಿ ಅಥವಾ ಮಾನ್ಯ ಮುಖ್ಯಮಂತ್ರಿಗಳಿಗಾಗಲಿ ಯಾರಿಗೂ ಸಹ ದೂರು ಬಂದಿಲ್ಲ. ಈಗಾಗಲೇ ಧಾರವಾಡ ಜಿಲ್ಲೆಯಲ್ಲಿ ಸಭೆ ನಡೆಸಿದ್ದೇವೆ ಹಾಗೂ ಬ್ಯಾಡಗಿಯಲ್ಲಿ ಮಾನ್ಯ ಬಿ.ಸಿ.ಪಾಟೀಲ್‌ರವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿದ್ದೇವೆ ಮತ್ತು ಮೈಸೂರು ಜಿಲ್ಲೆಯಲ್ಲಿ ಸಭೆ ನಡೆಸಲಾಗಿದೆ. ಈ ಕಾಯ್ದೆಯಿಂದಾಗಿ ಏನಾದರೂ ಅನ್ಯಾಯವಾಗುತ್ತದೆಯೇ ಅಥವಾ ಏನಾದರೂ ಸರಿಪಡಿಸಬೇಕಾಗುತ್ತದೆಯೇ ಎಂಬ ವಿಚಾರವನ್ನು ಕುರಿತು ಚರ್ಚೆ ಮಾಡಿದ್ದೇವೆ. ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರಾಗಲಿ ಅಥವಾ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರಾಗಲಿ ಅವರ ಕನಸು ಒಂದೇ ಇದೆ. ರೈತರಿಗೆ ಏನಾದರೂ ಅನ್ಯಾಯವಾದರೆ ಅದನ್ನು ಹೇಗೇ ಸರಿಪಡಿಸಬೇಕು ಎಂಬುದರ ಕುರಿತು ಈ ವಿಧೇಯಕವನ್ನು ಜಾರಿಗೆ ತಂದಿದ್ದಾರೆ ವಿನಃ ಯಾವುದೇ ಬಹುರಾಷ್ಟ್ರೀಯ ಕಂಪನಿಗಳಿಗೂ ಸಹ ಸಹಕಾರ ನೀಡುವ ಕೆಲಸವನ್ನು ಯಾರೂ ಕೂಡಾ ಮಾಡಿಲ್ಲ. ಅವಶ್ಯಕತೆ ಇದ್ದರೆ ರೈತ ಎ.ಪಿ.ಎಂ.ಸಿ., ಮೂಲಕವಾದರೂ ಬೆಳೆಗಳನ್ನು ಮಾರಾಟ ಮಾಡುವುದಾಗಲಿ ಅಥವಾ ಹೊರಗಡೆಯವರಿಗೆ ಮಾರಾಟ ಮಾಡುವುದಾಗಲಿ ಅಥವಾ ಯಾರಿಗಾದರೂ ಪರವಾನಗಿ ಇರುವವರಿಗೆ ನೀಡುವುದಾಗಲಿ ನಾವ್ಯಾರು ಅದನ್ನು ತೆಗೆದು ಹಾಕುವ ಕೆಲಸವನ್ನು ಮಾಡಿಲ್ಲ. ಈ ಹಿಂದೆ ಪರವಾನಗಿ ನೀಡಲಾಗುತ್ತಿತ್ತು, ಈಗ PAN card ಇದ್ದರೆ ಸಾಕು. ಒಂದು ವೇಳೆ ರೈತನಿಗೆ ಅನ್ಯಾಯವಾಗುತ್ತಿದೆ ಎಂದಾದರೆ ಸಹಾಯಕ ಆಯುಕ್ತರು ಅಥವಾ ಅವರಿಗಿಂತ ಮೇಲ್ಪಟ್ಟ ಜಿಲ್ಲಾಧಿಕಾರಿಗಳಿಗೆ ದೂರು ನೀಡಬಹುದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ದಂಡಾಧಿಕಾರಿ ಯಾವ ರೀತಿ ಇದ್ದಾರೆ ಎಂಬುದನ್ನು ನಾವು ಈಗಾಗಲೇ ನೋಡಿದ್ದೇವೆ ಬಿಡಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ದಂಡಾಧಿಕಾರಿಗಳು Magistrate ಬೆಂಗಳೂರು ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳಿಲ್ಲವೇ? ಸಹಾಯಕ ಆಯುಕ್ತರು ಅಥವಾ ಜಿಲ್ಲಾಧಿಕಾರಿಗಳಿಗೆ ನೀಡುವಂಥ ಜವಾಬ್ದಾರಿಯಾಗಿದೆ. ಹಾಗೆಯೇ ಎಂ.ಎಸ್.ಪಿ., (ಕನಿಷ್ಠ ಬೆಂಬಲ ಬೆಲೆ) ಒಂದು ವರ್ಷದ ನಂತರ ಅದನ್ನು ತೆಗೆದು ಬಿಡುತ್ತಾರೆ ಎಂದು ಹೇಳುತ್ತಿದ್ದರು. ಆದರೆ, ಕೇಂದ್ರ ಸರ್ಕಾರ ಎಂ.ಎಸ್.ಪಿ., ಏನಿದೆ, ಅದನ್ನು ತೆಗೆದು ಹಾಕುವ ಹಾಗಿಲ್ಲವೆಂದು ಹಲವು ಬಾರಿ ಹೇಳಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಎಂ.ಎಸ್.ಪಿ., ತೆಗೆದು ಹಾಕುವ ಹಾಗಿಲ್ಲವೆಂದು ಕೇಂದ್ರ ಸರ್ಕಾರ ತಿಳಿಸಿರುವುದನ್ನು ವಿಧೇಯಕದಲ್ಲಿ ಏತಕ್ಕೆ ತಂದಿಲ್ಲ?

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಈಗ ತಂದಿರತಕ್ಕಂಥ ವಿಧೇಯಕಕ್ಕೂ ಎಂ.ಎಸ್.ಪಿ. ಗೂ ಸಂಬಂಧ ಇರುವುದಿಲ್ಲ. ಈ ವಿಧೇಯಕದ ಉದ್ದೇಶವೇನೆಂದರೆ, ಎ.ಪಿ.ಎಂ.ಸಿ. ಯಲ್ಲಿ ಬೆಳೆದಂಥ ಬೆಳೆಗಳನ್ನು ಇಲ್ಲಿಯೇ ಮಾರಾಟ ಮಾಡಬೇಕೆಂದು ತಂದಿರುವ ಕಾನೂನು ಏನಿದೆ,... ಮಾನ್ಯ ಸದಸ್ಯರು ಸಹ ಅವರಿಗೆ ಇಷ್ಟ ಬಂದ ಬೆಳೆಯನ್ನು ಬೆಳೆಯಬಹುದು.

**ಶ್ರೀ ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎಂ.ಎಸ್.ಪಿ. ಕುರಿತು ಏನು ಹೇಳಿದ್ದಾರೆ, ಅದನ್ನು ಈ ವಿಧೇಯಕದಲ್ಲಿ ಬರುವಂತೆ ಮಾಡಲಿ.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಇದ್ದಾಗ ಸುಮಾರು 130 ರೂಪಾಯಿಗಳನ್ನು ಎಂ.ಎಸ್.ಪಿ. ಯನ್ನು ಕೊಟ್ಟಿದ್ದೇವೆ. ಅವರು ಮಾರುಕಟ್ಟೆ ಸಚಿವರಾಗಿ ಸಾವಿರ ರೂಪಾಯಿ ಎಂ.ಎಸ್.ಪಿ., ನೀಡುತ್ತೇವೆ ಎನ್ನುವುದನ್ನು ಹೇಳಲಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಎಂ.ಎಸ್.ಪಿ.. ಗೆ ಕೇಂದ್ರ ಸರ್ಕಾರ ಏನಾದರೂ ಆಕ್ಷೇಪಣೆ ಮಾಡಿದರೆ ಮಾಡಬಹುದಾಗಿತ್ತು. ಆದರೆ, ಕೇಂದ್ರ ಸರ್ಕಾರವು ಎಂ.ಎಸ್.ಪಿ. ಗೆ ಬದಲಾವಣೆ ಮಾಡುವ ಅವಶ್ಯಕತೆ ಇಲ್ಲವೆಂದು ಅನೇಕ ಬಾರಿ ಸ್ಪಷ್ಟಪಡಿಸಿದ್ದಾರೆ. ಅದರಂತೆ ಮಾನ್ಯ ಮುಖ್ಯಮಂತ್ರಿಗಳು ಸಹ ಸ್ಪಷ್ಟಪಡಿಸಿದ್ದಾರೆ. ವಿರೋಧ ಪಕ್ಷದವರ ಗಮನದಲ್ಲಿ ಏನಿದೆ, ಅದನ್ನು ಸಂಪೂರ್ಣವಾಗಿ ತೆಗೆದು ಹಾಕಬೇಕೆಂದು ಮಾಡಲಾಗಿದೆ. ವಿರೋಧ ಮಾಡಲೇಬೇಕು ಎಂದು ಮಾಡಿಲ್ಲ. ನಾವ್ಯಾರು ಸಹ ರೈತರ ವಿರೋಧಿಗಳಲ್ಲ. ನಾಳೆ ದಿವಸ ಎಲ್ಲಾ ಕಡೆ ಹೋರಾಡುವಾಗ ಯಾರಾದರೂ ಬೆರಳು ಮಡಚಬಹುದು. ನಾನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದು, ಎ.ಪಿ.ಎಂ.ಸಿ. ಒಳಗೆ ಕುಳಿತುಕೊಂಡು ಈ ಕಾಯ್ದೆಯಿಂದಾಗಿ ಏನಾದರೂ ಸಮಸ್ಯೆ ಇದೆಯೇ ಎಂಬುದನ್ನು ಹೇಳಿ ಎಂದು ಸಭೆ ನಡೆಸಿದ್ದೇವೆ.

(ಮುಂದು) . . .

"ತಿದ್ದುಪಡಿಯಾಗದ ಪ್ರತಿ-ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(1083)09.12.2020/9.20/ಎಸ್‌ಕೆ-ಎಂ.ಡಿ. (ವಿಕೆ)

**(ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಆದರೆ subject ಆಗುವುದಿಲ್ಲ.

**ಶ್ರೀ ಆರ್.ಬಿ. ತಿಮ್ಮಾಪೂರ (ವಿಧಾನಸಭಾ ಕ್ಷೇತ್ರ):-** ಆದರೆ ಈಗ ರೈತರು ಬಾರುಕೋಲು ಚಳುವಳಿ ಏಕೆ ಮಾಡುತ್ತಿದ್ದಾರೆ?

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-**ರೈತರ ತಪ್ಪನ್ನು ಅಡ್ಡ ಹಾಕುವುದಕ್ಕೆ, ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು):-** ಯಾರು?

**ಶ್ರೀ ಆರ್.ಬಿ. ತಿಮ್ಮಾಪೂರ:-** ಮೈಸೂರಿನಲ್ಲಿ ರೈತರು ಚಳುವಳಿಯನ್ನು ಮಾಡಿಕೊಂಡು, ಬಾರು ಕೋಲು ಹಿಡಿದುಕೊಂಡು ಏತಕ್ಕೆ ಬಂದರು?

**ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು):-** ನಾನು ಇದರ ಬಗ್ಗೆ ಈ ಸಂದರ್ಭದಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಮುಷ್ಕರ ಮತ್ತು ಪ್ರತಿಭಟನೆಯನ್ನು ಯಾರು ಮಾಡುತ್ತಿದ್ದಾರೆಂಬ ಬಗ್ಗೆ ಇಡೀ ದೇಶಕ್ಕೆ ಗೊತ್ತಿದೆ. ಅದರ ಹಿಂದೆ ಯಾರಿದ್ದಾರೆ? ಅದರ backbone ಆಗಿರುವವರು ಇದನ್ನೆಲ್ಲಾ ಮಾಡುತ್ತಿದ್ದಾರೆಯೇ?

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:- (ಗೊಂದಲ)** ... ಇವರು ರೈತರಿಗೆ ಅವಮಾನ ಮಾಡುತ್ತಿದ್ದಾರೆ. ...

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಟಿ. ಸೋಮಶೇಖರ್:–** ನಾನು ರೈತರಿಗೆ ಅವಮಾನ ಮಾಡುತ್ತಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಚಿವರೇ ನಾವು ಇಲ್ಲಿಯವರೆಗೆ ತಮ್ಮ ಭಾಷಣವನ್ನು ತಾಳ್ಮೆಯಿಂದ ಕೇಳಿದ್ದೇವೆ. ರೈತರ ಬಗ್ಗೆ ತಮಗೆ ಏನಾದರೂ ಕಾಳಜಿಯಿದ್ದರೆ ...

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ನಾವು ಮಾನ್ಯ ಸಚಿವರಿಂದ ಉತ್ತರವನ್ನು expect ಮಾಡಿರಲಿಲ್ಲ. ನಾವು ತಮ್ಮಿಂದ ಮಾತನಾಡುವುದನ್ನು ಕಲಿಯಬೇಕಾಗಿದೆ.

**(ಗೊಂದಲ)**

**ಶ್ರೀ ಎಸ್.ಟಿ. ಸೋಮಶೇಖರ್:–** ಒಂದು ನಿಮಿಷ.

**(ಗೊಂದಲ)**

**ಶ್ರೀ ಆರ್.ಬಿ. ತಿಮ್ಮಾಪೂರ:–** ತಾವು prejudice mind ನಿಂದ ಈ ಕಾಯಿದೆಯನ್ನು ತಂದಿದ್ದೀರಿ. ಸರಿ ತೆಗೆದುಕೊಂಡು ಹೋಗಿ... **(ಗೊಂದಲ)** ನಾವು ಏನೇ ಹೇಳಿದರೂ ಕೂಡ ಮಾನ್ಯ ಸಚಿವರ ತಲೆಗೆ ಹೋಗುವುದಿಲ್ಲ. ತಾವು ಕೇಂದ್ರ ಸರ್ಕಾರದಿಂದ ಬಂದಂತಹ ಆದೇಶವನ್ನು ಪಾಲನೆ ಮಾಡುತ್ತೀರಿ. **(ಗೊಂದಲ)** ನಮ್ಮ ಅಭಿಪ್ರಾಯವನ್ನು ನಾವು ಹೇಳುತ್ತೇವೆ. ತಾವು ಮಾಡುವುದಕ್ಕೆ ರೆಡಿಯಾಗಿಲ್ಲ.

**(ಗೊಂದಲ)**

**ಶ್ರೀ ಎಸ್.ಟಿ. ಸೋಮಶೇಖರ್:–** ನಾವು ಮಾಡುವುದಕ್ಕೆ ರೆಡಿಯಿದ್ದೇವೆ.

**(ಗೊಂದಲ)**

**ಶ್ರೀ ಆರ್.ಬಿ. ತಿಮ್ಮಾಪೂರ:–** ಆಗ ತಮಗೆ ಹೇಳುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಟಿ. ಸೋಮಶೇಖರ್:–** ಮಾನ್ಯ ತಿಮ್ಮಾಪೂರರವರೇ ತಾವು ಮಂತ್ರಿಯಾಗಿದ್ದಂತಹವರು. ಯಾರು ಪ್ರತಿಭಟನೆ ಮಾಡುತ್ತಾರೆ ಎನ್ನುವಂತಹದ್ದನ್ನು ನಾನು ಇಲ್ಲಿ ಯಾರನ್ನು ಅವಮಾನ ಮಾಡುವಂತಹ ದೃಷ್ಟಿಯಲ್ಲ. ಪ್ರತಿಭಟನೆ ಮಾಡತಕ್ಕಂತಹದ್ದನ್ನು ಕೂಡ ಮಾನ್ಯ ಮುಖ್ಯಮಂತ್ರಿಯವರು ಮತ್ತು ನಾನು ಹಾಗೂ ಕೃಷಿ ಸಚಿವರು ಮಾತನಾಡಿದ್ದೇವೆ. ರೈತ ಮುಖಂಡರು cess ಅನ್ನು ಕಡಿಮೆ ಮಾಡಬೇಡಿ. ಎ.ಪಿ.ಎಂ.ಸಿ.ಯ ಹೊರಗಡೆ cess ಅನ್ನು ತೆಗೆದು ಹಾಕಿದ್ದೀರಿ. ಅದನ್ನು implement ಸೇರಿಸಿ ಎಂದು ಹೇಳುತ್ತಾರೆಯೇ ವಿನಃ ಯಾವುದೂ ಕೂಡ ಹೇಳಿಲ್ಲ.

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನವನ್ನು ಹೊಂದಿದವರು):–** ಮಾನ್ಯ ಸಭಾಪತಿಯವರೇ, ಅವರು ಅನುಕೂಲ ಮಾಡಿರುವುದನ್ನು ಮಾನ್ಯ ಸಚಿವರು ಹೇಳುತ್ತಿದ್ದಾರೆ. ನಮಗೆ ಈ ಕಾಯಿದೆಯಲ್ಲಿ ಇರುವಂತಹ Section ನಲ್ಲಿ ಒಂದು sub-section (3) ಅನ್ನು ತೆಗೆದು ಹಾಕಿದ್ದೀರಾ. (**ಗೊಂದಲ**) out of the context ಅನ್ನು ಮಾನ್ಯ ಸಚಿವರು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಟಿ. ಸೋಮಶೇಖರ್:–** ಮಾನ್ಯ ರಮೇಶ್‌ರವರೇ ನಾನು clarify ಮಾಡವುದಕ್ಕಾದರೂ ಅವಕಾಶ ಮಾಡಿಕೊಡಿ. ಮಾನ್ಯ ರಮೇಶ್‌ರವರೇ ಎಂ.ಎಲ್.ಸಿ.ಗಳಲ್ಲಿ ತಾವು ಅತಿ ಬುದ್ಧಿವಂತರು ಎಂದು ಇಡೀ ಬೆಂಗಳೂರಿಗೆ ಗೊತ್ತಿದೆ. ತಾವು ಚೆನ್ನಾಗಿ ಮಾತನಾಡುತ್ತೀರಿ ಮತ್ತು ಚೆನ್ನಾಗಿ convince ಮಾಡುತ್ತೀರೆಂಬುದು ನನಗೆ ಗೊತ್ತಿದೆ. ನಾನು ಹತ್ತು ವರ್ಷಗಳಿಂದ ತಮ್ಮನ್ನು ಹತ್ತಿರದಿಂದ ನೋಡಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಅವರು ತಮಗೆ ಬಹಳ ಸ್ನೇಹಿತರು.

**ಶ್ರೀ ಎಸ್.ಟಿ. ಸೋಮಶೇಖರ್:–** ಮಾನ್ಯ ಪಿ.ಆರ್. ರಮೇಶ್‌ರವರು ನನ್ನ ಆತ್ಮೀಯ ಸ್ನೇಹಿತರು ಎಂಬುದರಲ್ಲಿ ಎರಡು ಮಾತಿಲ್ಲ. ತಾವು ನನಗೆ ಗುರುಗಳು ಹಾಗೂ ಅವರು ನನಗೆ ಸ್ನೇಹಿತರು. ಮಾನ್ಯ ಸಭಾಪತಿಯವರೇ, ಸರ್ಕಾರ ಏನು 35 ಪೈಸೆ ಸೆಸ್ ಕಲೆಕ್ಟ್ ಮಾಡುತ್ತಿದೆ, ಅದರಿಂದ ಬರುವ ಆದಾಯದಲ್ಲಿ ಎ.ಪಿ.ಎಂ.ಸಿ., ಗಳು ನಡೆಯುತ್ತಿದೆ.

**ಶ್ರೀ ಎಸ್. ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ... ಈಗ 2.8 ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಟಿ. ಸೋಮಶೇಖರ್:–** ಮಾನ್ಯ ಭೋಜೇಗೌಡರೇ, ನಾವು ಸೆಸ್‌ನ್ನು ಏನು collect ಮಾಡುತ್ತಿದ್ದೇವೋ, ರೂ. 1.50 ಪೈಸೆಯಷ್ಟು ಸೆಸ್ ಏನಿತ್ತೋ, ಅದನ್ನು 35 ಪೈಸೆಗೆ ಇಳಿಸಿದ್ದೇವೆ. ಆ ರೂ.35 ಪೈಸೆಗೆ ಇಳಿಸಬೇಕಾದರೆ, ಇದಕ್ಕೆ ಅಡಕೆ ಬೆಳೆಗಾರರೇ ಕಾರಣ. ನನಗಿರುವಂತಹ ಸಂಪೂರ್ಣವಾದ ಮಾಹಿತಿಯನ್ನು ಹೇಳಿದ್ದೇನೆ. ಈ ಎ.ಪಿ.ಎಂ.ಸಿ., ಕಾಯಿದೆ ಐತಿಹಾಸಿಕ ಕಾಯಿದೆ. ಕೇಂದ್ರ ಸರ್ಕಾರಕ್ಕೆ ಕೂಡ ಅದರ ಬಗ್ಗೆ ವಿಶೇಷವಾದಂತಹ ಗಮನವಿದೆ ಮತ್ತು ಮಾನ್ಯ ಯಡಿಯೂರಪ್ಪನವರಿಗೂ ವಿಶೇಷವಾದಂತಹ ಕಾಳಜಿಯಿದೆ. ನಾನು ಯು.ಪಿ.ಎ. ಬಗ್ಗೆ ಪ್ರಶ್ನೆಯನ್ನು ಮಾಡುವುದಕ್ಕೆ ಹೋಗುತ್ತಿಲ್ಲ. ಯು.ಪಿ.ಎ. ಸರ್ಕಾರವಿದ್ದಾಗ ಮಾನ್ಯ ಶರತ್‌ಪವಾರ್‌ರವರು ಮಾನ್ಯ ಶೈಲಜರವರಿಗೆ ಏನೆಲ್ಲಾ ಪತ್ರಗಳನ್ನು ಬರೆದಿದ್ದಾರೆ, ಅದಕ್ಕೆ ಏನೆಲ್ಲಾ ಪಾಯಿಂಟ್ಸ್ ಹಾಕಿದ್ದಾರೋ, ಅದ್ಯಾವುದರ ವಿಚಾರಕ್ಕೆ ನಾನು ಹೋಗುವುದಿಲ್ಲ. ಮಾನ್ಯ ಎಸ್.ಆರ್. ಪಾಟೀಲ್‌ರವರಿಗೆ ನನ್ನ ಮೇಲೆ ತುಂಬಾ ಪ್ರೀತಿಯಿದೆ. ಅದು ಏನೆಂದರೆ, ಅವರದ್ದು ಮತ್ತು ನನ್ನ friendship ಹೋಗುತ್ತದೆ. ಅದರಿಂದ ನಮ್ಮ friendship ಅನ್ನು ಕಳೆದುಕೊಳ್ಳುವುದಕ್ಕೆ ಇಷ್ಟವಿಲ್ಲ. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅದರಿಂದ ಈ ಐತಿಹಾಸಿಕ ಕಾಯಿದೆಯನ್ನು ಏನು ತಂದಿದ್ದೇವೋ, ಅದನ್ನು ವಿರೋಧ ಪಕ್ಷದ ಸದಸ್ಯರೆಲ್ಲರಿಗೆ ನಾನು ಕೈಮುಗಿದು, ಇದನ್ನು approve ಮಾಡಿಕೊಡಿ ಎಂದು ಮತ್ತೊಮ್ಮೆ ಮನವಿ ಮಾಡುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಚಿವರ ಸವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ ಎ.ಪಿ.ಎಂ.ಸಿ.ಗಳಲ್ಲಿ MSP (Minimum Support Price) ಹಾಗೆಯೇ ಇರುತ್ತದೆ. ಎಂ.ಪಿ.ಎಂ.ಸಿ.,ಯಿಂದ ಹೊರಗಡೆ ಮಾರಬಹುದು ಎಂದು ಏನು ಹೇಳುತ್ತಾರೆ, ಅಲ್ಲಿ ಎಂ.ಎಸ್.ಪಿ.ಗೆ ಲಾಭವಾಗುತ್ತದೆಯೇ ಎನ್ನುವಂತಹ ಪ್ರಶ್ನೆ ಮಾನ್ಯ ಸದಸ್ಯರೆಲ್ಲರ ತಲೆಯಲ್ಲಿ ಇದೆ. ಎಂ.ಪಿ.ಎಂ.ಸಿ.ಗಳಲ್ಲಿ ಎಂ.ಎಸ್.ಪಿ., ಇರಬಹುದು. ಹೊರಗಡೆ ಮಾರಿದಾಗ MSP ಇರುತ್ತದೆಂಬುದರ ಬಗ್ಗೆ ತಾವು ಸ್ಪಷ್ಟವಾಗಿ ಹೇಳಿ.

**ಶ್ರೀ ಎಸ್.ಟಿ. ಸೋಮಶೇಖರ್:–** ಈಗಾಗಲೇ ಕೇಂದ್ರ ಸರ್ಕಾರವೇ ಅದಕ್ಕೆ ಹೊರಗಡೆ ಕೊಟ್ಟಿದ್ದಾರೆ. ಎ.ಪಿ.ಎಂ.ಸಿ.,ಗಳ ಒಳಗಡೆ ಮತ್ತು ಹೊರಗಡೆಯಲ್ಲಿ ಎಂ.ಎಸ್.ಪಿ., ಯಾವುದೇ ಬದಲಾವಣೆ ಇಲ್ಲ ಎನ್ನುವುದರ ಬಗ್ಗೆ ಕೇಂದ್ರ ಸರ್ಕಾರ ಅನೇಕ ಬಾರಿ ಸ್ಪಷ್ಟಪಡಿಸಿದ್ದಾರೆ. ಎಂ.ಪಿ.ಎಂ.ಸಿ.ಗಳ ಒಳಗಡೆ ಮತ್ತು ಹೊರಗಡೆ ಒಂದೇ ಆಗಿರುತ್ತದೆ. ಆದರೆ cess ಮಾತ್ರ ವ್ಯತ್ಯಾಸವಾಗುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಚಿವರೇ ಒಂದೇ ನಿಮಿಷ. ಸರ್ಕಾರದ ಚೌಕಟ್ಟಿನಲ್ಲಿದ್ದಾಗ, ತಮ್ಮ ಕಾನೂನು ಅಲ್ಲಿ ಇರುತ್ತದೆ. ಆ ಎ.ಪಿ.ಎಂ.ಸಿ., ಯಿಂದ ಹೊರಗಡೆ ಬಂದಾಗ, ಎಂ.ಎಸ್.ಪಿ., ಇರುತ್ತೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಹೇಳಿ.

**ಶ್ರೀ ಎಸ್.ಟಿ. ಸೋಮಶೇಖರ್:-** ಈ ಕಾನೂನು ಬಂದಾದ ಮೇಲೆ ಎ.ಪಿ.ಎಂ.ಸಿ., ಒಳಗಡೆ ಮಾರಾಟ ಮಾಡುತ್ತಿದ್ದಾರೆಯೇ ವಿನಃ ಎ.ಪಿ.ಎಂ.ಸಿ.,ಗಳ ಹೊರಗಡೆ ಇನ್ನೂ ಯಾರೂ ಮಾರಾಟ ಮಾಡುವುದಕ್ಕೆ ಹೋಗಿಲ್ಲ. ನಾನು ಹತ್ತು-ಹದಿನೈದು ಎ.ಪಿ.ಎಂ.ಸಿ.ಗಳಿಗೆ ಭೇಟಿ ಮಾಡಿದ್ದೇನೆ. ಬದಲಾವಣೆಯಾದ ಮೇಲೆ ಎ.ಪಿ.ಎಂ.ಸಿ.,ಯಲ್ಲಿ ಮೂವತ್ತೈದು ಪೈಸೆ ಏಕೆ ಸೆಸ್ ಕೊಡಬೇಕು? ಇದುವರೆಗೂ ಹೊರಗಡೆ ಮಾರಾಟ ಮಾಡುವುದಕ್ಕೆ ಹೋಗಲಿಲ್ಲ. ಅದರಿಂದ ಎಂ.ಎಸ್.ಪಿ. ಅವರಿಗೆ ಏನಿದೆ? ಅದನ್ನು ಮಾನ್ಯ ಪ್ರಧಾನ ಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಎಂ.ಎಸ್.ಪಿ. ಬದಲಾವಣೆಯಿಲ್ಲ. ಈ ಎ.ಪಿ.ಎಂ.ಸಿ., ತಿದ್ದುಪಡಿಗೂ ಅದಕ್ಕೂ ಸಂಬಂಧವಿಲ್ಲ. ಅದರಿಂದ ಈ ವಿಧೇಯಕವನ್ನು ಒಪ್ಪಿಕೊಳ್ಳಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್. ಪಾಟೀಲ್‌ರವರ ಸಮೇತ, ನಾನು ಎಲ್ಲರಿಗೂ ಮನವಿ ಮಾಡುತ್ತೇನೆ.

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನವನ್ನು ಹೊಂದಿದವರು):-** ಮಾನ್ಯ ಸಚಿವರೇ ಸುಗ್ರೀವಾಜ್ಞೆ ಏತಕ್ಕೆ ಹೊರಡಿಸಿದಿರಿ?

**ಶ್ರೀ ಆರ್.ಬಿ. ತಿಮ್ಮಾಪೂರ:-** ಎ.ಪಿ.ಎಂ.ಸಿ.ಗಳ ವಿಚಾರದಲ್ಲಿ cess ಅನ್ನು collect ಮಾಡುತ್ತಾರೆ.

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನವನ್ನು ಹೊಂದಿದವರು):-** ಮಾನ್ಯ ಸಭಾಪತಿಯವರೇ, ...

**ಶ್ರೀ ಆರ್.ಬಿ. ತಿಮ್ಮಾಪೂರ:-** ಮಾನ್ಯ ರಮೇಶ್‌ರವರೇ, ನಾನು ಮಾತನಾಡುವುದಕ್ಕೆ ಮಾನ್ಯ ಸಭಾಪತಿಯವರು ಅವಕಾಶ ಕೊಟ್ಟಿದ್ದಾರೆ. ನಾನು ಮಾತನಾಡುತ್ತಿದ್ದೇನೆ. ಎ.ಪಿ.ಎಂ.ಸಿ.ನಲ್ಲಿ ಬಂದು ವ್ಯಾಪಾರ ಮಾಡಿದರೆ, ಸೆಸ್ ಕೊಡಬೇಕು. ನಾನೊಬ್ಬ ವ್ಯಾಪಾರಸ್ಥನಾಗಿದ್ದು, ಸೆಸ್ ಕೊಡುವುದಕ್ಕೆ ಅಲ್ಲಿಗೆ ಏಕೆ ಹೋಗಬೇಕು? ನಾನು ಹೊರಗಡೆ ಮಾರುತ್ತೇನೆ. ಎ.ಪಿ.ಎಂ.ಸಿ.,ಗಳನ್ನು ಮುಚ್ಚುವುದಕ್ಕೆ ಏನು ಕುತಂತ್ರವಿದೆಯೋ, ಅದೆಲ್ಲವೂ ಕೂಡ ತಮ್ಮ ಕಡೆಗಳಲ್ಲಿ ಇದೆ. ಮೂವತ್ತೈದು ಪೈಸೆ ಅವನು ಏತಕ್ಕೆ ಕೊಡಬೇಕು? ಅಲ್ಲಿ ಯಾರ ಮನೆ ಹೋಗುತ್ತದೆ? ಮಾನ್ಯ ಸೋಮಶೇಖರ್‌ರವರೇ ತಮ್ಮ image ಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಧಕ್ಕೆ ಬರುವಂತಹ ಕೆಲಸದಲ್ಲಿ ಎಲ್ಲೋ ಒಂದು ಕಡೆ ಕುತಂತ್ರ ನಡೆಯುತ್ತಿದೆ. ರಾಜಕಾರಣದಲ್ಲಿ ಬಹಳಷ್ಟು ಅನುಭವವಿರಬೇಕು. ದಯವಿಟ್ಟು, ಮಾನ್ಯ ಸಚಿವರೇ, ತಾವು ಇದನ್ನು ಒಪ್ಪಬೇಡಿ. ಇದನ್ನು ತಮ್ಮ prejudice mind ನಿಂದ ತರುವುದಕ್ಕೆ ಹೋಗಬೇಡಿ. ನಾನು ತಮ್ಮನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಖರಾಬ್ ಕಾನೂನು ಬೇಡ.

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನವನ್ನು ಹೊಂದಿದವರು):–** ಮಾನ್ಯ ಸಚಿವರೇ ನನ್ನದೊಂದು ಸಣ್ಣ clarification. Delhi and North India ನಲ್ಲಿ ಎಲ್ಲಾ ರೈತರು ಮುಷ್ಕರ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದವರು ರೈತರನ್ನು ಕರೆದು ಮಾತನಾಡುವುದರಲ್ಲಿದ್ದಾರೆ. ಆದರೆ ಅದನ್ನು clear ಮಾಡುವವರೆಗಾದರೂ ಅದನ್ನು ಪೆಂಡಿಂಗ್ ಇಟ್ಟುಕೊಳ್ಳಿ. ಕೇಂದ್ರ ಸರ್ಕಾರದವರು ಅದೇನಾದರೂ ಅದನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿದರೆ, ತಾವು ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಬರಬೇಕು. ಅದು ತಮ್ಮ ಪರಿಶೀಲನೆಗೆ ಬರುತ್ತದೆಂಬುದರ ಬಗ್ಗೆ ಯೋಚನೆ ಮಾಡಿ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಬಹಳಷ್ಟು ಸುದೀರ್ಘವಾಗಿ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಅದಕ್ಕೆ ಸಮ್ಮತಿ ಇರಲಾರದಂತಹ ಮಾಹಿತಿಯನ್ನು ಎಲ್ಲಿ collect ಮಾಡಿದ್ದಾರೋ, ಅದು ಮಾನ್ಯ ಸಚಿವರಿಗೆ ಗೊತ್ತು. ಅವರು ಹೇಳಿದಂತಹ ನಮ್ಮ ಪಕ್ಷದಲ್ಲಿ ಅಂತಹ ನಿರ್ಣಯಗಳಾಗಿಲ್ಲ ಎನ್ನುವುದರ ಜೊತೆಗೆ 62 Multinational Companies ಗಳಿಗೆ ಈಗಾಗಲೇ purchase ಮಾಡುವುದಕ್ಕೆ ಪರವಾನಿಗೆಯನ್ನು ಕೊಟ್ಟಿದ್ದೇವೆ ಎಂದು ಹೇಳಿದರು. ಮಾನ್ಯ ಸಚಿವರಿಗೆ ಮೇಲಿಂದ ತುಂಬಾ ಒತ್ತಡಗಳಿವೆ ಎಂದು ನಾನು ಹೇಳಿದ್ದೆ. ಬಹುರಾಷ್ಟ್ರೀಯ ಕಂಪನಿಗಳ ಮಾಲೀಕರಿಗೆ ಅನುಕೂಲವಾಗಲಿ ಎನ್ನುವ ಸಲುವಾಗಿ ಇವತ್ತು ಈ ಎ.ಪಿ.ಎಂ.ಸಿ., ಕಾಯಿದೆಗೆ ತಿದ್ದುಪಡಿಯನ್ನು ತರುವುದಕ್ಕೆ ಒತ್ತಡವಿದೆ. ಆದ್ದರಿಂದ ಮಾನ್ಯ ಸಚಿವರು ಅದನ್ನು ತಂದಿದ್ದೀರಿ ಎಂದು ನಾನು ಹೇಳಿದೆ. ಅವರು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಈ 62 Multinational Companies ಗಳಿಗೆ ಪರವಾನಿಗೆಯನ್ನು ಕೊಟ್ಟು, ಅವರು ಖರೀದಿ ಮಾಡುವುದಕ್ಕೇನಾದರೂ ಅವಕಾಶ ಮಾಡಿದರೆ, ಅಷ್ಟು ತರಾತುರಿ ಮೇಲೆ ಸುಗ್ರೀವಾಜ್ಞೆ ತರುವಂತಹದ್ದು ಏನಿತ್ತು? ಈ ವಿಧೇಯಕವನ್ನು ಮತ್ತೊಮ್ಮೆ ಸದನ ಬಂದಾಗ, ಮಂಡಿಸಬಹುದಾಗಿತ್ತು. ಸುಗ್ರೀವಾಜ್ಞೆಯ text ಸಮೇತ ನನ್ನ ಬಳಿಯಿದೆ. ಮಾನ್ಯ ಸಭಾಪತಿಯವರೇ, ಸುಗ್ರೀವಾಜ್ಞೆಯ text ಯಾವ ರೀತಿ ಇರಬೇಕು ಎನ್ನುವುದು ಮೇಲಿನಿಂದ ಬಂದಿದೆ. ಅದರ ಬಗ್ಗೆ ನಾನು ವಿಸ್ತೃತವಾಗಿ ಚರ್ಚೆ ಮಾಡುವುದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗುವುದಿಲ್ಲ. ಅದು ಮೇಲಿನಿಂದ ಬಂದಿದೆ ಎಂಬ ಆಧಾರ ಸಮೇತವಾಗಿ ನಾನು ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿದ್ದುಕೊಂಡು ಬೇಜವಾಬ್ದಾರಿಯಿಂದ ಮಾತನಾಡುವುದಕ್ಕೆ ಹೋಗುವುದಿಲ್ಲ. ಅದರ ಪ್ರಸಂಗ ಬಂದರೆ, ನಾನು ಪ್ರತಿ ಪಕ್ಷದ ನಾಯಕನಾಗಿ ಏನಾದರೂ ಮಾತನಾಡಿ, ಇಲ್ಲಿ escape ಆಗುವುದಕ್ಕೆ ಆಗುವುದಿಲ್ಲ. ಆ responsibility ಅನ್ನು ಹೊತ್ತುಕೊಂಡು ನಾನು ಮಾತನಾಡುತ್ತಿದ್ದೇನೆ. I will never eat my words. ನಾನು ಏನಾದರೂ ಮಾತನಾಡಿದ್ದರೆ, ಅದು ತಪ್ಪು ಎನ್ನುವುದಿದ್ದರೆ, ಅದು ತಪ್ಪು ಎಂದು ಹೇಳಿ ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳುವಂತಹ ಸ್ವಭಾವ ನನ್ನದು. ಈ ಸುಗ್ರೀವಾಜ್ಞೆ ಹೊರಡಿಸುವಂತಹ ಅವಶ್ಯಕತೆ ಏನಿತ್ತು? 62 ಕಂಪನಿಗಳಿಗೆ ಈಗಾಗಲೇ ಪರವಾನಿಗೆಯನ್ನು ಕೊಟ್ಟಿದ್ದು, ಅವರು ಅದನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಸುಗ್ರೀವಾಜ್ಞೆ ತಂದು, ಅದನ್ನು within six months ratify ಮಾಡಬೇಕೆಂದು whenever the ordinance is promulgated by his excellency Governor it is to be ratified within the period of six months by both the Houses, ಎಂದು ಹೇಳಿ, ಇವತ್ತು ಅದನ್ನು ತಂದಿದ್ದಾರೆ. ಅದು ಅಲ್ಲಿಂದ ಬಂದಿದ್ದೆ ಎಂದು ನಾನು ಇನ್ನೊಮ್ಮೆ ಪುನರುಚ್ಚರಿಸಿ, ಇವತ್ತು ಎ.ಪಿ.ಎಂ.ಸಿ. ಬಂದ್ ಮಾಡುವ ಹುನ್ನಾರಕ್ಕೆ ಹೋಗುವುದಿಲ್ಲ ಎಂದು ಅವರು ಹೇಳಿದರು. ಈ ತಿದ್ದುಪಡಿಯೊಳಗೆ ಎ.ಪಿ.ಎಂ.ಸಿಯನ್ನು ಬಂದ್ ಮಾಡುತ್ತಾರೆಂದು ಹೇಳುವುದಕ್ಕೆ ಹೋಗಿಲ್ಲ. ಎ.ಪಿ.ಎಂ.ಸಿ. ಬಂದ್ ಮಾಡುವ ಹಂತಕ್ಕೆ ಏನೂ ಮಾಡಿಲ್ಲ. ಒಬ್ಬ ವ್ಯಕ್ತಿಯನ್ನು ಸಾಯುವುದಕ್ಕೆ ಬಿಡುವುದಿಲ್ಲವೆಂದು ಹೇಳುತ್ತೀರಿ. ಆದರೆ ಅವನಿಗೆ ಊಟ ಕೊಡುವುದಿಲ್ಲ, ನೀರು ಕೊಡುವುದಿಲ್ಲ. ಹಾಗಾಗಿ ಆ ವ್ಯಕ್ತಿಯನ್ನು ಸಾಯುವುದಕ್ಕೆ ಬಿಡುವುದಿಲ್ಲ. I will never allow him to die. But I will never give food and water.

(ಮುಂದು)

(1084) 09.12.2020 ರಾತ್ರಿ 9.30 ಟಿಸಿಹೆಚ್–ಎಂಡಿ (ವಿಕೆ)

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ಮುಂದು)**

ಆಯಿತು 15 ದಿವಸಗಳು, 20 ದಿವಸಗಳು, 1 ತಿಂಗಳು ಮತ್ತು 2 ತಿಂಗಳು. ಆ ಒಂದು ದಿವಸ he will die due to starvation. That is the definite. ಈಗ ಎ.ಪಿ.ಎಂ.ಸಿಗಳಿಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಿಸ್ಥಿತಿ ಏನಾಗಿದೆ ಎನ್ನುವ ಬಗ್ಗೆ ನಾನು consequences ನ್ನು ಹೇಳಿದೆನು. ಎರಡು ವರ್ಷವೋ ಅಥವಾ ಮೂರು ವರ್ಷವೋ ಆಗಿದೆ. ಈ ತಿದ್ದುಪಡಿ ತರಬೇಕಾದರೆ ಅವರು ಎಲ್ಲಾ ಕಡೆಗಳಲ್ಲಿ ಭೇಟಿ ನೀಡಿದ್ದಾರೆ. ಮಾನ್ಯ ಸಚಿವರು ಬಹಳ ಆಕ್ಟಿವ್ ಇದ್ದಾರೆ. ಅವರಿಗೆ ಕಾಳಜಿ ಇದೆ. ಇಲಾಖೆ ಮೇಲೆ ನಂಬಿಕೆ ಮತ್ತು ವಿಶ್ವಾಸವಿದೆ. ಅದು ಈಗ ಆಗುವಂಥ ಘಟನೆಗಳು ಅಲ್ಲ. In the coming days definitely APMC will be closed. ಇಷ್ಟು ಮಾತನ್ನು ಹೇಳುತ್ತೇನೆ. ಮತ್ತೆ ಮಾನ್ಯ ಬಿ.ಕೆ.ಹರಿಪ್ರಸಾದ್ ಮತ್ತು ಮಾನ್ಯ ಆರ್.ಬಿ.ತಿಮ್ಮಾಪೂರರವರು ನಾನು ಇದನ್ನು Select Committee ಗೆ ರೆಫರ್ ಮಾಡುವಂತೆ  ಹೇಳಿದೆವು. ಅದಕ್ಕೂ ಕೂಡ ಒಪ್ಪಲಿಲ್ಲ, ವಿತ್‌ಡ್ರಾ ಮಾಡುವುದಕ್ಕೂ ಕೂಡ ಒಪ್ಪಲಿಲ್ಲ. ಅದಕ್ಕಾಗಿ ಮಾನ್ಯ ಸಚಿವರಾದ ಶ್ರೀ ಎಸ್.ಟಿ.ಸೋಮಶೇಖರ್‌ರವರು, ಬಹುತರವಾಗಿ ನಾವು ಮಾತನಾಡಿದಂತಹ ಮಾತುಗಳು ನೇರವಾಗಿ ಅವರ ಹೃದಯಕ್ಕೆ ಮುಟ್ಟಿ ಈ ಬಿಲ್‌ನ್ನು withdraw ಮಾಡುತ್ತಾರೆಂದು ನಾವೆಲ್ಲಾ ಭಾವಿಸಿದ್ದೆವು. ಕೊನೆಪಕ್ಷ Select Committee ಗಾದರೂ ಕೊಡುತ್ತಾರೆಂದು ನಾವು ಭಾವಿಸಿದ್ದೆವು. ನಮ್ಮ ಊಹೆ ಏನಿದೆ, ಆ ಊಹೆಗೆ ತಕ್ಕಂತೆ ಅವರು ವರ್ತನೆ ಮಾಡಲಿಲ್ಲ. ನಿಜವಾಗಲೂ ಇದು ರೈತರ ವಿರೋಧಿಯಾದಂಥ ಬಿಲ್ ಆಗಿದೆ. Adamant ಆಗಿ ಈ ಬಿಲ್‌ನ್ನು ಪಾಸ್ ಮಾಡಿಕೊಳ್ಳಬೇಕೆಂದು ಪ್ರತಿಜ್ಞೆ ಮಾಡಿ ಕುಳಿತಂತೆ ಕಾಣುತ್ತಿದೆ. ಅದಕ್ಕಾಗಿ ನಾವೆಲ್ಲರೂ ಆ ನೋವಿನಿಂದ ರೈತರಿಗೆ ಆದಂತಹ ಅನ್ಯಾಯಕ್ಕೆ ಪ್ರತಿಭಟನೆ ಮಾಡಿ ಸದನದಿಂದ walkout ಮಾಡುತ್ತೇವೆ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಸರ್ಕಾರದ ನಿಲುವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು)**

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾವು ಈ ಬಿಲ್ ಒಪ್ಪಿಲ್ಲ. ದಯಮಾಡಿ ನಾವು division ಕೇಳುತ್ತಿದ್ದೇವೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2020ನ್ನು ಪರ್ಯಾಲೋಚಿಸುವುದು"

**ಪ್ರಸ್ತಾವವನ್ನು ಮಂಡಿಸಲಾಯಿತು**

**(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಅಪ್ಪಾಜಿಗೌಡ, ಶ್ರೀ ಹೆಚ್.ಎಂ.ರಮೇಶ್‌ಗೌಡ, ಶ್ರೀ ಎಸ್.ಎಲ್.ಭೋಜೇಗೌಡ, ಶ್ರೀ ಕೆ.ಎ.ತಿಪ್ಪೇಸ್ವಾಮಿ ರವರು ಸದನದಲ್ಲಿ ಎದ್ದು ನಿಂತು ನಾವು ಡಿವಿಜನ್ ಕೇಳಿದ್ದೇವೆ, ಡಿವಿಜನ್ ಕೊಡಿ ಎಂದು ಕೂಗುತ್ತಿದ್ದರು)**

**(ಗೊಂದಲ)**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 4 ರವರೆಗೆ**

**ಸಭಾಪತಿಯವರು:–** "ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**(ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ವಿಧೇಯಕ್ಕೆ ಸೇರಿಸಲಾಯಿತು)**

**ಖಂಡ–1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಸ್ತಾವದ ಅಂಗೀಕಾರ**

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು)** ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2020ನ್ನು ತಿದ್ದುಪಡಿಯೊಂದಿಗೆ ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

> "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2020ನ್ನು ತಿದ್ದುಪಡಿಯೊಂದಿಗೆ ಅಂಗೀಕರಿಸುವುದು "

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ವಿಧೇಯಕಕ್ಕೆ ಅನುಮೋದನೆ ದೊರೆಯಿತು**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**12. ದಿನಾಂಕ 09-12-2020ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಬುಧವಾರ ದಿನಾಂಕ 09ನೇ ಡಿಸೆಂಬರ್ 2020 ರಂದು ಸಮೂಹ-3ರ ಸದನದಲ್ಲಿ ಉತ್ತರಿಸುವ ಚುಕ್ಕೆ ಗುರುತಿನ 13 ಪ್ರಶ್ನೆಗಳಿಗೆ ಉತ್ತರವನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 106 ಪ್ರಶ್ನೆಗಳ ಪೈಕಿ, 81 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಸಭಾಪತಿಯವರು:- ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಅಪ್ಪಾಜಿಗೌಡ, ಶ್ರೀ ಹೆಚ್.ಎಂ.ರಮೇಶ್‌ಗೌಡ, ಶ್ರೀ ಎಸ್.ಎಲ್.ಭೋಜೇಗೌಡ, ಶ್ರೀ ಕೆ.ಎ.ತಿಪ್ಪೇಸ್ವಾಮಿ ರವರು ಸದನದ ಬಾವಿಯಲ್ಲಿ ನಾವು ಡಿವಿಜನ್ ಕೇಳಿದ್ದೇವೆ, ಡಿವಿಜನ್ ಕೊಡಿ ಎಂದು ಕೂಗುತ್ತಿದ್ದರು)**

**(ಸದನವು ರಾತ್ರಿ 9 ಗಂಟೆ 35 ನಿಮಿಷಗಳಿಗೆ ಮುಕ್ತಾಯಗೊಂಡು ಪುನಃ ದಿನಾಂಕ 10ನೇ ಡಿಸೆಂಬರ್ ಮಾಹೆ 2020ರ ಗುರುವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)**

<><><>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"